ಕುಣಿಗಲ್ ಪಟ್ಟಣದ ಸಾಂಸ್ಕೃತಿಕ ಅಧ್ಯಯನ

ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಸಂಪ್ರಬಂಧ



ಮಾರ್ಗದರ್ಶಕರು
ಡಾ.ಸಿ.ಎಸ್.ವಾಸುದೇವನ್
ಸಹಪ್ರಾಧ್ಯಾಪಕರು



ಸಂಶೋಧಕ
ರೇವಣಸಿದ್ದಯ್ಯ.ಕೆ

...ಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
...ಲ್ಲಿನಗಳ ನಿಕಾಯ
...ದ್ಯಾಲಯ, ಹಂಪಿ
ವಿದ್ಯಾರಣ್ಯ
೨೦೧೪

ಕುಣಿಗಲ್ ಪಟ್ಟಣದ ಸಾಂಸ್ಕೃತಿಕ ಅಧ್ಯಯನ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು

ರೇವಣ ಸಿದ್ಧಯ್ಯ ಕೆ.

ಮಾರ್ಗದರ್ಶಕರು

ಡಾ. ಸಿ. ಎಸ್. ವಾಸುದೇವನ್

ಸಹ ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೪

ಪ್ರಮಾಣ ಪತ್ರ

ಕುಣಿಗಲ್ ಪಟ್ಟಣದ ಸಾಂಸ್ಕೃತಿಕ ಅಧ್ಯಯನ ಎಂಬ ಶೀರ್ಷಿಕೆಯ ಸಂಶೋಧನಾ ಪ್ರಬಂಧವನ್ನು ಮಾರ್ಗದರ್ಶಕರು ಸಹ ಪ್ರಾಧ್ಯಾಪಕರಾದ **ಡಾ. ಸಿ. ಎಸ್. ವಾಸುದೇವನ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಈ ಸಂಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: 30-06-14

ಸ್ಥಳ: ವಿದ್ಯಾರಣ್ಯ

(ರೇವಣ ಸಿದ್ಧಯ್ಯ ಕೆ.)
ಸಂಶೋಧನ ವಿದ್ಯಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ದೃಢೀಕರಣ ಪತ್ರ

ರೇವಣಸಿದ್ಧಯ್ಯ ಕೆ.ಇವರು ಬರೆದು ಸಾದರಪಡಿಸಿದ **ಕುಣಿಗಲ್ ಪಟ್ಟಣದ ಸಾಂಸ್ಕೃತಿಕ ಅಧ್ಯಯನ** ಎಂಬ ಶೀರ್ಷಿಕೆಯ ಈ ಎಂ.ಫಿಲ್ ಪ್ರಬಂಧವು ಮೂಲ ಸಂಶೋಧನಾ ಕೃತಿಯಾಗಿದ್ದು, ಇವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಈ ಸಂಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಪ್ರಸ್ತುತ ಈ ಸಂಪ್ರಬಂಧ ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಧೃಢೀಕರಿಸುತ್ತೇನೆ.

ದಿನಾಂಕ: 30-06-14

ಸ್ಥಳ : ವಿದ್ಯಾರಣ್ಯ

— C. S. Vasudevan

(ಡಾ. ಸಿ. ಎಸ್. ವಾಸುದೇವನ್)
ಮಾರ್ಗದರ್ಶಕರು ಮತ್ತು ಸಹಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕುಣಿಗಲ್ ಪಟ್ಟಣದ ಸಾಂಸ್ಕೃತಿಕ ಅಧ್ಯಯನ

ಪರಿವಿಡಿ

– ☸ –

अध्याय : ಒಂದು

ಪ್ರಸ್ತಾವನೆ

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸಮೀಕ್ಷೆ, ವಿಧಾನ ಮತ್ತು ಸ್ವರೂಪ

ಪೀಠಿಕೆ

ಕರ್ನಾಟಕ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯಲ್ಲಿ ಅಂತರ್ಗತವಾಗಿದ್ದರೂ, ತನ್ನದೇ ಆದ ಉದಾತ್ತ ಗುಣಗಳಿಂದಾಗಿ ವಿಶೇಷವಾಗಿ ಮತ್ತು ಪ್ರೌಢವಾಗಿ ಗೋಚರಿಸುತ್ತದೆ. ಕರ್ನಾಟಕದ ಸಂಸ್ಕೃತಿಗೆ ಹಿರಿದಾದ ಅಂತಃಸತ್ವವಿದ್ದು, ಅನೇಕ ಶತಮಾನಗಳ ಕಾಲಾವಧಿಯಲ್ಲಿ ನಡೆದ ತನ್ನ ಕೊಡು-ಕೊಳ್ಳುವಿಕೆಗಳ ಗುಣದಿಂದಾಗಿ ಉನ್ನತ ಸ್ಥಾನದಲ್ಲಿದೆ. ಶಿಲಾಶಾಸನಗಳ ಆಗಮನ ಕಾಲದಿಂದ ಇಲ್ಲಿಯವರೆಗಿನ ಸಂಸ್ಕೃತಿಯನ್ನು ಕುರಿತು ಅಧ್ಯಯನಗಳು ವಿವಿಧ ನೆಲೆಯಲ್ಲಿ ನಡೆಯುತ್ತ ಬಂದಿವೆ. ಅಶೋಕನ ಶಾಸನಗಳ ಅಸ್ತಿತ್ವದಿಂದಾಗಿ ಕರ್ನಾಟಕವು ಔತ್ತರೇಯ ಸಂಸ್ಕೃತಿಯ ಸಂಪರ್ಕವನ್ನು ಹೊಂದಿತ್ತೆಂಬ ಸಂಗತಿ ಗಮನಾರ್ಹವಾಗಿದ್ದು, ಈ ಚಾರಿತ್ರಿಕ ಘಟನೆಗಳಿಂದ ಕರ್ನಾಟಕ ಸಂಸ್ಕೃತಿಯು ಕಾಲಕಾಲಕ್ಕೆ ಹೊಸ ಹೊಸ ಅಂಶಗಳನ್ನು ತನ್ನದಾಗಿಸಿಕೊಂಡು ಬೆಳೆದ ಬಗೆಯನ್ನು ಮನಗಾಣುತ್ತೇವೆ.

ಕರ್ನಾಟಕದಲ್ಲಿ ಗಂಗರ-ಕದಂಬರ ಪೂರ್ವಕಾಲದಿಂದಲೇ ಈ ನೆಲದ ಸಂಸ್ಕೃತಿಯ ಚೌಕಟ್ಟು ರೂಪುಗೊಂಡಿದ್ದು, ಇಲ್ಲಿನ ಸಮಾಜ ಮತ್ತು ಸಂಸ್ಕೃತಿಯು ಶ್ರೀಮಂತಗೊಂಡಿದೆ. ಇದರ ಜೊತೆಜೊತೆಯಲ್ಲಿಯೇ ಗುಡಿ-ಗೋಪುರಗಳು, ಕೆರೆ-ಕಟ್ಟೆಗಳು, ಶಾಸನಗಳು, ಕೋಟೆ-ಕೊತ್ತಲಗಳು ಹಾಗೂ ಮೌಖಿಕ ಆಚರಣೆಗಳು ಯಥೇಚ್ಛವಾಗಿ ಕಂಡುಬಂದಿದ್ದು, ಸಾಂಸ್ಕೃತಿಕ ಕೇಂದ್ರಗಳಾಗಿ ರೂಪುಗೊಳ್ಳಲು ಅನುವು ಮಾಡಿಕೊಟ್ಟಿದೆ.

ಕರ್ನಾಟಕದ ಉದ್ದಗಲಕ್ಕೂ ಯಾವುದೇ ಹಳ್ಳಿಗೆ ಭೇಟಿ ನೀಡಿದರೆ ಒಂದಲ್ಲಾ ಒಂದು ಸ್ಮಾರಕದ ಅವಶೇಷಗಳು ಕಂಡುಬರುತ್ತವೆ. ಇಂತಹ ಸ್ಮಾರಕ ಅವಶೇಷಗಳು ಆಧುನಿಕತೆಯ ಪ್ರಭಾವದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದು, ಸಮಾಜದಿಂದ ಬೇರ್ಪಡೆಗೊಂಡಿರುತ್ತವೆ. ಇನ್ನೂ ಕೆಲವು ಪ್ರಾಕೃತಿಕ ವಿಕೋಪಕ್ಕೆ ಸಿಲುಕಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿದ್ದು, ಅಳಿವಿನ ಅಂಚಿನಲ್ಲಿವೆ. ಪ್ರಮುಖ ಸ್ಮಾರಕ ಅವಶೇಷಗಳಾದ

ದೇವಾಲಯಗಳು, ಕೆರೆ-ಕಟ್ಟೆಗಳು, ಶಾಸನಗಳು ಹಾಗೂ ಆದಿಮಾನವನ ವಸತಿ ನೆಲೆಗಳನ್ನು ರಕ್ಷಣೆ ಮಾಡಬೇಕಾಗಿದ್ದು, ಒಂದಕ್ಕೊಂದು ಸಂಬಂಧ ಕಲ್ಪಿಸಬೇಕಾಗಿದೆ. ಅದೇ ರೀತಿ ಆರಂಭದ ಅಧ್ಯಯನಕಾರರು ಇತಿಹಾಸವನ್ನು ಕೇವಲ ಒಂದು ಪ್ರದೇಶವನ್ನಾಳಿದ ರಾಜಮನೆತನಗಳ ಜೀವನ ಸಾಧನೆಗಳನ್ನು ಮಾತ್ರ ಬಿಂಬಿಸಿದ್ದಾರೆ. ಆದರೆ, ಇಲ್ಲಿ ವಾಸಿಸಿದ ಸಾಮಾನ್ಯ ಜನರ ಸಾಂಸ್ಕೃತಿಕ ಇತಿಹಾಸವನ್ನು ರಚಿಸುವ ಕಡೆಗೆ ಅಧ್ಯಯನವನ್ನು ವಿಸ್ತಾರಗೊಳಿಸಬೇಕಾಗಿರುವುದು ಈಗಿನ ಅವಶ್ಯಕವಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಅಧ್ಯಯನದ ನೆಲೆಗಳು ಸ್ಥಳೀಯ ಚರಿತ್ರೆಯ ಹಿನ್ನೆಲೆಯಲ್ಲಿ ವಿಸ್ತಾರಗೊಳ್ಳುತ್ತಿವೆ. ಈ ರೀತಿಯ ಅಧ್ಯಯನದ ನೆಲೆಗಳಿಂದ ಒಂದು ಪ್ರದೇಶದ ಸಾಂಸ್ಕೃತಿಕ ಮಹತ್ವವನ್ನು ವಿಸ್ತಾರಗೊಳಿಸುವುದರ ಜೊತೆಗೆ ಅನನ್ಯತೆಯನ್ನು ಗುರುತಿಸುವಲ್ಲಿ ಸ್ಥಳೀಯ ಚರಿತ್ರೆಯ ಅಧ್ಯಯನ ಬಹಳ ಮಹತ್ವವಾದದ್ದು. ಹಾಗಾಗಿ ಕುಣಿಗಲ್ ತಾಲೂಕು ಕೂಡ ಅನೇಕ ವೈಶಿಷ್ಟ್ಯಗಳಿಂದ ಕೂಡಿದ್ದು, ಕುಣಿಗಲ್ ಪಟ್ಟಣದ ಸ್ಥಳೀಯ ಚರಿತ್ರೆಯನ್ನು ಕಟ್ಟಿಕೊಡುವ ಸಲುವಾಗಿ **"ಕುಣಿಗಲ್ ಪಟ್ಟಣದ ಸಾಂಸ್ಕೃತಿಕ ಅಧ್ಯಯನ"** ಎಂಬ ಶೀರ್ಷಿಕೆಯ ಅಡಿಯಲ್ಲಿ ಸ್ಥಳೀಯವಾಗಿ ಲಭ್ಯವಿರುವ ಸಾಹಿತಿಕ ಮತ್ತು ಪುರಾತತ್ವ ಆಕರಗಳು ಹಾಗೂ ಮೌಖಿಕ ಆಕರಗಳನ್ನು ಕಲೆಹಾಕಿ ಸಾಂಸ್ಕೃತಿಕವಾಗಿ ಸ್ಥಳೀಯ ಚರಿತ್ರೆ ಕಟ್ಟಿಕೊಡುವುದು ಅಧ್ಯಯನದ ಅವಶ್ಯಕವಾಗಿರುತ್ತದೆ.

ಕುಣಿಗಲ್ ಪಟ್ಟಣದ ಪ್ರಾಚೀನತೆಯು ಇತಿಹಾಸ ಪೂರ್ವಕಾಲ ಅಂದರೆ ನೂತನ ಶಿಲಾಯುಗ (ಕ್ರಿ.ಪೂ. ೨೦೦೦ರಿಂದ ಕ್ರಿ.ಪೂ. ೧೦೦೦)ದಿಂದ ಪ್ರಾರಂಭವಾಗುತ್ತದೆ. ಕುಣಿಗಲ್ ಪಟ್ಟಣದ ಸಮೀಪದಲ್ಲಿಯೇ ಗಂಗ್ಡಾನಹಳ್ಳಿ(ಕೊತ್ತಗೆರೆ) ಎಂಬಲ್ಲಿ ನೂತನ ಶಿಲಾಯುಗದ ಆದಿಮಾನವನ ನೆಲೆ ಕಂಡುಬಂದಿದ್ದು, ಈ ಪ್ರದೇಶದಲ್ಲಿ ಮಾನವನ ಚಟುವಟಿಕೆ ನಡೆದಿದೆ ಎಂದು ತಿಳಿದುಬರುತ್ತದೆ. ಈ ಪುರಾತತ್ವ ಆಧಾರದ ಮೇಲೆ ಕುಣಿಗಲ್ ಪಟ್ಟಣವು ಪ್ರಾಗಿತಿಹಾಸ ಕಾಲದಿಂದ ಇತಿಹಾಸ ಕಾಲದವರೆಗೂ ಒಂದು ಸಂಬಂಧ ಕೊಂಡಿಯಾಗಿ ರೂಪುಗೊಂಡಿದೆ.

ಕುಣಿಗಲ್ ಪಟ್ಟಣದ ಚಾರಿತ್ರಿಕ ಹಿನ್ನೆಲೆಯನ್ನು ಕಂಡುಕೊಳ್ಳಲು ಅಲ್ಲಿನ ಶಾಸನ ಅಕರಗಳು ಅನುಕೂಲವಾಗಿದ್ದು, ಶಾಸನಗಳಲ್ಲಿ ಕುಣಿಗಲ್ ಪಟ್ಟಣದ ಸ್ಥಳನಾಮವು "ಕುಣಿಗಲ್‌ನಾಡು", "ಕುಣಿಗಿಲು", "ಕುಣುಗ್ಗಿಲ್ಲುನಾಟು", "ರಾಜೇಂದ್ರ ಚೋಳಪುರಂ" "ಕುಣಿಗಲ್ ಸೀಮೆ" ಎಂಬುದಾಗಿ ಉಲ್ಲೇಖಗೊಂಡಿದೆ. ಅದೇ ರೀತಿ ಕುಣಿಗಲ್ ಪಟ್ಟಣದ ಪ್ರಾಚೀನ ಹೆಸರು "ನರ್ತನಪುರಿ" ಎಂಬುದಾಗಿತ್ತು ಎಂದು ಸ್ಥಳೀಯ ಜನಪದರಿಂದ ತಿಳಿದುಬರುತ್ತದೆ.

ಕುಣಿಗಲ್ ಪಟ್ಟಣದ ರಾಜಕೀಯ ಚರಿತ್ರೆಯು ಗಂಗರ ಕಾಲದಿಂದ ಆರಂಭಗೊಂಡಿದ್ದು, ಇಲ್ಲಿನ ಪ್ರಾಕೃತಿಕ ಸಂಪತ್ತು ಮತ್ತು ರಕ್ಷಣಾತ್ಮಕ ಅನುಕೂಲದಿಂದ ಕುಣಿಗಲ್ ಪ್ರದೇಶವನ್ನು ಆಡಳಿತ ಕೇಂದ್ರವಾಗಿ ಮಾಡಿಕೊಂಡು ಕುಣಿಗಲ್‌ನಾಡು ಎಂಬ ನಾಮಾಂಕಿತ ಮಾಡಿ, ಪಟ್ಟಣವನ್ನು ಅಭಿವೃದ್ಧಿ ಮಾಡಿದರೆಂದು ಹೇಳಬಹುದು (ಅಂದರೆ, ಗಂಗವಾಡಿ ೯೬,೦೦೦ದಲ್ಲಿ ಕುಣಿಗಲ್‌ನಾಡು ೫೦೦ ವರಹಗಳ ಆಡಳಿತ ಕೇಂದ್ರವಾಗಿತ್ತು).

ಕುಣಿಗಲ್ ಪಟ್ಟಣವು ವಿವಿಧ ಕಾಲಘಟ್ಟಗಳಲ್ಲಿ ವಿವಿಧ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟದ್ದು, ತನ್ನದೇ ಆದ ಮಹತ್ವ ಕಂಡುಕೊಂಡಿದೆ. ಇವರೆಲ್ಲರ ಆಳ್ವಿಕೆಯ ಅವಧಿಯಲ್ಲಿ ನಿರ್ಮಾಣಗೊಂಡಿರುವ ದೇವಾಲಯಗಳು, ಕೆರೆ-ಕಟ್ಟೆಗಳು, ಕೋಟೆ-ಕೊತ್ತಲಗಳು, ಶಾಸನಗಳು ಹಾಗೂ ಮೌಖಿಕ ಆಕರಗಳನ್ನು

ಕಲೆಹಾಕುವ ಮೂಲಕ ಒಂದಕ್ಕೊಂದು ಸಂಬಂಧ ಕಲ್ಪಿಸುವ ಸಲುವಾಗಿ ಕುಣಿಗಲ್ ಪಟ್ಟಣದ ಸ್ಥಳೀಯ ಚರಿತ್ರೆ ಕಟ್ಟಿಕೊಡಬೇಕಾಗುತ್ತದೆ.

ಅಧ್ಯಯನದ ಉದ್ದೇಶ

ಪುರಾತನ ಕಾಲದ ಸ್ಮಾರಕಗಳು ಮತ್ತು ಪ್ರಾಚ್ಯಾವಶೇಷಗಳು ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿದ್ದು, ಅವುಗಳ ಅಧ್ಯಯನವು ಇತಿಹಾಸದ ಪುನಃರಚನೆಗೆ ಮಹತ್ವದ ಅಂಶಗಳನ್ನು ಒದಗಿಸುವ ಮೂಲ ಆಕರಗಳಾಗಿವೆ. ಇಂತಹ ಪ್ರಾಚೀನ ಅವಶೇಷಗಳನ್ನು ಒಳಗೊಂಡಿರುವ ಕುಣಿಗಲ್ ಪಟ್ಟಣದ ಅಧ್ಯಯನವು ಸಮಗ್ರವಾಗಿ ನಡೆದಿರುವುದಿಲ್ಲ. ನಡೆದಿದ್ದರೂ, ಸಣ್ಣ ಪ್ರಮಾಣದಲ್ಲಿ ನಡೆದಿದೆ ಎನ್ನಬಹುದು. ಈ ಕೊರತೆಯನ್ನು ನೀಗಿಸುವ ಸಲುವಾಗಿ ಕುಣಿಗಲ್ ಪಟ್ಟಣದ ಸಮಗ್ರ ಅಧ್ಯಯನ ಮಾಡುವುದು ಮೂಲ ಉದ್ದೇಶವಾಗಿದೆ.

ಕುಣಿಗಲ್ ಪಟ್ಟಣದ ಅಧ್ಯಯನದ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲ ಸ್ಥಳಗಳಿಗೂ ಪ್ರತ್ಯಕ್ಷವಾಗಿ ಭೇಟಿ ನೀಡಿ, ಅಲ್ಲಿನ ಸ್ಮಾರಕ ಅವಶೇಷಗಳನ್ನು ಪಟ್ಟಿಮಾಡಿ, ಸ್ಥೂಲ ಅಧ್ಯಯನಕ್ಕೆ ಒಳಪಡಿಸಿ ವೈಜ್ಞಾನಿಕ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವುದು ಹಾಗೂ ಸ್ಥಳೀಯ ಜನರಲ್ಲಿನ ಅಭಿಪ್ರಾಯಗಳನ್ನು ಪರಿಗಣಿಸಿ, ಕುಣಿಗಲ್ ಪಟ್ಟಣದ ವ್ಯಾಪ್ತಿಯಲ್ಲಿ ಬರುವಂತಹ ಜನಪದ ನಂಬಿಕೆಗಳು, ಐತಿಹ್ಯಗಳು, ಸ್ಥಳಪುರಾಣಗಳ ಬಗ್ಗೆ ವಿಶ್ಲೇಷಣೆ ಮಾಡುವುದು ಮೂಲ ಉದ್ದೇಶವಾಗಿದೆ. ಅದೇ ರೀತಿ ಇಲ್ಲಿನ ಸ್ಮಾರಕಗಳು ಇತಿಹಾಸದ ಪುನಃರಚನೆಗೆ ಸಹಾಯಕವಾಗಿರುವುದರಿಂದ ಅವುಗಳ ಮಹತ್ವವನ್ನು ಅಲ್ಲಿನ ಜನರಿಗೆ ತಿಳಿಸುವುದರ ಜೊತೆಗೆ ಅವುಗಳ ಸಂರಕ್ಷಣೆಗೆ ಜನರನ್ನು ಪ್ರೇರೇಪಿಸುವ ಪ್ರಯತ್ನದಿಂದಾಗಿ ಈ ಅಧ್ಯಯನ ಮಹತ್ವಪಡೆದುಕೊಳ್ಳುತ್ತದೆ. ಇಲ್ಲಿನ ಸಮಾಜ ಸಂಸ್ಕೃತಿಯ ಬಗ್ಗೆ ಸಮಗ್ರ ಅಧ್ಯಯನ ಮಾಡುವುದರ ಮೂಲಕ ಸಾಂಸ್ಕೃತಿಕ ಚಿತ್ರಣ ಕಟ್ಟಿಕೊಡುವುದು ಅಧ್ಯಯನದ ಉದ್ದೇಶವಾಗಿದೆ.

ಒಟ್ಟಾರೆ ಕರ್ನಾಟಕದ ಇತಿಹಾಸ ಮತ್ತು ಪುರಾತತ್ವ ಅಧ್ಯಯನದ ಕ್ಷೇತ್ರಗಳಲ್ಲಿ ಉಪೇಕ್ಷೆಗೆ ಒಳಗಾಗಿರುವ ಕುಣಿಗಲ್ ಪಟ್ಟಣವನ್ನು ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕವಾಗಿ ಅಧ್ಯಯನಕ್ಕೆ ಒಳಪಡಿಸುವ ಮೂಲಕ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವ ಹಾಗೂ ಪುರಾತತ್ವ ನೆಲೆಗಳನ್ನು ಕಂಡುಕೊಳ್ಳುವ ಚಾರಿತ್ರಿಕ ಸಂದರ್ಭದಲ್ಲಿ ನಿರ್ಮಾಣವಾದ ಎಲ್ಲಾ ಬಗೆಯ ಸ್ಮಾರಕಗಳು, ರಾಜಮನೆತನಗಳು ಮತ್ತು ಸಮಾಜ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡುವ ಬಹುಮುಖ್ಯ ಉದ್ದೇಶದಿಂದ ಪ್ರಸ್ತುತ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಯನದ ವ್ಯಾಪ್ತಿ

ಯಾವುದೇ ಒಂದು ಸಂಶೋಧನೆಗೆ ಅಧ್ಯಯನದ ವ್ಯಾಪ್ತಿ ಬಹಳ ಮುಖ್ಯವಾಗಿದ್ದು ಪ್ರಮುಖ ಪಾತ್ರವಹಿಸುತ್ತದೆ. ಜೊತೆಗೆ ಅಧ್ಯಯನದ ಗುಣಮಟ್ಟ ಹೆಚ್ಚಿಸಲು ಸಹಕಾರಿಯಾಗುತ್ತದೆ.

"ಕುಣಿಗಲ್ ಪಟ್ಟಣದ ಸಾಂಸ್ಕೃತಿಕ ಅಧ್ಯಯನದ" ವ್ಯಾಪ್ತಿಯನ್ನು ಪ್ರಾಚೀನ ಕಾಲದ ಅಂಕಿ-ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪಟ್ಟಣದ ವಿಸ್ತೀರ್ಣ, ರಚನೆ, ಜನಸಂಖ್ಯೆ ಬೆಳವಣಿಗೆಯನ್ನು ಆಧರಿಸಿ ಕುಣಿಗಲ್ ಪಟ್ಟಣದ ವ್ಯಾಪ್ತಿಯನ್ನು ೩ ಕಿ.ಮೀ.ಗೆ ಸೀಮಿತಗೊಳಿಸಿದ್ದು, ಇದರ ಇತಿಹಾಸದ ರಚನೆಯಲ್ಲಿ ಸಾಂದರ್ಭಿಕವಾಗಿ ಅಕ್ಕಪಕ್ಕದಲ್ಲಿ ಬರುವಂತಹ ಪ್ರದೇಶಗಳನ್ನು ಈ ವಿಷಯದ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗಿದೆ. ಪ್ರಸ್ತುತ ಕುಣಿಗಲ್ ಪಟ್ಟಣವು ಒಟ್ಟು ೮. ಚ.ಕಿ.ಮೀ. ವ್ಯಾಪ್ತಿಯನ್ನು ಹೊಂದಿದ್ದು ೨೩ ವಾರ್ಡ್‌ಗಳನ್ನು

ಮತ್ತು ೩೪ ಸಾವಿರ ಜನಸಂಖ್ಯೆಯನ್ನು (೨೦೧೦-೧೧ರ ವಾರ್ಷಿಕ ವರದಿ ಅನ್ವಯ) ಹೊಂದಿದೆ. ಆದುದರಿಂದ ಪ್ರಾಚೀನ ಕಾಲಮಾನದಿಂದ ಹಿಡಿದು ಇತ್ತೀಚಿನ ಪುರಸಭೆಯ ಪಟ್ಟಣದವರೆಗಿನ ಮಾಹಿತಿಯನ್ನು ಅಧ್ಯಯನದಲ್ಲಿ ಸೇರಿಸಿಕೊಳ್ಳಲಾಗಿದೆ. ಕುಣಿಗಲ್ ಪಟ್ಟಣದ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ಧಾರ್ಮಿಕ ಮಂದಿರಗಳು ಅವರ ಆಚರಣೆಗಳು, ಜೀವನ ಕ್ರಮಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

ಅಧ್ಯಯನದ ವಿಧಾನ

ಸಾಂಸ್ಕೃತಿಕ ಹಿನ್ನೆಲೆಯನ್ನು ಇಟ್ಟುಕೊಂಡು ಕೈಗೊಂಡಿರುವ ಪ್ರಸ್ತುತ ಅಧ್ಯಯನವು ಕ್ಷೇತ್ರಕಾರ್ಯ ಆಧಾರಿತವಾಗಿದ್ದು, ಕ್ಷೇತ್ರಕಾರ್ಯದ ಮೂಲಕ ಪ್ರಾಥಮಿಕ ಹಾಗೂ ಆನುಷಂಗಿಕ ಆಕರಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಬಳಸಿಕೊಂಡು, ಕುಣಿಗಲ್ ಪಟ್ಟಣದ ವ್ಯಾಪ್ತಿಗೆ ಒಳಪಡುವಂತಹ ಸ್ಥಳಗಳಿಗೆ ಭೇಟಿಕೊಟ್ಟು, ಅಲ್ಲಿರುವ ಪ್ರಾಚೀನ ಅವಶೇಷಗಳಾದ ದೇವಾಲಯಗಳು, ಕೆರೆ-ಕಟ್ಟೆಗಳು, ಶಾಸನಗಳು, ಕೋಟೆ-ಕೊತ್ತಲಗಳು ಮತ್ತು ಮೂರ್ತಿಶಿಲ್ಪಗಳನ್ನು ದಾಖಲಿಸಿಕೊಂಡು ಸಮಗ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅದೇ ರೀತಿ ಮೌಖಿಕ ಆಕರಗಳಾದ ಐತಿಹ್ಯಗಳು, ಸ್ಥಳನಾಮ ಮತ್ತು ಸ್ಥಳ ಪುರಾಣಗಳು, ಜಾನಪದ ನಂಬಿಕೆಗಳನ್ನು ಸ್ಥಳೀಯ ಜನರಿಂದ ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಿ, ಸೂಕ್ತ ಚಿಂತನೆ ನಡೆಸಲಾಗಿದೆ.

ಕುಣಿಗಲ್ ಪಟ್ಟಣಕ್ಕೆ ಸಂಬಂಧಿಸಿದಂತೆ ಸಮಾಜ ಸಂಸ್ಕೃತಿಯ ಬಗ್ಗೆ ಸೂಕ್ಷ್ಮ ಅಧ್ಯಯನ ಕೈಗೊಂಡು, ಅವರ ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲಾಗಿದೆ. ಪ್ರಮುಖವಾಗಿ ಕುಣಿಗಲ್ ಪಟ್ಟಣದ ನಂಬಿಕೆ-ಆಚರಣೆಗಳು, ಜಾತ್ರೆ-ಉತ್ಸವಗಳು ಮತ್ತು ಹಬ್ಬ-ಹರಿದಿನಗಳ ಬಗ್ಗೆ ಸುದೀರ್ಘವಾಗಿ ಅಧ್ಯಯನ ಮಾಡಿ ಸಾಂಸ್ಕೃತಿಕ ಚಿತ್ರಣ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಈವರೆಗೆ ಕ್ಷೇತ್ರದ ಬಗ್ಗೆ ನಡೆದಿರುವ ಅಧ್ಯಯನ ಸಮೀಕ್ಷೆ

ಪ್ರಸ್ತುತ ಅಧ್ಯಯನದ ಶೀರ್ಷಿಕೆಗೆ ಸಂಬಂಧಿಸಿದಂತೆ ಯಾವುದೇ ಅಧ್ಯಯನ ನಡೆದಿರುವುದಿಲ್ಲ. ಆದರೆ ಕುಣಿಗಲ್ ತಾಲೂಕಿನ ದೇವಾಲಯಗಳು, ಭೌಗೋಳಿಕ ಪರಿಸರ, ಶಾಸನಗಳ ಬಗ್ಗೆ, ನೀರಾವರಿ ಬಗ್ಗೆ, ಚಾರಿತ್ರಿಕ ಹಿನ್ನೆಲೆಯ ಬಗ್ಗೆ ಹಾಗೂ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ, ಗ್ರಂಥಗಳು, ಬಿಡಿ ಲೇಖನಗಳು ಮತ್ತು ಸ್ಮರಣ ಸಂಚಿಕೆಗಳು ಹೊರಬಂದಿದ್ದು ಅವುಗಳಲ್ಲಿ ಮುಖ್ಯವಾದವು ಈ ಕೆಳಗಿನಂತಿವೆ.

ರೈಸ್ ಬಿ.ಎಲ್. ಸಂಪಾದಕತ್ವದ **ಮೈಸೂರು ಗೆಜೆಟಿಯರ್** ಸಂಪುಟ-೨ ೧೮೮೭ರಲ್ಲಿ ಪ್ರಕಟಣೆಯಾಗಿದ್ದು, ಕುಣಿಗಲ್ ತಾಲ್ಲೂಕಿನ ಭೌಗೋಳಿಕ ಪರಿಸರ ಚಾರಿತ್ರಿಕ ಹಿನ್ನೆಲೆಯ ಬಗ್ಗೆ ಸ್ಥೂಲವಾಗಿ ಮಾಹಿತಿ ನೀಡಿದ್ದಾರೆ.

ಭಾಸ್ಕರಪ್ಪ ಸಿ. ಎನ್ ರವರು **ತುಮಕೂರು ಜಿಲ್ಲಾ ದರ್ಶನ** ಗ್ರಂಥದಲ್ಲಿ ಕುಣಿಗಲ್ ತಾಲೂಕಿನ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ಭೌಗೋಳಿಕ ಪರಿಸರ ಹಾಗೂ ಸಂಪನ್ಮೂಲಗಳ ಬಗ್ಗೆ ಅಂಕಿ-ಅಂಶ ನೀಡಿದ್ದಾರೆ.

ಗೋಪಾಲ್ ಆರ್. ಅವರ ಸಂಪಾದಕತ್ವದಲ್ಲಿ **ತುಮಕೂರು ಜಿಲ್ಲೆ ಇತಿಹಾಸ ಮತ್ತು ಪುರಾತತ್ವ** ಎಂಬ ಕೃತಿಯಲ್ಲಿ ಕುಣಿಗಲ್ ತಾಲ್ಲೂಕಿನ ಕೋಟೆಗಳು, ಶಾಸನಗಳು, ನೀರಾವರಿ ಎಂಬ ವಿಷಯವಾಗಿ ಲೇಖಕರು ಲೇಖನ ಬರೆದಿದ್ದಾರೆ. ಬೋರಲಿಂಗಯ್ಯ ಹಿ.ಚಿ.ರವರ **ಉಜ್ಜಿನಿ ಚೌಡಮ್ಮ** ಗ್ರಂಥದಲ್ಲಿ ಗ್ರಾಮದೇವತೆಗಳ ನಂಬಿಕೆ ಮತ್ತು ಆಚರಣೆಗಳ ಬಗ್ಗೆ ವಿವರಣೆ ನೀಡಿದ್ದಾರೆ.

ಲಕ್ಷ್ಮಣ ಸಿ.ಎಂ.ರವರ **ತುಮಕೂರು ಜಿಲ್ಲೆ ಭೌಗೋಳಿಕ ಪರಿಸರ ಮತ್ತು ಅಭಿವೃದ್ಧಿ** ಎಂಬ ಗ್ರಂಥದಲ್ಲಿ ಕುಣಿಗಲ್ ತಾಲೂಕಿನ ಭೌಗೋಳಿಕ ಪರಿಸರದ ಬಗ್ಗೆ ಅಂಕಿ-ಅಂಶಗಳನ್ನು ನೀಡಿದ್ದಾರೆ.

ಶಿವತಾರಕ್ ಕೆ.ಬಿ.ಅವರ **"ತುಮಕೂರು ಜಿಲ್ಲೆಯ ಪುರಾತತ್ವ ಕುರುಹುಗಳು-ಒಂದು ಸಾಂಸ್ಕೃತಿಕ ಅಧ್ಯಯನ"**ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ಕುಣಿಗಲ್ ತಾಲೂಕಿನ ಪ್ರಾಗಿತಿಹಾಸದ ನೆಲೆಗಳನ್ನು ಗುರುತಿಸಿ ವಿವರಣೆ ನೀಡಿದ್ದಾರೆ.

ಹಯವದನ್‌ರಾವ್ ಸಿ. ಸಂಪಾದಕತ್ವದ **ಮೈಸೂರು ಗೆಜೆಟಿಯರ್** (ಸಂಪುಟ-೫)ನಲ್ಲಿ ಕುಣಿಗಲ್ ತಾಲೂಕಿನ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆಗಳ ಬಗ್ಗೆ ಅಲ್ಪ-ಸ್ವಲ್ಪ ಮಾಹಿತಿ ನೀಡಿದ್ದಾರೆ.

ಮುನಿರಾಜಪ್ಪ ನವರ **'ಮಾಗಡಿ ಸೀಮೆಯ ಇತಿಹಾಸ ಮತ್ತು ಸಂಸ್ಕೃತಿ'** ಎಂಬ ಗ್ರಂಥದಲ್ಲಿ ಕುಣಿಗಲ್ ತಾಲೂಕಿನ ಚಾರಿತ್ರಿಕ ಹಿನ್ನೆಲೆ ಬಗ್ಗೆ ಪ್ರಸ್ತಾಪಿಸಿದ್ದಾರೆ.

ತುಮಕೂರು ಜಿಲ್ಲೆಯ ಶಾಸನ ಸಂಪುಟ ೧೨ ಮತ್ತು ೨೪ ರಲ್ಲಿ ಕುಣಿಗಲ್ ತಾಲೂಕಿನ ಶಾಸನಗಳ ಬಗ್ಗೆ ಉಲ್ಲೇಖಿಸಿದ್ದಾರೆ.

ಕವಿತ-ಕೃಷ್ಣ ರವರ ಸಂಪಾದಕತ್ವದಲ್ಲಿ **'ಜಯಮಂಗಲಿ'** ಎಂಬ ಸ್ಮರಣ ಸಂಚಿಕೆಯಲ್ಲಿ ಕುಣಿಗಲ್ ತಾಲೂಕಿನ ಚಾರಿತ್ರಿಕ ಹಿನ್ನೆಲೆ ಮತ್ತು ನೀರಾವರಿ ವ್ಯವಸ್ಥೆಯ ಬಗ್ಗೆ ವಿವರಣೆ ನೀಡಲಾಗಿದೆ.

ಜಯರಾಮಯ್ಯ ಜಿ ಟಿ ರವರು **ಇತಿಹಾಸ ದರ್ಶನ** ಸಂಪುಟ ೮ ಮತ್ತು ೧೦ ರಲ್ಲಿ ಕುಣಿಗಲ್ ನಾಡು ಎಂಬ ಶಿರ್ಷಿಕೆ ಅಡಿಯಲ್ಲಿ ಕೆಲವು ಲೇಖನ ಬರೆದಿದ್ದಾರೆ. ಅದೇ ರೀತಿ ಇವುಗಳ ಜೊತೆಗೆ **ತುಮಕೂರು ಜಿಲ್ಲಾ ಗೆಜೆಟಿಯರ್**, ನಂಜುಂಡಸ್ವಾಮಿ ಬಿ ರವರ ಸಂಪಾದಕತ್ವದ **ಕಲ್ಪಸಿರಿ** ಸ್ಮರಣ ಸಂಚಿಕೆ, ಕುಣಿಗಲ್ ನಾರಾಯಣ ರವರ **ಸವಿತ ಸಂಭ್ರಮ**, ಮುದ್ದವೀರಪ್ಪ ಕೆ ವಿ **ತುಮಕೂರು ಜಿಲ್ಲೆಯ ಕೋಟೆ-ಕೊತ್ತಲಗಳು ಜಾನಪದೀಯ ಅಧ್ಯಯನ** ಎಂಬ ಪಿಎಚ್.ಡಿ ಮಹಾಪ್ರಬಂಧ ಹಾಗೂ ರಾಜೇದ್ರಪ್ಪ ಶಿ ರವರ **ಹುಲಿಯೂರು ದುರ್ಗ ವಿದಾನಸಭಾ ಕ್ಷೇತ್ರ – ಒಂದು ಸಾಂಸ್ಕೃತಿಕ ಅಧ್ಯಯನ** ಎಂಬ ಗ್ರಂಥಗಳಲ್ಲಿ ಕುಣಿಗಲ್ ತಾಲೂಕಿನ ಬಗ್ಗೆ ಸಣ್ಣ ಪ್ರಮಾಣದಲ್ಲಿ ಮಾಹಿತಿ ದೊರೆಯುತ್ತದೆ.

ಅಧ್ಯಯನದ ಸ್ವರೂಪ

"ಕುಣಿಗಲ್ ಪಟ್ಟಣದ ಸಾಂಸ್ಕೃತಿಕ ಅಧ್ಯಯನ" ಎನ್ನುವ ಸಂಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಾಯಗಳಾಗಿ ವಿಭಾಗಿಸಲಾಗಿದೆ. ಈ ಮೂಲಕ ಸಂಪ್ರಬಂಧದ ರಚನಾ ಕಾರ್ಯ ಕೈಗೊಳ್ಳಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಶೀರ್ಷಿಕೆಗೆ ಸಂಬಂಧಿಸಿದಂತೆ ಪ್ರಸ್ತಾವನೆ, ಅಧ್ಯಯನ ಉದ್ದೇಶ, ವ್ಯಾಪ್ತಿ, ವಿಧಾನ, ಮಹತ್ವವನ್ನು ಸೇರಿಸಲಾಗಿದೆ ಹಾಗೂ ವಿಷಯಕ್ಕೆ ಪೂರಕವಾಗಿ ನಡೆದಿರುವಂತಹ ಅಧ್ಯಯನ ಸಮೀಕ್ಷೆಯನ್ನು ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಕುಣಿಗಲ್ ತಾಲ್ಲೂಕಿನ ಭೌಗೋಳಿಕ ಪರಿಸರದ ಬಗ್ಗೆ ನೆಲ-ಜಲ, ಬೆಟ್ಟ-ಗುಡ್ಡ, ಜನಸಂಖ್ಯೆ, ವಾಯುಗುಣ, ಮಳೆಯ ಪ್ರಮಾಣ, ನೀರಾವರಿ, ಖನಿಜ ಸಂಪನ್ಮೂಲಗಳು, ಅರಣ್ಯ ಮತ್ತು ಅಲ್ಲಿನ ಜನಜೀವನದ ಬಗ್ಗೆ ಪ್ರಸ್ತಾಪಿಸಲಾಗಿದೆ. ಇದಕ್ಕೆ ಸಂಬಂಧಪಟ್ಟ ಇಲಾಖೆಯಿಂದ ಅಂಕಿ-ಅಂಶ ಸಂಗ್ರಹಿಸಿ ವಿಷಯಕ್ಕೆ ಸೇರಿಸಿಕೊಳ್ಳಲಾಗಿದೆ. ಕುಣಿಗಲ್ ಪಟ್ಟಣದ ನಾಮ ನಿಷ್ಪತ್ತಿ, ಸ್ಥಳ

ನಾಮ ಮತ್ತು ಸ್ಥಳ ಪುರಾಣದ ಬಗ್ಗೆ ವಿವರಣೆ ನೀಡಲಾಗಿದೆ. ಅಲ್ಲದೆ ಪ್ರಾಗಿತಿಹಾಸಿಕ ನೆಲೆಗಳು ಹಾಗೂ ನೆಲೆಗಳಲ್ಲಿ ದೊರೆಯುವ ಶಿಲಾಯುಗದ ಉಪಕರಣಗಳ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ. ಜೊತೆಗೆ ಕುಣಿಗಲ್ ಪಟ್ಟಣದ ಚಾರಿತ್ರಿಕ ಹಿನ್ನೆಲೆ ಕಟ್ಟಿಕೊಡುವ ಸಲುವಾಗಿ ಕುಣಿಗಲ್ ಪ್ರದೇಶದಲ್ಲಿ ಆಡಳಿತ ಮಾಡಿದ ರಾಜಮನೆತನಗಳು ಹಾಗೂ ಅವರ ಸಂಬಂಧವನ್ನು ವಿವರಿಸಲಾಗಿದ್ದು ಗಂಗರ ಕಾಲದಿಂದ ಮೈಸೂರು ಒಡೆಯರ ಕಾಲದವರೆಗೂ ಈ ಮೇಲಿನ ಅಂಶಗಳನ್ನು ಇಟ್ಟುಕೊಂಡು ಕುಣಿಗಲ್ ಪಟ್ಟಣದ ಚಾರಿತ್ರಿಕ ಹಿನ್ನೆಲೆ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಕುಣಿಗಲ್ ಪಟ್ಟಣದಲ್ಲಿರುವ ಎಲ್ಲಾ ಧಾರ್ಮಿಕ ಕೇಂದ್ರಗಳ ವಿವರಣೆ ನೀಡಲಾಗಿದೆ. ದೇವಾಲಯಗಳಿಗೆ ಸಂಬಂಧಿಸಿದಂತೆ ಶಾಸನಗಳನ್ನು ಬಳಸಿಕೊಂಡು ದೇವಾಲಯಗಳ ಉಗಮ, ವಿಕಾಸ, ರಚನೆ ಮತ್ತು ನಿರ್ಮಾಣದ ಬಗ್ಗೆ ವಿಸ್ತಾರವಾಗಿ ಚರ್ಚಿಸಲಾಗಿದೆ. ಜೊತೆಗೆ ಮೂರ್ತಿಶಿಲ್ಪಗಳ ಬಗ್ಗೆ ವಿವರಣೆ ನೀಡಲಾಗಿದ್ದು, ಕುಣಿಗಲ್ ಪಟ್ಟಣದಲ್ಲಿ ದೊರೆತಿರುವ ಶಾಸನಗಳು ವೀರಗಲ್ಲು ಹಾಗೂ ಮಹಾಸತಿಯ ಅಚರಣೆಯ ಬಗ್ಗೆ ವಿಶ್ಲೇಷಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಕುಣಿಗಲ್ ಪಟ್ಟಣದ ಕೆರೆ, ಬಾವಿಗಳಿಗೆ ಸಂಬಂಧಿಸಿದಂತೆ ಕೆರೆಗಳ ಪ್ರಾಚೀನತೆ, ನಿರ್ಮಾಣ, ನೀರಾವರಿ ವ್ಯವಸ್ಥೆ, ಕೆರೆ ನೀರಾವರಿ ಆಧಾರಿತ ಬೆಳೆಗಳು, ನಂಬಿಕೆ ಮತ್ತು ಆಚರಣೆಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಗಿದೆ ಹಾಗೂ ಕುಣಿಗಲ್ ಪಟ್ಟಣಕ್ಕೆ ಸಂಬಂಧಿಸಿದ ಕೋಟೆಯ ನಿರ್ಮಾಣದ ಬಗ್ಗೆ ಚರ್ಚಿಸಲಾಗಿದೆ. ಟಿಪ್ಪು ಸುಲ್ತಾನನ ಆಡಳಿತ ಅವಧಿಯಲ್ಲಿ ನಿರ್ಮಾಣಗೊಂಡಿರುವ ಕುದುರೆ ಫಾರಂನ(ಅಶ್ವತಳಿ ಸಂವರ್ಧನ ಕೇಂದ್ರ) ಬಗ್ಗೆ ಹಾಗೂ ಪ್ರಸ್ತುತ ಸ್ಥಿತಿಗತಿ ಬಗ್ಗೆ ವಿವರಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಕುಣಿಗಲ್ ಪಟ್ಟಣಕ್ಕೆ ಸಂಬಂಧಿಸಿದ ಸಮಾಜ ಸಂಸ್ಕೃತಿಯ ಬಗ್ಗೆ ವಿವರಿಸಲಾಗಿದೆ. ಅಲ್ಲಿನ ಸಾಮಾಜಿಕ, ಧಾರ್ಮಿಕ, ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಚಿತ್ರಣ ನೀಡಲಾಗಿದೆ. ಕುಣಿಗಲ್ ಪಟ್ಟಣಕ್ಕೆ ಸಂಬಂಧಿಸಿದ ನಂಬಿಕೆ–ಆಚರಣೆಗಳು, ಜಾತ್ರೆ–ಉತ್ಸವಗಳು ಹಾಗೂ ಹಬ್ಬ–ಹರಿದಿನಗಳ ಬಗ್ಗೆ ಕೂಲಂಕಶವಾಗಿ ಅಧ್ಯಯನ ಮಾಡಲಾಗಿದೆ.

ಆರನೆಯ ಅಧ್ಯಾಯವು ಸಮಾರೋಪಕ್ಕೆ ಸಂಬಧಿಸಿದ್ದು, ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಪ್ರಮುಖ ಸಂಗತಿಗಳು, ಸಮೀಕ್ಷೆಯ ಫಲಿತಾಂಶಗಳನ್ನು ಪ್ರಕಟಿಸುವ ಪ್ರಯತ್ನ ಮಾಡಲಾಗಿದೆ. ಕೊನೆಯದಾಗಿ ಈ ಅಧ್ಯಯನಕ್ಕೆ ಪೂರಕವಾಗಿರುವ ಆಕರ ಗ್ರಂಥಗಳನ್ನು ಸೂಚಿಸಲಾಗಿದೆ. ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಲಾದ ತಲನಕ್ಷೆಗಳನ್ನು ಮತ್ತು ಛಾಯಾಚಿತ್ರಗಳನ್ನು ಅಳವಡಿಸಲಾಗಿದೆ.

❑❑❑

-☸-

ಅಧ್ಯಾಯ : ಎರಡು

ಭೌಗೋಳಿಕ ಹಾಗೂ ಚಾರಿತ್ರಿಕ ಹಿನ್ನೆಲೆ

೨.೧. ಭೌಗೋಳಿಕ ಪರಿಸರ

೨.೨. ಸ್ಥಳನಾಮ ಮತ್ತು ಸ್ಥಳ ಪುರಾಣ

೨.೩. ಪ್ರಾಗಿತಿಹಾಸ

೨.೪. ಇತಿಹಾಸ

೨.೧. ಭೌಗೋಳಿಕ ಪರಿಸರ

ಯಾವುದೇ ಪ್ರದೇಶದ ಬಗ್ಗೆ ಅಧ್ಯಯನ ಮಾಡಬೇಕಾದರೆ ಪ್ರಮುಖವಾಗಿ ಅಲ್ಲಿನ ಭೌಗೋಳಿಕ ವೈಶಿಷ್ಟ್ಯಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ಭೂಗೋಳ ಸಮಾಜದ ಮೇಲೆ ತನ್ನದೇ ಅದ ಪ್ರಭಾವ ಬೀರುತ್ತದೆ. ಅದರೊಂದಿಗೆ ಚರಿತ್ರೆ ಮತ್ತು ಭೂಗೋಳ ನಿಕಟವಾದ ಸಂಬಂಧ ಹೊಂದಿದೆ. ಭೂಗೋಳದ ಅರಿವಿಲ್ಲದೆ ಚರಿತ್ರೆ ಬರೆಯುವುದು ಕಷ್ಟಸಾಧ್ಯ. ಅದೇ ರೀತಿ ಭೌಗೋಳಿಕ ಅಂಶಗಳು ಪ್ರಭಾವ ಬೀರದ ಪ್ರದೇಶವಿಲ್ಲ. ಪ್ರತಿಯೊಂದು ಚಾರಿತ್ರಿಕ ಸನ್ನಿವೇಷ, ಸ್ಮಾರಕ ಹಾಗೂ ಅವಶೇಷಗಳ ಮೇಲೆ ಪ್ರಭಾವ ಇದ್ದೇ ಇರುತ್ತದೆ.

ಪ್ರಾಚೀನ ಆದಿಮಾನವನು ಬದುಕುವುದಕ್ಕಾಗಿ ಉತ್ತಮ ಭೌಗೋಳಿಕ ಪರಿಸರವನ್ನು ಶೋಧಿಸಿ ಅಲ್ಲಿ ವಾಸಮಾಡುತ್ತಿದ್ದ. ಹೀಗಾಗಿ ಒಂದು ಪ್ರದೇಶದ ಸರ್ವತೋಮುಖ ಬೆಳವಣಿಗೆಯು ಅಲ್ಲಿನ ಭೌಗೋಳಿಕ ಅಂಶಗಳನ್ನು ಅವಲಂಬಿಸಿರುತ್ತದೆ. ಯಾವ ದೇಶಕ್ಕೆ ಹೆಚ್ಚು ಪ್ರಕೃತಿಯ ಸಹಾಯವಿರುತ್ತದೆಯೋ ಅದು ಬಹುಬೇಗ ಅಭಿವೃದ್ಧಿಯನ್ನು ಸಾಧಿಸುತ್ತದೆ. ಒಂದು ದೇಶದ ಪರ್ವತ ಶ್ರೇಣಿ, ಬೆಟ್ಟಗುಡ್ಡ, ಮಳೆಯ ಪ್ರಮಾಣ, ಹವಾಗುಣ, ಉಷ್ಣಾಂಶ, ಕಾಡು, ಮುಂತಾದ ಭೌಗೋಳಿಕ ಅಂಶಗಳು ಮಾನವನನ್ನು ಆ ಪ್ರದೇಶದಲ್ಲಿ ವಾಸಿಸುವಂತೆ ಅನುವು ಮಾಡಿಕೊಡುತ್ತದೆ.

ಅದೇ ರೀತಿ ಉತ್ತಮ ಭೌಗೋಳಿಕ ಪರಿಸರ ಆ ಪ್ರದೇಶದ ನೈಸರ್ಗಿಕ ಸಂಪತ್ತನ್ನು ಹೆಚ್ಚಿಸಿ ಜನ ಜೀವನ, ನಾಗರೀಕತೆ, ಸಂಸ್ಕೃತಿ, ಕಲೆ, ವಾಸ್ತುಶಿಲ್ಪದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ಪ್ರಾಚೀನ ನಾಗರೀಕತೆಗಳಾದ ಸಿಂಧೂ ಮತ್ತು ಈಜಿಪ್ಟ್ ಸಂಸ್ಕೃತಿಯು ಹುಟ್ಟಿ ಪ್ರಬುದ್ಧವಾಗಿ ಬೆಳೆದು ಅವನತಿಯಾದುದು ನದಿಯ ಪರಿಸರದಲ್ಲಿ. ಭೌಗೋಳಿಕ ಪರಿಸರವು ಮಾನವನು ಒಂದೆಡೆ ನೆಲೆ ನಿಂತು ತನ್ನದೇ ನಾಗರೀಕತೆ ಮತ್ತು ಸಂಸ್ಕೃತಿಯನ್ನು ಕಟ್ಟಿಕೊಳ್ಳಲು ಸಹಾಯಕವಾಗಿದೆ.

೨.೧. ಕುಣಿಗಲ್ ತಾಲೂಕಿನ ಭೌಗೋಳಿಕ ಪರಿಸರ

ಕುಣಿಗಲ್ ತಾಲೂಕು ರಾಜಧಾನಿ ಬೆಂಗಳೂರಿನಿಂದ ೭೦ ಕಿ.ಮೀ.ಗಳ ಅಂತರವನ್ನು ಹಾಗೂ

ಜಿಲ್ಲಾ ಕೇಂದ್ರ ತುಮಕೂರಿನಿಂದ ೩೮ ಕಿ.ಮೀ. ಗಳಷ್ಟು ಅಂತರವನ್ನು ಹೊಂದಿದ್ದು. ೯೮೧ ಚದುರ ಕಿ.ಮಿ ವಿಸ್ತೀರ್ಣವನ್ನು ಹೊಂದಿದೆ. ಸಮುದ್ರ ಮಟ್ಟದಿಂದ ೨೫೫೪ ಅಡಿ ಎತ್ತರದಲ್ಲಿದ್ದು. ಅಕ್ಷಾಂಶ ೭೭° ೦೧' ಮತ್ತು ರೇಖಾಂಶ ೧೩° ೦೧'ದಲ್ಲಿದೆ. ಆಡಳಿತದ ಅನುಕೂಲಕ್ಕಾಗಿ ೬ ಹೋಬಳಿಗಳನ್ನಾಗಿ ವಿಂಗಡಿಸಲಾಗಿದ್ದು ಕಸಬಾ, ಹುತ್ರಿದುರ್ಗ, ಅಮೃತೂರು, ಕೊತ್ತಗೆರೆ, ಎಡಿಯೂರು ಮತ್ತು ಹುಲಿಯೂರು ದುರ್ಗ ಹೋಬಳಿಗಳನ್ನು ಒಳಹೊಂಡಿದ್ದು ೩೧೪ ಕಂದಾಯ ಗ್ರಾಮಗಳನ್ನು, ೩೬ ಗ್ರಾಮ ಪಂಚಾಯ್ತಿಗಳು, ೬೯ ಗ್ರಾಮ ಲೆಕ್ಕಿಗರ ವೃತ್ತಗಳು, ೧ ಪಟ್ಟಣ ಪಂಚಾಯ್ತಿ ಹಾಗೂ ೨೩ ಪುರಸಭೆಯ ವಾರ್ಡ್‌ಗಳನ್ನು ಒಳಗೊಂಡಿರುತ್ತದೆ.[೧]

ಬಿ.ಎಲ್. ರೈಸ್ ಅವರು ೧೮೯೧ರಲ್ಲಿ ಮಾಡಿರುವ ವರದಿ ಪ್ರಕಾರ ೭ ಹೋಬಳಿಗಳು. ೨೯೧ ಕಂದಾಯ ಗ್ರಾಮಗಳು, ೬೬೫೦೨ ಜನಸಂಖ್ಯೆಯನ್ನು ಕುಣಿಗಲ್ ತಾಲೂಕು ಒಳಗೊಂಡಿತ್ತು [೨]

ಕುಣಿಗಲ್ ತಾಲೂಕು ಪೂರ್ವಕ್ಕೆ ಮಾಗಡಿ ತಾಲೂಕು ಪಶ್ಚಿಮಕ್ಕೆ ತುರುವೇಕೆರೆ, ಉತ್ತರಕ್ಕೆ ತುಮಕೂರು ಗ್ರಾಮಾಂತರ ತಾಲೂಕು, ದಕ್ಷಿಣಕ್ಕೆ ಮದ್ದೂರು ತಾಲೂಕು, ಈಶಾನ್ಯಕ್ಕೆ ನೆಲಮಂಗಲ, ನೈರುತ್ಯಕ್ಕೆ ನಾಗಮಂಗಲ, ವಾಯವ್ಯಕ್ಕೆ ಗುಬ್ಬಿ ತಾಲೂಕು ಹಾಗೂ ಆಗ್ನೆಯಕ್ಕೆ ರಾಮನಗರ ಜಿಲ್ಲೆಯೊಂದಿಗೆ ತನ್ನ ಗಡಿಯನ್ನು ಹಂಚಿಕೊಂಡಿದೆ. ರಾಷ್ಟ್ರೀಯ ಹೆದ್ದಾರಿ NH-48 (ಬೆಂಗಳೂರು–ಮಂಗಳೂರು) ಪಟ್ಟಣದ ಮಧ್ಯೆ ಹಾದುಹೋಗುತ್ತದೆ. ಅಲ್ಲದೆ ರಾಜ್ಯ ಹೆದ್ದಾರಿ (SH) ತುಮಕೂರು–ಮೈಸೂರು ಮಾರ್ಗಕ್ಕೆ ಅನುವು ಮಾಡಿಕೊಟ್ಟಿದೆ.

ಜನಸಂಖ್ಯೆ ಮತ್ತು ಸಾಕ್ಷರತೆ ಪ್ರಮಾಣ

ಕುಣಿಗಲ್ ತಾಲೂಕಿನ ಜನಸಂಖ್ಯೆ ೨೦೧೦-೧೧ರ ಜನಗಣತಿಯ ಪ್ರಕಾರ ೨,೨೫,೬೯೫ ಇದ್ದು, ಇದರಲ್ಲಿ ಪುರುಷರು ೧,೧೨,೯೦೪ ಮತ್ತು ಮಹಿಳೆಯರು ೧,೧೨,೭೯೧ ರಷ್ಟು ಇರುವರು. ಅದೇ ರೀತಿ ಕುಣಿಗಲ್ ತಾಲೂಕಿನಲ್ಲಿ ೫೦೭೯೨ ಕುಟುಂಬಗಳಿದ್ದು ಅವುಗಳಲ್ಲಿ ಪಟ್ಟಣದಲ್ಲಿನ ಕುಟುಂಬಗಳ ಸಂಖ್ಯೆ ೬೩೬೯ ಮತ್ತು ಗ್ರಾಮೀಣ ಕುಟುಂಬಗಳ ಸಂಖ್ಯೆ ೪೪೪೨೩ ಇದ್ದು ಗ್ರಾಮೀಣ ಭಾಗವೇ ಮೇಲುಗೈ ಸಾಧಿಸಿದೆ.[೩] ಹಾಗೂ ತಾಲೂಕಿನಲ್ಲಿ ಒಟ್ಟು ಗ್ರಾಮೀಣ ಪರಿಶಿಷ್ಟ ಜಾತಿಯ ಜನಸಂಖ್ಯೆ ೨೭೪೩೬ ಇದ್ದು ಅವುಗಳಲ್ಲಿ ಪುರುಷರು ೧೩೩೮೦, ಮಹಿಳೆಯರು ೧೪೦೫೬ರಷ್ಟಿದ್ದಾರೆ.

ತಾಲೂಕಿನ ಜನಸಾಂದ್ರತೆ ಪ್ರತಿ. ಚ.ಕಿ. ಮೀಟರ್‌ಗೆ ೨೪೧ ಹಾಗೂ ಲಿಂಗಾನುಪಾತ ೧೦೦೦ ಪುರುಷರಿಗೆ ೯೯೦ ಮಹಿಳೆಯರಿದ್ದಾರೆ.[೪] ತಾಲೂಕಿನ ಒಟ್ಟು ಸಾಕ್ಷರತೆಯ ಪ್ರಮಾಣ ೬೮.೩೧ರಷ್ಟಿದ್ದು ಇವುಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ೬೫.೧೫% ಮತ್ತು ಪಟ್ಟಣದಲ್ಲಿ ೮೪.೪ ರಷ್ಟಿದೆ.

ವಾಯುಗುಣ ಮತ್ತು ಮಳೆ

ಕುಣಿಗಲ್ ತಾಲೂಕಿನ ವಾಯುಗುಣವು ಉಷ್ಣ ವಲಯದ ಮಾನ್ಸೂನ್ ಮಾದರಿಯದ್ದಾಗಿದ್ದು, ಈ ವಾಯುಗುಣವನ್ನು ಮೂರು ಋತುಮಾನಗಳಾಗಿ ವಿಂಗಡಿಸಲಾಗಿದೆ.

೧. ಮಳೆಗಾಲ ೨. ಚಳಿಗಾಲ ೩. ಬೇಸಿಗೆಕಾಲ.

ವ್ಯವಸಾಯವನ್ನೆ ನಂಬಿರುವ ರೈತಾಪಿ ವರ್ಗಕ್ಕೆ ಮಳೆಯು ಅವಶ್ಯಕವಾಗಿದ್ದು ಜೂನ್ ಮತ್ತು ಜುಲೈ ತಿಂಗಳ ಅವಧಿಯಲ್ಲಿ ಬೀಳುವ ಮಳೆಯನ್ನು ಮುಂಗಾರು ಮಳೆ ಎನ್ನುವರು. ಮುಂಗಾರು

ಮಳೆಯು ಭೂಮಿಯನ್ನು ಉಳುಮೆಮಾಡಿ ಬೀಜಗಳನ್ನು ಬಿತ್ತನೆಮಾಡಲು ಅವಶ್ಯಕವಾಗಿರುತ್ತದೆ. ಅಕ್ಟೋಬರ್ ಮತ್ತು ಸೆಪ್ಟಂಬರ್ ತಿಂಗಳ ಅವಧಿಯನ್ನು ಹಿಂಗಾರು ಮಳೆಯ ಅವಧಿ ಎನ್ನುವರು. ಅದೇ ರೀತಿ ಡಿಸೆಂಬರ್ ನಿಂದ ಫೆಬ್ರವರಿ ತಿಂಗಳ ಅವಧಿಯನ್ನು ಚಳಿಗಾಲ ಎನ್ನುವರು. ಈ ಅವಧಿಯಲ್ಲಿ ಮೈ ಕೊರೆಯುವ ಚಳಿ ಇದ್ದು, ಜನರು ಬೆಚ್ಚನೆಯ ವಸ್ತ್ರಗಳು ಮತ್ತು ಶಾಖ ಆಹಾರವನ್ನು ಸೇವಿಸುತ್ತಾರೆ. ಮಾರ್ಚ್ ತಿಂಗಳಿಂದ ಮೇ ತಿಂಗಳ ಅವಧಿಯಲ್ಲಿ ಬಿಸಿಲು ಜಾಸ್ತಿ ಇದ್ದು ಉಷ್ಣಾಂಶ ೩೦°C ನಿಂದ ೪೦°C ನಷ್ಟು ಹೆಚ್ಚಾಗುತ್ತದೆ. ಈ ಅವಧಿಯಲ್ಲಿ ವಿಪರೀತ ಸೆಕೆ ಇದ್ದು, ತೆಳ್ಳನೆ ಬಟ್ಟೆ ಹಾಗೂ ತಂಪು ಪಾನಿಯಗಳನ್ನು ಅಪೇಕ್ಷಿಸುತ್ತಾರೆ.

ಖನಿಜ ಸಂಪತ್ತು ಮತ್ತು ಪ್ರಮುಖ ಕೈಗಾರಿಕೆಗಳು

ಕುಣಿಗಲ್ ತಾಲೂಕಿನಲ್ಲಿ ಅಷ್ಟೊಂದು ಲಾಭದಾಯಕವಾದ ಖನಿಜ ಸಂಪತ್ತು ಪತ್ತೆಯಾಗಿಲ್ಲ, ಈ ಪ್ರದೇಶದ ಖನಿಜಗಳೆಂದರೆ ಅಸ್ಬೆಸ್ಟಾಸ್, ಕೋರನ್ ಡಮ್, ಫೆಲ್ಡ್ಸ್ ಪ್ಪಾರ್, ಸಣ್ಣ ಪ್ರಮಾಣದ ಚಿನ್ನ, ಗಾರ್ನೆಟ್, ಫೆನ್ಸಾಪಾರ್, ಕುರುಂದರ ಕಲ್ಲುಗಳು, ಬೆಣಚುಕಲ್ಲು, ಕರೆಕಲ್ಲು, ಸುಣ್ಣದಕಲ್ಲು, ಮರಳು ಮತ್ತು ಕಲ್ನಾರುಗಳು ದೊರೆಯುತ್ತವೆ. ಕುಣಿಗಲ್ ತಾಲೂಕಿನಲ್ಲಿ ಸ್ಥಳೀಯವಾಗಿ ದೊರೆಯುವ ಸಂಪನ್ಮೂಲಗಳನ್ನು ಬಳಸಿಕೊಂಡು ಸಣ್ಣಪುಟ್ಟ ಕೈಗಾರಿಕೆಗಳು ತಲೆ ಎತ್ತಿದ್ದು ಸಾವಿರಾರು ಜನರಿಗೆ ಉದ್ಯೋಗ ಕಲ್ಪಸಿವೆ. ಪ್ರಮುಖವಾಗಿ ಹಂಚಿನ ಕಾರ್ಖಾನೆ, ಗೋಣಿನಾರು ಕೈಗಾರಿಕೆ, ಇಟ್ಟಿಗೆ ಉದ್ಯಮ, ರೇಶ್ಮೆ ಉದ್ಯಮ, ಬೀಡಿ ಕಟ್ಟುವುದು. ಮಧ್ಯ ಸಂಸ್ಕರಣ ಘಟಕ ಹಾಗೂ ಮಿಡಿ ಸೌತೆಕಾಯಿ ಸಂಸ್ಕರಣ ಘಟಕಗಳನ್ನು ಕಾಣಬಹುದಾಗಿದ್ದು, ಇವುಗಳ ಜೊತೆಗೆ ಸಣ್ಣಪುಟ್ಟ ಗುಡಿಕೈಗಾರಿಕೆಗಳನ್ನು ಕಾಣಬಹುದಾಗಿದೆ.

ಮಣ್ಣಿನ ರಚನೆ

ತಾಲೂಕಿನಲ್ಲಿ ಮುಖ್ಯವಾಗಿ ಬೆಳೆಗಳನ್ನು ಬೆಳೆಯಲು ಉತ್ತಮವಾದ ಮಣ್ಣು ಲಭ್ಯವಿದ್ದು ಫಲವತ್ತತೆಯಿಂದ ಕೂಡಿದೆ. ಜೇಡಿಮಣ್ಣು, ಮರಳು ಮಿಶ್ರಿತ ಕೆಂಪುಮಣ್ಣು (ಕೆಬ್ಬೆ ಭೂಮಿ) ಕಪ್ಪು ಬಣ್ಣದ ಎರೆಮಣ್ಣು ಯಥೇಚ್ಚವಾಗಿ ದೊರೆಯುತ್ತದೆ.

ಪ್ರಮುಖ ಬೆಳೆಗಳು

ರಾಗಿ, ಭತ್ತ, ಜೋಳ, ಉಪ್ಪು ನೇರಳೆ, ಅಡಿಕೆ, ತೆಂಗು, ಸಪೋಟ, ತೊಗರಿ, ಅವರೆ, ಅಳಸುಂಡೆ ಕಾಳು, ಹೆಸರುಕಾಳು, ಕಡಳೆಕಾಳು, ಸೊಪ್ಪು – ತರಕಾರಿಗಳು, ಹಣ್ಣಿನ ತೋಟಗಳು, ಹೂವಿನ ಗಿಡಗಳು ಪ್ರಮುಖ ಬೆಳೆಗಳಾಗಿವೆ.

ಬೆಟ್ಟಗುಡ್ಡಗಳು

ತಾಲೂಕಿನಲ್ಲಿ ಪ್ರಮುಖವಾಗಿ ಎರಡು ಬೆಟ್ಟಗಳನ್ನು ಕಾಣಬಹುದಾಗಿದ್ದು, ಹುರ್ತಿದುರ್ಗ ಮತ್ತು ಹುಲಿಯೂರುದುರ್ಗ ಬೆಟ್ಟ ಇವುಗಳ ಜೊತೆಗೆ ರಂಗಸ್ವಾಮಿಬೆಟ್ಟ, ಹಿಮಗಿರಿಯ ಬೆಟ್ಟವನ್ನು ಕಾಣಬಹುದಾಗಿದೆ.

ಹುತ್ರಿದುರ್ಗ ಬೆಟ್ಟ

ತಾಲೂಕು ಕೇಂದ್ರದಿಂದ ೧೮ ಕಿ.ಮೀ. ದೂರದಲ್ಲಿದ್ದು ಸಂತೆಪೇಟೆಯ ಬಳಿ ಇದೆ. ಇದರ

ಪಕ್ಕದಲ್ಲೇ ಬಸವನ ಬೆಟ್ಟ ಇದೆ. ಹುತ್ರಿದುರ್ಗ ಬೆಟ್ಟವು ಐತಿಹಾಸಿಕವಾಗಿ ಪ್ರಸಿದ್ಧಿ ಹೊಂದಿದ್ದು, ಸಮುದ್ರ ಮಟ್ಟದಿಂದ ೩೭೧೩ ಅಡಿ ಎತ್ತರದಲ್ಲಿದೆ. ಬೆಟ್ಟದಲ್ಲಿ ಏಳು ಸುತ್ತಿನ ಕೋಟೆ ಇದ್ದು, ಇದರ ಸ್ಥಾಪಕ ಕೆಂಪೇಗೌಡನಾಗಿದ್ದು ಮಾಗಡಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕುಣಿಗಲ್ ಪ್ರದೇಶವನ್ನು ತನ್ನ ಆಳ್ವಿಕೆಗೆ ತೆಗೆದುಕೊಂಡು ಅಭಿವೃದ್ಧಿಪಡಿಸಿದ್ದಾನೆ. ಬೆಟ್ಟದಲ್ಲಿ ಕಲ್ಲಿನ ಕೋಟೆ, ಸೈನಿಕರ ವಸತಿಗೃಹ, ರಾಜನ ದರ್ಬಾರು, ಮದ್ದಿನಮನೆ ಇದೆ. ಅಲ್ಲದೆ ಶಂಕರೇಶ್ವರ ಗುಡಿ, ಬಸವಣ್ಣನ ವಿಗ್ರಹವಿದ್ದು ನೋಡಲು ಸುಂದರವಾಗಿದೆ. ಬೆಟ್ಟದ ತುದಿಯಲ್ಲಿ ನೀರಿನ ಸೊನೆ ಹಾಗೂ ಶಂಕರಾಚಾರ್ಯರಿಂದ ಪ್ರತಿಷ್ಠಾಪಿಸಿದ ಶಿವಲಿಂಗವಿದೆ.[೫] ಕೋಟೆಗೆ ೭ ಬಾಗಿಲುಗಳಿದ್ದು ಬೆಟ್ಟಕ್ಕೆ ಹತ್ತಲು ಮೆಟ್ಟಿಲುಗಳ ವ್ಯವಸ್ಥೆ ಮಾಡಲಾಗಿದೆ. ಈ ದುರ್ಗವು ವಿಜಯನಗರ ಪೂರ್ವ ಕಾಲದಿಂದಲೂ ಪ್ರಮುಖ ರಕ್ಷಣಾ ನೆಲೆಯಾಗಿದ್ದು, ಬ್ರಿಟೀಷ್ ಸೇನಾಧಿಕಾರಿ ಲಾರ್ಡ್‌ಕಾರನ್‌ವಾಲಿಸನು ಕ್ರಿ.ಶ. ೧೭೯೨ರಲ್ಲಿ ಈ ಕೋಟೆಯನ್ನು ವಶಪಡಿಸಿಕೊಳ್ಳುತ್ತಾನೆ.[೬]

ಹುಲಿಯೂರುದುರ್ಗ ಬೆಟ್ಟ

ಈ ಬೆಟ್ಟವು ತಾಲೂಕು ಕೇಂದ್ರದಿಂದ ೨೪ ಕಿ.ಮೀ. ದೂರದಲ್ಲಿದೆ. ಹುಲಿಯೂರು ದುರ್ಗಕ್ಕೆ ವ್ಯಾಘ್ರಪುರ ಮತ್ತು ಚಿತ್ರಕಾಯಪುರವೆಂದು ಕರೆಯುತ್ತಿದ್ದುದಕ್ಕೆ ಶಾಂಕೇಶನ ಸಿದ್ಧೇಶ್ವರ ಪುರಾಣದಲ್ಲಿ ಉಲ್ಲೇಖವಿರುತ್ತದೆ.[೭] ತಾಲೂಕಿನ ಲಕ್ಕಶೆಟ್ಟಿಪುರ ಮತ್ತು ಉಜ್ಜನಿಗಳಲ್ಲಿರುವ ಶಾಸನಗಳಲ್ಲಿ ಹುಲಿಯೂರು ಎಂದು ಉಲ್ಲೇಖವಿದೆ.[೮]

ಹುಲಿಯೂರು ಎಂದರೆ ಈ ಪ್ರದೇಶದಲ್ಲಿ ಹುಲಿಗಳು ಕಾಣಿಸಿಕೊಂಡಿದ್ದರಿಂದ ಹುಲಿಯೂರು ಎಂಬುದಾಗಿ ಹೆಸರು ಬಂದಿದೆ. ಸಮುದ್ರ ಮಟ್ಟದಿಂದ ೩೮೯೬ ಅಡಿ ಎತ್ತರದಲ್ಲಿದೆ. ಮಾಗಡಿ ಕೆಂಪೇಗೌಡನ ಕಾಲದಲ್ಲಿ ಕೋಟೆ ಕಟ್ಟಿದ್ದರಿಂದ ದುರ್ಗವೆಂದು ಹೆಸರು ಪಡೆಯಿತು. ಕೋಟೆಯಲ್ಲಿ ಮದ್ದಿನ ಮನೆ, ಬತೇರಿ, ರಾಗಿಕಲ್ಲು, ಪುಷ್ಕರಣಿ ಹಾಗೂ ಕುದುರೆಲಾಯವಿದೆ. ಅಲ್ಲದೆ ಹುಲಿಯೂರುದುರ್ಗ ೭ ಸುತ್ತಿನ ಗಿರಿದುರ್ಗದ ಭದ್ರ ಕೋಟೆಯನ್ನು ಒಳಗೊಂಡಿದ್ದು, ಈ ಕೋಟೆಯ ಒಳಗಡೆ ಗೋಪಾಲಕೃಷ್ಣನ ದೇವಾಲಯ, ಗಣೇಶ, ವಿಷ್ಣು, ಶಿವ-ಪಾರ್ವತಿಯರ ಉಬ್ಬು ಶಿಲ್ಪಗಳಿವೆ. ಕ್ರಿ.ಶ ೧೭೯೧ರಲ್ಲಿ ಬ್ರಿಟೀಷ್ ಸೇನಾಧಿಕಾರಿ ಲಾರ್ಡ್ ಕಾರ್ನವಾಲಿಸನ ಸೈನ್ಯ ಗೆದ್ದುಕೊಂಡಿತು.

ರಂಗಸ್ವಾಮಿ ಬೆಟ್ಟ

ತಾಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದ್ದು, ಸಮುದ್ರ ಮಟ್ಟದಿಂದ ೨೯೯೭ ಅಡಿ ಎತ್ತರದಲ್ಲಿದೆ. ಪ್ರಮುಖ ಪ್ರವಾಸಿತಾಣವಾಗಿದ್ದು ಬೆಟ್ಟದ ಮೇಲೆ ರಂಗನಾಥ ಸ್ವಾಮಿಯ ದೇವಾಲಯವಿದ್ದು ದೇವಾಲಯಕ್ಕೆ ಬಾಗಿಲು ಇಲ್ಲದಿರುವುದು ವಿಶೇಷ. ಈ ಬೆಟ್ಟವು ನೋಡಲು ವಿಶಿಷ್ಟವಾಗಿದ್ದು ಬೆಟ್ಟಕ್ಕೆ ಏರಲು ಮೆಟ್ಟಿಲುಗಳ ವ್ಯವಸ್ಥೆ ಮಾಡಿದ್ದಾರೆ. ಶ್ರಾವಣ ಮಾಸದಲ್ಲಿ ವಿಶೇಷ ಪೂಜೆ ಮತ್ತು ಅನ್ನಸಂತರ್ಪಣೆ ಕಾರ್ಯಕ್ರಮವಿರುತ್ತದೆ.

ಜನಜೀವನ

ತಾಲೂಕಿನಲ್ಲಿ ಸಾಮಾನ್ಯವಾಗಿ ಎಲ್ಲಾ ಧರ್ಮದ, ಎಲ್ಲಾ ಜಾತಿ ಜನಾಂಗದ ಜನರನ್ನು ಕಾಣಬಹುದಾಗಿದ್ದು, ಹಿಂದೂಗಳು, ಮುಸಲ್ಮಾನರು, ಜೈನರು ಮತ್ತು ಕ್ರಿಶ್ಚಿಯನ್ ಧರ್ಮದವರಿದ್ದು,

ಹಿಂದೂಗಳು ಬಹುಸಂಖ್ಯಾತರಾಗಿದ್ದಾರೆ. ಹಲವಾರು ಜಾತಿ ಜನಾಂಗದವರಿದ್ದು ತಮ್ಮ ತಮ್ಮ ಕುಲಕಸುಬುಗಳನ್ನು ಆಯ್ದುಕೊಂಡು ಜೀವನ ನಡೆಸಿಕೊಂಡು ಬಂದಿದ್ದಾರೆ.

ಹೆಚ್ಚಿನ ಸಂಖ್ಯೆಯಲ್ಲಿ ಒಕ್ಕಲಿಗ ಜನಾಂಗದವರಿದ್ದು ಲಿಂಗಾಯತರು, ಬ್ರಾಹ್ಮಣರು, ಗೊಲ್ಲರು, ಹರಿಜನರು, ಶೆಟ್ಟಿಗರು, ಈಡಿಗರು, ತಿಗಳರು, ಕುಂಬಾರರು, ವಿಶ್ವಕರ್ಮ, ಲಂಬಾಣಿ, ಗಾಣಿಗರು, ಕ್ಷೌರಿಕರು, ಮಡಿವಾಳರು ಮತ್ತು ಕಮ್ಮಾರ ಜನಾಂಗದವರನ್ನು ಕಾಣಬಹುದಾಗಿದೆ. ಇಲ್ಲಿ ಹೆಚ್ಚಿನ ಜನ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಅಲ್ಲದೆ ಕುಣಿಗಲ್ ಪಟ್ಟಣದ ಕೆಲವು ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಜೊತೆಗೆ ಬೆಂಗಳೂರು ನಗರಕ್ಕೆ ಉದ್ಯೋಗಕ್ಕಾಗಿ ವಲಸೆ ಹೋಗುತ್ತಿದ್ದಾರೆ ಮತ್ತೆ ಕೆಲವರು ಪಶುಪಾಲನೆಯನ್ನು ಸ್ವಯಂ ಉದ್ಯೋಗ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ.

ಜಲಸಂಪನ್ಮೂಲಗಳು

ಈ ಪ್ರದೇಶವು ಬಯಲು ಸೀಮೆಯಾಗಿರುವುದರಿಂದ ನೀರಿನ ತಾಣಗಳೆಂದರೆ ಕೆರೆ ಬಾವಿಗಳು ಮತ್ತು ಕೊಳವೆ ಬಾವಿಗಳನ್ನು ಅವಲಂಬಿಸಿರುತ್ತದೆ. ೧೯೨೦-೨೧ ವರದಿಯ ಪ್ರಕಾರ ತಾಲೂಕಿನಲ್ಲಿ ೩೦ ಡೊಡ್ಡಕೆರೆ ಮತ್ತು ೬೫ ಸಣ್ಣ ಕೆರೆಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ ಕುಣಿಗಲ್ ದೊಡ್ಡಕೆರೆ ೨೪೩೮ ಅಡಿ ಜಲ ಸಂಗ್ರಹಣೆಯ ಸಾಮರ್ಥ್ಯ ಮತ್ತು ೨೯೮೩ ಎಕರೆ ಅಚ್ಚುಕಟ್ಟು ಭೂಮಿಗೆ ನೀರನ್ನು ಒದಗಿಸುತ್ತಿದ್ದು, ದೀಪಾಂಬುದಿಕೆರೆಯು ೧೪೬೧ ಅಡಿ ಜಲಸಂಗ್ರಹಣೆ ಸಾಮರ್ಥ್ಯವನ್ನು ಹೊಂದಿದ್ದು, ೧೪೪೮ ಎಕರೆ ಕೃಷಿ ಭೂಮಿಗೆ ನೀರನ್ನು ಒದಗಿಸುತ್ತದೆ ಎಂದು ಸಿ. ಹಯವದನರಾವ್ ವರದಿ ಮಾಡಿದ್ದಾರೆ.[೯]

ಶಿಂಷಾನದಿ

ಶಿಂಷಾ ನದಿಯು ದೇವರಾಯನದುರ್ಗದ ದಕ್ಷಿಣ ಭಾಗದಲ್ಲಿ ಹುಟ್ಟುವ ಒಂದು ಮುಖ್ಯ ನದಿಯಾಗಿದ್ದು ಕುಣಿಗಲ್ ತಾಲೂಕಿನಲ್ಲಿ ೨೪ ಕಿಮೀ. ದೂರ ಹರಿದು ತನ್ನ ಪಾತ್ರ ವಿಸ್ತರಿಸಿಕೊಳ್ಳುತ್ತಾ ಮಂಡ್ಯ ಜಿಲ್ಲೆ ಕಾವೇರಿ ನದಿಯನ್ನು ಸೇರುತ್ತದೆ. ಶಿಂಷಾ ನದಿಗೆ ಮಾರ್ಕೊನಹಳ್ಳಿಯಲ್ಲಿ ಅಣೆಕಟ್ಟು ನಿರ್ಮಿಸಲಾಗಿದ್ದು ಸುಮಾರು ೧೧೦೦೦ ಎಕರೆ ಕೃಷಿ ಭೂಮಿಗೆ ನೀರು ಒದಗಿಸುತ್ತಿದೆ.[೧೦]

ನಾಗಿನಿ

ಕುಣಿಗಲ್ ದೊಡ್ಡಕೆರೆಯಲ್ಲಿ ಜನ್ಮ ತಳೆಯುವ ನಾಗಿನಿ ನದಿಯು ೮ ಕಿ.ಮೀ. ದೂರ ಹರಿದು ಹನುಮಂತಪುರ ಗ್ರಾಮದ ಸಮೀಪ ಶಿಂಷಾ ನದಿಯನ್ನು ಸೇರಿಕೊಳ್ಳುತ್ತದೆ. ಈ ನದಿಗೆ ಸಂಕನಪುರದ ಬಳಿ ಅಣೆಕಟ್ಟನ್ನು ಕಟ್ಟಲಾಗಿದ್ದು ೨೪೩ ಹೆಕ್ಟೇರ್ ಕೃಷಿ ಭೂಮಿಗೆ ನೀರೊದಗಿಸುತ್ತಿದೆ. ಇತ್ತೀಚೆಗೆ ಮಂಗಳಾ ಬಳಿ ಅಣೆಕಟ್ಟೆ ನಿರ್ಮಿಸಿ ಮಂಗಳಾ ಜಲಾಶಯವನ್ನು ನಿರ್ಮಿಸಲಾಗಿದೆ. ಕುಣಿಗಲ್ ದೊಡ್ಡ ಕೆರೆಗೆ ಕಮಲ ಮತ್ತು ನಳಿನ ಎಂಬೆರಡು ನದಿಗಳು ಶಿವಗಂಗೆಯಲ್ಲಿ ಹುಟ್ಟಿ ಜಲಧಾರೆಯಾಗಿ ಹರಿದು ಬಂದು ಸೇರುತ್ತವೆ ಎಂಬ ಪ್ರತೀತಿ ಇದ್ದು ಅವುಗಳ ಹುಟ್ಟು ಚಲನವಲನದ ಬಗ್ಗೆ ತಿಳಿದುಬಂದಿಲ್ಲ. ಕಳೆದ ಐದಾರು ವರ್ಷಗಳಿಂದ ಕುಣಿಗಲ್ ಕೆರೆಗೆ ಹೇಮಾವತಿ ನಾಲೆಯ ನೀರನ್ನು ಬಿಡಲಾಗುತ್ತಿದ್ದು, ಮಳೆಗಾಲದಲ್ಲಿ ವ್ಯವಸಾಯಕ್ಕೆ ಬಳಸಿಕೊಂಡು ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ ಬಳಸಿಕೊಳ್ಳಲಾಗುತ್ತದೆ.

ಅರಣ್ಯ ಸಂಪತ್ತು

ಕುಣಿಗಲ್ ತಾಲೂಕಿನಲ್ಲಿ ಯಥೇಚ್ಛವಾಗಿ ದಟ್ಟವಾದ ಅರಣ್ಯ ಕಂಡುಬರುವುದಿಲ್ಲ. ಕಾರಣ ಈ ಪ್ರದೇಶವು ಬಯಲು ಸೀಮೆಯಾಗಿದ್ದು, ಬೆಟ್ಟಗುಡ್ಡಗಳಿಂದ ಕೂಡಿದ್ದು, ಅರಣ್ಯ ಪ್ರದೇಶ ಕಡಿಮೆ ಪ್ರಮಾಣದಲ್ಲಿದೆ. ಹುಲಿಯೂರುದುರ್ಗ, ಹುತ್ರಿದುರ್ಗ, ನಿಡಸಾಲೆ, ಯಡವಾಣಿಯಲ್ಲಿ ಅರಣ್ಯ ಪ್ರದೇಶವನ್ನು ಕಾಣಬಹುದಾಗಿದೆ. ಕುಣಿಗಲ್ ತಾಲೂಕಿನ ಒಟ್ಟು ಅರಣ್ಯದ ವಿಸ್ತೀರ್ಣ ೬೩೦೦ ಹೆಕ್ಟೇರ್‌ಗಳಷ್ಟಿದೆ. ಇಲ್ಲಿನ ಅರಣ್ಯ ಪ್ರದೇಶದಲ್ಲಿ ಪ್ರಮುಖವಾಗಿ ಬೇವು, ಜಾಲಿ, ಹೊಂಗೆ, ನೇರಳೆ, ಹಲಸು, ಜಂಬೆ, ಹಿಪ್ಪೆ, ಹೊನ್ನೆ, ಅಂಕಾಲೆ, ಶ್ರೀಗಂಧ, ನೀಲಗಿರಿ, ಹುಣಸೆ, ಬಿದಿರಿನ ಮೊದೆಗಳು, ಕಕ್ಕೆ, ತಂಗಡಿ, ಕಾರೆ, ಸೀತಾಫಲ, ದೇವದಾರು, ಅಂಟುರಾಳದ ಕಾಯಿ, ಮುಳ್ಳಿನಿಂದ ಕೂಡಿದ ಸಸ್ಯಗಳು, ಹಾಲು ತುಂಬಿದ ಕಳ್ಳಿಗಳು ಕಂಡುಬರುತ್ತವೆ. ಇವುಗಳ ಜೊತೆಗೆ ಕೃಷಿ ಭೂಮಿಯಲ್ಲಿ ಮಾವು, ತೇಗಾ, ಸಿಲ್ವರ್, ಸಪೋಟಾ, ಆಲದ ಮರ, ಬರಸೀ ಮರಗಳನ್ನು ಕಾಣಬಹುದು.

ಅದೇ ರೀತಿ ಪ್ರಮುಖ ಕಾಡು ಪ್ರಾಣಿಗಳೆಂದರೆ, ಕಾಡು ಹಂದಿ, ಮುಳ್ಳು ಹಂದಿ, ಕರಡಿ, ತೋಳ, ನರಿ, ಮೊಲ, ನವಿಲು, ಜಿಂಕೆ, ಚಿರತೆ, ಮುಂಗುಸಿ, ವಿಷ ಜಂತುಗಳಾದ ನಾಗರ ಹಾವು, ಗೋದಿ ನಾಗರಾವು, ಓತಿಕೇತ, ಇಲಿ, ಹೆಗ್ಗಣಗಳನ್ನು ಕಾಣಬಹುದಾಗಿದೆ.

೨.೨. ಸ್ಥಳನಾಮ ಮತ್ತು ಸ್ಥಳಪುರಾಣ

ಮಾನವ ತನ್ನ ಅಲೆಮಾರಿ ಜೀವನವನ್ನು ಕೈಬಿಟ್ಟು ಪ್ರಕೃತಿಯಲ್ಲಿ ತನ್ನ ಜೀವನವನ್ನು ಒಗಿಸಿಕೊಳ್ಳುವುದು ಸಾಧ್ಯ ಎಂಬುದನ್ನು ಮನಗಂಡನೋ, ಆಗ ಊರು-ಹಳ್ಳಿಗಳ ಉಗಮವಾಯಿತು. ನೆಲದೊಂದಿಗೆ ಹೋರಾಡುವ ಪ್ರಕ್ರಿಯೆಯಲ್ಲಿ ತಾನು ನೆಲೆಗೊಂಡ ಸ್ಥಳದ ಜೊತೆಗೆ ತನ್ನನ್ನು ತಾನು ತೊಡಗಿಸಿಕೊಂಡ. ಸಂಕೇತವಾಗಿ ಆ ಸ್ಥಳಕ್ಕೆ ಆತ ಒಂದು ಹೆಸರಿಟ್ಟ. ಅ ಸ್ಥಳ ಅವನ ಜೀವನದಲ್ಲಿ ಹಾದುಹೋದ ಕುರುಹಾಗಿ ಒಂದು ಹೆಸರು ತಳೆಯಿತು. ಕ್ರಮೇಣ ಅಲ್ಲಿ ಜನವಸತಿ ಇರಲಿ ಇರದಿರಲಿ ಒಂದು ಜನಾಂಗದ ಸ್ಮೃತಿಯನ್ನು ಹೊತ್ತ ಆ ಗುರುತು ಬಳಕೆಯಾಗುತ್ತಿತ್ತು. ಹಲವು ಜನಾಂಗಗಳ ಸ್ಮೃತಿಯ ಒಂದು ಕೊಂಡಿ ಎನಿಸಿತು. ಈ ಕೊಂಡಿಯೇ ಸ್ಥಳನಾಮ.

ಸ್ಥಳದ ಹೆಸರು ಸಾಮಾನ್ಯವಾಗಿ ಅಲ್ಲಿನ ಭೌಗೋಳಿಕ ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯತೆಯ ಲಕ್ಷಣದಿಂದ ನಿಯಂತ್ರಿತವಾಗಿರುತ್ತದೆ. ಸ್ಥಳನಾಮದ ಅಧ್ಯಯನದ ಸಂದರ್ಭದಲ್ಲಿ ಅಲ್ಲಿನ ಸನ್ನಿವೇಶವನ್ನು ಗುರುತಿಸುವುದು ಅವಶ್ಯಕವಾಗಿರುತ್ತದೆ. ಕಾರಣ ಯಾವುದೋ ಒಂದು ನಿರ್ದಿಷ್ಟ ಕಾಲದಲ್ಲಿ ತಲೆಯೆತ್ತಿದ ಹೆಸರಿನಲ್ಲಿ ಆ ಪರಿಸರದ ಭೂ ವಿಶೇಷತೆ ಇರುತ್ತದೆ. ಈ ತೆರೆನಾದ ಮೂಲಭೂತ ಅಂಶವೇ ಸ್ಥಳನಾಮಗಳ ಹುಟ್ಟಿನ ಹಿಂದಿನ ರಹಸ್ಯವಾಗಿದ್ದು, ಅವು ಶಾಶ್ವತವಾಗಿ ಉಳಿಯುವ ಕ್ರಿಯಾಶಕ್ತಿಯಾಗಿದೆ; ಕೆಲವೊಮ್ಮೆ ಸ್ಥಳನಾಮಗಳು ಚಾರಿತ್ರಿಕ ವ್ಯಕ್ತಿ, ಅಧಿಕಾರಿ, ಕುಲದೇವತೆ ಅಥವಾ ಚಾರಿತ್ರಿಕ ಮಹತ್ವದ ಘಟನೆಗಳನ್ನು ಸ್ಮರಿಸುವ ಉದ್ದೇಶದಿಂದ ಸ್ಥಳನಾಮಗಳು ಹುಟ್ಟಿಕೊಂಡಿರುತ್ತವೆ.[೧೧]

ಕುಣಿಗಲ್ ಸ್ಥಳದ ನಾಮನಿಷ್ಪತ್ತಿ

ಕುಣಿಗಲ್ ಎಂಬ ಸ್ಥಳವು ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಮಹತ್ವ ಹೊಂದಿದ್ದು ಈ ಸ್ಥಳಕ್ಕೆ ಕುಣಿಗಲ್ ಎಂಬ ಹೆಸರು ಹೇಗೆ ಬಂದಿತು? ಇದರ ಹಿನ್ನೆಲೆ ಏನು? ಎಂಬುದನ್ನು ಕೂಲಂಕಶವಾಗಿ

ತಿಳಿಯಬೇಕಾಗಿದೆ. ಕುಣಿಗಲ್ ಪಟ್ಟಣಕ್ಕೆ ಪ್ರಾಚೀನ ಹೆಸರು "ನರ್ತನ ಪುರಿ" ಎಂಬುದಾಗಿತ್ತೆಂದು ಸ್ಥಳೀಯ ಜನಪದರಿಂದ ತಿಳಿದುಬರುತ್ತದೆ. ನರ್ತನ+ಪುರಿ> ನರ್ತನಪುರಿ, ನರ್ತನ ಅಂದರೆ ನೃತ್ಯ ಮಾಡುವುದು. ಪುರಿ ಎಂದರೆ ಗ್ರಾಮ, ಸ್ಥಳ ಎಂದರ್ಥ. ಹಿಂದೆ ಈ ಸ್ಥಳವು ನರ್ತನ ಮಾಡುವುದಕ್ಕೆ ಪ್ರಸಿದ್ಧಿ ಪಡೆದಿರಬೇಕು. ಈ ಹಿನ್ನೆಲೆಯಲ್ಲಿ ನರ್ತನಪುರಿ ಎಂಬುದಾಗಿ ಬಂದಿರಬೇಕು.

ಕುಣಿಗಲ್ ಸ್ಥಳದ ಬಗ್ಗೆ ಒಂದು ಐತಿಹ್ಯವಿದೆ. ಶಿವಪಾರ್ವತಿಯರು ಇಲ್ಲಿಯ (ಈ ಸ್ಥಳದ) ಪ್ರಕೃತಿಯ ರಮಣೀಯ ಸೌಂದರ್ಯವನ್ನು ಕಂಡು ಕುಣಿದರಂತೆ (ನೃತ್ಯ) ಶಿವನು ನರ್ತಿಸಿದಾಗ ಅಲ್ಲಿದ್ದ ಕಲ್ಲುಬಂಡೆಗಳು ಕೂಡ ನರ್ತನದ ಸನ್ನಿವೇಶಕ್ಕೆ ಕುಣಿದವಂತೆ ಶಿವ ಕುಣಿದ ಕಲ್ಲು ಕುಣಿಗಲ್ಲು ಎಂದಾಯಿತು ಎಂಬ ಐತಿಹ್ಯವಿದೆ.

ಶಾಸನಗಳಲ್ಲಿ ಕಂಡು ಬರುವಂತೆ ಕುಣಿಗಲ್‌ನಾಡು[೧೨], ಕುಣಿಗಿಲ ಕೋಟೆ[೧೩], ಕುಣಿಗಲು[೧೪], ಕುಣ್ಣಿಗ್ಗಿಲ್ ನಾಟ್ಟು[೧೫], ಕುಣಿಗ್ಗಿಲು ನಾಟ್ಕಲ್[೧೬], ಕುಣಿಗೆಲ ಸೀಮೆ[೧೭], ಕುಣಿಗಲ್ ತಾಲೂಕು[೧೮] ಎಂಬ ಹೆಸರನ್ನು ಉಲ್ಲೇಖಿಸಿದ್ದಾರೆ. ಈ ಮೇಲಿನ ಶಬ್ಧಗಳ ಪ್ರಯೋಗಗಳನ್ನು ಗಮನಿಸಿದರೆ ಸಸ್ಯ ಸಂಪತ್ತನ್ನು ಮತ್ತು ಖನಿಜ ಸಂಪತ್ತನ್ನು ಅರ್ಥೈಸುತ್ತವೆ.

ಕುಣಿಂಗ್ + ಇಲ್ = ಕುಣೀಂಗಿಲ್>ಕುಣಿಗಿಲ್>ಕುಣಿಗಲು ಎಂದಾಗಿರಬೇಕು. ಕುಣಿಂಗ್ ಎಂದರೆ ಗುಲಗಂಜಿ ಗಿಡ, ಇಲ್ ಎಂದರೆ ಪ್ರದೇಶ, ಗುಲಗಂಜಿ ಗಿಡಗಳು ಎಲ್ಲಾ ಕಡೆಗಳಲ್ಲಿಯೂ ಹೆಚ್ಚಾಗಿ ಕಂಡುಬರುವುದಿಲ್ಲ. ಆದರೆ ಇಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. (ಕುಣಿ ಎಂದರೆ ನಂದಿವೃಕ್ಷ ಎಂದು ಸಹ ಕರೆಯಲಾಗಿದೆ ಅಮರಕೋಶ ದ್ವಿತೀಯ ಕಾಂಡ ೧೭೭ನೇಯ ಶ್ಲೋಕ).[೧೯] ಆದ್ದರಿಂದ ಸಸ್ಯವಾಚಿಯಿಂದ ಕುಣಿಗಲ್ ಸ್ಥಳನಾಮ ಬಂದಿದೆ ಎಂದು ಜಿ.ಟಿ. ಜಯರಾಮಯ್ಯನವರು ಅಭಿಪ್ರಾಯಪಟ್ಟಿದ್ದಾರೆ

ಕುಣಿ+ ಇಂಗು>ಕುಣಿಂಗ್>ಕುಣಿಗಲ್ ಎಂದಾಗಿರುವ ಸಾಧ್ಯತೆ ಕೂಡಾ ಇದೆ ಎಂಬ ಮತ್ತೊಂದು ನಾಮನಿಷ್ಪತ್ತಿಯನ್ನು ಗಮನಿಸಬಹುದಾಗಿದೆ. ಕುಣಿ ಎಂದರೆ ಸಂಕುಚಿತಗೊಂಡಿರುವ ಕಲ್ಲು, ಇಂಗು ಎಂದರೆ ಒಣಗು, ಹೀರಿಕೊಳ್ಳುವುದು, ಬತ್ತುವುದು ಎಂಬ ಅರ್ಥ ನೀಡುತ್ತದೆ. ಇಂದಿಗೂ ಸಹ ಕುಣಿಗಲ್ ಸುತ್ತಾಮುತ್ತಾ ಸಣ್ಣ ಸಣ್ಣ ಕಲ್ಲುಗಳಿರುವ ಗುಡ್ಡಗಳನ್ನು ಕಾಣಬಹುದು. ಬಹುಶಃ ಮಳೆಯ ನೀರು ಬಹಳ ಬೇಗ ಇಂಗುತ್ತಿತ್ತು (ಹೀರಿಕೊಳ್ಳುತ್ತಿತ್ತು) ಅಥವಾ ಒಣಗುತ್ತಿತ್ತು. ಇದರಿಂದಾಗಿ ಎರಡು ವಿಷಯಗಳ ಸಮ್ಮಿಶ್ರಣದಿಂದಾಗಿ ಕುಣಿಗಲ್ ಎಂಬ ಹೆಸರು ಬಂದಿರುವುದನ್ನು ತಳ್ಳಿಹಾಕುವಂತಿಲ್ಲ. ಒಟ್ಟಾರೆ ಈ ಮೇಲಿನ ಹೇಳಿಕೆಯನ್ನು ವೈಜ್ಞಾನಿಕವಾಗಿ ಒಪ್ಪಬಹುದಾಗಿದೆ.

ಸ್ಥಳಪುರಾಣ

ಪ್ರತಿಯೊಂದು ಸ್ಥಳಕ್ಕೂ ಒಂದು ಸ್ಥಳನಾಮ, ಸ್ಥಳಪುರಾಣ ಮತ್ತು ಐತಿಹ್ಯ ಇರುತ್ತದೆ. ಇವುಗಳು ಸ್ಥಳೀಯ ಇತಿಹಾಸವನ್ನು ಹೇಳುವ ಮಜಲುಗಳಾಗಿದ್ದು, ಮೌಖಿಕ ಆಕರಗಳಾಗಿವೆ.

ಕುಣಿಗಲ್ ಪಟ್ಟಣದ ಕೋಟೆ ನಿರ್ಮಾಣಕ್ಕೆ ಸಂಬಂಧಿಸಿದ ಪುರಾಣ

ಕುಣಿಗಲ್ ಪಟ್ಟಣದಲ್ಲಿ ಆಡಳಿತ ನಡೆಸುತ್ತಿದ್ದ ವೀರ ಕಂಬಳರಾಯ ಎಂಬ ರಾಜನು ಕುಣಿಗಲ್ಲು

ಪಟ್ಟಣಕ್ಕೆ ಒಂದು ಕೋಟೆಯನ್ನು ಕಟ್ಟಬೇಕೆಂದು ಸಂಕಲ್ಪಿಸಿ ಕೋಟೆಯ ರಚನೆಗೆ ಬೇಕಾದ ನಕ್ಷೆ, ಅದಕ್ಕೆ ಅಗತ್ಯವಿದ್ದ ಕಲ್ಲು, ಮಣ್ಣು, ಗಾರೆ ಮತ್ತು ಇಟ್ಟಿಗೆಗಳು ಕೆಲಸ ಮಾಡುವ ಜನರ ಸಹಾಯ ಎಲ್ಲವೂ ಸಿದ್ಧವಿದ್ದು ಕೆಲಸ ಆರಂಭಿಸುವುದನ್ನು ಎದುರು ನೋಡುತ್ತಿದ್ದವು. ಆದರೆ ಇಂಥ ಕಾರ್ಯಗಳಿಗೆ ಅಗತ್ಯವಾಗಿ ಬೇಕಾಗಿದ್ದ ಧನ ಮಾತ್ರ ಅವನಲ್ಲಿ ಇರಲಿಲ್ಲ.

ಹೀಗಾಗಿ ಒಂದೆರಡು ವರ್ಷಗಳ ಕಾಲ ಅವನು ತನ್ನ ಕೋಟೆಯ ನಿರ್ಮಾಣ ಕಾರ್ಯವನ್ನು ತಡೆಹಿಡಿದಿದ್ದನು. ಈ ಬಾರಿ ಅವನು ನರಸಿಂಹ ದೇವಾಲಯಕ್ಕೆ ಹೋಗಿದ್ದಾಗ ಅಲ್ಲಿನ ಅರ್ಚಕರು ಅವನಿಗೆ ಆಶೀರ್ವಾದ ಮಾಡುತ್ತಾ ಸ್ವಾಮಿಯು ಈ ನಿಮ್ಮ ಆಸೆಯನ್ನು ಪೂರೈಸುತ್ತಾನೆ. ನೀವು ಕಟ್ಟಬೇಕೆಂದಿರುವ ಕೋಟೆಯ ಕಾರ್ಯ ಸಂಪೂರ್ಣಗೊಳ್ಳುತ್ತದೆ. ಅದಕ್ಕೆ ಬೇಕಾದ ಧನದಾನ್ಯಗಳನ್ನು ಸ್ವಾಮಿಯೇ ಅನುಗ್ರಹಿಸುತ್ತಾನೆ ಎಂದು ಹೇಳಿದರು.[೨೦]

ಅವರು ಕೊಟ್ಟ ಭರವಸೆಯ ಮೇಲೆ ಒಂದು ಒಳ್ಳೆಯ ದಿನ ಕೋಟೆಯ ಬಾಗಿಲು ಇಡುವ ಪ್ರದೇಶದಲ್ಲಿ ನಿಂತು ಅಸ್ತಿಭಾರ ಹಾಕಿಸಿದನು. ಅವನು ಅಸ್ತಿಭಾರದ ಪೂಜಾ ಸಮಾರಂಭದ ಶಾಸ್ತ್ರ ವಿಧಿಗಳನ್ನು ಪೂರೈಸಿ ಅರಮನೆಗೆ ಹಿಂದಿರುಗಿ ಆರೋಗಣೆಗೆ ಸಿದ್ಧವಾಗುತ್ತಿದ್ದಾಗ ಸಮ್ಮುಖದ ಹೆಗ್ಗಡೆಯು ಉತ್ತರದೇಶದಿಂದ ಏಳುಮಂದಿ ಸಾಧುಗಳು ಪ್ರಭುಗಳನ್ನು ನೋಡಲು ಕಾದಿದ್ದಾರೆ ಎಂದು ಹೇಳಿದನು. ಅವರನ್ನು ಒಳಗೆ ಬರಮಾಡಿ ದೊರೆ ಆಜ್ಞೆ ಮಾಡಿದನು. ಹೆಗ್ಗಡೆಯ ಉತ್ತರ ದೇಶದ ಭೈರಾಗಿಗಳ ವೇಷ ಧರಿಸಿದ್ದು ಏಳು ಮಂದಿ ಜೋಗಿಗಳನ್ನು ಕರೆತಂದು ನಿಲ್ಲಿಸಿ ಪ್ರಭುಗಳಿಗೆ ಪರಿಚಯ ಮಾಡಿಕೊಟ್ಟನು.

ನೀವು ಯಾರು ಎಲ್ಲಿಂದ ಬಂದಿದ್ದೀರಿ? ನಿಮಗೆ ನನ್ನಿಂದ ಯಾವ ಸಹಾಯವಾಗಬೇಕು, ಎಂದು ಪ್ರಶ್ನಿಸಿದನು ಅದನ್ನು ಹೆಗ್ಗಡೆಯು ಸಂಸ್ಕೃತದಲ್ಲಿ ಅವರಿಗೆ ಅನುವಾದಿಸಿ ಹೇಳಿದ. ನಾವು ಲಿಪಿ ಜೋಗಿಗಳು ಸ್ವಾಮಿ ನಮ್ಮ ಊರು ಹೃಶಿಕೇಶ. ನಾವು ಕ್ಷೇತ್ರಯಾತ್ರೆಗೆ ಹೊರಟು, ತಿರುಮಲೆಗೆ ಹೋಗುವ ದಾರಿಯಲ್ಲಿ ಇಲ್ಲಿಗೆ ಬಂದಿದ್ದೇವೆ. ಇಲ್ಲಿ ನಿಮಗೆ ಏನು ಸಹಾಯವಾಗಬೇಕೋ ತಿಳಿಸಿ ಸಂತೋಷದಿಂದ ಮಾಡಿಕೊಡುತ್ತೇವೆ. ನಾವು ಇಲ್ಲಿನ ಇತಿಹಾಸ ಪ್ರಸಿದ್ಧವಾದ ನರಸಿಂಹಸ್ವಾಮಿ, ಸೋಮೇಶ್ವರ, ಪದ್ಮೇಶ್ವರ ವೆಂಕಟರಮಣ ದೇವಾಲಯಗಳನ್ನು ಸಂದರ್ಶಿಸಿ ಪುಣ್ಯ ಗಳಿಸಿದೆವು. ಉತ್ತರದೇಶದ ಮಿಥಿಲಾ ಪಟ್ಟಣದ "ನೃಗ" ಮಹಾರಾಜನು ತನ್ನ ಕುಷ್ಠರೋಗವನ್ನು ಪರಿಹರಿಸಿಕೊಂಡ ಜಲಾಶಯದಲ್ಲಿ ಸ್ನಾನ ಮಾಡಿ ಪಾಪ ಕಳೆದುಕೊಂಡೆವು. ಆದರೆ ನಮಗೆ ಈ ದಿವ್ಯವಾದ ಕ್ಷೇತ್ರವನ್ನು ಬಿಟ್ಟು ಹೋಗಲು ಮನಸ್ಸೇ ಬಾರದಾಗಿದೆ. ಇನ್ನೂ ಕೆಲವು ಕಾಲ ಇಲ್ಲಿ ತಂಗಿರಲು ಆಸೆಯುಳ್ಳವರಾಗಿದ್ದೇವೆ ಅದಕ್ಕೆ ನೀವು ಅನುಕೂಲ ಕಲ್ಪಿಸಿಕೊಡಬೇಕಾಗಿ ಪ್ರಾರ್ಥನೆ.[೨೧]

ತುಂಬಾ ಸಂತೋಷ ನಿಮ್ಮ ಪಾದಭೂತಿಯಿಂದ ನಮ್ಮ ಊರು ಪವಿತ್ರವಾಯಿತು ನೀವು ನನ್ನ ಅತಿಥಿಗಳಾಗಿ ನಿಮಗೆ ಇಷ್ಟ ಬಂದಷ್ಟು ಕಾಲ ಇಲ್ಲಿ ಇರಬಹುದು ಎಂದು ಹೇಳಿ ಅವರಿಗೆ ಬೇಕಾದ ಎಲ್ಲಾ ಅನುಕೂಲತೆಗಳನ್ನು ಮಾಡಿಕೊಡಲು ಸಮ್ಮುಖದ ಹೆಗ್ಗಡೆಗೆ ತಿಳಿಸಿದ. ಅವರನ್ನು ಅಂದು ತನ್ನ ಜೊತೆಯಲ್ಲಿಯೇ ಕುಳ್ಳಿರಿಸಿಕೊಂಡು ಭೋಜನ ಮಾಡಿಸಿ, ಸಂತೋಷಪಡಿಸಿ ಕಳುಹಿಸಿಕೊಟ್ಟನು. ಅವರು ಕಂಬಳರಾಯನನ್ನು ಬೀಳ್ಕೊಂಡು ಹೊರಟಾಗ ಅವರಲ್ಲಿ ಒಬ್ಬನು ದೊರೆಯನ್ನು ಅರ್ಥಗರ್ಭಿತವಾಗಿ ನೋಡಿ ಮುಗುಳ್ನಗೆ ನಕ್ಕು ಅಲ್ಲಿಂದ ಕಾಲ್ತೆಗೆದನು.

ಅವರು ಹೊರಟು ಹೋದ ಮೇಲೆ ಹೆಗ್ಗಡೆಯ ಜೊತೆಯಲ್ಲಿ ಕಂಬಳರಾಯನು ಹೆಗ್ಗಡೆ ಈ ಜೋಗಿಗಳ ನಡವಳಿಕೆ ವಿಚಿತ್ರವಾಗಿದೆ, ಅವರು ಸಾಮಾನ್ಯ ಸನ್ಯಾಸಿಗಳ ಹಾಗೆ ಕಾಣುವುದಿಲ್ಲ. ಅವರ ಜೋಳಿಗೆಯಲ್ಲಿ ಎಂಥೆಂಥದೋ ರಸವಿದ್ಯೆಗೆ ಸಂಬಂಧಿಸಿದ ಮೂಲಿಕೆಗಳು, ಇನ್ನಿತರ ವಸ್ತುಗಳು ಇರುವಂತೆ ಕಾಣಿಸಿತು. ಅವರು ಬಹುಶಃ ಅಂಜನ ಕಲೆಯಲ್ಲಿ ಸಿದ್ಧಿ ಪಡೆದವರಿರಬೇಕು, ಅವರು ಯಾವುದೋ ರಹಸ್ಯ ಕಾರ್ಯಾಚರಣೆಯ ಸಲುವಾಗಿ ಇಲ್ಲಿಗೆ ಬಂದಿದಂತಿದೆ, ಇವರ ಚಲನವಲನದ ಮೇಲೆ ಒಂದು ಕಣ್ಣು ಇರಲಿ ಎಂದೂ ರಾಜ ಹೇಳಿದ.

ಅದರಂತೆ ಲಿಪಿಜೋಗಿಗಳ ಚಲನವಲನ ಬಹಳ ಸಂದೇಹಾಸ್ಪದವಾಗಿದ್ದು ಬಾಗಿಲನ್ನು ಭದ್ರಪಡಿಸಿ ರಾತ್ರಿಯೆಲ್ಲಾ ರಹಸ್ಯವಾಗಿ ಕುಟ್ಟುತ್ತಾ ಬೀಸುತ್ತಾ ಮತ್ತು ಅರೆಯುತ್ತಲಿರುವ ಸಂಗತಿಗಳು ತಿಳಿದು ಬಂದಿತು. ಇದಾದ ಮೂರನೇ ದಿನಕ್ಕೆ ಸಮೀಪದ ಸಿದ್ಧರ ಬೆಟ್ಟದಿಂದ ಯಾವುದೋ ಸೊಪ್ಪು ತಂದು ಅದನ್ನು ಕಾಸಿ ಅದರ ರಸವನ್ನು ಸಂಗ್ರಹಿಸುತ್ತಿರುವುದು ವರದಿಯಾಯಿತು.[22]

ಆನಂತರ ಅವರು ಊರಿನ ಕೆರೆಯ ಕೋಡಿ ಪ್ರದೇಶದಲ್ಲಿ ಬಹಳ ಹೊತ್ತು ಶೋಧನೆ ಮಾಡಿ ಅನೇಕ ಚಕ್ರ ಬರೆದು ಪೂಜೆ ಮಾಡಿ ಬಂದಿದ್ದರು. ಅದೇ ರಾತ್ರಿ ನರಸಿಂಹ ದೇವಾಲಯದಲ್ಲಿದ್ದ ಮೂರು ಅಡಿ ಎತ್ತರದ ಸುಂದರ ನರಸಿಂಹ ವಿಗ್ರಹ ಕಣ್ಮರೆಯಾಗಿರುವುದು ವರದಿಯಾಯಿತು. ಎಲ್ಲರಿಗೂ ಆಶ್ಚರ್ಯವಾಗಿ ಈ ಧೂತರು ಸಾಮಾನ್ಯರಲ್ಲ ಯಾವುದೋ ವಾಮಾಚಾರ ವಿದ್ಯೆಯಲ್ಲಿ ತೊಡಗಿದ್ದಾರೆ ಅಲ್ಲದೆ ಗರ್ಭಗುಡಿಯಲ್ಲಿದ್ದ ಪುರಾತನ ವಿಗ್ರಹವನ್ನು ಅಪಹರಿಸಿದಂತೆ ಕಾಣುತ್ತದೆ ಎಂದು ತಿಳಿದು ಅವರ ಬಗ್ಗೆ ತನಿಖೆಮಾಡಲು ನಿರ್ಧರಿಸಿದ. ಗರ್ಭಗುಡಿಯಲ್ಲಿ ದೇವರ ಒಡವೆಗಳು ಪೂಜಾ ಸಾಮಗ್ರಿಗಳು ಕಳವಾಗದೆ ಮೂಲ ವಿಗ್ರಹ ನರಸಿಂಹನದು ಮಾತ್ರ ಇಲ್ಲವಾಗಿದೆ ಎಂದು ಕೇಳಿದಾಗ ಇಲ್ಲಾ ಸ್ವಾಮಿ ನಮಗೇನು ತಿಳಿಯದು ಬೇಕಿದ್ದರೆ ನಮ್ಮ ವಸತಿಗೃಹ ಶೋಧಿಸಿರಿ ಎಂದು ಹೇಳಿದರು. ಅದರಂತೆ ಶೋಧಸಿದಾಗ ಏನು ದೊರೆಯಲಿಲ್ಲ ಇದರಿಂದ ರಾಜನಿಗೆ ತುಂಬಾ ವಿಷಾದವಾಯಿತು.

ಇದಾದ ಮೇಲೆ ಲಿಪಿ ಜೋಗಿಗಳು ಕೆರೆಯ ಬಳಿ ಇದ್ದು ಮಂಟಪದಲ್ಲಿ ರಾತ್ರಿಯೆಲ್ಲಾ ತಂಗಿ ಸಮೀಪದಲ್ಲಿದ್ದ ಕೋಡಿಯ ಬಳಿ ಇದ್ದ ಹುತ್ತವನ್ನು ಅಗೆಯುತ್ತಿದ್ದಂತೆ ಮತ್ತು ಪೂಜೆ ಮಾಡುತ್ತಿದ್ದಂತೆ ವರದಿಯಾಯಿತು. ನಂತರ ಅಮಾವಾಸ್ಯೆಯ ದಿನ ಒಬ್ಬ ಪುರುಷನನ್ನು ಸಾಧ್ಯವಾದರೆ ರಾಜಲಕ್ಷಣ ಉಳ್ಳ ಪುರುಷನನ್ನು ಹುತ್ತಕ್ಕೆ ಬಲಿಕೊಡಬೇಕೆಂದು ಸಂಕಲ್ಪಿಸಿರುವರೆಂದೂ ಅವರ ಕಣ್ಣು ದೊರೆಯ ಮೇಲೆ ಇದೆ ಎಂದು ಗೂಢಾಚಾರಿಯು ಆದೇಶ ಕಳುಹಿಸಿದರು. ಅದರಂತೆಯೇ ಅವರು ಸಮಸ್ಯೆಯೆಂದು ರಾಜನಿಗೆ ಊಟದಲ್ಲಿ ನಿದ್ದೆಯ ಔಷಧಿ (ಚೂರ್ಣ) ನೀಡಿ ಮಲಗಿಸಿಬಿಟ್ಟರು. ಕಾವಲುಗಾರನಿಗೆ ಸ್ವಲ್ಪ ಹಣ ನೀಡಿ ರಾಜನು ಮಲಗಿರುವ ಮಂಚವನ್ನೇ ಕೆರೆಯ ಬಳಿಯ ಮಂಟಪಕ್ಕೆ ಹೊರಿಸಿಕೊಂಡು ಬಂದಿದ್ದರು. ಹೀಗೆ ದೊರೆಯನ್ನು ತಮ್ಮ ವಶಪಡಿಸಿಕೊಂಡ ಮೇಲೆ ಅವರು ಇಡೀ ರಾತ್ರಿ ಹುತ್ತವನ್ನು ಕೆಂಪು ಹೂಗಳಿಂದಲೂ ರಕ್ತ ಮಿಶ್ರಿತ ಅಕ್ಷತೆಯಿಂದಲೂ ಪೂಜಿಸಿ ನರಬಲಿಯನ್ನು ಕೊಡಲು ದೊರೆಯ ಮೇಲೆ ಹಾಕಿದ ಮುಸುಕನ್ನು ಹೊರಗೆ ಎಳೆದರು.[23] ಅವನನ್ನೂ ಸಂಹರಿಸಲು ಒಬ್ಬ ಜೋಗಿ ಕತ್ತಿ ಹಿಡಿದು ನಿಂತಿದ್ದನು. ಅಮಾವಾಸ್ಯೆಯ ಕತ್ತಲು ಎಲ್ಲೆಲ್ಲೂ ತುಂಬಿತ್ತು. ಮಿನುಗುತ್ತಿರುವ ಹಣತೆಯ ಬೆಳಕು ಬಿಟ್ಟರೆ ಬೇರೆ ಏನು ಕಾಣುತ್ತಿರಲಿಲ್ಲ, ಕಪ್ಪೆಗಳ ಜಿಯೋ ಎನ್ನುವ ಶಬ್ಧ ಕಿವಿಗೆ ಕೇಳುತ್ತಿತ್ತು. ಇಂಥ

ಭಯಂಕರ ರಾತ್ರಿಯಲ್ಲಿ ಲಿಪಿ ಜೋಗಿಗಳು ದೊರೆಯನ್ನ ಹುತ್ತಕ್ಕೆ ಬಲಿಕೊಡುವ ಸಿದ್ಧತೆ ನಡೆಸಿದ್ದರು. ಇನ್ನೇನು ಕತ್ತಿಯ ಪೆಟ್ಟು ಅವನ ಕತ್ತಿಗೆ ಬೀಳಬೇಕೆನ್ನುವುದರೊಳಗೆ ಕತ್ತಿ ಹಿಡಿದಿದ್ದ ಲಿಪಿ ಜೋಗಿಯ ತಲೆ ಕತ್ತರಿಸಿ ಹುತ್ತದೊಳಗೆ ಬಿದ್ದಿತ್ತು. ಉಳಿದವರು ಏನಾಯಿತೆಂದು ನೋಡುವುದರೊಳಗೇ ಅವರು ದೊರೆ ಕಂಬಳರಾಯನ ಸೈನಿಕರಿಗೆ ಸೆರೆಯಾಳಾಗಿದ್ದರು.

ವಾಸ್ತವ ಸಂಗತಿ ಏನೆಂದರೆ ಜೋಗಿಗಳು ಕೊಟ್ಟಿದ್ದ ಚೂರ್ಣದಿಂದ ಮತ್ತೇರಿ ಮಲಗಿದ್ದವನು ಒಬ್ಬ ಸಾಮಾನ್ಯ ಸೈನಿಕ ಬೆಂಗಾವಲು ಪಡೆಯವನು ಅವನಿಗೆ ದೊರೆಯ ವೇಷವನ್ನು ತೊಡಿಸಲಾಗಿತ್ತು. ಅವನನ್ನು ಊರಾಚೆ ಹೊರಿಸಿಕೊಂಡು ಹೋದಾಗ ಅವರನ್ನು ದೊರೆಯೂ, ಸಮ್ಮುಖದ ಹೆಗ್ಗಡೆಯೂ ಹಾಗೂ ಬೆಂಗಾವಲು ಪಡೆ ಲಿಪಿ ಜೋಪಿಗಳನ್ನು ಹಿಂಬಾಲಿಸಿ ಸಕಾಲದಲ್ಲಿ ಕಾರ್ಯಾಚರಣೆ ನಡೆಸಿ ನಡೆಯಲಿದ್ದ ದುರಂತ ತಪ್ಪಿಸಿದರು.

ಮಾರನೇ ಬೆಳಿಗ್ಗೆ ಆ ಹುತ್ತವನ್ನು ಅಗೆದಾಗ ಅದರಲ್ಲಿ ಭಗ್ನಗೊಳಿಸಲ್ಪಟ್ಟ ನರಸಿಂಹನ ವಿಗ್ರಹವು ದೊರೆಯಿತು. ಅಲ್ಲಿ ಒಂದು ಕಾಳಿಂಗ ಸರ್ಪ ಹೆಡೆ ಎತ್ತಿ ಬುಸುಗುಟ್ಟುತ್ತಿತ್ತು. ಅದನ್ನು ಕೊಂದು ನೆಲವನ್ನು ಅಗೆದಾಗ ಮೂರು ದೊಡ್ಡ ಕೊಳಗಗಳು ಇದ್ದವು. ಅವುಗಳ ತುಂಬಾ ಚಿನ್ನದ ವರಹಗಳು ತುಂಬಿದ್ದವು. ಅದನ್ನು ವಶಪಡಿಸಿಕೊಳ್ಳಲು ವಿಗ್ರಹದ ಬಲಿ ಮತ್ತು ನರಬಲಿಗಳನ್ನು ಜೋಗಿಗಳು ಕೊಡಲು ಕಾಯುತ್ತಿದ್ದರು. ಸಕಾಲದಲ್ಲಿ ರಾಜನು ಎಚ್ಚೆತ್ತುಕೊಂಡು ಕಾರ್ಯೋನ್ಮುಖನಾದುದರಿಂದ ನಡೆಯಬೇಕಿದ್ದ ದುರಂತವೂ ತಪ್ಪಿ ದೊರೆಗೆ ಅಪಾರವಾದ ನಿಧಿ ಸಿಕ್ಕಿತು. ಈ ನಿಧಿಯಿಂದ ಕುಣಿಗಲ್ ಪಟ್ಟಣದ ಸುತ್ತ ಕೋಟೆ ನಿರ್ಮಿಸಿ ಅಭಿವೃದ್ಧಿಪಡಿಸಿದನು.[೨೨]

ಇಂದಿಗೂ ನರಸಿಂಹಸ್ವಾಮಿ ದೇವಾಲಯದಲ್ಲಿ ನರಸಿಂಹನ ವಿಗ್ರಹವಿಲ್ಲ ಎಂಬುದು ಈ ಎಲ್ಲಾ ದುರಂತ ಕಥೆಗೆ ಸಾಕ್ಷಿಯಾಗಿದೆ. ಆ ದೇವಾಲಯಕ್ಕೆ ಹುಲಿಯೂರು ದುರ್ಗದಿಂದ ಚನ್ನಕೇಶವನ ವಿಗ್ರಹವನ್ನು ತಂದು ಪೂಜಿಸಿ ಪ್ರತಿಷ್ಠಾಪಿಸಲಾಗಿದೆ. ಇಂದಿಗೂ ನರಸಿಂಹನ ಸ್ಥಾನದಲ್ಲಿ ನಿಂತು ಪೂಜೆಗೊಳ್ಳುತ್ತಿರುವ ಕೇಶವಮೂರ್ತಿಯನ್ನು ನರಸಿಂಹ ದೇವಾಲಯದಲ್ಲಿ ನೋಡಬಹುದಾಗಿದೆ.

೨.೩. ಪ್ರಾಗಿತಿಹಾಸ

ಒಂದು ಪ್ರದೇಶದ ಐತಿಹಾಸಿಕ ಮಹತ್ವವನ್ನು ಆ ಪ್ರದೇಶದಲ್ಲಿ ದೊರೆಯುವ ಪ್ರಾಚೀನ ಅವಶೇಷಗಳಿಂದ ತಿಳಿಯಬಹುದಾಗಿದೆ. ಇಂಥ ಅವಶೇಷಗಳು ಎಲ್ಲಾ ಕಾಲಕ್ಕೂ ಕಾಲಗರ್ಭದಲ್ಲಿ ಹುದುಗಿಕೊಂಡು ಬಂದಿವೆ. ಲಭ್ಯವಿರುವ ಅವಶೇಷಗಳು ಇತಿಹಾಸವನ್ನು ರಚಿಸಲು ಸಹಾಯಕವಾಗಿವೆ.

ಕರ್ನಾಟಕದ ಶಿಲಾಯುಗ ಸಂಸ್ಕೃತಿಯ ಹೆಚ್ಚು ನೆಲೆಗಳು ತುಮಕೂರು ಜಿಲ್ಲೆಯಲ್ಲಿವೆ. ಈವರೆಗೂ ಸುಮಾರು ೨೬೬ ನೆಲೆಗಳು ಕಂಡುಬಂದಿವೆ. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವಿಜ್ಞಾನಿಗಳಾಗಿದ್ದ ಸಂಪತ್ ಐಯ್ಯಂಗಾರ್ ಮತ್ತು ರಾಮರಾವ್‌ರವರು ೧೯೨೪ರಲ್ಲಿ ಬೆಳಕಿಗೆ ತಂದ ಕಿಬ್ಬನಹಳ್ಳಿ ಮತ್ತು ಬಳಿಗೆ ತುಮಕೂರು ಜಿಲ್ಲೆಯ ಮಹತ್ವದ ನೆಲೆಗಳಾಗಿವೆ.[೨೩] ಅದೇ ರೀತಿ ಪಿ.ಕೆ ಶರ್ಮರವರು ತಮ್ಮ ಸರ್ವೇಕ್ಷಣೆಯ ಸಮಯದಲ್ಲಿ ಜಲಗಾರದಿಬ್ಬ (ತುಮಕೂರು ತಾಲೂಕು), ಗಂಗ್ಸಾಹಳ್ಳಿ ಮತ್ತು ಬೂದಿದಿಬ್ಬ ಹೇರೂರನ್ನು (ಕುಣಿಗಲ್ ತಾಲೂಕು) ಬೆಳಕಿಗೆ ತಂದು, ಬೂದಿದಿಬ್ಬದಲ್ಲಿ (ಮಣ್ಣಿನಲ್ಲಿ) ನೂತನ ಶಿಲಾಯುಗದ ಆಯುಧಗಳನ್ನು ಸಂಗ್ರಹಿಸಿ ವರದಿ ಮಾಡಿದರು.[೨೪]

ಪ್ರಸ್ತುತ ಅಧ್ಯಯನವು ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನಲ್ಲಿಯೂ ಸಹ ಹಳೇ ಶಿಲಾಯುಗದಿಂದ (ಸಂಸ್ಕೃತಿ) ಹಿಡಿದು ಇತಿಹಾಸ ಕಾಲದವರೆಗಿನ ಸಂಸ್ಕೃತಿಯ ನೆಲೆಗಳು ಪತ್ತೆಯಾಗಿದ್ದು ಅವುಗಳನ್ನು ಇಲ್ಲಿ ವಿವರಿಸಲಾಗಿದೆ.

ಹಳೆಶಿಲಾಯುಗ

ಹಳೆಶಿಲಾಯುಗದ ಬಗ್ಗೆ ಕರ್ನಾಟಕದಲ್ಲಿ ವಿಸ್ತೃತವಾದ ಅಧ್ಯಯನವನ್ನು ಮಾಡಲಾಗಿದೆ ಹಾಗೂ ಮಾಡಲಾಗುತ್ತಿದೆ. ಪ್ರಮುಖ ನದಿಗಳಾದ ಕಾವೇರಿ, ತುಂಗಾಭದ್ರಾ, ಕೃಷ್ಣ ಮತ್ತು ಅವುಗಳ ಉಪನದಿಗಳ ಪ್ರದೇಶದಲ್ಲಿ ಹಳೇಶಿಲಾಯುಗದ ಮಾನವನ ಬದುಕು ರೂಪುಗೊಂಡಿದ್ದು ಸುಮಾರು ೭ ಲಕ್ಷದಿಂದ ೧.೨೫ ಲಕ್ಷ ವರ್ಷಗಳಷ್ಟು ಹಳೆಯದೆಂದು ಗುರುತಿಸಲಾದ ಆದಿ ಹಳೆಶಿಲಾಯುಗದ ಅವಶೇಷಗಳು ಅನೇಕ ಸ್ಥಳಗಳಲ್ಲಿ ಕಂಡು ಬಂದಿವೆ. ಕರ್ನಾಟಕದ ಅನಗವಾಡಿ ಮತ್ತು ಹುಣಸಗಿ ಈ ಹಂತಕ್ಕೆ ಸೇರಿದ ಪ್ರಮುಖ ಸ್ಥಳಗಳಾಗಿವೆ.

ಹಳೆಶಿಲಾಯುವನ್ನು ಮೂರು ಹಂತಗಳಾಗಿ ವಿಂಗಡಿಸಬಹುದಾಗಿದೆ.

ಅ. ಆದಿ ಹಳೆಶಿಲಾಯುಗ

ಆ. ಮಧ್ಯೆ ಹಳೆಶಿಲಾಯುಗ

ಇ. ಅಂತ್ಯ ಹಳೆಶಿಲಾಯುಗ

ಅ. ಆದಿ ಹಳೆಶಿಲಾಯುಗ

ಆದಿ ಹಳೆಶಿಲಾಯುಗ ನೆಲೆಗಳನ್ನು ಮೊದಲಿಗೆ ರಾಬರ್ಟ್‌ಬ್ರೂಸ್‌ಫೂಟ್ ಪತ್ತೆ ಹಚ್ಚಿದ್ದಾರೆ. ಈ ಹಂತದ ಮಾನವನ ದೈನಂದಿನ ಕಾರ್ಯ ಚಟುವಟಿಕೆಯನ್ನು ಆಹಾರಸಂಗ್ರಹಣೆ ಮತ್ತು ಬೇಟೆಗಾರಿಕೆ ಸಂಸ್ಕೃತಿಯೆಂದು ಕರೆಯಲಾಗಿದೆ.

ಆದಿ ಹಳೆಯಶಿಲಾಯುಗ ಉಪಕರಣಗಳು ಹೆಚ್ಚಾಗಿ ಅಶ್ಯೂಲ್ ಮಾದರಿಯಲ್ಲಿವೆ. ಕರ್ನಾಟಕದಲ್ಲಿ ದೊರೆತಿರುವ ಅತಿ ಮುಖ್ಯ ನೆಲೆಯ ಶೋಧನೆ ಎಂದರೆ ಹುಣಸಗಿ ಈ ಪ್ರದೇಶವನ್ನು ಕೂಲಂಕಷವಾಗಿ ಪರಿಶೀಲಿಸಿ, ಉತ್ಖನನ ಕೈಗೊಂಡು ೧೯೭೪ರಿಂದಲೂ ಸಂಶೋಧನೆ ನಡೆಸುತ್ತಿರುವ ಕೆ. ಪೆದ್ದಯ್ಯನವರು ಮೂಲ ಆದಿ ಹಳೆಯಶಿಲಾಯುಗದ ಹಂತದ್ದೆಂದು ತಿಳಿಸಿರುವರು. ದಕ್ಷಿಣ ಕರ್ನಾಟಕದ ಹೆಚ್ಚು ಪ್ರಸಿದ್ಧವಾದ ನೆಲೆ ಕಿಬ್ಬನಹಳ್ಳಿ (ತುಮಕೂರು ಜಿಲ್ಲೆ), ಇಲ್ಲಿನ ಉಪಕರಣಗಳು ಬೆಣಚು ಕಲ್ಲಿನಲ್ಲಿದ್ದು ಮುಖ್ಯವಾಗಿ ತಿರುಳುಗಲ್ಲಿನ ಕೈಗೊಡಲಿ, ಸೀಳುಗತ್ತಿ, ಚಕ್ರದಂತಹ ಉಪಕರಣಗಳ ಜೊತೆಗೆ ಒಂದು ವಿಶಿಷ್ಟವಾದ ಕೊಕ್ಕಿನಾಕೃತಿಯಾ ಉಪಕರಣವು ಈ ನೆಲೆಯಲ್ಲಿ ಕಂಡುಬಂದಿದೆ.[೨೨]

ಕುಣಿಗಲ್ ತಾಲೂಕಿನಲ್ಲಿ ಆದಿ ಹಳೆಶಿಲಾಯುಗಕ್ಕೆ ಸಂಬಂಧಿಸಿದ ಯಾವುದೇ ನೆಲೆಗಳು ಇಲ್ಲಿಯವರೆಗೂ ಕಂಡುಬಂದಿಲ್ಲ.

ಆ. ಮಧ್ಯೆ ಹಳೆಯಶಿಲಾಯುಗ ಸಂಸ್ಕೃತಿ

ಭಾರತದಲ್ಲಿ ಈ ಸಂಸ್ಕೃತಿಯ ಇರುವಿಕೆಯನ್ನು ನಿರ್ಧಿಷ್ಟವಾಗಿ ನಿರ್ಧರಿಸಿದಂತೆಯೇ ಕರ್ನಾಟಕದಲ್ಲಿಯೂ ಈ ಹಂತದ ಹಲವು ನೆಲೆಗಳು ಶೋಧಿತವಾದವು. ಈ ಹಿಂದೆ ರಾಬರ್ಟ್ ಬ್ರೂಸ್

ಘೂಟ್‌ರವರು ಮಧ್ಯೆ ಹಳೆಶಿಲಾಯುಗಕ್ಕೆ ಸೇರಿದ ಉಪಕರಣಗಳನ್ನು ಸಂಗ್ರಹಿಸಿದರೂ ಕಾಲಮಾನವನ್ನು ನಿರ್ಧರಿಸಲಾಗಿರಲಿಲ್ಲ. ಕರ್ನಾಟಕದಲ್ಲಿ ಈ ಸಂಸ್ಕೃತಿಯು ಇರುವ ಬಗೆಗೆ ೧೯೫೦ರಲ್ಲಿ ಆರ್. ಡಿ. ಬ್ಯಾನರ್ಜಿಯವರು ಗುರುತಿಸಿದರು. ಘಟಪ್ರಬಾ, ಮಲಪ್ರಭಾ, ಕೃಷ್ಣಾ ನದಿಗಳ ಕೆಳಭಾಗ ಸುರಪುರನದಿ ಸಂಗಮ, ದೋಣಿನದಿ ಕೊಳ್ಳ, ಮಲೆನಾಡು, ಅರೆಮಲೆನಾಡು ಮತ್ತು ಶಿಂಷಾ ನದಿಪಾತ್ರದಲ್ಲಿ ಈ ಉಪಕರಣಗಳು ಬೆಳಕಿಗೆ ಬಂದಿವೆ. ಮದ್ಯೆ ಹಳೆಯಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಯಾವುದೇ ನೆಲೆಗಳು ಕುಣಿಗಲ್ ಪ್ರದೇಶದಲ್ಲಿ ಕಂಡುಬಂದಿಲ್ಲ.

ಇ. ಅಂತ್ಯ ಹಳೆಶಿಲಾಯುಗ ಸಂಸ್ಕೃತಿ

ಹಳೆಶಿಲಾಯುಗದ ಕೊನೆಯ ಹಂತವೇ ಅಂತ್ಯ ಹಳೆಶಿಲಾಯುಗ, ತುಲನಾತ್ಮಕ ಪರಿಶೀಲನೆಯಂತೆ ಈ ಹಂತದ ನೆಲೆಗಳು ಸಂಖ್ಯೆಯಲ್ಲಿ ಕಡಿಮೆ ಇವೆ. ಮೊಟ್ಟಮೊದಲಿಗೆ ೧೯೪೯ರಲ್ಲಿ ಬಿಜಾಪುರ ಜಿಲ್ಲೆಯ ಸಾಲ್ವಡಿಗೆಯಲ್ಲಿ ಉಪಕರಣ ಉತ್ಪಾದನಾ ನೆಲೆಯನ್ನು ಅ.ಸುಂದರ ಅವರು ಗುರ್ತಿಸಿದರು. ಇದೇ ನಿವೇಶನದಲ್ಲಿ ಸಂಗ್ರಹಿಸಿದ ಉಪಕರಣಗಳ ವಿಷಯವಾಗಿ ಎಂ. ಶೇಷಾದ್ರಿಯವರು ವಿವರಣಾತ್ಮಕ ಅಧ್ಯಯನ ಮಾಡಿದರು. ಮಾಂಜ್ರಾ, ದೋಣಿ, ಕೃಷ್ಣಾ, ತುಂಗಾ, ಶಿಂಷಾ ಮತ್ತು ಪೆನ್ನಾರು ನದಿ ಕೊಳ್ಳಗಳಲ್ಲಿ ಈ ನೆಲೆಗಳು ಕಂಡುಬಂದಿವೆ. ನೀಳ ಅಲಗುಗಳು, ಹೆರೆಯುವ ವಿವಿಧ ಮಾದರಿಗಳು ಮೊನೆ ಹೊಂದಿರುವ ಮಾದರಿಗಳು, ಚೂರಿ ತರಹದ ಚಕ್ಕೆ, ಕೊರೆಯುಳಿ, ಕೊರೆಗ ಮೊದಲಾದ ವಿವಿಧ ಮಾದರಿಯ ಈ ಹಂತದ ವೈಶಿಷ್ಟ್ಯ ಉಪಕರಣಗಳಾಗಿವೆ. ಶಿಲಾಯುಗಗಳೇ ಅಲ್ಲದೇ ಎಲುಬು, ದಂತ ಮತ್ತು ಜಿಂಕೆಯ ಕವಲು ಕೊಂಬು ಉಪಕರಣಗಳ ಬಳಕೆಯೂ ಇದ್ದದ್ದು ತಿಳಿದುಬಂದಿದೆ. ಕುಣಿಗಲ್ ತಾಲೂಕ್‌ನ ಹಿಮಗಿರಿಯಲ್ಲಿ ಅಂತ್ಯ ಹಳೆಶಿಲಾಯುಗ ಸಂಸ್ಕೃತಿಯ ನೆಲೆ ಇದ್ದು, ನೀಳಚಕ್ಕೆ, ಮೊನೆ, ಹೆರೆಚಕ್ಕೆ, ಕೊರೆಯುಳಿ, ಉಪಕರಣಗಳು ದೊರೆತಿದ್ದು ಬೆಣಚುಕಲ್ಲಿನಲ್ಲಿವೆ.[೨೮]

ಸೂಕ್ಷ್ಮ ಶಿಲಾಯುಗ ಸಂಸ್ಕೃತಿ

ಈ ಸಂಸ್ಕೃತಿಯ ಹಂತವು ಮಾನವನ ಅಲೆಮಾರಿ ಜೀವನದಿಂದ ಒಂದೆಡೆ ನೆಲೆನಿಂತು ಬೇಟೆ, ಮೀನುಗಾರಿಕೆ ಆಹಾರ ಸಂಗ್ರಹಣೆ ಜೊತೆಗೆ ಆಹಾರ ಉತ್ಪಾದನೆ ಆರಂಭಿಸಿದುದು ಆಗಿರುವುದರಿಂದ ಈ ಕಾಲಮಾನವು ಸ್ಥಿತ್ಯಂತರದ ಹಂತವಾಗಿದೆ. ಈ ಸಂಸ್ಕೃತಿಯು ಹಿಂದಿನ ಸಂಸ್ಕೃತಿಗಳ ಕಾಲವ್ಯಾಪ್ತಿಗಿಂತ ತೀರಾ ಕಡಿಮೆಯಿದೆ. ಈ ಅಲ್ಪಸಮಯದ ಮುನ್ನಡೆಯು ಗಮನಾರ್ಹವಾಗಿದೆ. ಈ ಹಂತದ ಶಿಲಾಉಪಕರಣಗಳು ಅತಿ ಚಿಕ್ಕ(ಕಿರುಗಾತ್ರ)ದವುಗಳಾಗಿವೆ. ಇದು ಈ ಸಂಸ್ಕೃತಿಯ ವಿಶಿಷ್ಟ ಲಕ್ಷಣವಾಗಿದ್ದು ವೈವಿಧ್ಯ ಉಪಕರಣಗಳು ಕಂಡುಬಂದಿವೆ.

ಈ ಸಂಸ್ಕೃತಿಯ ನೆಲೆಗಳ ಅಧ್ಯಯನವು ಆಗಿನ ಕಾಲದ ಆಹಾರಪದ್ಧತಿ, ವಸತಿ ಕ್ರಮ, ಶವಸಂಸ್ಕಾರ ಪದ್ಧತಿ ಮುಂತಾದ ಪ್ರಮುಖ ಅಂಶಗಳ ಬಗೆಗೆ ಕುತೂಹಲವಾದ ಮಾಹಿತಿಗಳನ್ನೊದಗಿಸುವುದರ ಜೊತೆಗೆ ಕೆಲವೇ ನಿರ್ದಿಷ್ಟ ನೆಲೆಗಳಲ್ಲಿ ಬೆಳಕಿಗೆ ಬಂದಿರುವ ಆ ಕಾಲದ ಬಂಡೆಯ ಮೇಲಿನ ವರ್ಣಚಿತ್ರಗಳು ಇವರ ಸಾಂಸ್ಕೃತಿಕ, ಸಾಮಾಜಿಕ ಜೀವನ ಹಾಗೂ ನಂಬಿಕೆಗಳ ಬಗೆಗೆ ತಿಳಿಸಿರುವುದರ ಜೊತೆಗೆ ಅವರ ಕಲೆಗಾರಿಕೆಯ ವಿಶಿಷ್ಟತೆಯನ್ನು ತಿಳಿಯಪಡಿಸಿವೆ (ಅ. ಸುಂದರ ೧೯೯೪).[೨೯] ಕುಣಿಗಲ್ ತಾಲೂಕಿನಲ್ಲಿ

ಸೂಕ್ಷ್ಮ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದಂತೆ ಹಿಮಗಿರಿ ಮತ್ತು ಹುಲಿಯೂರು ದುರ್ಗದಲ್ಲಿ ನೆಲೆಗಳು ಕಂಡುಬಂದಿವೆ.

ನೂತನ ಶಿಲಾಯುಗ ಸಂಸ್ಕೃತಿ

ಕರ್ನಾಟಕದಲ್ಲಿ ನೂತನ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಶೋಧನೆಗಳು ಪ್ರಥಮವಾಗಿ ೧೮೭೨ರಲ್ಲಿ ಶೋಧಿತವಾದವು. ಪ್ರೇಸರ್‌ರವರು ಬಳ್ಳಾರಿ ಜಿಲ್ಲೆ ಕಪ್ಪುಗಲ್ಲು ಬೆಟ್ಟದಲ್ಲಿ ನೂತನ ಶಿಲಾಉಪಕರಣ ಹಾಗೂ ವಾಸ್ತವ್ಯದ ನೆಲೆಯೊಂದನ್ನು ಗುರುತಿಸಿದರು. ಆನಂತರ ಟಿ. ನರಸೀಪುರ, ಬ್ರಹ್ಮಗಿರಿ, ಪಿಕ್ಲಿಹಾಳ್, ತೆಕ್ಕಲಕೋಟೆ, ಹಳ್ಳೂರು, ಕೊಡೆಕಲ್ ಪ್ರಮುಖ ನೆಲೆಗಳಾಗಿವೆ.[೩೦] ಈ ನಿವೇಶನಗಳ ಅಧ್ಯಯನದಿಂದಾಗಿ ಕರ್ನಾಟಕದಲ್ಲಿ ಈ ಸಾಂಸ್ಕೃತಿಕ ಹಂತವು ಉಚ್ಛ್ರಾಯ ಸ್ಥಿತಿಯಲ್ಲಿದ್ದುದು ತಿಳಿದುಬರುತ್ತದೆ. ಮುಖ್ಯ ಅವಶೇಷವಾದ ವೈವಿಧ್ಯಮಯ ಶಿಲಾ ಉಪಕರಣಗಳು ಮಣ್ಣಿನ ಪಾತ್ರೆಗಳು, ಶವಸಂಸ್ಕಾರ ಪದ್ಧತಿ, ಕಲೆಗಾರಿಕೆ ಮುಂತಾದ ಅನೇಕ ವಿಷಯಗಳ ಕುರಿತು ಮಹತ್ವದ ಮಾಹಿತಿಗಳು ತಿಳಿದುಬಂದಿವೆ. ಕುಣಿಗಲ್ ತಾಲೂಕಿನಲ್ಲಿ ಈ ಸಂಸ್ಕೃತಿಗೆ ಸಂಬಂಧಪಟ್ಟಂತೆ ಗಂಗ್ಡಾನಹಳ್ಳಿ ಮತ್ತು ಹೇರೂರು ಎಂಬ ಎರಡು ನೆಲೆಗಳು ಬೆಳಕಿಗೆ ಬಂದಿವೆ.

ಶಿಲಾ ತಾಮ್ರಯುಗ ಸಂಸ್ಕೃತಿ

ನೂತನ ಶಿಲಾಯುಗ ಸಂಸ್ಕೃತಿಯ ನಂತರ ವಿಕಸನಗೊಂಡ ಹಂತವಿದು. ತಾಮ್ರದ ಅದಿರಿನ ಜ್ಞಾನ ಲೋಹದ ಪರಿವರ್ತನಾಶಿಲೆಗೆ ಬದಲಾಗಿ ಲೋಹದ ಆಯುಧಗಳ ಬಳಕೆ, ಮಡಕೆಗಳ ಬಳಕೆ ಸುಧಾರಿತ ಬೇಸಾಯ ಪದ್ಧತಿ ಮೊದಲಾದ ಲಕ್ಷಣಗಳನ್ನು ಗುರುತಿಸಿಕೊಂಡ ಸಾಂಸ್ಕೃತಿಕ ಹಂತವಾಗಿದೆ.[೩೧] ಮಡಕೆಯ ಮಾದರಿಯು ವಿಶಿಷ್ಟವಾಗಿದ್ದದು ಕಂಡುಬರುತ್ತದೆ. ಇವುಗಳಲ್ಲಿ ವರ್ಣರೇಕಾ ಚಿತ್ರಮಯವಾದ ಪಾತ್ರೆಗಳು ಕಂಡುಬಂದಿವೆ. ಕೆಲವೊಮ್ಮೆ ಪ್ರಾಣಿಗಳ ಚಿತ್ರಗಳನ್ನು ಬಿಡಿಸಲಾಗಿದೆ. ಇಂತಹ ಮಣ್ಣಿನ ಪಾತ್ರೆಗಳನ್ನು ಜೋರ್ವೆ ಮತ್ತು ಸಾಳ್ವ ಸಂಸ್ಕೃತಿಯ ಮಡಕೆ ಮಾದರಿಗಳೆಂದು ಕರೆಯಲಾಗುತ್ತದೆ.[೩೨] ಶಿಲಾ ತಾಮ್ರಯುಗದ ಜನರು ಸೌಂದರ್ಯ ಪ್ರಜ್ಞೆಯುಳ್ಳವರಾಗಿದ್ದರೆಂದು ಅವರ ಮಣ್ಣಿನಗೊಂಬೆ ಹಾಗೂ ದೊರೆತ ವರ್ಣಚಿತ್ರಗಳಿಂದ ತಿಳಿಯಬಹುದಾಗಿದೆ. ನೂತನ ಶಿಲಾಯುಗ, ಶಿಲಾ ತಾಮ್ರಯುಗ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಯ ಹಂತಕ್ಕೆ ಸೇರಿದವುಗಳೆಂದು ತಿಳಿಯುವ ಬೂದಿ ದಿಬ್ಬಗಳು ಕರ್ನಾಟಕದ ಉತ್ತರ ಭಾಗದಲ್ಲಿ ಹೆಚಾಗಿವೆ. ತಾಮ್ರಶಿಲಾಯುಗಕ್ಕೆ ಸಂಬಂಧಿಸಿದ ಯಾವುದೇ ನೆಲೆಗಳು ಕುಣಿಗಲ್‌ನಲ್ಲಿ ಪತ್ತೆಯಾಗಿಲ್ಲ.

ಬೂದಿ ದಿಬ್ಬಗಳು

ನೂತನ ಶಿಲಾಯುಗದ ತಾಮ್ರಯುಗ ಮತ್ತು ಕಬ್ಬಿಣ ಶಿಲಾಸಂಸ್ಕೃತಿಯ ಪ್ರಮುಖ ಬೆಳವಣಿಗೆಗಳಲ್ಲಿ ಗುರುತಿಸಿಕೊಂಡ ಅವಶೇಷವೆಂದರೆ ಬೂದಿ ದಿಬ್ಬಗಳು ಈ ಹಂತದಲ್ಲಿ ಕೃಷಿಯಂತೆ ಪಶುಪಾಲನೆ ವೃತ್ತಿ ಅಭಿವೃದ್ಧಿ ಪಡೆಯಿತು. ದನಗಳ ಸಗಣಿಯನ್ನು ಸುಡುವಿಕೆಯಿಂದ ನಿರ್ಮಾಣವಾದ ಬೃಹದಾಕಾರದ ಬೂದಿದಿಬ್ಬಗಳೂ ಪಶು ಸಾಕಾಣಿಕೆಯ ಪ್ರಮಾಣವನ್ನು ಸೂಚಿಸುತ್ತವೆ. ಇವು ಕರ್ನಾಟಕದ ಭೀಮಾ, ಕೃಷ್ಣಾ, ತುಂಗಾಭದ್ರ ನದಿ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಕುಣಿಗಲ್ ತಾಲೂಕಿನ ಹೇರೂರಿನಲ್ಲಿ ಬೂದಿದಿಬ್ಬ ಪತ್ತೆಯಾಗಿದೆ.

ಬೃಹತ್ ಶಿಲಾಯುಗ

ಬೃಹತ್ ಶಿಲಾಯುಗ ಸಂಸ್ಕೃತಿಯ ಜನರು ಕುತೂಹಲಕಾರಿಯಾಗಿರುವ ವಿವಿಧ ಮಾದರಿಯ ಬೃಹತ್ ಶಿಲಾಗೋರಿಗಳನ್ನು ನಿರ್ಮಿಸುತ್ತಿದ್ದರಿಂದ ಈ ಸಂಸ್ಕೃತಿಯನ್ನು ಬೃಹತ್ ಶಿಲಾ ಸಂಸ್ಕೃತಿ ಎಂದು ಕರೆಯಲಾಗುತ್ತಿದೆ. ಜೊತೆಗೆ ಈ ಹಂತದಲ್ಲಿ ಕಬ್ಬಿಣದ ಬಳಕೆಯ ಮಹತ್ವವನ್ನು ಕಾಣಬಹುದು. ಭಾರತದಲ್ಲಿ ಇತರ ಸಂಸ್ಕೃತಿಗಳಂತೆ ಬೃಹತ್ ಶಿಲಾಯುಗ ಸಂಸ್ಕೃತಿಯು ಸವಿಸ್ತಾರವಾಗಿ ಕರ್ನಾಟಕದಲ್ಲಿ ವ್ಯಾಪಿಸಿವೆ. ಈ ಸಂಸ್ಕೃತಿಯ ಪ್ರಮುಖ ಲಕ್ಷಣವೆಂದರೆ, ಕಲ್ಗೋರಿಗಳ ವಿನ್ಯಾಸ ಮತ್ತು ಮಾದರಿಗಳು ೧. ಕೋಣೆಕಲ್ಗೋರಿ-ಹಾದಿಕೋಣೆ, ಕಂಡಿಕೋಣೆ, ಆಯುತಾಕಾರದ ಅಂತರ್ಗತ ಶವಪೆಟ್ಟಿಗೆ ೨. ಕೋಣೆಯಾಕೃತಿಯಲ್ಲಿಲ್ಲದ ಕಲ್ಗೋರಿ, ಕಲ್ಗುಪ್ಪೆ ಕುಣಿದಫನ, ಶಿಲಾವೃತ್ತ, ಶವಕುಳಿ, ದಫನದಿನ್ನೆ, ಅಸ್ತಿಪಾತ್ರೆ ೩. ಸಮಾಧಿ ಪ್ರಕ್ರಿಯೆಗೆ ಸಂಬಂಧಪಡದ ನಿಲಸುಗಲ್ಲು ಮುಂತಾದವು ಕಬ್ಬಿಣದ ಜೊತೆಗೆ ಕಪ್ಪು ಕೆಂಪು ವರ್ಣದ ಮಡಕೆಗಳ ಉಪಯೋಗವಿದ್ದದ್ದು ತಿಳಿದುಬರುತ್ತದೆ.[೩೩]

ಈ ಸಂಸ್ಕೃತಿಯ ಕಾಲಮಾನವು ಉತ್ತರ ಕರ್ನಾಟಕಕ್ಕೆ ಕ್ರಿ.ಪೂ. ೧೨೦೦-೧೦೦೦ರ ಸುಮಾರಿಗೆ ಆರಂಭವಾಗಿ ಕ್ರಿ.ಪೂ. ೩-೨ನೇ ಶತಮಾನದವರೆಗೆ ಪ್ರವರ್ಧಮಾನದಲ್ಲಿದ್ದಿತೆಂದು ತಿಳಿಯುತ್ತದೆ. ದಕ್ಷಿಣ ಕರ್ನಾಟಕದಲ್ಲಿ ಈ ಸಂಸ್ಕೃತಿಯೂ ಕ್ರಿಪೂ ೧೨೦೦-೨೫೦ರವರೆಗೆ ಪ್ರವರ್ಧಮಾನ ಹೊಂದಿತೆಂದು ತಿಳಿದುಬರುತ್ತದೆ. ಅಂದರೆ ಕಬ್ಬಿಣವನ್ನು ಬಳಸಿಕೊಂಡು ದೊಡ್ಡ ದೊಡ್ಡ ಬಂಡೆಗಳನ್ನು ಸೀಳಿ ಶವಸಂಸ್ಕಾರಕ್ಕೆ ಬಳಸಿಕೊಂಡಿರುವ ಸಂಗತಿ ತಿಳಿದುಬರುತ್ತದೆ.

ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಅ. ಸುಂದರ ಅವರು ೧೯೭೫ರಲ್ಲಿ ಸ್ಥಳ ಪರಿಶೋಧನೆ ನಡೆಸಿ ಕೆಲವು ನೆಲೆಗಳ ಉತ್ಖನನ ಕೈಗೊಂಡು ಇಡೀ ಭಾರತದಲ್ಲಿಯೇ ವೈಶಿಷ್ಟ್ಯಪೂರ್ಣವೆನಿಸಿರುವ ಶಿಲುಬೆಯಾಕಾರದ ಕಲ್ಗೋರಿಗಳನ್ನು ಬೆಳಕಿಗೆ ತಂದಿದ್ದಾರೆ. ಇದರ ಜೊತೆಗೆ ಮಾರ್ಟಿಮರ್ ವೀಲ್ಹರ್‌ರವರು ಬೃಹತ್ ಶಿಲಾಯುಗದ ಸಮಾಧಿಗಳನ್ನು ಉತ್ಖನನ ಮಾಡಿದ್ದಾರೆ. ಕುಣಿಗಲ್ ತಾಲೂಕಿಗೆ ಸಂಬಂಧಪಟ್ಟಂತೆ ಸಂತೆಪೇಟೆ ಎಂಬಲ್ಲಿ ಬೃಹತ್ ಶಿಲಾ ಸಮಾಧಿಗಳು ಕಂಡುಬಂದಿದ್ದು, ಅವುಗಳನ್ನು ಮೊದಲ ಬಾರಿಗೆ ಪತ್ತೆ ಹಚ್ಚಲಾಗಿದೆ.[೩೪]

ಒಟ್ಟಾರೆಯಾಗಿ ಕುಣಿಗಲ್ ತಾಲೂಕಿನಲ್ಲಿ ಪೂರ್ವ ಇತಿಹಾಸದ ಅಂದರೆ ಹಳೆಶಿಲಾಯುಗ, ಮಧ್ಯೆ ಶಿಲಾಯುಗ, ನವಶಿಲಾಯುಗ ಮತ್ತು ಬೃಹತ್ ಶಿಲಾಯುಗದ ಕಾಲಘಟ್ಟದಲ್ಲಿ ಜನಜೀವನ ಇದ್ದುದನ್ನು ಗುರುತಿಸಲಾಗಿದೆ. ಆದರೆ ಈ ಪ್ರದೇಶದಲ್ಲಿ ಯಾವುದೇ ಉತ್ಖನನಗಳು ಇದೂವರಗೂ ನಡೆದಿಲ್ಲ. ಇಲ್ಲಿನ ಪ್ರಾಗಿತಿಹಾಸಿಕ ಮಾನವನ ಜೀವನಕ್ರಮಗಳ ಬಗೆಗೆ ತಿಳಿಯಲು ಅತ್ಯಗತ್ಯವಾಗಿ ಉತ್ಖನನ ಕಾರ್ಯ ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಕ್ಷೇತ್ರಾಧ್ಯಯನಗಳು ನಡೆಯಬೇಕಾಗಿದೆ.

ಕುಣಿಗಲ್ ತಾಲೂಕಿನ ಪ್ರಾಗಿತಿಹಾಸ ಕಾಲದ ನೆಲೆಗಳ ವಿವರಣೆ

ಅ. ಗಂಗ್ಡಾನಹಳ್ಳಿ

ಕುಣಿಗಲ್ ತಾಲೂಕಿನ ಕೊತ್ತಗೆರೆಯ ಸಮೀಪದಲ್ಲಿ ಈ ನೆಲೆಯು ಕಂಡುಬಂದಿದ್ದು, ಕೊತ್ತಗೆರೆಯಿಂದ ಸುಮಾರು ೧ ಕಿ.ಮೀ. ದೂರದಲ್ಲಿದೆ. ನೂತನ ಶಿಲಾಯುಗಕ್ಕೆ ಸಂಬಂಧಿಸಿದಂತೆ ಈ ಸಂಸ್ಕೃತಿಯ ಉಜ್ಜಿ ನಯಗೊಳಿಸಿದ ಕೊಡಲಿ ಹಾಗೂ ಕಂದು ವರ್ಣದ ಮಡಕೆಯ ಚೂರು ದೊರಕಿದೆ. ಸ್ಥಳೀಯರ

ಹೇಳಿಕೆಯ ಪ್ರಕಾರ ಈ ಸ್ಥಳದಲ್ಲಿ ಒಂದು ಜನವಸತಿ ಗ್ರಾಮವಿದ್ದು, ಕಾರಣಾಂತರಗಳಿಂದ ಈ ಗ್ರಾಮವು ನಾಶವಾಗಿದ್ದು, ಭೂಮಿಯನ್ನು ಅಗೆದರೆ ಅಸ್ಥಿಪಂಜರಗಳು, ಮಡಕೆ ಚೂರು, ಬೂದಿಯ ಅವಶೇಷ ಸಿಗುತ್ತದೆ ಎಂಬುದು ಸ್ಥಳೀಯರ ಹೇಳಿಕೆಯಾಗಿದೆ.

ಆ. ತೆಪ್ಪಸಂದ್ರ

ತಾಲೂಕು ಕೇಂದ್ರದಿಂದ ಸುಮಾರು ೧೦ ಕಿ.ಮೀ. ದೂರದಲ್ಲಿ ಈ ನೆಲೆಯು ಕಂಡುಬರುತ್ತದೆ. ಬೃಹತ್ ಶಿಲಾಯುಗ ಸಂಸ್ಕೃತಿಯ ಮತ್ತು ಇತಿಹಾಸ ಆರಂಭ ಕಾಲದ ನೆಲೆಗಳಿವೆ. ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಯು ಸುಮಾರು ೧ ಹೆಕ್ಟೇರ್ ಪ್ರದೇಶದಲ್ಲಿದ್ದು, ಮಾದರಿ ಕಲ್ಮನೆಗಳು, ಶಿಲಾವೃತ್ತ ಸಮಾಧಿಗಳು ಹಾಗೂ ಕೆಂಪು, ಕಪ್ಪು ಮತ್ತು ಕಪ್ಪು-ಕೆಂಪು ಮಡಕೆ ಚೂರುಗಳು ಸಿಕ್ಕಿವೆ.

ಇ. ಹಿಮಗಿರಿ

ಇದನ್ನು ಸ್ಥಳೀಯರು ಹೇಮಗಿರಿ ಬೆಟ್ಟ ಎನ್ನುತ್ತಾರೆ. ಗ್ರಾಮದ ದಕ್ಷಿಣಕ್ಕೆ ೧ ಕಿ.ಮೀ ಅಂತರದಲ್ಲಿದ್ದು, ಅಂತ್ಯ ಮತ್ತು ಸೂಕ್ಷ್ಮ ಶಿಲಾಯುಗದ ನೆಲೆ-ಗುಡ್ಡದ ಮೇಲಿದೆ. ಬುಡದಲ್ಲಿ ನೀರಿನ ಸಂಗ್ರಹವಿದ್ದು ಮರಳು ಮಿಶ್ರಿತ ಕಂದು ಮಣ್ಣಿನ ಭೂಮಿಯಾಗಿದೆ. ಸುಮಾರು ಒಂದು ಎಕರೆ ಪ್ರದೇಶ ಪ್ರಾಕೃತಿಕವಾಗಿ ಹಾಳಾಗಿದೆ. ಅಂತ್ಯಶಿಲಾಯುಗದ ನೀಳಚಕ್ಕೆ, ಮೊನೆ, ಹೆರೆಚಕ್ಕೆ, ಕೊರೆಯುಳಿ ದೊರೆತಿದ್ದು ಕ್ವಾರ್ಟ್ಜ್ ಶಿಲೆಯಲ್ಲಿವೆ. ಅಲ್ಲದೆ ಸೂಕ್ಷ್ಮ ಶಿಲಾಯುಗದ ನೀಳಚಕ್ಕೆ ಉಪಕರಣ ದೊರೆತಿದ್ದು ಕ್ವಾರ್ಟ್ಜ್ ಶಿಲೆಯಲ್ಲಿವೆ (ಬೆಣಚುಕಲ್ಲು).

ಈ. ಹುಲಿಯೂರು ದುರ್ಗ

ಈ ನೆಲೆಯೂ ಗ್ರಾಮದ ಪಶ್ಚಿಮಕ್ಕೆ ೦.೫ ಕಿ.ಮೀ ದೂರದಲ್ಲಿದೆ ಸೂಕ್ಷ್ಮ ಶಿಲಾಯುಗದ ನೆಲೆಯಾಗಿದ್ದು, ನೀರಿನ ಹರಿವುಗಳ ಜೊತೆಗೆ ಮರಳು ಮಿಶ್ರಿತ ಕೆಂಪು ಮಣ್ಣಿನ ಭೂಮಿ ಇದ್ದು, ಸುಮಾರು ಒಂದು ಎಕರೆ ಪ್ರದೇಶ ಕೃಷಿ ಭೂಮಿಯಿಂದ ನೆಲೆ ಹಾಳಾಗಿದೆ. ಸೂಕ್ಷ್ಮ ಶಿಲಾಯುಗದ ನೀಳಚಕ್ಕೆ, ಮೊನೆ, ಹೆರೆಚಕ್ಕೆ, ಬಾಣದ ಮೊನೆ ಉಪಕರಣಗಳು ದೊರೆತಿದ್ದು, ಕ್ವಾರ್ಟ್ಜ್ ಶಿಲೆಯಲ್ಲಿವೆ.

ಉ. ಹೇರೂರು

ಈ ಪ್ರದೇಶವು ತಾಲ್ಲೂಕು ಕೇಂದ್ರದಿಂದ ಐದು ಕಿ.ಮೀ ದೂರದಲ್ಲಿದ್ದು ನೂತನ ಶಿಲಾಯುಗ ಸಂಸ್ಕೃತಿಗೆ ಸೇರಿದ ನೆಲೆಯಾಗಿದೆ. ಈ ನೆಲೆಯಲ್ಲಿ ನೂತನ ಶಿಲಾಯುಗ ಸಂಸ್ಕೃತಿಗೆ ಸೇರಿದ ಕೊಡಲಿ ಉಪಕರಣ ದೊರೆತಿದೆ.

ಊ. ಸಂತೆಪೇಟೆ

ಈ ನೆಲೆಯು ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ್ದು, ತಾಲೂಕು ಕೇಂದ್ರದಿಂದ ೧೮ ಕಿ.ಮೀ ದೂರದಲ್ಲಿದೆ. ಸಂತೆಪೇಟೆಯಿಂದ ವಡೇಘಟ್ಟಕ್ಕೆ ತೆರಳುವ ಮಾರ್ಗದಲ್ಲಿದ್ದು ಸಮೀಪದಲ್ಲೇ ನೀರಿನ (ಆಸರೆ) ತೊರೆಸಾಲು ಹಾಗೂ ಹುತ್ರಿದುರ್ಗ ಬೆಟ್ಟವಿದೆ. ಈ ಗುಡ್ಡದ ಸಮೀಪದಲ್ಲಿ ನೆಲೆ ಕಂಡುಬಂದಿದ್ದು ಸುಮಾರು ೮-೧೦ ಸಮಾಧಿಗಳನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗುರುತಿಸಿದ್ದೇನೆ. ಸಮಾಧಿಯ

ಮೇಲೆ ಅಗಲವಾದ ಕಲ್ಲಿನ ಹೊದಿಕೆ (ಸ್ಟೋನ್ ಸ್ಲಾಬ್) ಕಾಣಬಹುದಾಗಿದ್ದು ನಿಧಿಗಳ್ಳರ ಆಸೆಯಿಂದ ಮೂರು ಸಮಾಧಿಗಳು ನಾಶವಾಗಿವೆ.

ಅದೇ ರೀತಿ ರಸ್ತೆಯ ಬಲಕ್ಕೆ (ದಕ್ಷಿಣಕ್ಕೆ) ನಿಲುಸು ಕಲ್ಲಿನ ಸಮಾಧಿ ವೃತ್ತಾಕಾರದ ಸಮಾಧಿಯು ಕಂಡುಬರುತ್ತದೆ. ಇದೇ ನೆಲೆಯಿಂದ ಪೂರ್ವಕ್ಕೆ ತೆರಳಿದರೆ ಅಲ್ಲಿಯೂ ಮಾನವನಾಕೃತಿಯ ನಿಲುಸು ಕಲ್ಲಿನ ಸಮಾಧಿ ಇದೆ. ಈ ನೆಲೆಗಳ ಬಗ್ಗೆ ಹೆಚ್ಚಿನ ಅಧ್ಯಯನ ಮಾಡಿ ಬೆಳಕಿಗೆ ತರಬೇಕಾಗಿದೆ.

೨.೪. ಇತಿಹಾಸ

ತುಮಕೂರು ಜಿಲ್ಲೆಯ ಪ್ರದೇಶವು ವಿವಿಧ ಅರಸು ಮನೆತನಗಳ ಆಳ್ವಿಕೆಗೆ ಒಳಪಡುತ್ತಾ ಬಂದಿರುವುದು ಸಮಕಾಲೀನ ಶಾಸನ, ಪುರಾತತ್ವ ಮತ್ತು ಸಾಹಿತ್ಯಿಕ ಕುರುಹುಗಳಿಂದ ಮನದಟ್ಟಾಗುವುದು. ಕುಣಿಗಲ್ ಪಟ್ಟಣವನ್ನು ಕೇಂದ್ರವಾಗಿಟ್ಟುಕೊಂಡು ಕುಣಿಗಲ್ ತಾಲ್ಲೂಕಿನಲ್ಲಿ ಆಳ್ವಿಕೆ ಮಾಡಿದ ವಿವಿಧ ಅರಸು ಮನೆತನಗಳು ಹಾಗೂ ಪ್ರಾಚೀನ ಆಡಳಿತ ವಿಭಾಗಗಳನ್ನು ಕುರಿತು ಸಹ ನಿರೂಪಿಸಲಾಗಿದೆ. ಈ ಪ್ರದೇಶದಲ್ಲಿ ಆಳ್ವಿಕೆ ಕೈಗೊಂಡಿದ್ದ ಅರಸರು, ಮಾಂಡಳೇಶ್ವರರು, ಸಾಮಂತರು, ಪಾಳೆಗಾರರು ಅಧಿಕಾರ ವಹಿಸಿಕೊಂಡು ತಮ್ಮ ಆಡಳಿತದ ಅವಧಿಯಲ್ಲಿ ಹಲವು ಜನಪ್ರಿಯ ಕಾರ್ಯಗಳನ್ನು ಕೈಗೊಂಡಿದ್ದು ಅವು ಇಂದಿನವರೆಗೂ ಪ್ರಚಲಿತದಲ್ಲಿವೆ. ಮತ್ತು ಶಾಶ್ವತವಾಗಿ ಜನಮನದಲ್ಲಿವೆ. ಇಂತಹ ವಿಚಾರಗಳನ್ನು ಸಾಂಸ್ಕೃತಿಕವಾಗಿ ಅಧ್ಯಯನ ಮಾಡಿ ಚಾರಿತ್ರಿಕ ಹಿನ್ನೆಲೆ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಮೌರ್ಯರು ಮತ್ತು ಶಾತವಾಹನರು

ತುಮಕೂರು ಜಿಲ್ಲೆಯ ಆರಂಭದ ಇತಿಹಾಸವನ್ನು ಮೌರ್ಯರ ಮತ್ತು ಶಾತವಾಹನರ ಆಳ್ವಿಕೆಯನ್ನು ಗುರುತಿಸುವುದಕ್ಕೆ ನೆರೆಯ ಜಿಲ್ಲೆಯಲ್ಲಿ ಸಿಕ್ಕಿರುವ (ಚಿತ್ರದುರ್ಗ) ಅಶೋಕನ ಶಾಸನಗಳು ಮತ್ತು ಮಡಕೆಗಳು, ಶಿಲಾ ಸಮಾಧಿಗಳಿಂದ ತುಮಕೂರು ಜಿಲ್ಲೆಗೂ ಇವರ ಆಳ್ವಿಕೆ ಹಬ್ಬಿತ್ತೆಂದು ಊಹಿಸಲಾಗಿದೆ.[೩೫] ಆದರೆ ಜಿಲ್ಲೆಯಲ್ಲಿ ಯಾವುದೇ ಶಾಸನಗಳು ಕಂಡುಬರುವುದಿಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುವ ಶಾಸನಗಳಿಂದ ಎರಡು ಜಿಲ್ಲೆಗಳ ಅಂತರವನ್ನು ಗಮನಿಸಿ ಈ ಮೇಲಿನ ಹೇಳಿಕೆ ನೀಡಬಹುದಾಗಿದೆ. ಮೌರ್ಯರ ಆಳ್ವಿಕೆಯು ಕರ್ನಾಟಕದಲ್ಲಿ ಕ್ರಿ.ಪೂ ೪ನೇ ಶತಮಾನದಿಂದ ಮೂರನೇ ಶತಮಾನದವರೆಗೂ ಆಳ್ವಿಕೆ ನಡೆಸಿರುವರು. ಅವರ ನಂತರ ಮೌರ್ಯರ ಸಾಮಂತರಾಗಿದ್ದವರು ಸ್ವತಂತ್ರರಾಗಿ ಕ್ರಿ.ಪೂ. ೨೩೮ ರಿಂದ ಕ್ರಿ.ಶ. ೨೨೫ ರವರೆಗೂ ಆಳ್ವಿಕೆ ನಡೆಸಿದ ಶಾತವಾಹನರು ದಕ್ಷಿಣ ಭಾರತದ ಇತಿಹಾಸದಲ್ಲಿ ಗಮನಾರ್ಹ ಪಾತ್ರವಹಿಸುತ್ತಾರೆ.

ತಲಕಾಡಿನ ಗಂಗರು

ಕರ್ನಾಟಕ ಇತಿಹಾಸಕ್ಕೆ ಸಾಂಸ್ಕೃತಿಕ ಬುನಾದಿ ಹಾಕಿದ ಕೀರ್ತಿ ಗಂಗರಿಗೆ ಸಲ್ಲುತ್ತದೆ. ತುಮಕೂರು ಜಿಲ್ಲೆಯಲ್ಲಿ ಮೊದಲು ಆಳ್ವಿಕೆ ಮಾಡಿದ ಅರಸರೆಂದರೆ ತಲಕಾಡಿನ ಗಂಗರು. ತಲಕಾಡು, ಮಾನ್ಯಪುರ (ಮಣ್ಣೆ) ಮತ್ತು ಕುವಲಾಲಪುರಗಳನ್ನು ರಾಜಧಾನಿಯಾಗಿ ಮಾಡಿಕೊಂಡು ಸುಮಾರು ೬೦೦ ವರ್ಷಗಳ ಕಾಲ ಕರ್ನಾಟಕದಲ್ಲಿ ಆಳ್ವಿಕೆ ಮಾಡಿದ್ದಾರೆ. (ಕ್ರಿ.ಶ ೪-೧೧ನೇ ಶತಮಾನ) ತುಮಕೂರು ಜಿಲ್ಲೆಯಲ್ಲಿ ಗಂಗರ ಒಟ್ಟು ೪೭ ಶಾಸನಗಳು ದೊರೆತಿವೆ.

ಗಂಗವಾಡಿ ೯೬೦೦೦ ಎಂಬುದು ಗಂಗರ ಆಡಳಿತ ಕೇಂದ್ರವಾಗಿತ್ತು. ಕುಣಿಗಲ್ ಪ್ರದೇಶವು ಗಂಗರ ಆಳ್ವಿಕೆಗೆ ಒಳಪಟ್ಟಿದ್ದು ೫೦೦ ವರಹಗಳ ನಾಡಾಗಿತ್ತು. ಗಂಗರ ಮೊದಲನೆಯ ಶಿವಮಾರನಿಗೆ ಬ್ರಿಟೀಷ್ ಮ್ಯೂಸಿಯಂ ದಾಖಲೆಯಂತೆ ನವಕಾಮನೆಂಬ ಹೆಸರಿತ್ತು. ಇವನು ಕುಣಿಗಲ್ ಸಮೀಪದ ಹೆಬ್ಬೂರನ್ನು ದತ್ತಿ ಪಡೆದ ಚಾರಿತ್ರಿಕ ದಾಖಲೆಯಲ್ಲಿ ಗಂಗಸಂತತಿಯ ಸಂಸ್ಥಾಪಕರಾದ ದಡಿಗ ಮತ್ತು ಮಾಧವರ ಹೆಸರಿದೆ.[೩೬] ಮೊದಲನೆ ಶಿವಮಾರನ ಮೊಮ್ಮಗನಾದ ಶ್ರೀಪುರುಷನ ಕಾಲದಲ್ಲಿ ಗಂಗವಾಡಿಗೆ ಶ್ರೀರಾಜ್ಯವೆಂದು ಹೆಸರಿತ್ತು.

ಶ್ರೀಪುರುಷ ಗಂಗರ ಪ್ರಸಿದ್ಧ ಅರಸನಾಗಿದ್ದು, ಸುಮಾರು ೬೦ ವರ್ಷಗಳ ಕಾಲ ಧೀರ್ಘ ಆಳ್ವಿಕೆಯಲ್ಲಿ ರಾಷ್ಟ್ರಕೂಟರೊಡನೆ ನಿರಂತರ ಹೋರಾಡಿದನು. ಇವನಿಗೆ ಶಿವಮಾರನಿಯಗೆಲ್ಲ, ದುಗ್ಗಮಾರ ಮತ್ತು ವಿಜಯಾದಿತ್ಯರೆಂಬ ಮಕ್ಕಳಿದ್ದರು.[೩೭] ಇವರು ವಿವಿಧ ಪ್ರಾಂತ್ಯಗಳಲ್ಲಿ ರಾಜ್ಯಪಾಲರಾಗಿ ಆಡಳಿತದಲ್ಲಿ ನೆರವಾಗಿದ್ದರು. ಇದರ ಜೊತೆಗೆ ಯುದ್ಧದ ಸಂದರ್ಭದಲ್ಲಿ ರಾಜನ ಸಹಾಯಕ್ಕೆ ನಿಲ್ಲುತ್ತಿದ್ದರು ಎರಡನೆಯ ಶಿವಮಾರನಿಗೆ ಸೈಗೊಟ್ಟ ಶಿವಮಾರ ಎಂಬ ಹೆಸರಿತ್ತು. ಶ್ರೀಪುರುಷನ ಕಾಲದಲ್ಲಿ ಸೈಗೊಟ್ಟ ಶಿವಮಾರ ಕುಣಿಗಲ್ ನಾಡಿನ ರಾಜ್ಯಪಾಲನಾಗಿದ್ದನು. ಮಾಗಡಿ ತಾಲೂಕಿನ ಕುಪ್ಪೆ ಪಾಳ್ಯದ ಶಾಸನದಲ್ಲಿ ಇವನನ್ನು ಶಿವಮಾರ ಎರೆಯಪ್ಪನೆಂದು ಕರೆಯಲಾಗಿದೆ. ಗಂಗರ ಕಾಲದಲ್ಲಿ ಕುಣಿಗಲ್ ಪಕ್ಕದಲ್ಲಿನ ಕುಪ್ಪೆಪಾಳ್ಯದ ಬಿಸ್ಕೂರು ಜೈನರ ಪ್ರಸಿದ್ಧ ಕೇಂದ್ರವಾಗಿತ್ತು. ಕುಪ್ಪೆ ಪಾಳ್ಯದ ಶಾಸನದಲ್ಲಿ "ಶಿವಮಾರ ರೇಪೋ ಕುಣಿಗಿಲ್ನಾ ತಾಳೆ ಬಿಸಿಗೂರೊಳ ಬಾಳ್ವ ಪ್ರೆಜಗೆಲ್ಲಂ ಕೊಟ್ಟುದು ಕಟ್ಟಾಣಿ ಮರ್ಯಾದೆ" ಎಂದಿದೆ.[೩೮] ಶ್ರೀಪುರುಷನ ಕೊನೆಯ ದಿನಗಳಲ್ಲಿ ರಾಷ್ಟ್ರಕೂಟರು ಚಾಲುಕ್ಯರ ವಿಮಲಾದಿತ್ಯನನ್ನು ಕುಣಿಗಲ್ ನಾಡಿನ ರಾಜ್ಯಪಾಲನಾಗಿ ನೇಮಿಸಿದರು. ಎರಡನೇ ಶಿವಮಾರ ಸುಮಾರು ಕ್ರಿ.ಶ. ೭೮೯ರಿಂದ ಕ್ರಿಶ ೮೧೨ರವರೆಗೆ ಆಳ್ವಿಕೆ ಮಾಡಿದ ದಾಖಲೆಗಳಿದ್ದರೂ, ರಾಷ್ಟ್ರಕೂಟರೊಡನೆ ನಿರಂತರ ಹೋರಾಟದಿಂದಾಗಿ ಸಿಂಹಾಸನ ಅನುಭವಿಸಿದ್ದು ಕೆಲವೇ ವರ್ಷಗಳೆಂದು ತಿಳಿದುಬರುತ್ತದೆ.[೩೯]

ಎರಡನೇ ಶಿವಮಾರ ರಾಷ್ಟ್ರಕೂಟರ ಧೃವನಿಂದ ಕ್ರಿ.ಶ ೭೮೮ರಲ್ಲಿ ಮುದುಗುಂದೂರಿನಲ್ಲಿ ಸೋತು ಸೆರೆಯಾಳಾದಾಗ ಧೃವನ ಮಗನಾದ ಕಂಬ ಅಥವಾ ಸ್ತಂಭ ಗಂಗವಾಡಿಗೆ ನೇಮಕಗೊಂಡನು. ಇದರಿಂದ ಗಂಗವಾಡಿ ೯೬೦೦೦ ರಾಷ್ಟ್ರಕೂಟರ ಆಳ್ವಿಕೆಗೊಳಪಟ್ಟಿತು.[೪೦] ಗಂಗರ ನೀತಿಮಾರ್ಗನ ಮಗನಾದ ಭೂತುಗ ರಾಷ್ಟ್ರಕೂಟರ ಅಮೋಘವರ್ಷನ ಮಗಳಾದ ಚಂದ್ರಲಬ್ಬೆಯನ್ನು ವಿವಾಹವಾದನು. ಈ ವೈವಾಹಿಕ ಸಂಬಂಧ ಧೀರ್ಘಕಾಲದ ವೈಮನಸ್ಸಿಗೆ ತೆರೆ ಎಳೆಯಿತು. ಕ್ರಿ.ಶ. ೮೮೬ರಲ್ಲಿ ಅಮೋಘವರ್ಷನ ಮಗಳಾದ ಚಂದ್ರಲಬ್ಬೆ ಕುಣಿಗಲ್ ನಾಡಿನ ಆಡಳಿತ ನೋಡಿಕೊಳ್ಳುತ್ತಿದ್ದಳು.[೪೧] ಗಂಗರ ಕಾಲದ ಆಡಳಿತದಲ್ಲಿ ರಾಣಿಯರು ಪಾಲ್ಗೊಳ್ಳುತ್ತಿದ್ದರೆಂಬುದು ವಿಶೇಷ ಸಂಗತಿ. ರಾಜ ಸೇನಾ ಚಟುವಟಿಕೆಗಳಲ್ಲಿ ತೊಡಗಿದ್ದಾಗ ರಾಣಿಯರು ಆಡಳಿತ ಮೇಲ್ವಿಚಾರಣೆಯೊಂದಿಗೆ ತೆರಿಗೆಯನ್ನು ವಸೂಲಿ ಮಾಡುತ್ತಿದ್ದರು. ರಾಜ-ರಾಣಿಯರ ಹೆಸರಿನಲ್ಲಿ ದಾನ-ದತ್ತಿಗಳನ್ನು ನೀಡುತ್ತಿದ್ದರು.

ಗಂಗರು ತಮ್ಮ ಆಳ್ವಿಕೆಯಲ್ಲಿ ಅಧಿಕಾರ ಕೇಂದ್ರಿಕರಣಕ್ಕಾಗಿ ದೀರ್ಘಾವಧಿಯ ಯುದ್ಧದಲ್ಲಿ ತೊಡಗಿರುವುದಕ್ಕೆ ತುಮಕೂರು ಜಿಲ್ಲೆಯಲ್ಲಿ ಹೇರಳವಾಗಿ ದೊರೆತಿರುವ ವೀರಗಲ್ಲುಗಳು ಸಾಕ್ಷಿಯಾಗಿವೆ. ಹೀಗೆ ಕರ್ನಾಟಕವನ್ನು ಆರು ಶತಮಾನಗಳ ಕಾಲ ಆಳ್ವಿಕೆ ಮಾಡಿದ ಗಂಗರು, ಚೋಳರ ಅರಸನಾದ

ರಾಜೇಂದ್ರ ಚೋಳನು ಕ್ರಿ.ಶ. ೧೦೦೪ರಲ್ಲಿ ತಲಕಾಡನ್ನು ವಶಪಡಿಸಿಕೊಳ್ಳುವುದರೊಂದಿಗೆ ಗಂಗರ ಅಧಿಕಾರ ಕೊನೆಗೊಂಡಿತು.

ರಾಷ್ಟ್ರಕೂಟರು

೮ನೇ ಶತಮಾನದ ಮಧ್ಯಭಾಗದಿಂದ ೧೦ನೇಯ ಶತಮಾನದ ಕೊನೆಯ ಭಾಗದವರೆಗೆ ಕರ್ನಾಟಕ ಮತ್ತು ಮಹಾರಾಷ್ಟ್ರದ ಬಹುಭಾಗಗಳಿಗೂ ರಾಷ್ಟ್ರಕೂಟರು ಆಳಿದರು. ಪ್ರಾರಂಭದಲ್ಲಿ ಬಾದಾಮಿ ಚಾಲುಕ್ಯರ ಆಶ್ರಿತರಾಗಿದ್ದು, ಸ್ವಸಾಮರ್ಥ್ಯದಿಂದ ರಾಜ್ಯಸಾಧಿಸಿ, ಚಾಲುಕ್ಯರ ರಾಜಕೀಯ ಉತ್ತರಾಧಿಕಾರಿಗಳಾಗಿ ಒಂದನೇ ಕೃಷ್ಣ, ಧ್ರುವ, ಮೂರನೇ ಗೋವಿಂದ, ಅಮೋಘವರ್ಷ ನೃಪತುಂಗ, ೩ನೇ ಕೃಷ್ಣ ಮುಂತಾದ ಅರಸರು ಮಾನ್ಯಖೇಟವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ಮಾಡಿರುತ್ತಾರೆ. ಅದೇ ರೀತಿ ರಾಷ್ಟ್ರಕೂಟರ ಶಾಸನಗಳು ತುಮಕೂರು ಜಿಲ್ಲೆಯಲ್ಲಿ ದೊರೆತಿದ್ದು ಇದರಿಂದ ತುಮಕೂರು ರಾಷ್ಟ್ರಕೂಟರ ಆಳ್ವಿಕೆಗೆ ಸೇರಿತ್ತೆಂದು ಸ್ಪಷ್ಟವಾಗುತ್ತದೆ. ರಾಷ್ಟ್ರಕೂಟರ ಅರಸ ಧೃವನಿಂದ ಕ್ರಿ.ಶ. ೭೮೮ರಲ್ಲಿ ಮುದುಗುಂದೂರಿನಲ್ಲಿ ಗಂಗರ ಎರಡನೇ ಶಿವಮಾರ ಸೋಲನಪ್ಪಿ ಸೆರೆಯೊಳಗಾಗುತ್ತಾನೆ.

ಧೃವನ ಮಗನಾದ ಕಂಬ ಅಥವಾ ಸ್ತಂಭ ಗಂಗವಾಡಿಗೆ ನೇಮಕಗೊಂಡನು, ಗಂಗವಾಡಿ ರಾಷ್ಟ್ರಕೂಟರ ಆಳ್ವಿಕೆಗೊಳಪಟ್ಟಿತು. ಇದೇ ವೇಳೆಯಲ್ಲಿ ದ್ರುವನ ಮಗನಾದ ಕಂಬರಾಯನು ಕುಣಿಗಲ್ ಪಟ್ಟಣವನ್ನು ಒಳಗೊಂಡಂತೆ ಕೋಟೆಕಟ್ಟಿದ, ನಂತರ ಬಂದ ಅರಸರು ಇದನ್ನು ಅಭಿವೃದ್ಧಿಪಡಿಸಿದರು. ಗಂಗರ ನೀತಿಮಾರ್ಗನ ಮಗನಾದ ಭೂತುಗ ರಾಷ್ಟ್ರಕೂಟರ ಅಮೋಘವರ್ಷನ ಮಗಳಾದ ಚಂದ್ರಲಬ್ಬೆಯನ್ನು ವಿವಾಹವಾದನು. ಈ ವೈವಾಹಿಕ ಸಂಬಂಧ ಧೀರ್ಘಕಾಲದ ವೈಮನಸ್ಸಿಗೆ ತೆರೆ ಎಳೆಯಿತು. ಕ್ರಿ.ಶ. ೮೮೬ ರಲ್ಲಿ ಅಮೋಘವರ್ಷನ ಮಗಳಾದ ಚಂದ್ರಲಬ್ಬೆ ಕುಣಿಗಲ್ ನಾಡಿನ ಆಡಳಿತ ನೋಡಿಕೊಳ್ಳುತ್ತಿದ್ದಳು. ಗುಬ್ಬಿಯ ೬೧ನೇ ಶಾಸನದಲ್ಲಿರುವಂತೆ ಚಾಲುಕ್ಯರ ವಿಮಲಾದಿತ್ಯನನ್ನು ರಾಷ್ಟ್ರಕೂಟರು ಗಂಗರ ೩೦೦ ವರಹಗಳ ಕುಣಿಗಲ್ ನಾಡಿಗೆ ರಾಜ್ಯಪಾಲನನ್ನಾಗಿ ನೇಮಿಸಿದರು.[೨೨] ಹೀಗೆ ರಾಷ್ಟ್ರಕೂಟರು ಗಂಗವಾಡಿಯನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡಿದ್ದರು. ಈ ಮೂಲಕ ಕುಣಿಗಲ್ ಪ್ರದೇಶವು ಅವರ ಅಧೀನಕ್ಕೆ ಒಳಪಟ್ಟಿತು ಎಂಬುದು ತಿಳಿದು ಬರುತ್ತದೆ.

ಚೋಳರು

ಕರ್ನಾಟಕದಲ್ಲಿ ಚೋಳರ ಆಳ್ವಿಕೆಯ ಮೊದಲ ಕುರುಹು ಬೆಂಗಳೂರಿನ ಕುಡಲೂರಿನಲ್ಲಿ ದೊರೆತಿದೆ. ಚೋಳ ಸಾಮ್ರಾಜ್ಯದ ಸ್ಥಾಪಕ ವಿಜಯಾಲಯನಿಗೆ ಸೇರಿದ ಈ ಶಾಸನ ತಮಿಳು ಭಾಷೆಯಲ್ಲಿದೆ. ಚೋಳರು ತಮ್ಮ ಆಳ್ವಿಕೆಯಲ್ಲಿ ೯ನೇ ಶತಮಾನದಿಂದ ೧೩ನೇ ಶತಮಾನದ ವರೆಗೂ ಕರ್ನಾಟಕದಲ್ಲಿ ನೆಲೆಸಿ ಹಲವಾರು ಕಾರ್ಯಗಳನ್ನು ಮಾಡಿ ಯಶಸ್ವಿಯಾಗಿದ್ದಾರೆ. ೧ನೇ ರಾಜರಾಜನ ಕಾಲದಲ್ಲಿ ಮೊದಲ ಬಾರಿಗೆ ತುಮಕೂರಿನ ಕುಣಿಗಲ್ ತಾಲೂಕು ಮತ್ತು ಮಧುಗಿರಿ ತಾಲೂಕುಗಳು ಚೋಳರ ವಶವಾದವು. ಈ ಭಾಗಗಳು ಒಂದನೇ ರಾಜೇಂದ್ರ ಚೋಳ, ಒಂದನೇ ರಾಜರಾಜ ಚೋಳ, ರಾಜೇಂದ್ರ ದೇವಚೋಳ, ವೀರ ರಾಜೇಂದ್ರ ಚೋಳ, ಒಂದನೇ ಕುಲೋತ್ತುಂಗ ಚೋಳನ ಕಾಲದವನರೆಗೂ ಚೋಳ ಸಾಮ್ರಾಜ್ಯದ ಭಾಗಗಳಾಗಿದ್ದವು.[೨೩] ನಂತರದ ಕಾಲದಲ್ಲಿ ಈ ಭಾಗವು ಹೊಯ್ಸಳ, ವಿಜಯನಗರ ಮತ್ತು ಪಾಳೇಗಾರರ ಆಳ್ವಿಕೆಗೆ ಒಳಪಟ್ಟಿತು.

ಪ್ರಸ್ತುತ ತುಮಕೂರು ಜಿಲ್ಲೆಯಲ್ಲಿ ಚೋಳರ ಎರಡು ತಮಿಳು ಶಾಸನಗಳು ದೊರೆತಿವೆ. ಎರಡು ಶಾಸನಗಳು ೧೧ನೇ ಶತಮಾನಕ್ಕೆ ಸೇರಿವೆ. ಈ ಶಾಸನವು ಕುಣಿಗಲ್ ತಾಲೂಕಿನ ಕೊತ್ತಗೆರೆಯಲ್ಲಿ ಕ್ರಿ.ಶ ೧೦೪೮ರ ರಾಜರಾಜ ಚೋಳನ ಶಾಸನ ಸಿಕ್ಕಿದೆ ಮತ್ತು ಮಧುಗಿರಿಯ ತಾಲೂಕಿನ ತೆರೆಯೂರಿನಲ್ಲಿ ಕ್ರಿ.ಶ. ೧೦೬೧ರ ರಾಜೇಂದ್ರ ಚೋಳನ ಶಾಸನ ದೊರೆತಿವೆ.[೪೪]

ಕರ್ನಾಟಕದ ಚೋಳ ಆಳ್ವಿಕೆಯ ಭಾಗಗಳನ್ನು ಆಡಳಿತದ ಅನುಕೂಲಕ್ಕಾಗಿ ಏಳು ಮಂಡಲಗಳಾಗಿ ವಿಂಗಡಿಸಲಾಗಿತ್ತು. ಆಡಳಿತಾತ್ಮಕ ವಿಭಾಗಗಳಾಗಿದ್ದ ಈ ಏಳು ಮಂಡಲಗಳಲ್ಲಿ ವಿಕ್ರಮ ಚೋಳಮಂಡಲಂ ಸಹ ಒಂದು. ಪೂರ್ವಕ್ಕೆ ಉತ್ತರ ಆರ್ಕಾಟ್‌ನಿಂದ ಪಶ್ಚಿಮಕ್ಕೆ ಕುಣಿಗಲ್‌ವರೆಗೂ ವ್ಯಾಪಸಿದ್ದ ಈ ಮಂಡಲಂನಲ್ಲಿ ಕುಕ್ಕನೂರು ನಾಡು (ನೆಲಮಂಗಲ), ಕುರುಕುಡಚ್ಚೀನಾಡು (ಮಾಲೂರು), ಸನ್ಯೆನಾಡು (ದೇವಗಿರಿ, ಹೊಸಕೋಟೆ), ಕುಣುಂಗಿಲ್ ನಾಡುಗಳಾಗಿದ್ದವು. ಈ ಕುಣುಂಗಿಲ್ ನಾಡು ಎಂಬುದು ಸರಿಸುಮಾರು ಇಂದಿನ ಕುಣಿಗಲ್ ತಾಲ್ಲೂಕಿನಷ್ಟೇ ವ್ಯಾಪ್ತಿಯಿದ್ದ ನಾಡಾಗಿತ್ತು.

ಇದರಲ್ಲಿ ಬೇಗೂರು ಅಂದರೆ ತಿಪ್ಪೂರು ಶ್ರೀ ಚತುರ್ವೇದಿಮಂಗಲ ಎಂಬುದಾಗಿತ್ತು. ಒಂದನೇ ರಾಜೇಂದ್ರ ಚೋಳನು ವಿಕ್ರಮಚೋಳ ಮಂಡಲವನ್ನು ಸ್ಥಾಪಿಸಿದನು. ಈ ವಿಭಾಗದ ಪೂರ್ವನಾಮ ದಡಿಗಾವಳಿ ಎಂದು ರಾಜೇಂದ್ರ ಚೋಳನ ಕ್ರಿ.ಶ ೧೦೨೮ರ ಸೋಲದೇವನಹಳ್ಳಿ ಶಾಸನ ತಿಳಿಸುತ್ತದೆ. ನಿರ್ಕುಂದಿನಾಡು ಎಂಬುದು ವಿಕ್ರಮ ಚೋಳ ಮಂಡಲದ ಮತ್ತೊಂದು ನಾಡಾಗಿದ್ದು ಗುಬ್ಬಿ ತಾಲ್ಲೂಕಿನ ಬಹುಭಾಗವನ್ನು ಒಳಗೊಂಡಿತ್ತು. ಇದರಲ್ಲಿ ಕಡಬ ಅಂದರೆ ಕಡೆಂಬ ಶ್ರೀದಶರಥರಾಮ ಚತುರ್ವೇದಿಮಂಗಲಂ ಎಂಬ ಅಗ್ರಹಾರ ಅಂತರ್ಗತವಾಗಿದ್ದಿತು.[೪೫]

ಕ್ರಿ.ಶ ೧೦೧೮-೧೦೫೪ ರವರೆಗೆ ಆಳಿದ ರಾಜಾಧಿರಾಜದೇವ ಚೋಳನ ಕ್ರಿ.ಶ ೧೦೪೮ ರಲ್ಲಿ ಕುಣಿಗಲ್‌ನ್ನು ರಾಜೇಂದ್ರ ಚೋಳಪುರವೆಂದು ಪುನರ್ ನಾಮಕರಣ ಮಾಡಿದನು. ಅಲ್ಲಿನ ರಾಜೇಂದ್ರ ಚೋಳೇಶ್ವರ ಮುಡ್ಯೆಯ ರಾಜಾಧಿರಾಜ ವಿಡಂಗಲ್ ದೇವರ ತಿರುನಾಳ ಮತ್ತು ಮೆರವಣಿಗೆ ಉತ್ಸವದ ನಿರ್ವಹಣೆಗೆ ಹಬ್ಬದ ಆಚರಣೆಗೆ ಕುಣಿಗಲ್ ಕೆರೆಯ ಹಿಂದಿನ ೩೦ ಕೊಳಗ ಗದ್ದೆ ಭೂಮಿಯನ್ನು ದಾನ ನೀಡಲಾಯಿತು. ಮತ್ತು ಒಂದು ನಂದಾದೀಪಿಗೆಗೂ ವ್ಯವಸ್ಥೆ ಮಾಡಲಾಗಿತ್ತು. ಹಾಗೇ ಇದೇ ಶಾಸನದಲ್ಲಿ ಕುಣಿಗಲ್‌ನ ರಾಜೇಂದ್ರ ಚೋಳಪುರದಲ್ಲಿ ರಾಜೇಂದ್ರ ಚೋಳೇಶ್ವರಂ ಒಡೆಯ ರಾಜಾಧಿರಾಜ ವಿಡಂಗಲ್ ಎಂಬ ತನ್ನ ತಂದೆಯಾದ ಒಂದನೇ ರಾಜೇಂದ್ರ ಚೋಳನ ಹೆಸರಿನಲ್ಲಿ ಸ್ಥಾಪನೆಗೊಂಡಿದ್ದ ಶಿವಾಲಯದ ಬಗ್ಗೆ ಪ್ರಸ್ತಾಪಿಸಲಾಗಿದೆ.[೪೬] ಈ ದಾನ ಕೊಡುವ ನಿರ್ಧಾರವನ್ನು ಯಾವುದೇ ಮಾಂಡಲೀಕ ಅಥವಾ ಶ್ರೀಮಂತ ವ್ಯಕ್ತಿ ತಗೆದುಕೊಳ್ಳದೆ ಸುತ್ತಣ ನಾಲ್ಕು ದಿಕ್ಕುಗಳ ೧೫೦೦ ನಖರರು (ವ್ಯಾಪಾರಿಗಳು) ದಾನ ನೀಡಿರುವುದಾಗಿ ತಿಳಿಸಿದೆ. ಆದರೆ ಇಷ್ಟೊಂದು ಸಂಖ್ಯೆಯ ನಖರರು ದಾನ ಮಾಡಿರುವುದನ್ನು ನೋಡಿದರೆ ಇದೊಂದು ವಿಶೇಷ ಶಾಸನ ಎನ್ನಬಹುದು. ಇದರಿಂದ ಅಂದು ವಿಕ್ರಮ ಚೋಳ ಮಂಡಲದಲ್ಲಿ ವ್ಯಾಪಾರ ವಹಿವಾಟು ಹೆಚ್ಚು ನಡೆಯುತ್ತಿತ್ತೆಂದು ತೋರುತ್ತದೆ.

ಕರ್ನಾಟಕದಲ್ಲಿ ಶೈವಧರ್ಮ ಪ್ರಚಾರಗೊಳ್ಳಲು ಚೋಳರ ಕೊಡುಗೆ ಅಪಾರ, ಶೈವ ಬ್ರಾಹ್ಮಣರೆಂಬ ಪಂಥವೊಂದು ಚೋಳರೊಂದಿಗೆ ಕರ್ನಾಟಕವನ್ನು ಪ್ರವೇಶಿಸಿದರು. ಚೋಳರು ನೀಡಿದ ಬಹುತೇಕ ದಾನ ಮತ್ತು ದತ್ತಿಗಳು ಶೈವ ಧರ್ಮದ ಬೆಳವಣಿಗೆಯಲ್ಲಿ ಮುಖ್ಯ ಪಾತ್ರವಹಿಸಿದೆ.

ಒಟ್ಟಾರೆ ಹೇಳುವುದಾದರೆ ತುಮಕೂರು ಜಿಲ್ಲೆಯಲ್ಲಿ ಚೋಳ ದೊರೆಗಳಾದ ರಾಜೇಂದ್ರ ಚೋಳ ಮತ್ತು ರಾಜಾಧಿರಾಜ ಚೋಳರ ಆಳ್ವಿಕೆ ಇತ್ತು. ಅವರು ಈ ಪ್ರದೇಶವನ್ನು ಸುಮಾರು ೨೦ ವರ್ಷಗಳ ಕಾಲ ಆಳಿದರು. ಈ ಅವಧಿಯಲ್ಲಿ ಚೋಳರು ದೇವಾಲಯಗಳನ್ನು ನಿರ್ಮಾಣ ಮಾಡುವುದರ ಮೂಲಕ ಅದರ ನಿರ್ವಹಣೆಗೆ ದತ್ತಿ ಬಿಟ್ಟಿರುವುದು ಕಂಡುಬರುತ್ತದೆ. ಕುಣಿಗಲ್ ವಿಕ್ರಮಚೋಳ ಮಂಡಲದ ಒಂದು ಭಾಗವಾಗಿದ್ದು, ಅದನ್ನು ಅಂದು ರಾಜೇಂದ್ರ ಚೋಳಪುರಂ ಎಂದು ಕರೆಯಲಾಗುತ್ತಿತ್ತು. ಚೋಳರ ಇಂತಹ ಆಳ್ವಿಕೆಯೇ ನಿಡುಗಲ್‌ನಲ್ಲಿ (ಪಾವಗಡ) ಸಾಮಂತ ಚೋಳರು ಉದಯಿಸಲು ಕಾರಣವಾಯಿತು (ನಿಡುಗಲ್ ಚೋಳರು).

ಹೊಯ್ಸಳರು

ತುಮಕೂರು ಜಿಲ್ಲೆಗೆ ಹೊಯ್ಸಳರ ಕೊಡುಗೆ ವಿಶಿಷ್ಟವಾದುದು. ದ್ವಾರಸಮುದ್ರವನ್ನು ರಾಜಧಾನಿಯಾಗಿ ಮಾಡಿಕೊಂಡು, ಇನ್ನಿತರ ಪ್ರದೇಶಗಳ ಮೇಲೆ ಹಿಡಿತ ಸಾಧಿಸಿ ಆಳ್ವಿಕೆ ನಡೆಸಿದ್ದಾರೆ. ಇವರ ಪ್ರಾಚೀನ ಶಾಸನ ತಿಪಟೂರು ತಾಲೂಕುನಲ್ಲಿ ದೊರೆತಿದ್ದು, ಇದು ಕ್ರಿ.ಶ ೧೦೨೮ರಲ್ಲಿ ರಚಿತಗೊಂಡಿದೆ. ತುಮಕೂರು ಜಿಲ್ಲೆಗೆ ೧೫೨ ಶಾಸನಗಳನ್ನು ಕೊಟ್ಟ ಕೀರ್ತಿ ಹೊಯ್ಸಳರದು. ಈ ಸಂತತಿಯ ಅರಸರು ಕ್ರಿ.ಶ. ೧೦ನೇ ಶತಮಾನದಿಂದ ೧೪ನೇ ಶತಮಾನದವರೆಗೂ, ವಿಶೇಷವಾಗಿ ದಕ್ಷಿಣ ಕರ್ನಾಟಕ ಮತ್ತು ಸುತ್ತಮುತ್ತಲಿನ ಭಾಗಗಳನ್ನು ಆಳಿದ ರಾಜಮನೆತನ, ಈ ವಂಶದ ರಾಜಧಾನಿ ಮೊದಲು ಶಶಕಪುರ ಅಥವಾ ಸೊಸೆವೂರು ಅನಂತರ ದ್ವಾರಸಮುದ್ರವಾಗಿದ್ದು. ಮೂರು ಶತಮಾನಕ್ಕೂ ಹೆಚ್ಚು ಕಾಲ ವೈಭವಯುತವಾಗಿ ಮೆರೆದಿದೆ. ಇವರು ತಮ್ಮನ್ನು ಯಾದವ ಕುಲಕ್ಕೆ ಸೇರಿದವರೆಂದು ಹೇಳಿ ಶಾಸನಗಳಲ್ಲಿ ತಮ್ಮನ್ನು ಯಾದವ ನಾರಾಯಣ, ಯಾದವ ಕುಲಾಂ ಬರದ್ಯುಮಣಿ, ದ್ವಾರಮಲೆಪುರವಾಧೀಶ್ವರ ಮುಂತಾದ ಬಿರುದುಗಳಿಂದ ಗುರುತಿಸಿಕೊಂಡು ಹುಲಿಯನ್ನು ಕೊಲ್ಲುತ್ತಿರುವ ಚಿತ್ರವನ್ನು ತಮ್ಮ ಲಾಂಛನವಾಗಿ ಮಾಡಿಕೊಂಡಿದ್ದಾರೆ.

ಹೊಯ್ಸಳರ ಆಡಳಿತದ ಅವಧಿಯಲ್ಲಿ ಕುಣಿಗಲ್ ಪ್ರಮುಖ ಆಡಳಿತದ ಭಾಗವಾಗಿದ್ದು ಶಾಸನಗಳಲ್ಲಿ ಕುಣಿಗಿಲು ನಾಡು ಎಂದು ಪ್ರಸ್ತಾಪಿಸಲ್ಪಟ್ಟಿದೆ. ಕುಣಿಗಲ್ ತಾಲ್ಲೂಕಿನಲ್ಲಿ ಕ್ರಿ.ಶ. ೧೧೩೮ರ ಶಾಸನ ಕಾಮನಹಳ್ಳಿಯಲ್ಲಿ ಸಿಕ್ಕಿದೆ ಇದರಲ್ಲಿ ತ್ರಿಭುವನಮಲ್ಲ, ತಲಕಾಡುಗೊಂಡ, ಭುಜಬಲ ವೀರಗಂಗ ಹೊಯ್ಸಳ ದೇವ ಎಂಬುವನ ಉಲ್ಲೇಖವಿದ್ದು, ಇವನು ಹೊಯ್ಸಳ ವಿಷ್ಣುವರ್ಧನನೇ ಎಂದು ಶಾಸನದ ಆಧಾರದ ಮೇಲೆ ನಿರ್ಧರಿಸಬಹುದು. ಇವನಿಗಿದ್ದ ಮಹಾಮಂಡಳೇಶ್ವರ ಎಂಬ ಉಪಾಧಿಯು ಅವನ ಅಧೀನವನ್ನು ಸೂಚಿಸುತ್ತದೆ. ವಿಷ್ಣುವರ್ಧನನು ಕಾಮನಹಳ್ಳಿಯ ರಾಮೇಶ್ವರ ದೇವರಿಗೆ ಸೋಮವಾರದಂದು ಪೂಜೆ ಪುನಸ್ಕಾರ ಮಾಡಲು ಕೆರೆಯಂಗಳದ ಗದ್ದೆ ಭೂಮಿಯನ್ನು ಬಿಡತಕ್ಕದ್ದು ಎಂಬುದಾಗಿ ಶಾಸನ ಉಲ್ಲೇಖಿಸುತ್ತದೆ.[೪೨]

ಅದೇ ರೀತಿ ಕುಣಿಗಲ್ ತಾಲ್ಲೂಕಿನ ಕೊತ್ತಗೆರೆಯ ಕ್ರಿಶ ೧೧೫೨ರ ಶಾಸನ ಹೊಯ್ಸಳ ವಿಷ್ಣುವರ್ಧನನು ಶ್ರೀಧರಪುರ (ಕೊತ್ತಗೆರೆ)ದ ಮಹಾಜನರಿಗೆ ಕೊತ್ತಗೆರೆಯನ್ನು ಅಗ್ರಹಾರವನ್ನಾಗಿ ಪರಿವರ್ತಿಸಿಕೊಟ್ಟನು. ಆ ಕೊತ್ತಂಗೆರೆ ಅಗ್ರಹಾರದ ವರ್ಣನೆಯನ್ನು ಶಾಸನದಲ್ಲಿ ಸವಿಸ್ತಾರವಾಗಿ ವರ್ಣಿಸಲಾಗಿದೆ. ಅಲ್ಲಿಯ ಮಹಾಜನರು ವಿದ್ಯಾವಿನಯ ಸಂಪನ್ನರು, ವೇದಶಾಸ್ತ್ರ ಪ್ರವೀಣರು, ಸತ್ಯವಂತರು, ಶಿಷ್ಟ ಜನರ ಸಂಕಷ್ಟಗಳನ್ನು ಪರಿಹರಿಸುವ ಜಗನ್ನಾಥನ ಭಕ್ತರಾಗಿದ್ದ ಪ್ರಖ್ಯಾತ ವಿದ್ವಾಂಸರು. ದೋರ

ಸಮುದ್ರವನ್ನು ಆಳುತ್ತಿದ್ದ ವಿಷ್ಣುವರ್ಧನನಿಗೆ ಮಗ ನರಸಿಂಹ ಹುಟ್ಟಿದ್ದಕ್ಕೆ ಮನೆವೆಗ್ಗಡೆ ಬಿಲುಪಯ್ಯ ದಂಡನಾಯಕ ಉದಯಣ್ಣನಿಗೆ ಹೇಳಿ ಕೇಶವ ದೇವರ ಜೀರ್ಣೋದ್ಧಾರ ಮಾಡಿಸುವಂತೆ ತೋಟ, ಎಮ್ಮೆ ಮುಂತಾದ ದಾನಗಳನ್ನು ನೀಡಿದಂತೆ ಈ ಶಾಸನ ಉಲ್ಲೇಖಿಸುತ್ತದೆ.

ಅದೇ ಶಾಸನದಲ್ಲಿ ವಿಷ್ಣುವರ್ಧನನು ಬೇರೆ ಬೇರೆ ಕಾಲಗಳಲ್ಲಿ ರಾಮ, ಕೃಷ್ಣ, ಬುದ್ಧ ಮತ್ತು ಮತ್ಸ್ಯನಾಗಿ ಅವತರಿಸಿ ಅನ್ಯಾಯವನ್ನು ಅಳಿಸಿ ಹಾಕಲು ಕಲಿಯುಗದಲ್ಲಿ ಹುಟ್ಟಿದನೆಂದು ಬಣ್ಣಿಸುತ್ತದೆ. (ಕಲಿಯುಗದೊಳ್ ಅನ್ಯಾಯವಂ ಮಾಣಿಸಲ) ಇವನು ಕೊತ್ತಂಗೆರೆ ಎಂಬ ಗ್ರಾಮವನ್ನು ಶ್ರೀಧರಪುರ ವೆಂಬ ಹೆಸರಿಟ್ಟು ತನ್ನ ನಿತ್ಯ ಭೂಮಿದಾನದ ವ್ರತಕ್ಕನುಗುಣವಾಗಿ ಮಹಾಜನರಿಗೆ ದಾನ ಮಾಡಿದನೆಂದು ಇದರಲ್ಲಿ ಹೇಳಿದೆ. ಇದರ ಕಾಲ ಕ್ರಿ.ಶ. ೧೧೫೭ ಕಾಲಗಣನೆಯ ಪ್ರಕಾರ ಇದು ಅವನ ಮಗ ಒಂದನೇ ನರಸಿಂಹನ ಆಳ್ವಿಕೆಗೆ ಸೇರಿದ್ದು ನರಸಿಂಹನು ಅಬ್ಜನಾಭ ಅಂದರೆ ವಿಷ್ಣುವಿನಂತೆ ಆಳುತ್ತಿದ್ದನು ಎಂದು ಹೇಳಿದೆ.[೪೮]

ಹೊಯ್ಸಳರ ಆಡಳಿತದ ಅವಧಿಯಲ್ಲಿ ಕುಣಿಗಲ್ ತಾಲೂಕಿನಲ್ಲಿ ಅನೇಕ ದೇವಾಲಯಗಳನ್ನು ಕಟ್ಟಿಸುತ್ತಾರೆ. ಕುಣಿಗಲ್ ಶಾಸನ ಒಂದರಲ್ಲಿ ಕೊತ್ತಿಗೆರೆಯ ಕೇಶವ ದೇವಾಲಯವನ್ನು ಜೀರ್ಣೋದ್ಧಾರಕ್ಕೆ ದಾನ ನೀಡುವುದು ಶಾಸನದಲ್ಲಿ ಉಲ್ಲೇಖವಿದೆ.

ಹೊಯ್ಸಳ ರಾಜ ಸೋಮೇಶ್ವರನು (ಕ್ರಿ.ಶ. ೧೨೩೫–೧೨೫೩) ತನ್ನ ಮಕ್ಕಳಿಬ್ಬರಿಗೆ ರಾಜ್ಯವನ್ನು ಹಂಚಿಕೊಡುವಾಗ ತುಮಕೂರು ಪ್ರಾಂತ್ಯಕ್ಕೆ ಸೇರಿಕೊಂಡಂತೆ ಊರ್ಡಿಗೆರೆಯಿಂದ ಹೆಬ್ಬೂರಿನವರೆಗೆ ಮೂರನೇಯ ನರಸಿಂಹನಿಗೂ (ಕ್ರಿ.ಶ. ೧೨೫೩–೬೩) ಕುಣಿಗಲ್ ಮತ್ತು ತಮಿಳುನಾಡಿನ ಭಾಗಗಳನ್ನೂ ರಾಮನಾಥನಿಗೂ (ಕ್ರಿ.ಶ. ೧೨೫೩–೯೫) ಹಂಚಿಕೊಟ್ಟಿದ್ದನು.[೪೯] ಇದನ್ನು ಗಮನಿಸಿದಾಗ ಹೊಯ್ಸಳರ ಆಳ್ವಿಕೆಯಲ್ಲಿ ಕುಣಿಗಲ್‌ನ ಪಾತ್ರವಿತ್ತೆಂದು ತಿಳಿದುಬರುತ್ತದೆ. ಒಟ್ಟಾರೆ ಹೊಯ್ಸಳರ ಕೊಡುಗೆ ತುಮಕೂರು ಜಿಲ್ಲೆಗೆ ಅಪಾರವಾಗಿದ್ದು ತಮ್ಮ ಆಳ್ವಿಕೆಯ ಅವಧಿಯಲ್ಲಿ ಅನೇಕ ವೈಷ್ಣವ ದೇವಾಲಯಗಳನ್ನು ಕಟ್ಟಿಸಿದ್ದಾರೆ. ಅಲ್ಲದೆ ಕೆರೆ ಕಟ್ಟೆಗಳನ್ನು ಕಟ್ಟಿಸಿರುವುದು ಶಾಸನಗಳಿಂದ ತಿಳಿದುಬರುತ್ತದೆ.

ವಿಜಯನಗರದ ಅರಸರು

ಹೊಯ್ಸಳರ ಅವನತಿಯ ನಂತರ ತುಮಕೂರು ಜಿಲ್ಲೆಯನ್ನೊಳಗೊಂಡ ಹೊಯ್ಸಳ ರಾಜ್ಯವು ವಿಜಯನಗರದ ಸಾಮ್ರಾಜ್ಯದೊಡನೆ ವಿಲೀನವಾಯಿತು. ಈ ಸಾಮ್ರಾಜ್ಯ ಸ್ಥಾಪನೆಯು ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯವಾದುದಾಗಿದೆ. ಮಹಮ್ಮದ್ದೀಯರ ದಾಳಿಯಿಂದ ಜರ್ಜರಿತವಾದ ಹಿಂದೂ ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ಉದಯಿಸಿದ ಕಟ್ಟಕಡೆಯ ಹಿಂದೂ ಸಾಮ್ರಾಜ್ಯವಾಗಿದೆ. ಇದು ದಕ್ಷಿಣ ಭಾರತದಲ್ಲಿ ರಾಜಕೀಯ ಅಸ್ಥಿರತೆಯನ್ನು ತೊಡೆದು ಹಾಕಿತಲ್ಲದೆ, ಮೂರು ಶತಮಾನಗಳಿಗೂ ಹೆಚ್ಚು ಕಾಲ (ಕ್ರಿ.ಶ. ೧೩೩೬–೧೫೬೫) ನಡೆದ ಮುಸ್ಲಿಂರ ದಾಳಿಯನ್ನು ತಡೆಯಿತು. ಹಂಪಿ ಇವರ ರಾಜಧಾನಿಯಾಗಿದ್ದು ಕುಣಿಗಲ್ ಪ್ರದೇಶವು ಪ್ರಾರಂಭದಿಂದಲೂ ವಿಜಯನಗರ ಅರಸರ ಆಳ್ವಿಕೆಗೆ ಒಳಪಟ್ಟಿತು. ಇವರು ತಮ್ಮ ಆಡಳಿತದ ಅವಧಿಯಲ್ಲಿ ನೀರಾವರಿ ಕ್ಷೇತ್ರಕ್ಕೆ, ಕಲೆ, ವಾಸ್ತುಶಿಲ್ಪಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದು ಹಲವಾರು ಕೆರೆಕಟ್ಟೆಗಳು, ದೇವಾಲಯಗಳು ನಿರ್ಮಾಣಗೊಂಡಿರುವುದು ಅವರ ಕಾಲದ ಶಾಸನಗಳಿಂದ ತಿಳಿದುಬರುತ್ತದೆ.

ವಿಜಯನಗರ ಅರಸರ ಕಾಲದಲ್ಲಿ ಕುಣಿಗಲ್ ಒಂದು ಆಡಳಿತ ಭಾಗವಾಗಿತ್ತು. ಕುಣಿಗಿಲ್ ನಾಡು, ಕುಣಿಗಲ್ ಸೀಮೆ ಎಂಬುದಾಗಿ ಶಾಸನದಲ್ಲಿ ಉಲ್ಲೇಖವಿದೆ. ಜೊತೆಗೆ ಹೆಬ್ಬೂರು, ಹುಲಿಯೂರು ಸ್ಥಳ, ಕೊತ್ತಂಗೆರೆ ಸ್ಥಳ, ಅಮೃತ್ತೂರು ಹೋಬಳಿ ಎಂಬ ಹೆಸರುಗಳು ಶಾಸನಗಳಲ್ಲಿ ಉಲ್ಲೇಖಗೊಂಡಿರುವುದರಿಂದ ಇವು ಕುಣಿಗಲ್ ನಾಡಿಗೆ ಸೇರಿದ್ದವೆಂಬುದು ತಿಳಿದುಬರುತ್ತದೆ.[೨೦] ಕ್ರಿ.ಶ. ೧೩೯೪ರಲ್ಲಿ ವಿಜಯನಗರದ ಮಂತ್ರಿ ಮಹಾಪ್ರಧಾನವಾದ ಇರುಗಪ್ಪ ಡಣ್ಣಾಯಕ ಒಡೆಯನು ಕುಣಿಗಲ್ ದೊಡ್ಡಕೆರೆಗೆ ತೂಬನ್ನು ನಿರ್ಮಿಸಿಕೊಟ್ಟನೆಂದು ತಿಳಿದುಬರುತ್ತದೆ.[೨೧]

ಕ್ರಿ.ಶ. ೧೩೮೦ರ ೨ನೇ ಇಮ್ಮಡಿ ಹರಿಹರನ ಶಾಸನ (ತುಮಕೂರು ಜಲ್ಲೆಯಲ್ಲಿಯೇ ಪ್ರಾಚೀನವಾದದ್ದು) ಕುಣಿಗಲ್‌ನಲ್ಲಿ ಸಿಕ್ಕಿದೆ. ಎರಡನೇ ಹರಿಹರನ ತಮ್ಮನ ಹೆಸರು ಮಲ್ಲಪ್ಪ ಒಡೆಯನೆಂದು ತಿಳಿದು ಬರುತ್ತದೆ. ಈ ಮಲ್ಲಪ್ಪನ ಮಗನಾದ ಚೆನ್ನಪ್ಪನು "ಆದವಾನಿಯ ದುರ್ಗವೂ ರಾಜ್ಯವೂ ತುರುಕ ಭೂಯಿಷ್ಠವಾಗುತ್ತಿರಲಾಗಿ" ಆ ದುರ್ಗವನ್ನು ಗೆದ್ದು ರಾಜ್ಯವನ್ನು ತುರುಕರ ಸೆರೆಯಿಂದ ಬಿಡಿಸಿ ಹರಿಹರರಾಯನಿಗೆ ಒಪ್ಪಿಸಿದನು. ಇದರಿಂದ ತಿಳಿದು ಬರುವ ಅಂಶವೆಂದರೆ ವಿಜಯನಗರದ ಆರಂಭದ ಕಾಲದಲ್ಲಿ ಆ ಅರಸರು ಬಹುಮನಿ ಸುಲ್ತಾನರೊಡನೆ ಮೇಲಿಂದ ಮೇಲೆ ಹೋರಾಡುವುದು ಅನಿವಾರ್ಯವಾಗಿತ್ತೆಂದು ತಿಳಿದುಬರುತ್ತದೆ.[೨೨]

ವಿಜಯಬುಕ್ಕರಾಯನ ಮಗನಾದ ಶ್ರೀ ವೀರಪ್ರತಾಪರಾಯನ ಕ್ರಿ.ಶ. ೧೪೨೯ರ ದಾನ ಶಾಸನವಿದ್ದು ಈ ಶಾಸನದಲ್ಲಿ ಉಜ್ಜನಿ ಪ್ರಜೆಗಳಿಗೆ ಗ್ರಾಮದಲ್ಲಿ ಕೆರೆಯನ್ನು ಕಟ್ಟಿಸಲು ದಾನವಾಗಿ ಭೂಮಿಯನ್ನು ನೀಡಿದನೆಂದು ತಿಳಿದುಬರುತ್ತದೆ.[೨೩]

ವಿಜಯನಗರದ ಅರಸ ಸದಾಶಿವರಾಯನ ಕ್ರಿ.ಶ. ೧೪೮೯ರ ಶಾಸನದಲ್ಲಿ ಸದಾಶಿವರಾಯನು ತನ್ನ ಮಹಾಮಾಂಡಳೇಶ್ವರನಾದ ರಾಮರಾಜು ತಿರುಮಲರಾಜಯ್ಯದೇವನಿಗೆ ಉಂಬಳಿಯಾಗಿ ಒಂದು ಗ್ರಾಮವನ್ನು ನೀಡಿದನೆಂದು ತಿಳಿಸುತ್ತದೆ.[೨೪] ವಿಜಯನಗರದ ಅರಸನಾದ ಎರಡನೇ ಸಾಳ್ವ ನರಸಿಂಹನ ೧೪೯೪ರ ಶಾಸನವು ಸುಳ್ಳಿರಿಯ ದೇವಪ್ಪನಾಯಕನು ಚನ್ನಪಟ್ಟಣದ ಅಂಗಡಿಯ ವೀರಭದ್ರದೇವರಿಗೆ ಅಂಗರಂಗಬೋಗಕ್ಕೆ ಚೌಡಾಪುರವನ್ನು ದಾನವಾಗಿ ನೀಡಿದ ಧರ್ಮಶಾಸನ ಎಂಬುದನ್ನು ತಿಳಿಸುತ್ತದೆ.[೨೫]

ವಿಜಯನಗರ ಅರಸ ಎರಡನೇ ಹರಿಹರನ ಕಾಲದ ತಾಮ್ರಶಾಸನದ (ಕ್ರಿ.ಶ. ೧೩೮೦) ಪ್ರಕಾರ ಎರಡನೇ ಹರಿಹರನ ಸಹೋದರ ಶ್ರೀವರೀಮಲ್ಲಪನ ಪುತ್ರನಾದ ಚನ್ನಪ್ಪನು ಆದವಾನಿ (ಯಡವಾಣಿ)ಯ ದುರ್ಗವನ್ನು ಬಹುಮನಿ ಸುಲ್ತಾನರಿಂದ ರಕ್ಷಿಸಿದ್ದರಿಂದ ಹೇರೂರಸ್ಥಳದಲ್ಲಿನ ಸೀಗೆಮಾವಿನಳ್ಳಿಯನ್ನು ವಿದ್ಯಾರಣ್ಯಪುರ ಎಂಬುದಾಗಿ ಮರುನಾಮಕರಣ ಮಾಡಿ ಬ್ರಹ್ಮಣರಾದ ವಿದ್ಯಾಭೂಷಣ ದೀಕ್ಷಿತ್ ಅವರಿಗೆ ದಾನ ನೀಡಿ ಅಗ್ರಹಾರವಾಗಿ ಮಾಡಿದರೆಂದು ತಿಳಿದುಬರುತ್ತದೆ.[೨೬]

ಕ್ರಿ.ಶ. ೧೪೮೮ರ ಶಾಸನದಲ್ಲಿ ಚಂನಪ್ಪನಾಯಕನು ಎಲಿಯೂರು ಚನ್ನಿಗರಾಯನ ಗುಡಿಯನ್ನು ಕಟ್ಟಿದನೆಂದು ತಿಳಿಸುತ್ತದೆ. ಈ ಚನ್ನಪ್ಪನಾಯಕನು ವಿಜಯನಗರ ಅರಸರ ಸಾಮಂತನಾಯಕನಾಗಿದ್ದಾನೆಂದು ತಿಳಿದುಬರುತ್ತದೆ.[೨೭] ಗಿರಿಯಣ್ಣನಾಯಕನು ಹುತ್ರಿದುರ್ಗದ ಠಾಣ್ಯದಾರನಾಗಿದ್ದು ಕ್ರಿ.ಶ. ೧೫೫೪ರಲ್ಲಿ ಹುತ್ರಿದುರ್ಗದ ತಟಸಮುದ್ರದಲ್ಲಿ ವಕರಣೆಬಾವಿ (ಪುಷ್ಕರಣೆ) ಕಟ್ಟಿಸಿದ.[೨೮] ಕ್ರಿ.ಶ. ೧೫೧೫ರ ಶಾಸನದಲ್ಲಿ ಶ್ರೀಕೃಷ್ಣದೇವರಾಯರಿಗೆ ಪುಣ್ಯವಾಗಲೆಂದು ಭುಜಬಲ ಪ್ರತಾಪನೆನಿಸಿದ ಮಾದೇನಾಯಕನು ತ್ರಿಪುರದ

ಸೋಮೇಶ್ವರ ದೇವರಿಗೆ ಅಂಗರಂಗ ಬೋಗಕ್ಕೆ (ವೈಭವಕ್ಕೆ) ಎಲೆಯೂರ ಸ್ಥಳವನ್ನು ದಾನ ನೀಡಿದ್ದನೆಂದು ತಿಳಿದುಬಂದಿದೆ.[೫೯]

ಕ್ರಿ.ಶ. ೧೬೩೮ರಲ್ಲಿ ಮಾರಪ್ಪನಾಯಕ ಉಗ್ರಾಣದ ದೇವಣ್ಣನ ಮಗ ಮನ್ಮಹಾನಾಯಕಾಚಾರ್ಯರು ಚೌಡಿ ಕೆರೆಯೂರು ನರಸಪ್ಪ ಒಡೆಯರಿಗೆ ಪುಣ್ಯವಾಗಲಿ ಎಂದು ಅಮೃತ್ತೂರಿನಲ್ಲಿ ಬಾವಿ ಕಟ್ಟಿಸಿದನು.[೬೦] ವಿಜಯನಗರದ ಅರಸ ಅಚ್ಯುತರಾಯರು ೧೫೩೩ರಲ್ಲಿ ಹೆಬ್ಬೂರು ಸೀಮೆಯನ್ನು ಕಾಮನಾಯಕರಿಗೆ ವಹಿಸಿಕೊಟ್ಟರು. (ಇತಿಹಾಸ ದರ್ಶನ ಸಂ.೧೫) ಹೆಬ್ಬೂರಿನ ಕಾಳಪ್ಪನಾಯಕನು ಅಚ್ಯುತರಾಯರಿಗೆ ಪುಣ್ಯವಾಗಲೆಂದು ಕ್ರಿ.ಶ. ೧೫೩೩ರಲ್ಲಿ ಹೆಬ್ಬೂರಿನ ಪೇಟೆಯ ತಿರುವೆಂಗಳನಾಥ ದೇವರಿಗೆ ಮುದಲಾಪುರ ಗ್ರಾಮವನ್ನು ದಾನ ಮಾಡಿದರು.[೬೧] ಹೀಗೆ ವಿಜಯನಗರದ ಆಳ್ವಿಕೆಯಲ್ಲಿ ಕುಣಿಗಲ್ ಪಟ್ಟಣವು ಪ್ರಮುಖ ಪಾತ್ರವಹಿಸಿತ್ತು ಎಂಬುದು ಈ ಮೇಲ್ಕಂಡ ಶಾಸನಗಳಿಂದ ತಿಳಿದುಬರುತ್ತದೆ. ಅಲ್ಲದೆ ವಿಜಯನಗರದ ಅರಸರು ಕುಣಿಗಲ್ ಅನ್ನು ಆಡಳಿತ ವಿಭಾಗವಾಗಿ ಮಾಡಿಕೊಂಡು ಅನೇಕ ದೇವಾಲಯಗಳನ್ನು, ಕೆರೆ ಬಾವಿಗಳನ್ನು ಕಟ್ಟಿಸುವುದರ ಜೊತಗೆ ಜೀರ್ಣೋದ್ಧಾರ ಮಾಡಿರುವುದು ಕಂಡುಬಂದಿದ್ದು, ವಿಜಯನಗರ ಕಾಲಘಟ್ಟದ ಪ್ರಾರಂಭದಿಂದ ಹಿಡಿದು ಕೊನೆಯ ರಾಜವಂಶವಾದ ಅರವೀಡು ವಂಶದವರೆಗೂ ಆಡಳಿತ ಸಂಬಂಧ ಹೊಂದಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ.

ಯಲಹಂಕ ನಾಡ ಪ್ರಭುಗಳು ಮತ್ತು ಮಾಗಡಿ ಕೆಂಪೇಗೌಡ ಪ್ರಭುಗಳು

ವಿಜಯನಗರ ಸಾಮ್ರಾಜ್ಯ ಮತ್ತು ಬಹುಮನಿ ರಾಜ್ಯಗಳು ಕ್ರಿ.ಶ ೧೪ನ ಶತಮಾನದಿಂದ ೧೭ನೇ ಶತಮಾನದವರೆಗು ವೈಭವದಿಂದ ಮೆರೆದವು. ಈ ಅವಧಿಯಲ್ಲಿ ದಕ್ಷಿಣ ಭಾರತದಲ್ಲಿ ಅನೇಕ ಸಣ್ಣಪುಟ್ಟ ಪಾಳೆ ಪಟ್ಟುಗಳು ಸ್ಥಳೀಯ ನಾಯಕರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದವು. ಕರ್ನಾಟಕದಲ್ಲಿ ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿದ್ದ ಈ ಪ್ರಭುಗಳು ಪಾಳೆಗಾರರೆಂದು ಪ್ರಸಿದ್ಧರಾಗಿದ್ದಾರೆ. (ಯಲಹಂಕ ಮತ್ತು ಮಾಗಡಿ ರಾಜಧಾನಿಗಳಾಗಿದ್ದವು). ಬೆಂಗಳೂರು, ನೆಲಮಂಗಲ, ಮಾಗಡಿ, ಕುಣಿಗಲ್ ಮತ್ತು ತುಮಕೂರಿನ ಕೆಲವು ಭಾಗಗಳು ಯಲಹಂಕ ನಾಡ ಪ್ರಭುಗಳ ಆಳ್ವಿಕೆಗೆ ಒಳಪಟ್ಟಿದ್ದವು. ಯಲಹಂಕನಾದ ಪ್ರಭುಗಳು ವಿಜಯನಗರದ ಸಾರ್ವಭೌಮರಿಗೂ ಮತ್ತು ಶ್ರೀರಂಗಪಟ್ಟಣದ ಮಹಾಮಾಂಡಳೇಶ್ವರರಿಗೂ ವಿಧೇಯರಾಗಿದ್ದರು.

ನಾಡ ಪ್ರಭುಗಳ ಅವಧಿಯಲ್ಲಿ ಕುಣಿಗಲ್ ಪ್ರದೇಶವು ಆಳ್ವಿಕೆಗೆ ಒಳಪಟ್ಟಿದ್ದು ಅನೇಕ ದೇವಾಲಯಗಳು, ಕೋಟೆ ಕೊತ್ತಲಗಳು, ಕೆರೆ ಕಟ್ಟೆಗಳನ್ನು ನಿರ್ಮಿಸಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ.ಶ. ೧೫೯೯ರಲ್ಲಿ ವಿಜಯನಗರದ ಅರವೀಡು ವಂಶದ ಶ್ರೀರಂಗ ರಾಯರ ಅವಧಿಯಲ್ಲಿ ಯಲಹಂಕಾದ ನಾಡುಪ್ರಭು ಓಮ್ಮಡಿ ಕೆಂಪೇಗೌಡರ ಪುಣ್ಯ ಸ್ತ್ರೀಗಳಾದ ವೆಂಕಟಕೃಷ್ಣಜಮ್ಮನವರು ಕುಣಿಗಲ್ ಪಟ್ಟಣದಲ್ಲಿ ಕೃಷ್ಣಸಾಗರ ಎಂಬ ಅಗ್ರಹಾರವನ್ನು ನಿರ್ಮಾಣ ಮಾಡಿ ಮಾವ ಇಮ್ಮಡಿ ಕೆಂಪೇಗೌಡರಿಗೂ ಮತ್ತು ಅತ್ತೆಯಾದ ಲಿಂಗಾಜಂಮನವರಿಗೂ ಪುಣ್ಯವಾಗಲೀ ಎಂದು ಹೇಳಿ ಅಗ್ರಹಾರದ ಬ್ರಾಹ್ಮಣರಿಗೆ ಕುಣಿಗಲ್ ದೊಡ್ಡ ಕೆರೆ ಕೆಳಗೆ ೨೦ ಖಂಡುಗ ಗದ್ದೆ ಮತ್ತು ೩೦ ಖಂಡುಗ ಹೊಲವನ್ನು ದಾನವಾಗಿ ನೀಡಿದಳೆಂದು ಶಾಸನದಿಂದ ತಿಳಿದುಬರುತ್ತದೆ.[೬೨]

ಕ್ರಿ.ಶ. ೧೫೬೬ರಲ್ಲಿ ಕೆಂಪೇಗೌಡರಿಗೆ ಪುಣ್ಯವಾಗಲೆಂದು ಕುಣಿಗಲ್ ಕೋಟೆಯನ್ನು ನೋಡಿಕೊಳ್ಳುತ್ತಿದ್ದ

ಕಸಪನಾಯಕನು ತಿರುಪತಿ ಮತ್ತು ಕಂಚಿಗೆ ಧನದ ರೂಪದಲ್ಲಿ ದಾನ ಮಾಡಿದನೆಂದು ಕುಣಿಗಲ್ ಶಾಸನ ತಿಳಿಸುತ್ತದೆ.[೬೩]

ಕ್ರಿ.ಶ. ೧೫೯೯ರಲ್ಲಿ ಯಲಹಂಕನಾಡಪ್ರಭು ಹಿರಿಯ ಕೆಂಪೇಗೌಡರ ಪಟದ ನಾಟಕ ಶಾಲೆಯ ಶೃಂಗಾರಮ್ಮ ಎಂಬುವಳು ಕೆಂಪೇಗೌಡರಿಗೆ ಪುಣ್ಯವಾಗಲೆಂದು ಶೃಂಗಾರಸಾಗರ ಎಂಬ ಅಗ್ರಹಾರವನ್ನು ನಿರ್ಮಿಸಿದಳು. ಶೃಂಗಾರಮ್ಮನವರು ಇದೇ ಅವಧಿಯಲ್ಲಿ ಒಂದು ಕೆರೆ ಹಾಗೂ ಬಸವ ಮಂಟಪ ಕಟ್ಟಿಸಿದಳೆಂದು ಶಾಸನದಿಂದ ತಿಳಿದುಬರುತ್ತದೆ.[೬೪]

ಕ್ರಿ.ಶ. ೧೫೪೫ರಲ್ಲಿ ಕೆಂಪೇಗೌಡರು ತಮ್ಮ ಆಡಳಿತ ಅವಧಿಯಲ್ಲಿ ಚನ್ನಾಪುರ ಮತ್ತು ದನಾಯಕಪುರ ಎಂಬ ಗ್ರಾಮಗಳನ್ನು ಪುರವಾಗಿ ಮಾನ್ಯಮಾಡಿ ಕೆರೆಕಟ್ಟೆಗಳನ್ನು ನಿರ್ಮಾಣ ಮಾಡಲು ಎಲಿಯೂರ ಸೀಮೆಯನ್ನು ದಾನವಾಗಿ ನೀಡಿರುವುದು ಶಾಸನದಿಂದ ತಿಳಿದುಬರುತ್ತದೆ.[೬೫]

ಹೀಗೆ ಕೆಂಪೇಗೌಡರು ವಿಜಯನಗರ ಅರಸರೊಂದಿಗೆ ಗೌರವದಿಂದ ನಡೆದುಕೊಳ್ಳುತ್ತಿದ್ದು ಅವರಿಗೆ ಕಪ್ಪಕಾಣಿಕೆ ಒಪ್ಪಿಸುತ್ತಿದ್ದರು. ತಮ್ಮ ಆಳ್ವಿಕೆಯ ಅವಧಿಯಲ್ಲಿ ವಿಜಯನಗರ ಅರಸರ ಒಪ್ಪಿಗೆ ಸಹಕಾರ ಪಡೆದುಕೊಂಡು ಹುತ್ರಿದುರ್ಗ ಮತ್ತು ಹುಲಿಯೂರುದುರ್ಗದಲ್ಲಿ ಕೋಟೆಯನ್ನು ನಿರ್ಮಿಸಿದರು. ಇದರೊಂದಿಗೆ ಕುಣಿಗಲ್ ಪ್ರದೇಶವು ಸಂಪೂರ್ಣವಾಗಿ ಕೆಂಪೇಗೌಡರ ಆಳ್ವಿಕೆಗೆ ಒಳಪಟ್ಟಿದ್ದು ಸುಭದ್ರ ಆಡಳಿತ ನಿರ್ವಹಿಸಿದರು. ಇದರೊಂದಿಗೆ ಕುಣಿಗಲ್ ಪ್ರದೇಶದ ಅಭಿವೃದ್ಧಿಗೆ ಕಾರಣರಾಗಿದ್ದಾರೆ ಎಂದು ಹೇಳಬಹುದು. ನಂತರದ ದಿನಗಳಲ್ಲಿ ಕುಣಿಗಲ್ ಪ್ರದೇಶವು ಮೈಸೂರು ಒಡೆಯರ ಆಳ್ವಿಕೆಗೆ ಒಳಪಡುತ್ತದೆ.

ಮೈಸೂರಿನ ಒಡೆಯರು

ವಿಜಯನಗರದ ಆಳ್ವಿಕೆಯ ಕೊನೆ ಕೊನೆಗೆ ತಲೆ ಎತ್ತಿದ ಸಂಸ್ಥಾನಿಕರಲ್ಲಿ ಕೆಳದಿಯ ನಾಯಕರು ಮತ್ತು ಮೈಸೂರು ಒಡೆಯರು ಪ್ರಮುಖರು ಕೆಳದಿಯ ಸಂಸ್ಥಾನ ಬಹುಕಾಲ ನಿಲ್ಲಲಿಲ್ಲ. ಆದರೆ ಮೈಸೂರು ಸಂಸ್ಥಾನವು ಸಮರ್ಥವಾಗಿ ಆಡಳಿತ ನಡೆಸಿ ೧೯೫೦ರಲ್ಲಿ ಭಾರತದ ಒಕ್ಕೂಟದೊಡನೆ ವಿಲೀನವಾಗುವವರೆಗೂ ಅಸ್ತಿತ್ವದಲ್ಲಿದ್ದಿತು. ಕುಣಿಗಲ್ ಪ್ರದೇಶವು ಮೈಸೂರಿನ ಒಡೆಯರ ಆಡಳಿತಕ್ಕೆ ಒಳಪಟ್ಟಿದ್ದು ಶಾಸನಗಳಲ್ಲಿ ಕುಣಿಗಲ್ ಹೋಬಳಿಯ ಕೇಂದ್ರವಾಗಿ ಕಂಡುಬಂದಿದ್ದು ಸತತ ಸಂಬಂಧ ಹೊಂದಿರುವುದು ತಿಳಿದುಬರುತ್ತದೆ.

ಕ್ರಿ.ಶ. ೧೬೪೦ರಲ್ಲಿ ಬಿಜಾಪುರದ ಅಫಝುಲ್‌ಖಾನನ ನೇತೃತ್ವದ ಸೈನ್ಯ ಹಾಗೂ ಮೈಸೂರಿನ ಕಂಠೀರವ ನರಸರಾಜ ಒಡೆಯರ ಸೈನ್ಯಗಳ ನಡುವೆ ಹುಲಿಯೂರು ದುರ್ಗದಲ್ಲಿ ಘೋರ ಯುದ್ಧವಾಗಿ ಬಿಜಾಪುರ ಸೈನ್ಯ ಸೋತು ಹಿಂದಕ್ಕೆ ಸರಿಯಿತು. ಕ್ರಿ.ಶ. ೧೬೬೭ರಲ್ಲಿ ದೇವರಾಜ ಒಡೆಯರು ಹುಲಿಯೂರುದುರ್ಗ ಕೋಟೆಯನ್ನು ವಶಪಡಿಸಿಕೊಂಡರು.[೬೬]

ಮರಾಠರು ಮೈಸೂರು ಸಂಸ್ಥಾನವನ್ನು ದೃಷ್ಟಿಯಲ್ಲಿಟ್ಟುಕೊಂಡು ದಾಳಿ ಮಾಡಲು ಬಂದಾಗ ದಾಳಿಯ ಸಂದರ್ಭದಲ್ಲಿ ಒಡೆಯರಿಗೆ ಸೇರಿದ ಪ್ರದೇಶಗಳನ್ನು ಆಕ್ರಮಣ ಮಾಡಿದರು. ಕ್ರಿ.ಶ. ೧೭೫೭ ರಲ್ಲಿ ಮರಾಠಪೇಶ್ವೆ ಬಾಲಾಜಿರಾಯನು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿ ಗುಂಡು ಹೊಡೆದಾಗ ಶ್ರೀರಂಗ ದೇವಾಲಯದ ಚಿನ್ನದ ಕಳಶ ನಾಶವಾಯಿತು. ಇದರಿಂದ ಭಯಗೊಂಡ ಒಡೆಯರಿಗೆ ನಂಜರಾಜರು ಮರಾಠರೊಂದಿಗೆ ಒಪ್ಪಂದ ಸೂಚಿಸಿದರು. ನಂಜರಾಜನು ಮರಾಠರಲ್ಲಿ ಶಾಂತಿ ಒಪ್ಪಂದ ಮಾಡಿಕೊಂಡಾಗ

೩೨ ಲಕ್ಷ ಹಣ ಕೊಡಬೇಕಾಗಿ ಬಂತು ಆದರೆ ಖಜಾನೆಯಲ್ಲಿ ಹಣವಿರಲಿಲ್ಲ ಇದಕ್ಕೆ ಬದಲಾಗಿ ಸಂಸ್ಥಾನದ ಅನೇಕ ಪ್ರದೇಶಗಳು ಮರಾಠರ ವಶವಾದವು (ಅವುಗಳಲ್ಲಿ ಹುತ್ರಿದುರ್ಗ ಮತ್ತು ಹುಲಿಯೂರುದುರ್ಗಾ ಸೇರಿಕೊಂಡಿದ್ದವು). ಇದೇ ಸಂದರ್ಭದಲ್ಲಿ ದಿಂಡುಗಲ್ಲಿನ ಪೌಜುದಾರನಾಗಿದ್ದ ಹೈದರಾಲಿಯನ್ನು ಕರೆಸಿದರು. ಹೈದರಾಲಿ ಕ್ರಿ.ಶ. ೧೭೫೯ರಲ್ಲಿ ಮರಾಠರನ್ನು ಸೋಲಿಸಿ ಅವರಿಂದ ವಶವಾದ ಪ್ರದೇಶಗಳನ್ನು ಗೆದ್ದುಕೊಂಡನು.[೬೭] ಈ ಯುದ್ಧದ ನಂತರ ಹೈದರಾಲಿಯು ಮೈಸೂರು ಒಡೆಯರನ್ನು ಪಕ್ಕಕ್ಕೆ ತಳ್ಳಿ ತಾನೇ ಆಡಳಿತದ ಚುಕ್ಕಾಣಿ ಹಿಡಿಯುತ್ತಾನೆ.

ಎರಡನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಹೈದರಾಲಿ ಸಾವನಪ್ಪುತ್ತಾನೆ. ಆನಂತರ ಅವನ ಮಗ ಟಿಪ್ಪುಸುಲ್ತಾನನು ಅಧಿಕಾರ ವಹಿಸಿಕೊಳ್ಳುತ್ತಾನೆ. ತನ್ನ ಆಡಳಿತದ ಅವಧಿಯಲ್ಲಿ ಬ್ರಿಟೀಷರನ್ನು ಭಾರತದಿಂದ ಓಡಿಸಬೇಕು ಎಂಬ ಸಂಕಲ್ಪದಿಂದ ತನ್ನ ಸೈನ್ಯಕ್ಕೆ ಫ್ರೆಂಚ್ ಮಾದರಿ ಸೈನ್ಯ ತರಬೇತಿ ಕೊಡಿಸುತ್ತಾನೆ. ಇದೇ ವೇಳೆಯಲ್ಲಿ ಕುಣಿಗಲ್ ಪಟ್ಟಣದಲ್ಲಿ ೫೦೦ ಎಕರೆ ವಿಸ್ತೀರ್ಣದಲ್ಲಿ ಕುದುರೆ ತಳಿ ಸಂವರ್ಧನ ಕೇಂದ್ರವನ್ನು ಸ್ಥಾಪಿಸಿ ತನ್ನ ಸೈನಿಕರಿಗೆ ಯುದ್ಧ ತರಬೇತಿ ಹಾಗೂ ಸೈನ್ಯಕ್ಕೆ ಬೇಕಾದ ಕುದುರೆಗಳನ್ನು ಬಳಸಿಕೊಂಡು ಯಶಸ್ವಿಯಾಗುತ್ತಾನೆ.[೬೮] ಎಡೆಯೂರು ಸಿದ್ಧಲಿಂಗೇಶ್ವರ ದೇವಾಲಯಕ್ಕೆ ಘಂಟೆಗಳನ್ನು ದಾನವಾಗಿ ನೀಡಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಇದರಿಂದ ಅವನಲ್ಲಿದ್ದ ಅನ್ಯ ಧರ್ಮಸಹಿಷ್ಣುತೆಯ ಕಾಳಜಿಯನ್ನು ಎತ್ತಿ ತೋರಿಸುತ್ತದೆ.[೬೯]

ಟಿಪ್ಪುಸುಲ್ತಾನನು ಮೂರು ಮತ್ತು ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧ ಮಾಡಿ ಬ್ರಿಟೀಷರ ಪಿತೂರಿಯಿಂದ ಸೋಲನ್ನಪ್ಪುತ್ತಾನೆ. ಇದಾದ ನಂತರ ಮೈಸೂರು ಸಂಸ್ಥಾನವನ್ನು ಬ್ರಿಟೀಷರು ಅಧೀನಕ್ಕೆ ತೆಗೆದುಕೊಂಡು ಕೆಲವು ನಿಬಂಧ ಮತ್ತು ಷರತ್ತಿನ ಮೇಲೆ ಮತ್ತೆ ಮೈಸೂರು ಒಡೆಯರಿಗೆ ಹಿಂತಿರುಗಿಸುತ್ತಾರೆ. ಹೀಗೆ ಕುಣಿಗಲ್ ಪಟ್ಟಣವು ಪ್ರಾರಂಭದ ಕಾಲಘಟ್ಟದಿಂದ ಹಿಡಿದು ಮೈಸೂರು ಒಡೆಯರ ತನಕ ನಿಕಟ ಸಂಪರ್ಕ ಕಾಯ್ದುಕೊಂಡಿತ್ತೆಂಬುದು ಈ ಮೇಲ್ಕಂಡ ಅಂಶಗಳಿಂದ ಸ್ಪಷ್ಟವಾಗುತ್ತದೆ.

ಅಡಿಟಿಪ್ಪಣಿಗಳು

೦೧. ಕುಣಿಗಲ್ ತಾಲೂಕಿನ ವಾರ್ಷಿಕ ಅಂಕಿ-ಅಂಶ ವರದಿ, ೨೦೧೦-೧೧

೦೨. ರೈಸ್. ಬಿ. ಎಲ್., ಮೈಸೂರು ಗೆಜೆಟಿಯರ್, ಸಂಪುಟ-೨, ಪು.೧೫೫

೦೩. ಕುಣಿಗಲ್ ತಾಲೂಕಿನ ವಾರ್ಷಿಕ ಅಂಕಿ-ಅಂಶ ವರದಿ ೨೦೧೧

೦೪. ಅದೇ.

೦೫. ಮುನಿರಾಜಪ್ಪ, ಮಾಗಡಿ ಸೀಮೆ ಇತಿಹಾಸ ಮತ್ತು ಸಂಸ್ಕೃತಿ, ೨೦೦೫, ಪು.೮೮

೦೬. ರೈಸ್. ಬಿ. ಎಲ್., ಪೂರ್ವೋಕ್ತ, ಪು.೧೮೪

೦೭. ಮುದ್ದವೀರಪ್ಪ ಕೆ. ಪಿ., ತುಮಕೂರು ಜಿಲ್ಲೆಯ ಕೋಟೆ-ಕೊತ್ತಲಗಳ ಜಾನಪದೀಯ ಅಧ್ಯಯನ, (ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೪, ಪು.೧೨೬

೦೮. ರೈಸ್. ಬಿ. ಎಲ್ (ಸಂ.)., ತುಮಕೂರು ಜಿಲ್ಲೆಯ ಶಾಸನ ಸಂಪುಟ-೨೪, ಕುಣಿಗಲ್-೫ ಮತ್ತು ಕುಣಿಗಲ್-೭೮, ಪು.೧೯೦-೨೩೩

೦೯. ಹಯವದನರಾವ್ ಸಿ., ಮೈಸೂರು ಗೆಜೆಟಿಯರ್, ಸಂಪುಟ ೫, ಪು.೫೦೦

೧೦. ಶಿವತಾರಕ್ ಕೆ. ಬಿ., ತುಮಕೂರು ಜಿಲ್ಲೆಯ ಪ್ರಾಗಿತಿಹಾಸಿಕ ಕುರುಹುಗಳು-ಒಂದು ಸಾಂಸ್ಕೃತಿಕ ಅಧ್ಯಯನ, (ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ., ೧೯೯೯, ಪು.೨೩

೧೧. ಮಹಾಂತೇಶ ಎನ್. ಎಸ್., ಹೊಸದುರ್ಗ ಪರಿಸರದ ಸಾಂಸ್ಕೃತಿಕ ಅಧ್ಯಯನ, (ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ., ೨೦೧೨, ಪು.೨೦

೧೨. ರೈಸ್. ಬಿ. ಎಲ್ (ಸಂ.)., ತುಮಕೂರು ಜಿಲ್ಲೆಯ ಶಾಸನ ಸಂಪುಟ-೨೪, ಕು-೧೧ ಪು.೧೯೪

೧೩. ಅದೇ., ಕು-೧೪, ಪು.೧೯೫

೧೪. ಅದೇ., ಕು-೯, ಪು.೧೯೩

೧೫. ಅದೇ., ಕು-೨೭, ಪು.೨೦೪

೧೬. ಅದೇ., ಕು-೫೬, ಪು.೨೨೪

೧೭. ಅದೇ., ಕು-೪೩, ಪು.೨೧೮

೧೮. ಅದೇ., ಕು-೪೫, ಪು.೨೧೯

೧೯. ಜಯರಾಮಯ್ಯ ಜೆ. ಟಿ., 'ಕುಣಿಗಲ್‌ನಾಡು', ಇತಿಹಾಸ ದರ್ಶನ, ಸಂಪುಟ ೮, ೧೯೯೩, ಪು.೧೪೩

೨೦. ಲಿಪಿಜೋಗಿ., ಕುಣಿಗಲ್ ಐತಿಹಾಸಿಕ ಕಥೆಗಳು, ಪು.೧೦೩

೨೧. ಅದೇ., ಪು.೧೦೪

೨೨. ಅದೇ., ಪು.೧೦೫

೨೩. ಅದೇ., ಪು.೧೦೯

೨೪. ಅದೇ., ಪು.೧೧೦

೨೫. ಶಿವತಾರಕ್ ಕೆ. ಜಿ., ತುಮಕೂರು ಜಿಲ್ಲೆಯ ಪ್ರಾಗಿತಿಹಾಸಿಕ ಕುರುಹುಗಳು- ಒಂದು ಸಾಂಸ್ಕೃತಿಕ ಅಧ್ಯಯನ, (ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ., ೧೯೯೯, ಪು.೧೦

೨೬. ಅದೇ., ಪು.೧೧

೨೭. ಅದೇ., ಪು.೫೪

೨೮. ಅದೇ., ಪು.೫೪

೨೯. ಅದೇ., ಪು.೫೪

೩೦. ಅದೇ., ಪು.೧೬

೩೧. ಅದೇ., ಪು.೧೮

೩೨. ಅದೇ., ಪು.೧೮

೩೩. ಅದೇ., ಪು.೨೦

೩೪. ಕ್ಷೇತ್ರಕಾರ್ಯದಲ್ಲಿ ಬೆಳಕಿಗೆ ಬಂದಿರುವ ನೆಲೆಯಾಗಿದೆ.

೩೫. ಮುದ್ದವೀರಪ್ಪ ಕೆ. ವಿ., ಪೂರ್ವೋಕ್ತ, ಪು.೮೨

೩೬. ಮುನಿರಾಜಪ್ಪ., ಪೂರ್ವೋಕ್ತ, ಪು.೨೦

೩೭. ಅದೇ., ಪು.೨೧

೩೮. ಅದೇ., ಪು.೨೨

೩೯. ಅದೇ., ಪು.೨೨

೪೦. ಅದೇ., ಪು.೨೩

೪೧. ಅದೇ., ಪು.೨೩

೪೨. ಜಯರಾಮಯ್ಯ ಜಿ.ಟಿ., 'ಕುಣಿಗಲ್‌ನಾಡು', ನಂಜುಂಡಸ್ವಾಮಿ ಬಿ., (ಸಂ.), ಕಲ್ಪಸಿರಿ, ೨೦೦೨, ಪು.೩೨೩

೪೩. ಸುಶ್ಮಾ ಎಚ್., 'ತುಮಕೂರು ಜಿಲ್ಲೆಯ ಎರಡು ಚೋಳ ಶಾಸನಗಳು', ಗೋಪಾಲ್ ಆರ್. (ಸಂ.)., ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ೨೦೦೯, ಪು.೧೧೨

೪೪. ಅದೇ., ಪು.೧೧೨

೪೫. ಅದೇ., ಪು.೧೧೩

೪೬. ಅದೇ., ಪು.೧೧೪

೪೭. ರೈಸ್. ಬಿ.ಎಲ್ (ಸಂ.)., ತುಮಕೂರು ಜಿಲ್ಲೆಯ ಶಾಸನ ಸಂಪುಟ-೨೪, ಕು-೧೧, ಪು.೯೪

೪೮. ಅದೇ., ಕು-೨೬, ಪು-೨೦೦

೪೯. ಜಯರಾಮಯ್ಯ ಜಿ. ಟಿ., ಪೂರ್ವೋಕ್ತ, ಪು-೩೨೩-೩೨೪

೫೦. ಕೃಷ್ಣಮೂರ್ತಿ ಪಿ.ಪಿ., 'ತುಮಕೂರು ಜಿಲ್ಲಾ ಪ್ರದೇಶದ ಪ್ರಾಚೀನ ಆಡಳಿತ ಘಟಕಗಳು', ಗೋಪಾಲ್ ಆರ್. (ಸಂ.)., ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ೨೦೦೯, ಪು.೪೧೯

೫೧. ಅದೇ., ಕು-೧೮, ಪು.೯೭

೫೨. ಅದೇ., ಕು-೮೭, ಪು.೨೫೪

೫೩. ಅದೇ., ಕು-೫, ಪು.೧೯೦

೫೪. ಅದೇ., ಕು-೧೨, ಪು.೧೯೪

೫೫. ಅದೇ., ಕು-೩೦, ಪು.೨೦೬

೫೬. ಅದೇ., ಕು-೩೮, ಪು.೨೧೨

೫೭. ಅದೇ., ಕು-೬, ಪು.೧೯೧

೫೮. ಅದೇ., ಕು-೩೫, ಪು.೨೦೯

೫೯. ಅದೇ., ಕು-೮೫, ಪು.೨೩೫

೬೦. ಅದೇ., ಕು-೪೦, ಪು.೨೧೬

೬೧. ಇತಿಹಾಸ ದರ್ಶನ, ಸಂಪುಟ-೫, ಹೆಬ್ಬೂರು, ೨೦೦೦

೬೨. ರೈಸ್. ಬಿ.ಎಲ್., ಪೂರ್ವೋಕ್ತ, ಕು-೨೫, ಪು.೧೯೯

೬೩. ಅದೇ., ಕು-೧೬, ಪು.೧೯೬

೬೪. ಅದೇ., ಕು-೮೧, ಕು-೮೨, ಪು.೨೩೪

೬೫. ಅದೇ., ಕು-೯೪, ಪು.೨೫೭

೬೬. ಗೋಪಾಲ್ ಆರ್. (ಸಂ.)., ಪೂರ್ವೋಕ್ತ, ಪು.೨೪೫

೬೭. ಮುದ್ದವೀರಪ್ಪ ಕೆ.ವಿ., ಪೂರ್ವೋಕ್ತ, ಪು.೧೨೭-೧೨೮

೬೮. ಹಯವದನರಾವ್ ಸಿ., ಪೂರ್ವೋಕ್ತ, ಪು.೫೦೨

೬೯. ರೈಸ್. ಬಿ.ಎಲ್., ಪೂರ್ವೋಕ್ತ, ಕು-೭೪ ಮತ್ತು ೭೫, ಪು.೨೩೧

□□□

-☸-

ಅಧ್ಯಾಯ : ಮೂರು

ದೇವಾಲಯ ಮತ್ತು ಮೂರ್ತಿಶಿಲ್ಪಗಳು

ಮಾನವ ಮತ್ತು ಪ್ರಕೃತಿ ಬೇರ್ಪಡಿಸಲಾಗದ ಅವಿನಾಭಾವ ಸಂಬಂಧವನ್ನು ಹೊಂದಿದ್ದು, ಮಾನವನು ಪ್ರಕೃತಿಯ ಒಂದು ಭಾಗವಾಗಿದ್ದಾನೆ. ಪ್ರಾಚೀನ ಕಾಲದಲ್ಲಿ ಮಾನವನು ತನ್ನ ಇರುವಿಕೆಗಾಗಿ ನಿರಂತರವಾಗಿ ಪ್ರಕೃತಿಯೊಡನೆ ಸೆಣಸಾಡಬೇಕಿತ್ತು. ಆಹಾರಕ್ಕಾಗಿ ಅಲೆಯುವಾಗ ಪ್ರಾಣಿಗಳನ್ನು ಎದುರಿಸಿಕೊಳ್ಳಲು ಸದಾ ಜಾಗರೂಕನಾಗಿರುವಂತೆ ಮಾಡಿತ್ತು. ಇದರ ಜೊತೆಗೆ ಪ್ರಕೃತಿ ಅವನಲ್ಲಿ ಭಯ ಮತ್ತು ಆಶ್ಚರ್ಯ, ವಿಸ್ಮಯಗಳನ್ನು ಉಂಟುಮಾಡಿತು. ಮಳೆ, ಗಾಳಿ, ಗುಡುಗು, ಸಿಡಿಲುಗಳು, ಹುಟ್ಟು ಸಾವುಗಳು ನಿಸರ್ಗ ನಿಯಮಗಳೇ ಎಂಬುದನ್ನು ಅರಿಯದ ಕಾರಣ ಅವನಲ್ಲಿ ಭೀತಿಯನ್ನು ಮೂಡಿಸಿದವು, ಹಾಗಾಗಿ ನಿಸರ್ಗದಲ್ಲಿ ಮನುಷ್ಯ ಶಕ್ತಿಗಿಂತಲೂ ಮಿಗಿಲಾದ ಅದ್ಭುತ ಶಕ್ತಿ (ದೇವರು) ಇದೆ ಎಂದು ನಂಬಿದನು. ನಿಸರ್ಗದ ಆ ಅದ್ಭುತ ಶಕ್ತಿಯ ರಹಸ್ಯವನ್ನು ಅರಿಯುವ ಕುತೂಹಲ ಉಂಟಾಯಿತು. ಇದಕ್ಕಾಗಿ ನಿಸರ್ಗ ಶಕ್ತಿಗಳನ್ನು ಪವಿತ್ರ ಪೂಜಾರ್ಹ ಎಂದು ನಂಬಿದನ್ನು, ಶಕ್ತಿಯನ್ನು ಒಲಿಸಿಕೊಳ್ಳಬೇಕಾದರೆ ಅದನ್ನು ಆರಾಧಿಸಬೇಕು, ತಾನು ಸಾಧಿಸಬೇಕಾದ ಕಾರ್ಯಗಳಿಗೆ ಇಂತಹ ಶಕ್ತಿಯ ಬೆಂಬಲ ಆಶೀರ್ವಾದ ಅವಶ್ಯವೆಂದು ಭಾವಿಸಿದ, ಆದುದರಿಂದ ಆ ಶಕ್ತಿಗೆ ಒಂದು ರೂಪ ನೀಡಿ ಅದನ್ನು ಚಿತ್ರಿಸಿ, ಪ್ರತಿಮೆಯನ್ನಾಗಿಸಿ ಪೂಜಿಸುವ ಪದ್ಧತಿಯನ್ನು ರೂಢಿಗೆ ತಂದನು. ತನ್ನ ಕಲ್ಪನೆಯ ಕುಂಚದಿಂದ ಚಿತ್ರವೊಂದನ್ನು ರೇಖಿಸಿ ಅದಕ್ಕೆ ಶಕ್ತ ಆಭರಣ ತೊಡಿಸಿ ಇಡೀ ಚಿತ್ರದ ಸುತ್ತಲೂ ಒಂದು ಮಂಡಲವನ್ನು ಎಳೆದು ಅದು ಪವಿತ್ರವೆಂದು ಭಾವಿಸಿದನು. ಕಾಲಾನಂತರ ಇಂತಹ ಚಿತ್ರಗಳಿಗೆ ಬದಲಾಗಿ ಪ್ರತಿಮೆಯನ್ನು ಮಾಡಿ ಅವುಗಳಿಗೆ ಪ್ರತ್ಯೇಕ ಸ್ಥಳದಲ್ಲಿಟ್ಟು ಸುತ್ತಲೂ ರಕ್ಷಣೆಯ ಗೋಡೆ ನಿರ್ಮಿಸಿ ಪೂಜಿಸತೊಡಗಿದನು. ಈ ರೀತಿಯಾಗಿ ಬೆಳವಣಿಗೆಯಾದ ಕಲೆ ಮತ್ತು ವಾಸ್ತು ಶಿಲ್ಪ, ದೇವಾಲಯಗಳ ನಿರ್ಮಾಣಕ್ಕೆ ನಾಂದಿಯಾಯಿತು. ಕಲೆಯ ವಿಕಾಸಕ್ಕೆ ಪ್ರೇರಣೆಯಾಯಿತು.

ವಾಸ್ತು ಶಿಲ್ಪವನ್ನು ಕುರಿತು ಅನೇಕ ಪ್ರಾಚೀನ ಶಾಸ್ತ್ರಗ್ರಂಥಗಳು ಹಾಗೂ ವಿದ್ವಾಂಸರು ಅನೇಕ ವಿಚಾರಧಾರೆಗಳನ್ನೂ ಹರಿಸಿದ್ದಾರೆ, ಅಂತಹವುಗಳಲ್ಲಿ ಮುಖ್ಯವಾಗಿ ಬೃಹತ್‌ಸಂಹಿತೆ, ಮಾನಸಾರ, ಮಾಯಮತ, ಸಮರಾಂಗಣ ಸೂತ್ರದಾರ, ಕಾಶ್ಯಪಶಿಲ್ಪ, ಅಗಸ್ತ್ಯ ಸಕಲಾಧಿಕಾರ, ಅಪರಾಚಿತ ಪುಚ್ಛಾ, ಪ್ರಸಾದ ಮಂಡನ, ರೂಪಮಂನ, ಅಭಿಲಾಷಿತಾರ್ಥ ಚಿಂತಾಮಣಿ ಮತ್ತು ತಂತ್ರ ಸಮುಚ್ಚಯ.[೧]

ದೇವಾಲಯ ನಿರ್ಮಾಣವು ಇಡೀ ಸಮಾಜದ ಧಾರ್ಮಿಕ ಶ್ರದ್ದೆಯ ಹಾಗೂ ಭಕ್ತಿಯ ಪ್ರತೀಕವೆನಿಸಿದ್ದು, ಆಯಾಯಾ ಧಾರ್ಮಿಕ ಮತಗಳಿಗೆ ಅನುಗುಣವಾಗಿ ಈ ಪೂಜಾಸ್ಥಾನಗಳು ಬೇರೆ ಬೇರೆ ಹೆಸರಿನಿಂದ ಕರೆಯಲ್ಪಟ್ಟವು ಅಂದರೆ ಹಿಂದೂಗಳು ದೇವಾಲಯ ಎಂದೂ ಕರೆದರೆ, ಜೈನರು 'ಬಸದಿ' ಎಂದೂ, ಬೌದ್ದರು ಚೈತ್ಯವೆಂದೂ, ಮುಸಲ್ಮಾನರು–ಮಸೀದಿಗಳೆಂದು ಮತ್ತು ಕ್ರಿಶ್ಚಿಯನ್ನರು ಚರ್ಚ್‌ಗಳೆಂದು ಕರೆದರು.[೨]

ಕುಣಿಗಲ್ ಪಟ್ಟಣದ ದೇವಾಲಯಗಳು

ಕುಣಿಗಲ್ ಪಟ್ಟಣವು ಒಂದು ಸಾಂಸ್ಕೃತಿಕ ಕೇಂದ್ರವಾಗಿ ಬಿಂಬಿತವಾಗಿದ್ದು ಎಲ್ಲಾ ಮತ–ಧರ್ಮಗಳ ಆಚರಣೆಗೂ ಮನ್ನಣೆ ದೊರೆತಿದೆ. ತಲಕಾಡಿನ ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ಚೋಳರು, ವಿಜಯನಗರ ಅರಸರು, ಮೈಸೂರು ಒಡೆಯರು ಮತ್ತು ಪಾಳೆಗಾರರ ಅವಧಿಯಲ್ಲಿ ದೇವಾಲಯಗಳು ನಿರ್ಮಾಣವಾಗಿರುವುದನ್ನು ಕಾಣಬಹುದು. ಕುಣಿಗಲ್ ಪಟ್ಟಣದಲ್ಲಿ ಪ್ರಮುಖವಾಗಿ ಶೈವ, ವೈಷ್ಣವ, ಶಾಕ್ತ ಮತ್ತು ಜೈನ ದೇವಾಲಯಗಳು ಇವೆ. ಈ ದೇವಾಲಯಗಳು ಹಂತ–ಹಂತವಾಗಿ ನಿರ್ಮಾಣವಾಗಿ ಜೀರ್ಣೋದ್ಧಾರಕ್ಕೆ ಒಳಗಾಗಿದೆ.

೩.೧. ಶೈವ ದೇವಾಲಯಗಳು

ಧರ್ಮಗಳಲ್ಲಿಯೇ ಪ್ರಾಚೀನವಾದುದು ಮತ್ತು ಭಾರತದಲ್ಲಿ ಹೆಚ್ಚು ವ್ಯಾಪಕಗೊಂಡ ಧರ್ಮವೆಂದರೆ ಅದು ಶೈವ ಧರ್ಮ (ಪಂಥ) ಶೈವ ಧರ್ಮದ ಮೂಲ ಮತ್ತು ಅದು ಬೆಳೆದು ಬಂದ ಬಗೆ ಇನ್ನು ಅಸ್ಪಷ್ಟವಾಗಿದೆ. ಶೈವ ಧರ್ಮಕ್ಕೆ ೨೮ ಆಗಮಗಳು ಇದ್ದು ಇವುಗಳನ್ನು ಶೈವಾಗಮಗಳೆಂದು ಕರೆಲಾಗಿದೆ. ಶೈವಾಗಮದ ಕರ್ತೃ ಶಿವನಾಗಿದ್ದಾನೆ, ಶೈವರು ಪರಬ್ರಹ್ಮ ವಸ್ತುವನ್ನು ಶಿವ, ರುದ್ರ ಎಂದು ಪೂಜಿಸುತ್ತಾರೆ. ಶೃತಿ, ಸ್ಮೃತಿಗಳಲ್ಲಿ ಇದಕ್ಕೆ ಆಧಾರವಿದೆ. ಶೈವ ಮತದಲ್ಲಿ ದ್ವೈತ ಪಾಶುಪತ, ದ್ವೈತ ಶೈವ ಸಿದ್ಧಾಂತ, ದ್ವೈತಾದ್ವೈತಲರು ಲೀಶ ಪಾಶುಪತ, ವಿಶಿಷ್ಟಾದ್ವೈತ ಶೈವ ಮತ್ತು ವಿಶೇಷಾ ದ್ವೈತ ಶೈವ (ವೀರಶೈವ), ನಂದಿಕೇಶ್ವರ ಶೈವ, ರಸೇಶ್ವರ ಶೈವ ಮತ್ತು ಕಾಶ್ಮೀರ ಶೈವ ಎಂಬ ೮ ಪ್ರಬೇದಗಳಿವೆ.[೩] ಕನ್ನಡ ನಾಡಿನ ರಾಜರೂ, ಸಾಮಂತ ಮನೆತನದವರು, ಜನಸಾಮಾನ್ಯರು ಶೈವ ಧರ್ಮದ ಪುರಸ್ಕೃತರಾಗಿದ್ದಾರೆ.

ಕುಣಿಗಲ್ ಪಟ್ಟಣದಲ್ಲಿ ಕಂಡುಬರುವ ಶೈವದೇವಾಲಯಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಸ್ಥಳ	:	**ಶಿವರಾಮೇಶ್ವರ ದೇವಾಲಯದ ಮುಂಭಾಗ**
ಸ್ಮಾರಕದ ಹೆಸರು	:	**ಪದ್ಮೇಶ್ವರ**
ಅಭಿಮುಖ	:	**ಪೂರ್ವ**
ಕಾಲಮಾನ	:	**ಕ್ರಿ.ಶ. ಸುಮಾರು ೧೦–೧೧ನೇ ಶತಮಾನ**
ಸ್ಥಿತಿ	:	**ಮಧ್ಯಮ (ರಾಜ್ಯ ಪುರಾತತ್ವ ಇಲಾಖೆಗೆ ಒಳಪಟ್ಟಿದೆ)**

ಪದ್ಮೇಶ್ವರ ದೇವಾಲಯವು ಪೂರ್ವಭಿಮುಖವಾಗಿದ್ದು ಕುಣಿಗಲ್ ಪಟ್ಟಣದಲ್ಲಿಯೇ ಅತೀ ಪ್ರಾಚೀನವಾದ ದೇವಾಲಯವಾಗಿದ್ದು ಯಾವುದೇ ಶಾಸನ ಕಂಡುಬಂದಿಲ್ಲ. ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದ್ದು, ಮೂಲ ಗರ್ಭಗೃಹದಲ್ಲಿ ಶಿವಲಿಂಗವನ್ನು ಮತ್ತು ಅಂತರಾಳದ ಬಲಭಾಗದಲ್ಲಿ ಗಣಪತಿ, ಎಡಭಾಗದಲ್ಲಿ ಪಾರ್ವತಿಯನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗಕ್ಕೆ ಪೂರ್ವ ಮತ್ತು ದಕ್ಷಿಣ ಪ್ರವೇಶದ್ವಾರವಿದ್ದು ನವರಂಗದಲ್ಲಿ (ಸಭಾಮಂಟಪ) ೧೬ ಕಂಬಗಳನ್ನು ಕಾಣಬಹುದಾಗಿದ್ದು, ನವರಂಗದ ನಾಲ್ಕು ಕಂಬಗಳನ್ನು ಬಿಟ್ಟು ಉಳಿದ ೧೨ ಕಂಬಗಳು ಅರ್ಧಕಂಬಗಳಾಗಿದ್ದು ಭಿತ್ತಿಗೆ ಸೇರಿಕೊಂಡಿವೆ. (ನವರಂಗದ ಛಾವಣಿಯಲ್ಲಿ ಭುವನೇಶ್ವರಿ ಹಾಗೂ ಪ್ರತಿ ಅಂಕಣಗಳಲ್ಲಿಯೂ ಕಮಲದ ಅಲಂಕರಣೆ ಇದ್ದು ನೋಡಲು ಆಕರ್ಷಕವಾಗಿದೆ.

ನವರಂಗದ ಕಂಬಗಳು ೫ ಅಡಿ ಎತ್ತರವಾಗಿದೆ. ಇವುಗಳು ಪೀಠ ಮತ್ತು ಪಾದ ಭಾಗಗಳು ಚೌಕಕಾರದಲ್ಲಿವೆ. ದಂಡ ಭಾಗದಲ್ಲಿ ಅಷ್ಟಮುಖಗಳಿದ್ದು ತಟ್ಟೆ ಆಕಾರದ ರಚನೆಯ ಮೇಲೆ ೧೬ ಮುಖದ ಪಟ್ಟಿಕೆಗಳು, ಹೊಂದಿದ್ದು ಒಟ್ಟಾರೆ ಕಂಬಗಳು ಪೀಠ, ಪಾದ, ಘಟ, ಫಲಕ ಮತ್ತು ಬೋದಿಗೆಯನ್ನು ಹೊಂದಿವೆ. ವಿಶಾಲವಾದ ನವರಂಗವಿದ್ದು ಮೇಲ್ಛಾವಣಿಯಲ್ಲಿ ಪದ್ಮದ ಕೆತ್ತನೆಯಿರುವ ೯ ಭುವನೇಶ್ವರಿಗಳನ್ನು ಕಾಣಬಹುದಾಗಿದೆ. ಇದೇ ಕೆತ್ತನೆಗಳು ಗರ್ಭಗೃಹ ಮತ್ತು ಅಂತರಾಳದ ಮೇಲ್ಚಾವಣಿಯಲ್ಲಿ ಕಂಡುಬಂದಿದ್ದು ವಿಶೇಷವಾಗಿದೆ. ನವರಂಗದ ಬಾಗಿಲುವಾಡವು ಮೂರು ಶಾಖೆಗಳಿಂದ ಕೂಡಿದ್ದು ವಿಶೇಷ ಕೆತ್ತನೆಯಿಂದ ಕೂಡಿದೆ. ಮುಖ್ಯದ್ವಾರವು ಸಾಧಾರಣವಾಗಿದೆ. ಈ ದೇವಾಲಯವನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಿದ್ದು ಅಧಿಷ್ಠಾನ, ಭಿತ್ತಿ, ಗ್ರೀವ, ಶಿಖರ ಮತ್ತು ಸ್ತೂಪಿಯನ್ನು ಹೊಂದಿದೆ. ಭಿತ್ತಿಯಲ್ಲಿ, ಕೋಷ್ಟಕಂಬ, ದೇವಕೋಷ್ಟಕ ಮತ್ತು ಉಬ್ಬುಕಂಬ ಕಾಣಬಹುದಾಗಿದೆ. ಶಿಖರವು ದ್ರಾವಿಡ ಶೈಲಿಯನ್ನು ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಿರುವುದು ಕಂಡುಬರುತ್ತದೆ. ಈ ದೇವಾಲಯದ ಸಂರಕ್ಷಣೆಯ ಜವಾಬ್ದಾರಿಯನ್ನು ರಾಜ್ಯ ಪುರಾತತ್ವ ಇಲಾಖೆ ವಹಿಸಿಕೊಂಡಿದೆ.

ಸ್ಥಳ	:	**ದೊಡ್ಡ ಕೆರೆ ಏರಿಯ ಮೇಲೆ**
ಸ್ಮಾರಕದ ಹೆಸರು	:	**ಚಂದ್ರಮೌಳೇಶ್ವರ**
ಅಭಿಮುಖ	:	**ಉತ್ತರ**
ಕಾಲಮಾನ	:	**ಕ್ರಿ.ಶ. ೧೩–೧೪ನೇ ಶತಮಾನ**
ಸ್ಥಿತಿ	:	**ಉತ್ತಮ**

ಚಂದ್ರಮಾಳೇಶ್ವರ ದೇವಾಲಯವು ನಿರ್ಮಾಣ ಹೊಂದಿದ ಶೈವ ದೇವಾಲಯವಾಗಿದ್ದು, ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಮತ್ತು ಮುಖಮಂಟಪವನ್ನು ಹೊಂದಿದ್ದು ಏಕಕೂಟ ದೇವಾಲಯವಾಗಿದೆ. ಮೂಲ ಗರ್ಭಗೃಹದಿಂದ ೧ ½ ಅಡಿ ಎತ್ತರದ ಶಿವಲಿಂಗವನ್ನು ಪಾಣಿಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಸ್ವಲ್ಪ ಅಂತರದ ಎಡ ಮತ್ತು ಬಲಭಾಗದಲ್ಲಿ ಶೈವ ಪರಿವಾರದ ಮೂರ್ತಿಗಳನ್ನು ಕಾಣಬಹುದು. ಎಡಭಾಗಕ್ಕೆ ಅಂಬಾಭವಾನಿ, ಬಲಭಾಗಕ್ಕೆ ಗಣಪತಿಯನ್ನು ನೋಡಬಹುದು. ಅಂತರಾಳದಲ್ಲಿ ಶಿವಲಿಂಗಕ್ಕೆ ಎದುರಾಗಿ ನಂದಿಯನ್ನು ಇಡಲಾಗಿದೆ.

ಅಂತರಾಳದ ಬಾಗಿಲ ವಾಡವು ಸಾಧಾರಣ ಶಾಖೆಯನ್ನು ಹೊಂದಿದ್ದು ಪಾದದಲ್ಲಿ ಶೈವ

ದ್ವಾರಪಾಲಕರಿದ್ದಾರೆ. ಲಲಾಟಬಿಂಬದಲ್ಲಿ ಶಿವಲಿಂಗ ಕಂಡುಬರುತ್ತದೆ. ದೇವಾಲಯದ ಮುಖಮಂಟಪವು ನಾಲ್ಕು ಕಂಬಗಳಿಂದ ಕೂಡಿದ್ದು ಕಂಬಗಳು ಪೀಠ, ಕಾಂಡ ಮತ್ತು ಬೋದಿಗೆಯಿಂದ ಕೂಡಿವೆ. ಕಂಬಗಳಲ್ಲಿ ಯಾಳಿ, ಪದ್ಮ, ಚಕ್ರದ ಚಿತ್ರಗಳನ್ನು ಕಾಣಬಹುದು. ಮುಖಮಂಟಪಕ್ಕೆ ಕೈಪಿಡಿಯ ಪ್ರವೇಶ ದ್ವಾರವಿದೆ. ದೇವಾಲಯದ ಶಿಖರವು ದ್ರಾವಿಡ ಶೈಲಿಯಲ್ಲಿದ್ದು, ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿದ್ದಾರೆ ಹಾಗೂ ದೇವಾಲಯವನ್ನು ಗ್ರಾನೈಟ್ ಶಿಲೆಯಿಂದ ಕಟ್ಟಲಾಗಿದ್ದು, ಭಿತ್ತಿಯಲ್ಲಿ ಯಾವುದೇ ವಿಶೇಷ ಕೆತ್ತನೆ ಕಂಡುಬರುವುದಿಲ್ಲ.

ಸ್ಥಳ	:	**ದೊಡ್ಡ ಕೆರೆ ಏರಿಯ ಮೇಲೆ**
ಸ್ಮಾರಕದ ಹೆಸರು	:	**ಸೋಮೇಶ್ವರ ದೇವಾಲಯ**
ಅಭಿಮುಖ	:	**ಪೂರ್ವ**
ಕಾಲಮಾನ	:	**ಕ್ರಿ.ಶ. ಸುಮಾರು ೧೩-೧೪ನೇ ಶತಮಾನ**
ಸ್ಥಿತಿ	:	**ಉತ್ತಮ**

ಸೋಮೇಶ್ವರ ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪವನ್ನು ಹೊಂದಿದ್ದು, ಏಕಕೂಟ ಶೈವ ದೇವಾಲಯವಾಗಿರುತ್ತದೆ. ದೇವಾಲಯದ ನಿರ್ಮಾಣದ ಬಗ್ಗೆ ಯಾವುದೆ ಶಾಸನವಿಲ್ಲ. ಮುಖಮಂಟಪವು ೮ ಕಂಬಗಳಿಂದ ಕೂಡಿದ್ದು ನಾಲ್ಕು ಸ್ವತಂತ್ರ ಕಂಬಗಳು ಮತ್ತು ನಾಲ್ಕು ಆದರ ಕಂಬಗಳನ್ನು ಕಾಣಬಹುದಾಗಿದ್ದು, ಕಂಬಗಳು ವಿಶೇಷ ಕೆತ್ತನೆಯಿಂದ ಕೂಡಿದ್ದು ವಿಜಯನಗರ ಶೈಲಿಯಲ್ಲಿವೆ. ಮುಖಮಂಟಪದ ಮುಂದೆ ಬಲಿ ಪೀಠವಿದೆ. ಮುಖಮಂಟಪದ ಕಂಬಗಳು ಮೂರು ಹಂತಗಳಿಂದ ಕೂಡಿದ್ದು, ಪೀಠ, ಕಾಂಡ ಮತ್ತು ಬೋದಿಗೆ ಹೊಂದಿದೆ. ವಿಶೇಷವಾಗಿ ಅಲಂಕೃತಗೊಂಡಿರುವ ಬೋದಿಗೆಯು ಮೊಗ್ಗಿನಂತೆ (ಪುಷ್ಪಬೋದಿಗೆ) ಕೆಳಮುಖವಾಗಿ ಬಾಗಿದೆ. ಈ ಕಂಬಗಳಲ್ಲಿ ಹಲವು ಶಿಲ್ಪಗಳನ್ನು ಕಾಣಬಹುದು. ಮಹಿಷಮರ್ದಿನಿ, ಶಿವಲಿಂಗ, ಕುಸ್ತಿಪಟು, ಮತ್ಸ್ಯನಾಥ, ಕುದುರೆ ಸವಾರ, ಬೇಡರ ಕಣ್ಣಪ್ಪ, ನಂದಿಯ ಶಿಲ್ಪಿ, ನೃತ್ಯ ಭಂಗಿಯ ಶಿಲ್ಪಗಳನ್ನು ಕಾಣಬಹುದಾಗಿದೆ.

ಮುಖಮಂಟಪದ ೨ ಅರ್ಧ ಕಂಬಗಳಲ್ಲಿ ಶೈವ ದ್ವಾರಪಾಲಕರನ್ನು ಕೆತ್ತಲಾಗಿದೆ. ಬಾಗಿಲವಾಡವು ಸಾಧಾರಣ ಶೈಲಿಯಲ್ಲಿದ್ದು ನವರಂಗಕ್ಕೆ ಪೂರ್ವ ಮತ್ತು ದಕ್ಷಿಣ ದಿಕ್ಕಿನಲ್ಲಿ ಪ್ರವೇಶದ್ವಾರ ಕಾಣಬಹುದಾಗಿದೆ. ದಕ್ಷಿಣ ದಿಕ್ಕಿನ ಬಾಗಿಲುವಾಡವು ವಿಶೇಷ ಕೆತ್ತನೆಯಿಂದ ಕೂಡಿದ್ದು ಮೂರು ಶಾಖೆಗಳಿಂದ ಅಲಂಕೃತಗೊಂಡಿದೆ. ಪಾದದಲ್ಲಿ ದ್ವಾರಪಾಲಕರು, ಲಲಾಟಬಿಂಬದಲ್ಲಿ ಗಜಲಕ್ಷ್ಮೀಯ ಉಬ್ಬುಶಿಲ್ಪ ಕಾಣಬಹುದಾಗಿದೆ.

ನವರಂಗದಲ್ಲಿ ನಾಲ್ಕುಕಂಬಗಳನ್ನು ಕಾಣಬಹುದಾಗಿದ್ದು ಸಾಧಾರಣವಾಗಿವೆ. ಭುವನೇಶ್ವರಿಯನ್ನು ಇತ್ತೀಚೆಗೆ ನವೀಕರಿಸಿ ಗಾಳಿ ಬೆಳಕಿಗಾಗಿ ರಂಧ್ರ ಮಾಡಲಾಗಿದೆ. ನವರಂಗದ ಪೂರ್ವದ ಕೋಷ್ಟದಲ್ಲಿ ನವಗ್ರಹ ಸಮೇತ ಸೂರ್ಯದೇವನ ವಿಗ್ರಹ ಇರಿಸಲಾಗಿದ್ದು ನೋಡಲು ವಿಶಿಷ್ಟವಾಗಿದೆ. ೩ ಅಡಿ ಎತ್ತರದ ಸೂರ್ಯ ವಿಗ್ರಹವು ಪ್ರಭಾವಳಿ ಹೊಂದಿದ್ದು ಸ್ಥಾನಿಕ ಭಂಗಿಯಲ್ಲಿದೆ, ಕಪ್ಪು ಶಿಲೆಯಿಂದ ಕೆತ್ತಲಾಗಿದೆ. ಗರ್ಭಗೃಹದಲ್ಲಿ, ೧ ಅಡಿ ಎತ್ತರದ ಉದ್ಭವ ಲಿಂಗವಿದೆ. ನವರಂಗದ ಬಲ ಭಾಗದ ದೇವ ಕೋಷ್ಟಕದಲ್ಲಿ ನಂದಿ ಮತ್ತು ಗಣಪತಿಯನ್ನು ಪ್ರತಿಷ್ಠಾಪಿಸಲಾಗಿದೆ. ಅಲ್ಲದೆ ನವರಂಗದಲ್ಲಿ ಶಿವಲಿಂಗಕ್ಕೆ

ಎದುರಾಗಿ ನಂದಿ ವಿಗ್ರಹ ಇಡಲಾಗಿದೆ. ದೇವಾಲಯವನ್ನು ಗ್ರಾನೈಟ್ ಶಿಲೆಯಿಂದ ಕಟ್ಟಲಾಗಿದ್ದು, ಈ ದೇವಾಲಯದ ಅಧಿಷ್ಠಾನವು ಮಣ್ಣಿನಿಂದ ಮುಚ್ಚಿಹೋಗಿದೆ. ಭಿತ್ತಿಯ ಭಾಗವು ಅಲಂಕೃತವಾಗಿದ್ದು, ಅಧಿಷ್ಠಾನ, ಕೊಷ್ಠಕಂಬ (ಕಪೋತ ಪಂಜರ), ಉಬ್ಬು ಕಂಬ, ಶಾಲಾ, ಕಪೋತ, ವೇದಿ, ಗ್ರೀವ ಮತ್ತು ಸ್ತೂಪಿಯನ್ನು ಕಾಣಬಹುದಾಗಿದ್ದು ಆಕರ್ಷಣಿಯವಾಗಿದೆ. ಶಿಖರವು ದ್ರಾವಿಡ ಶೈಲಿಯಲ್ಲಿದೆ.

ಸ್ಥಳ	:	**ದೊಡ್ಡ ಕೆರೆ ಏರಿಯ ಮೇಲೆ**
ಸ್ಮಾರಕದ ಹೆಸರು	:	**ಪಂಚಲಿಂಗೇಶ್ವರ ದೇವಾಲಯ**
ಅಭಿಮುಖ	:	**ಪೂರ್ವ**
ಕಾಲಮಾನ	:	**ಕ್ರಿ.ಶ. ಸುಮಾರು ೧೪-೧೫ನೇ ಶತಮಾನ**
ಸ್ಥಿತಿ	:	**ಉತ್ತಮ**

ವಿಜಯನಗರ ಶೈಲಿಯಲ್ಲಿ ನಿರ್ಮಾಣಗೊಂಡ ದೇವಾಲಯವಾಗಿದ್ದು, ತಳವಿನ್ಯಾಸದಲ್ಲಿ ಗರ್ಭಗೃಹ, ಮುಖಮಂಟಪವನ್ನು ಹೊಂದಿದ್ದು ದೇವಾಲಯದ ನಿರ್ಮಾಣಕ್ಕೆ ಸಂಬಂಧಿಸಿದಂತೆ ಯಾವುದೇ ಶಾಸನಗಳು ಕಂಡುಬಂದಿಲ್ಲ. ಗರ್ಭಗೃಹದಲ್ಲಿ ೫ ಲಿಂಗಗಳನ್ನು ಸಾಲಾಗಿ ಪ್ರತಿಷ್ಠಾಪಿಸಲಾಗಿದ್ದು, ೫ ಶಿವಲಿಂಗಗಳಿಗೆ ಪ್ರತ್ಯೇಕ ಕೋಣೆಗಳಿವೆ. ೫ ಲಿಂಗಗಳು ವಿಭಿನ್ನವಾಗಿದ್ದು, ವಿಶೇಷ ಆಕಾರಗಳನ್ನು ಒಳಗೊಂಡಿವೆ. ಮಧ್ಯದ ಶಿವಲಿಂಗದ ಎದುರಿಗೆ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಉಳಿದ ಶಿವಲಿಂಗಗಳ ಎದುರು ನಂದಿ ಇರುವುದಿಲ್ಲ. ಮಧ್ಯ ಗರ್ಭಗೃಹದ ಬಾಗಿಲುವಾಡದಲ್ಲಿ ಶೈವ ದ್ವಾರಪಾಲಕರನ್ನು ಕೆತ್ತಲಾಗಿದೆ. ದೇವಾಲಯಕ್ಕೆ ಶಿಖರವಿರುವುದಿಲ್ಲ. ಈ ದೇವಾಲಯವನ್ನು ಗ್ರಾನೈಟ್ ಶಿಲೆಯಿಂದ ಕಟ್ಟಲಾಗಿದ್ದು ಇತ್ತೀಚೆಗೆ ನವೀಕರಿಸಿ ಸುಣ್ಣ ಬಣ್ಣ ಬಳಿಯಲಾಗಿದೆ.

ಸ್ಥಳ	:	**ಸೋಮೇಶ್ವರ ದೇವಾಲಯದ ಹಿಂಭಾಗ**
ಸ್ಮಾರಕದ ಹೆಸರು	:	**ಚಂಡಿಕೇಶ್ವರ ಗುಡಿ**
ಅಭಿಮುಖ	:	**ದಕ್ಷಿಣ**
ಕಾಲಮಾನ	:	**ಕ್ರಿ.ಶ. ಸುಮಾರು ೧೪-೧೫ ನೇ ಶತಮಾನ**
ಸ್ಥಿತಿ	:	**ಉತ್ತಮ**

ಈ ದೇವಾಲಯವು ಗರ್ಭಗೃಹ ಮಾತ್ರ ಹೊಂದಿದೆ. ಗರ್ಭಗೃಹದಲ್ಲಿ ಚಂಡಿಕೇಶ್ವರನ ಮೂರ್ತಿ ಇದೆ. ಚಂಡಿಕೇಶ್ವರ ವಿಗ್ರಹವು ೧ ½ ಅಡಿ ಎತ್ತರವಿದ್ದು ಸುಖಾಸನ ಭಂಗಿಯಲ್ಲಿದೆ. ಬಲಗೈಯಲ್ಲಿ ಪಾಶು(ಕೊಡಲಿ) ಎಡಗೈಯನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡಿದ್ದು ವಿಗ್ರಹವು ಪ್ರಭಾವಳಿಯಿಂದ ಅಲಂಕೃತಗೊಂಡಿದೆ. ಈ ಗುಡಿಯನ್ನು ನಾಲ್ಕು ಕಂಬಗಳಿಂದ ನಿರ್ಮಿಸಲಾಗಿದ್ದು, ಮೇಲ್ಭಾಗದಲ್ಲಿ ಸಜ್ಜಾದಿಂದ ಮುಚ್ಚಲಾಗಿದೆ. ಬಾಗಿಲವಾಡವು ಸಾಧಾರಣ ಶೈಲಿಯಲ್ಲಿದ್ದು, ಯಾವುದೇ ಶಿಲ್ಪಗಳು ಕಂಡುಬರುವುದಿಲ್ಲ.

ಸ್ಥಳ	:	**ಪದ್ಮೇಶ್ವರ ಗುಡಿಯ ಹಿಂಭಾಗ**
ಸ್ಮಾರಕದ ಹೆಸರು	:	**ಶಿವರಾಮೇಶ್ವರ**

ಅಭಿಮುಖ : **ಪೂರ್ವ**

ಕಾಲಮಾನ : **ಕ್ರಿ.ಶ. ೧೭ನೇ ಶತಮಾನ**

ಸ್ಥಿತಿ : **ಉತ್ತಮ**

ಶಿವರಾಮೇಶ್ವರ ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿ ೧ ½ ಅಡಿ ಎತ್ತರ ಶಿವಲಿಂಗವಿದ್ದು ಪಾಣಿಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಮೇಲ್ಛಾವಣೆಯಲ್ಲಿ ಭುವನೇಶ್ವರಿಯ ಕೆತ್ತನೆ ಇದೆ. ಅಂರಾಳದಲ್ಲಿ ಶಿವಲಿಂಗಕ್ಕೆ ಎದುರಾಗಿ ನಂದಿಯನ್ನು ಪ್ರತಿಸ್ಥಾಪಿಸಲಾಗಿದೆ. ಅದೇ ರೀತಿ ಅಂತರಾಳದ ಬಲಭಾಗದಲ್ಲಿ ಗಣಪತಿಯನ್ನು ಮತ್ತು ಎಡಭಾಗದಲ್ಲಿ ಮಹೀಷಾಸುರಮರ್ದಿನಿಯನ್ನು ಪ್ರತಿಷ್ಠಾಪಿಸಲಾಗಿದೆ. ಮಹೀಷಾಸುರಮರ್ದಿನಿಯ ಮೂರ್ತಿಯು ವಿಶಿಷ್ಟವಾಗಿದ್ದು ದ್ವಿಭುಜವನ್ನು ಮತ್ತು ನಾಲ್ಕು ಕೈಗಳನ್ನು ಹೊಂದಿದ್ದು ತ್ರಿಶೂಲದಿಂದ ಕೋಣವನ್ನು ಸಂಹಾರ ಮಾಡುತ್ತಿರುವಂತೆ ಬಿಂಬಿಸಲಾಗಿದೆ.

ನವರಂಗದಲ್ಲಿ ಎರಡು ಕಂಬಗಳು ಮಾತ್ರವಿದ್ದು ವಿಶೇಷ ಕೆತ್ತನೆ ಇಲ್ಲ. ಪ್ರವೇಶದ್ವಾರದ ಬಾಗಿಲವಾಡವು ಸಾಧಾರಣವಾಗಿದ್ದು ಕೈಪಿಡಿಯನ್ನು ಕಾಣಬಹುದಾಗಿದೆ. ದೇವಾಲಯದ ಮುಂದೆ ಬಲಿಪೀಠ ಮತ್ತು ೨೫ ಅಡಿ ಎತ್ತರದ ನಂದಿ ಸ್ಥಂಭವನ್ನು ಕಾಣಬಹುದಾಗಿದ್ದು, ಪಾದದಲ್ಲಿ ಗಣಪತಿಯನ್ನು ಕೆತ್ತಲಾಗಿದೆ. ದೇವಾಲಯದ ಭಿತ್ತಿಯನ್ನು ಗ್ರಾನೈಟ್ ಶಿಲೆಯಿಂದ ಕಟ್ಟಲಾಗಿದೆ.

ಗಣಪತಿ ದೇವಾಲಯ

ಈ ದೇವಾಲಯವು ೧೯-೨೦ನೇ ಶತಮಾನದಲ್ಲಿ ನಿರ್ಮಾಣಗೊಂಡಿದ್ದು, ಪದ್ಮೇಶ್ವರ ಗುಡಿಯ ಮುಂದೆ ನಿರ್ಮಿಸಲಾಗಿದ್ದು, ಪೂರ್ವಾಭಿಮುಖವಾಗಿದೆ. ಸರಳ ತಳವಿನ್ಯಾಸ ಹೊಂದಿದ್ದು ಗರ್ಭಗೃಹ, ಮುಖಮಂಟಪ ಹೊಂದಿದ್ದು, ಗರ್ಭಗುಡಿಯಲ್ಲಿ ಗಣಪತಿ ಮತ್ತು ಮುಖಮಂಟಪದಲ್ಲಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ.

ಶನೇಶ್ವರ ದೇವಾಲಯ

ಈ ದೇವಾಲಯವು ತುಮಕೂರು ರಸ್ತೆಯಲ್ಲಿದ್ದು, ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿದೆ ಈ ದೇವಾಲಯವು ಇತ್ತೀಚಿನ ಕಟ್ಟಡವಾಗಿದ್ದು ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪವನ್ನು ನಿರ್ಮಿಸಲಾಗಿದ್ದು ಗರ್ಭಗುಡಿಯಲ್ಲಿ ಶನೇಶ್ವರನ ಮೂರ್ತಿ ಇದೆ. ನವರಂಗದಲ್ಲಿ ಗಣಪತಿ, ನಂದಿಯ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದ್ದು ವಿಶೇಷವಾಗಿ ನವಗ್ರಹಗಳ ಪ್ರತಿಷ್ಠಾಪನೆ ಮಾಡಲಾಗಿದೆ. ಶನಿವಾರ ವಿಶೇಷ ಪೂಜೆ ನಡೆಯುತ್ತದೆ.

೩.೨. ವೈಷ್ಣವ ದೇವಾಲಯಗಳು

ಋಗ್ವೇದದ ಕಾಲದಲ್ಲಿ ರುದ್ರನೇ ಪ್ರಧಾನ ದೇವತೆಯಾಗಿದ್ದು ವಿಷ್ಣುವಿನ ಸ್ಥಾನ ಗೌಣವಾಗಿತ್ತು. ಸವಿತೃ, ಪೊಷನ್, ಸೂರ್ಯ, ವಿಷ್ಣು, ಭಗ, ಆರ್ಯಮನ್ ಎಂಬ ಸೂರ್ಯನ ಅಂಶಗಳಲ್ಲಿ ವಿಷ್ಣುವೂ ಒಬ್ಬನು ವೇದದಲ್ಲಿ ಐದಾರು ಸೂಕ್ತಗಳಲ್ಲಿ ವಿಷ್ಣು ವರ್ಣನೆ ಇದೆ. ಇವನು ಮೂರು ಹೆಜ್ಜೆಗಳಲ್ಲಿ ಪೃಥ್ವಿ, ಅಂತರಿಕ್ಷ, ಆಕಾಶಗಳನ್ನು ಕ್ರಮಿಸುವನು.[೪] ಮಹಾಕಾವ್ಯಗಳ ಕಾಲದಲ್ಲಿ ವಿಷ್ಣುವು ಪರಮದೇವತೆಯಾಗಿ

ಪರಿಣಮಿಸಿದನು.

ವೈದಿಕ ಧರ್ಮವು ವರ್ಣಾಶ್ರಮ ಧರ್ಮವನ್ನು ಯಜ್ಞಯಾಗದಿ ಪ್ರಕ್ರಿಯೆಗಳನ್ನು ಪುರಷ್ಕರಿಸಿದಷ್ಟೇ ಅದರ ಜೊತೆಗೆ ಬೆಳೆದುಬಂದ ಇನ್ನೊಂದು ಧರ್ಮ ಭಾಗವತ. ಋಗ್ವೇದ ಕಾಲದಲ್ಲಿ ಅಪ್ರದಾನ ದೇವತೆಯಾಗಿದ್ದ ವಿಷ್ಣುವು ಭಾಗವತ ಕಾಲದಲ್ಲಿ ಭಗವಂತನ ಸ್ಥಾನಕ್ಕೆರಿದ ಮೇಲೆ ಭಾಗವತ ಧರ್ಮಕ್ಕೆ 'ವೈಷ್ಣವ ಧರ್ಮ' ಎಂಬ ಹೆಸರು ಪ್ರಾಪ್ತವಾಯಿತು.[೫]

ಕುಣಿಗಲ್ ಪಟ್ಟಣದಲ್ಲಿ ಸಾಕಷ್ಟು ವೈಷ್ಣವ ದೇವಾಲಯಗಳು ನಿರ್ಮಾಣಗೊಂಡಿವೆ. ಪ್ರಮುಖವಾಗಿ ಹೊಯ್ಸಳರು, ವಿಜಯನಗರ ಹಾಗೂ ಪಾಳೇಗಾರರ ಕಾಲದಲ್ಲಿ ವೈಷ್ಣವ ದೇವಾಲಯಗಳು ಕಂಡುಬರುತ್ತವೆ. ಅವುಗಳಲ್ಲಿ ಕೆಲವು ವೈಷ್ಣವ ದೇವಾಲಯಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಸ್ಥಳ	:	**ಗ್ರಾಮದ ಮಧ್ಯೆ**
ಸ್ಮಾರಕದ ಹೆಸರು	:	**ಚನ್ನಿಗರಾಯ**
ಅಭಿಮುಖ	:	**ಪೂರ್ವ**
ಕಾಲಮಾನ	:	**ಕ್ರಿ.ಶ. ಸುಮಾರು ೧೩ನೇ ಶತಮಾನ**
ಸ್ಥಿತಿ	:	**ಕನಿಷ್ಠ**

ಚನ್ನಿಗರಾಯ ದೇವಾಲಯವು ಹೊಯ್ಸಳರ ಕಾಲಾವಧಿಯಲ್ಲಿ ವೀರ ರಾಮನಾಥನ ಆಡಳಿತ ಅವಧಿಯಲ್ಲಿ ಕ್ರಿ.ಶ. ೧೨೯೨ರಲ್ಲಿ ಸ್ಥಾಪಿಸಲ್ಪಟ್ಟಿದೆ. (ಶಾಸನ ಸಂಪುಟ–೨೪, ಕು.೫೩–೫೪, ಪು–೨೨೧) ಈ ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ತೆರೆದ ಮುಖಮಂಟಪವನ್ನು ಹೊಂದಿದ್ದು ಚಚ್ಚೌಕವಾದ ಗರ್ಭಗೃಹದಲ್ಲಿ ಪಾಣಿಪೀಠದ ಮೇಲೆ ೩ ಅಡಿ ಎತ್ತರದ ಸೌಮ್ಯ ಕೇಶವನನ್ನು ಪ್ರತಿಷ್ಠಾಪಿಸಲಾಗಿದ್ದು ಕಪ್ಪು ಶಿಲೆಯಲ್ಲಿ ಕೆತ್ತಲಾಗಿದೆ.

ಅಂತರಾಳದ ಬಾಗಿಲುವಾಡವು ಸಾಧಾರಣಾಗಿದ್ದು ಎಡ ಮತ್ತು ಬಲದಲ್ಲಿ ದ್ವಾರಪಾಲಕರಿದ್ದಾರೆ ಸಭಾ ಮಂಟಪದಲ್ಲಿ ೧೬ ಕಂಬಗಳಿದ್ದು ಅವುಗಳಲ್ಲಿ ೧೨ ಕಂಬಗಳು ಅರ್ಧಕಂಬಗಳಾಗಿದ್ದು ಬಿತ್ತಿಯಲ್ಲಿ ಸೇರಿಕೊಂಡಿವೆ ಉಳಿದ ನಾಲ್ಕು ಕಂಬಗಳು ನವರಂಗಕ್ಕೆ ಸೇರಿಕೊಂಡಿವೆ. ಕಂಬಗಳು ಸಾಧಾರಣವಾಗಿದ್ದು ಮೇಲ್ಛಾವಣಿಯಲ್ಲಿ ಭುವನೇಶ್ವರಿಯ ಕೆತ್ತನೆ ಕಂಡುಬರುತ್ತದೆ.

ಮುಖ್ಯದ್ವಾರದ ಬಾಗಿಲವಾಡವು ಸಾಧಾರಣವಾಗಿದೆ. ತೆರೆದ ಮುಖಮಂಟಪದಲ್ಲಿ ನಾಲ್ಕು ಕಂಬಗಳನ್ನು ಕಾಣಬಹುದಾಗಿದ್ದು ಮೇಲ್ಛಾವಣಿಯನ್ನು ಗಾರೆಗಚ್ಚಿನಿಂದ ಮುಚ್ಚಲಾಗಿದೆ. ಪ್ರವೇಶದ್ವಾರಕ್ಕೆ ೩ ಕಡೆಯಿಂದ ಸೋಪಾನಗಳಿವೆ ದೇವಾಲಯದ ಮುಂದೆ ಬಲಿಪೀಠ ಮತ್ತು ೨೦ ಅಡಿ ಎತ್ತರದ ಗರುಡಗಂಬವಿದ್ದು ಶಂಖ–ಚಕ್ರದ ಕೆತ್ತನೆ ಕಂಡುಬರುತ್ತದೆ. ದೇವಾಲಯದ ನಿರ್ಮಾಣದಲ್ಲಿ ಗ್ರಾನೈಟ್ ಶಿಲೆ ಬಳಸಲಾಗಿದೆ. ಅಧಿಷ್ಠಾನ, ಭಿತ್ತಿಯನ್ನು ಕಾಣಬಹುದಾಗಿದ್ದು ಆದಿಸ್ಥಾನದ ಬಹುಭಾಗ ಮಣ್ಣಿನಿಂದ ಮುಚ್ಚಿ ಹೋಗಿದೆ. ಭಿತ್ತಿಯಲ್ಲಿ ಉಬ್ಬು ಕಂಬಗಳು, ದೇವಕೋಷ್ಟಕ ಮತ್ತು ಕಪೋತ ಕಾಣಬಹುದಾಗಿದ್ದು, ನಿರ್ವಹಣೆ ಇಲ್ಲದೆ ಶಿಥಿಲಾವಸ್ಥೆಯಲ್ಲಿದ್ದು ಮರಗಿಡ ಬೆಳೆದು ಬೀಳುವ ಹಂತದಲ್ಲಿವೆ.

ಸ್ಥಳ	:	**ಸಂತೆ ಬೀದಿ ರಸ್ತೆ**
ಸ್ಮಾರಕದ ಹೆಸರು	:	**ತುಡಿಕೆ ವೆಂಕಟರಮಣ**

ಅಭಿಮುಖ : ಪೂರ್ವ

ಕಾಲಮಾನ : ಕ್ರಿ.ಶ. ಸುಮಾರು ೧೪-೧೫ನೇ ಶತಮಾನ

ಸ್ಥಿತಿ : ಉತ್ತಮ

ತುಡಿಕೆ ವೆಂಕಟರಮಣ ದೇವಾಲಯವು ವೈಷ್ಣವ ಪಂಥಕ್ಕೆ ಸೇರಿದ್ದು, ದೇವಾಲಯದ ನಿರ್ಮಾಣದ ಬಗ್ಗೆ ಯಾವುದೇ ಶಾಸನಗಳು ಕಂಡುಬಂದಿಲ್ಲ. ತಳ ವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದೆ. ಗರ್ಭಗೃಹವು ಚಚ್ಚೌಕವಾಗಿದ್ದು ಪಾಣಿ ಪೀಠದ ಮೇಲೆ ವೆಂಕಟರಮಣನನ್ನು ಪ್ರತಿಷ್ಠಾಪಿಸಲಾಗಿದೆ.

ಅಂತರಾಳದ ಬಲಭಾಗದ ಜಗತಿಯ ಮೇಲೆ ಆಳ್ವಾರರ ಪ್ರತಿಮೆಗಳನ್ನು ಪ್ರತಿಷ್ಠಾಪಿಸಲಾಗಿದೆ. ಅಂತರಾಳದ ಎಡ ಮತ್ತು ಬಲಭಾಗದಲ್ಲಿ ಸಣ್ಣಕೋಣೆಯನ್ನು ನಿರ್ಮಿಸಿ ಎಡಭಾಗದಲ್ಲಿ ಶ್ರೀ ಲಕ್ಷ್ಮೀಯನ್ನು ಮತ್ತು ಬಲಭಾಗದಲ್ಲಿ ಗಣಪತಿಯನ್ನು ಪ್ರತಿಷ್ಠಾಪಿಸಲಾಗಿದೆ.

ನವರಂಗದಲ್ಲಿ ಚಚ್ಚೌಕದ ನಾಲ್ಕು ಕಂಬಗಳಿದ್ದು ಪಾದ, ಕಾಂಡ ಮತ್ತು ಬೋಧಿಗೆಯಿಂದ ಕೂಡಿದ್ದು ವಿಶೇಷ ಕೆತ್ತನೆ ಶಿಲ್ಪಗಳನ್ನು ಕಾಣಬಹುದಾಗಿದೆ. ಹೂಬಳ್ಳಿ, ಶಂಖ, ಚಕ್ರ, ಆಂಜನೇಯ ಹಾಗೂ ಪದ್ಮದ ಚಿತ್ರಗಳಿವೆ.

ಅದೇ ರೀತಿ ಅಂತರಾಳದ ಬಾಗಿಲವಾಡವು ಸಾಧಾರಣವಾಗಿದ್ದು ಎಡ ಮತ್ತು ಬಲಭಾಗದಲ್ಲಿ (ಜಯ-ವಿಜಯ) ದ್ವಾರಪಾಲಕರನ್ನು ಕಾಣಬಹುದಾಗಿದೆ. ಮುಖ್ಯದ್ವಾರದ ಲಲಾಟಬಿಂಬದಲ್ಲಿ ಶಂಖ, ಚಕ್ರ, ತಿರುನಾಮ ಕಾಣಬಹುದು. ದೇವಾಲಯದ ಎದುರಿನಲ್ಲಿ ಗರುಡ ಮಂಟಪ ಹಾಗೂ ಸುಮಾರು ೧೫ ಅಡಿ ಎತ್ತರದ ಗರುಡಗಂಬ ಕಾಣಬಹುದು. ದೇವಾಲಯವನ್ನು ಕಲ್ಲುಕಂಬ, ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಲಾಗಿದ್ದು, ಭಿತ್ತಿಯಲ್ಲಿ ಯಾವುದೇ ಶಿಲ್ಪಗಳಿಲ್ಲ, ಇತ್ತೀಚೆಗೆ ಜೀರ್ಣೋದ್ಧಾರದ ಸಂದರ್ಭದಲ್ಲಿ ಶಿಖರ (ವಿಮಾನ) ಮತ್ತು ಮುಖ ಮಂಟಪದ ಮೇಲ್ಭಾಗದಲ್ಲಿ ಪರಿವಾರ ದೇವತಾ ಮೂರ್ತಿಗಳನ್ನು ನಿರ್ಮಿಸಿದ್ದಾರೆ.

ಸ್ಥಳ : ಸಂತೆ ಮೈದಾನ

ಸ್ಮಾರಕದ ಹೆಸರು : ಕೋಟೆ ನರಸಿಂಹ ಸ್ವಾಮಿ

ಅಭಿಮುಖ : ಪೂರ್ವ

ಕಾಲಮಾನ : ಕ್ರಿ.ಶ. ೧೪೯೩-೯೪

ಸ್ಥಿತಿ : ಉತ್ತಮ (ರಾಜ್ಯ ಪುರಾತತ್ವ ಇಲಾಖೆಗೆ ಒಳಗೊಂಡಿದೆ)

ನರಸಿಂಹ ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪ, ನವರಂಗ ಮತ್ತು ಮುಖಮಂಟಪವನ್ನು ಹೊಂದಿದ್ದು, ಏಕಕೂಟ ಶ್ರೀ ವೈಷ್ಣವ ದೇವಾಲಯವಾಗಿದೆ. ಈ ದೇವಾಲಯದ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ದೇವಾಲಯದ ಉತ್ತರ ದಿಕ್ಕಿನ ಪಂಚಾಂಗದ ಜಗತಿಕಲ್ಲಿನ ಮೇಲೆ ಕಾಲಮಾನ ನಮೂದಿಸಿದ್ದಾರೆ ಶಾಲಿವಾಹನ ಶಕವರುಷ ೧೪೧೫ ಎಂದು ಉಲ್ಲೇಖಿಸಲಾಗಿದೆ. (ಶಾಸನ ಸಂಪುಟ-೨೪, ಕು-೧೭, ಪು-೯೭) ಗರ್ಭಗುಡಿಯಲ್ಲಿ ನರಸಿಂಹನ ಬದಲು ೪ ಅಡಿ ಎತ್ತರದ ಚನ್ನಕೇಶವನ ವಿಗ್ರಹವಿದೆ. ಪಾಣಿಪೀಠದ ಮೇಲೆ ಚನ್ನಕೇಶವನ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದು, ಸ್ಥಾನಿಕ

ಭಂಗಿಯಲ್ಲಿದೆ. ಶಂಖ, ಚಕ್ರ, ಅಭಯಹಸ್ತ ಮತ್ತು ಗದೆಯನ್ನು ಕಾಣಬಹುದಾಗಿದ್ದು, ಕಪ್ಪು ಶಿಲೆಯಲ್ಲಿ ಕೆತ್ತಲಾಗಿದೆ. ಅಂತರಾಳದಲ್ಲಿ ೨ ೧/೨ ಅಡಿ ಎತ್ತರದ ನರಸಿಂಹ ಮತ್ತು ಆಳ್ವಾರರ ವಿಗ್ರಹಗಳಿವೆ. ಅಂತರಾಳದ ಬಾಗಿಲುವಾಡವು ಸಾಧಾರಣವಾಗಿದ್ದು, ಸಭಾಮಂಟಪದಲ್ಲಿ ೧೬ ಕಂಬಗಳಿಂದ ಕೂಡಿದೆ. ಅವುಗಳಲ್ಲಿ ೧೨ ಕಂಬಗಳು ಅರ್ಧ ಕಂಬಗಳಾಗಿದ್ದು, ಭಿತ್ತಿಯಲ್ಲಿ ಸೇರಿಕೊಂಡಿವೆ. ಉಳಿದ ನಾಲ್ಕು ಕಂಬಗಳು ನವರಂಗದ ಮದ್ಯದಲ್ಲಿ ಸೇರಿಕೊಂಡಿವೆ. ಕಂಬಗಳು ಸಾಧಾರಣವಾಗಿದ್ದು, ಅಲಂಕರಣಗೊಂಡಿಲ್ಲಾ ಮೇಲ್ಛಾವಣಿಯಲ್ಲಿ ಭುವನೇಶ್ವರಿ ಕೆತ್ತನೆ ಇದೆ. ಅದೇ ರೀತಿ ಮುಖ್ಯದ್ವಾರದಲ್ಲಿ ಜಯ ವಿಜಯರೆಂಬ ೫ ಅಡಿ ಎತ್ತರದ ದ್ವಾರಪಾಲಕರನ್ನು ಕಾಣಬಹುದು.

ಲಲಾಟಬಿಂಬದಲ್ಲಿ ಬಾಲಕೃಷ್ಣನ ಉಬ್ಬುಶಿಲ್ಪವಿದೆ. ಮುಖಮಂಟಪಕ್ಕೆ ಪ್ರವೇಶಿಸಲು ಸೋಪಾನವಿದ್ದು, ೪ ಕಂಬಗಳಿಂದ ಕೂಡಿದ ತೆರೆದ ಮುಖಮಂಟಪವಿದೆ. ಕಂಬಗಳು ೩ ಹಂತಗಳಿಂದ ಕೂಡಿದ್ದು, ಕಂಬದ ನಾಲ್ಕು ಮುಖಗಳು ವಿಶೇಷ ಕೆತ್ತನೆಗಳಿಂದ ಕೂಡಿವೆ. ವಿಜಯನಗರ ಲಾಂಛನ, ವಿಠ್ಠಲ, ಯಾಳಿ, ಪದ್ಮ, ಗಣಪತಿ, ಯತಿ, ನವಿಲು, ಶ್ರೀಲಕ್ಷ್ಮಿ, ಆಳ್ವಾರರು, ಗರುಡ, ಶಂಖ, ಚಕ್ರ ಆಂಜನೇಯ, ಕಾರ್ತಿಕೇಯ ಮತ್ತು ನರ್ತನ ಸ್ತ್ರೀಯನ್ನು ಕಾಣಬಹುದಾಗಿದೆ.

ಮುಖಮಂಟಪದಿಂದ ಸ್ವಲ್ಪ ಮುಂದೆ ಬಂದರೆ, ಎಡ ಮತ್ತು ಬಲಭಾಗಕ್ಕೆ ಮಂಟಪಗಳನ್ನು ನಿರ್ಮಿಸಲಾಗಿದೆ. ಎಡಗಡೆಯ ಮಂಟಪದಲ್ಲಿ ರಾಮ, ಲಕ್ಷ್ಮಣ, ಸೀತಾ, ಆಂಜನೇಯ ಹಾಗೂ ಆಳ್ವಾರರ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಬಲಭಾಗದ ಮಂಟಪದಲ್ಲಿ ವೆಂಕಟರಮಣ ಮತ್ತು ಪದ್ಮಾವತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಪ್ರಾಕಾರ ಗೋಡೆಯ ಮೇಲೆ ರಾಯಗೋಪುರ ಇತ್ತು ಆದರೆ ಈಗ ಜೀರ್ಣೋದ್ಧಾರದ ಸಂದರ್ಭದಲ್ಲಿ ಕೆಡವಲಾಗಿದೆ. ಗರುಡ ಕಂಬ ಹಾಗೂ ದಕ್ಷಿಣಕ್ಕೆ ಮುಖ ಮಾಡಿರುವ ಆಂಜನೇಯನ ಮೂರ್ತಿಯನ್ನು ಕಾಣಬಹುದಾಗಿದೆ.

ದೇವಾಲಯುವನ್ನು ಗ್ರಾನೈಟ್ ಶಿಲೆಯಿಂದ ಕಟ್ಟಲಾಗಿದ್ದು ಆಧಿಷ್ಠಾನ ಮತ್ತು ಭಿತ್ತಿಯನ್ನು ಕಾಣಬಹುದು. ಇತ್ತೀಚೆಗೆ ವಿಮಾನ(ಶಿಖರ)ವನ್ನು ನಿರ್ಮಿಸಲಾಗಿದೆ. ದೇವಾಲಯದ ಎಡಭಾಗಕ್ಕೆ ಅಮ್ಮನವರ ಗುಡಿ ಇದೆ. ರಾಜ್ಯ ಪುರಾತತ್ವ ಇಲಾಖೆ ಮೈಸೂರು ಇವರ ವತಿಯಿಂದ ಜೀರ್ಣೋದ್ಧಾರಗೊಳ್ಳುತ್ತಿದೆ.

ಸ್ಥಳ	**:**	**ಕೋಟೆ ಬೀದಿ**
ಸ್ಮಾರಕದ ಹೆಸರು	**:**	**ಉರಿತಿರುಮಲ**
ಅಭಿಮುಖ	**:**	**ದಕ್ಷಿಣ**
ಕಾಲಮಾನ	**:**	**ಕ್ರಿ.ಶ. ಸುಮಾರು ೧೬-೧೭ನೇ ಶತಮಾನ**
ಸ್ಥಿತಿ	**:**	**ಕನಿಷ್ಟ**

ಉರಿತಿರುಮಲ ದೇವಾಲಯವು ಸಾಧಾರಣ ಶೈಲಿಯಲ್ಲಿ ನಿರ್ಮಾಣಗೊಂಡಿದ್ದು, ತಳ ವಿನ್ಯಾಸದಲ್ಲಿ ಗರ್ಭಗೃಹ, ನವರಂಗ ಮತ್ತು ಮುಖಮಂಟಪವನ್ನು ಹೊಂದಿದೆ. ಗರ್ಭಗುಡಿಯಲ್ಲಿ ತಿರುಮಲ ದೇವರ ವಿಗ್ರಹವಿದೆ. ಅಂತರಾಳದ ಬಾಗಿಲು ಸಾಧಾರಣವಾಗಿದ್ದು, ನವರಂಗವು ನಾಲ್ಕು ಕಂಬಗಳಿಂದ ಕೂಡಿದೆ. ಮೇಲ್ಛಾವಣಿಯಲ್ಲಿ ಭುವನೇಶ್ವರಿಯನ್ನು ಕೆತ್ತಲಾಗಿದೆ. ಮುಖಮಂಟಪವು ಸಾಧಾರಣವಾಗಿದ್ದು ಎರಡು ಕಂಬಗಳಿಂದ ಕೂಡಿದೆ. ದೇವಾಲಯದ ಮುಂದೆ ೧೦ ಅಡಿ ಎತ್ತರದ ಗರುಡಕಂಬ ಕಾಣಬಹುದಾಗಿದ್ದು,

ಕಾಂಡದಲ್ಲಿ ಆಂಜನೇಯನನ್ನು ಕೆತ್ತಲಾಗಿದೆ. ದೇವಾಲಯ ನಿರ್ಮಾಣದಲ್ಲಿ ಗ್ರಾನೈಟ್ ಶಿಲೆ ಬಳಸಲಾಗಿದ್ದು, ಯಾವುದೇ ಕೆತ್ತನೆ ಕಂಡುಬರುವುದಿಲ್ಲ. ದೇವಾಲಯವು ಶಿಥಿಲಾವಸ್ಥೆಯಲ್ಲಿದೆ.

ಸ್ಥಳ	:	**ಸಂತೆ ಬೀದಿ**
ಸ್ಮಾರಕದ ಹೆಸರು	:	**ಕೋಟೆ ಆಂಜನೇಯ ಸ್ವಾಮಿ**
ಅಭಿಮುಖ	:	**ದಕ್ಷಿಣ**
ಕಾಲಮಾನ	:	**ಕ್ರಿ.ಶ. ಸುಮಾರು ೧೭-೧೮ನೇ ಶತಮಾನ**
ಸ್ಥಿತಿ	:	**ಉತ್ತಮ**

ಕೋಟೆ ಅಂಜನೇಯ ದೇವಾಲಯವು ದಕ್ಷಿಣಾಭಿಮುಖವಾಗಿದ್ದು ವೈಷ್ಣವ ಪಂಥಕ್ಕೆ ಸೇರಿದೆ. ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದೆ. ಗರ್ಭಗೃಹವು ಚಚ್ಚೌಕವಾಗಿದ್ದು, ಸುಮಾರು ೫ ಅಡಿ ಎತ್ತರದ ಆಂಜನೇಯನ ವಿಗ್ರಹವನ್ನು ಕಲ್ಲಿನಲ್ಲಿ ಕೆತ್ತಲಾಗಿದ್ದು ನೋಡಲು ವಿಶಿಷ್ಟವಾಗಿದೆ. ಆಂಜನೇಯನ ಬಾಲಕ್ಕೆ ಗಂಟೆಯನ್ನು ಕಟ್ಟಲಾಗಿದೆ. ಅಂತರಾಳದ ಬಾಗಿಲುವಾಡವು ಸಾಧಾರಣವಾಗಿದ್ದು ಪಾದದಲ್ಲಿ ದ್ವಾರಪಾಲಕರ ಶಿಲ್ಪವನ್ನು ಕೆತ್ತಲಾಗಿದೆ. ನವರಂಗದಲ್ಲಿನ ನಾಲ್ಕು ಕಂಬಗಳು ಚಚ್ಚೌಕವಾಗಿದ್ದು, ಪಾದ ಮತ್ತು ಬೋದಿಗೆಯಿಂದ ಕೂಡಿವೆ. ಭುವನೇಶ್ವರಿಯ ಸಾಧಾರಣ ಕೆತ್ತನೆ ಇದೆ. ದೇವಾಲಯದ ಮುಂಭಾಗ, ದೀಪ ಸ್ಥಂಭ ಮತ್ತು ನಾಗರಕಟ್ಟೆ ಕಾಣಬಹುದು. ದೇವಾಲಯದ ನಿರ್ಮಾಣಕ್ಕೆ ಗ್ರಾನೈಟ್ ಶಿಲೆ ಬಳಸಿದ್ದಾರೆ.

ಸ್ಥಳ	:	**ದೊಡ್ಡ ಕೆರೆ ಏರಿಯ ಮೇಲೆ**
ಸ್ಮಾರಕದ ಹೆಸರು	:	**ನೀರು ಬಾಗಿಲು ಆಂಜನೇಯ ಸ್ವಾಮಿ**
ಅಭಿಮುಖ	:	**ಪೂರ್ವ**
ಕಾಲಮಾನ	:	**ಕ್ರಿ.ಶ. ಸುಮಾರು ೧೭-೧೮ನೇ ಶತಮಾನ**
ಸ್ಥಿತಿ	:	**ಉತ್ತಮ**

ಕುಣಿಗಲ್ ದೊಡ್ಡ ಕೆರೆ ಏರಿಯ ಮೇಲಿದ್ದು, ಇದನ್ನು ಮುಖ್ಯಪ್ರಾಣದೇವರು ಎಂದು ಕರೆಯುತ್ತಾರೆ. ಕೆರೆಯನ್ನು ರಕ್ಷಿಸುವ ರಕ್ಷಕನಾಗಿದ್ದು, ತಲವಿನ್ಯಾಸದಲ್ಲಿ ಗರ್ಭಗೃಹ ಮತ್ತು ಮುಖಮಂಟವನ್ನು ಕಾಣಬಹುದಾಗಿದೆ. ಗರ್ಭಗೃಹದಲ್ಲಿ ೪ ಅಡಿ ಎತ್ತರದ ಆಂಜನೇಯನ ಮೂರ್ತಿ ಇದೆ. ಮುಖಮಂಟಪದಲ್ಲಿ ೩ ಕಂಬಗಳಿದ್ದು ಅರ್ಧಗಂಭಗಳಾಗಿವೆ. ಕಂಬಗಳು ಕೆತ್ತನೆಯಿದ ಅಲಂಕೃತಗೊಂಡಿದ್ದು ಗಂಡುಭೇರುಂಡ, ಪೂರ್ಣಕುಂಭ, ಹಂಸಪಕ್ಷಿ, ಯಾಳಿ, ಒಂಟೆ ಸವಾರ, ಯೋಧನಚಿತ್ರ, ಆನೆ, ಗೋಪಾಲಕೃಷ್ಣ, ವಾದ್ಯಗಾರನ ಚಿತ್ರಗಳನ್ನು ಕಾಣಬಹುದಾಗಿದ್ದು ಇತ್ತೀಚೆಗೆ ಸುಣ್ಣಬಣ್ಣ ಮಾಡಲಾಗಿದೆ.

೩.೩. ಶಾಕ್ತ ದೇವಾಲಯಗಳು

ಒಂದೂ ಧರ್ಮದ ಪೌರಾಣಿಕ ಸಾಹಿತ್ಯದಲ್ಲಿ ಮತ್ತು ತಂತ್ರಗಳಲ್ಲಿ ಶಕ್ತಿಯನ್ನು ಹೆಣ್ಣು ದೇವತೆಯ ರೂಪದಲ್ಲಿ ಚಿತ್ರಿಸಿದ್ದಾರೆ.[೬] ಶಕ್ತಿ ಇಲ್ಲದ ಎಲ್ಲಾ ದೇವರು ಅಪೂರ್ಣ ಹೆಣ್ಣು ದೇವತೆಯ ಶಕ್ತಿ ಮತ್ತು ಸ್ವರೂಪವನ್ನು ಗಂಡು ದೇವರ ತಾಯಿಯಾಗಿ, ಸಹೋದರಿಯಾಗಿ, ಪತ್ನಿಯಾಗಿ ನಾನಾ ಮಗ್ಗಲುಗಳಿಂದ

ಕಾಣಲಾಗಿದೆ. ಇವುಗಳಲ್ಲಿ ಪತ್ನಿ ರೂಪದಲ್ಲಿಯೇ ಶಕ್ತಿಯನ್ನು ಹೆಚ್ಚಾಗಿ ಕಾಣುತ್ತೇವೆ.[೬] ವೈಧಿಕ ಕಾಲದ ನಂತರ ಶಕ್ತಿ ದೇವತೆ ಬೆಳವಣಿಗೆ ಪ್ರಮುಖವಾಗಿ ಕಂಡುಬರುತ್ತದೆ. ಶಾಕ್ತರ ಆರಾಧ್ಯದೇವತೆಯೇ ಶಕ್ತಿದೇವತೆ ಇವರುಗಳನ್ನು ಆದಿಶಕ್ತಿ. ಪರಾಶಕ್ತಿ, ಮಹಾಶಕ್ತಿ, ಮಹಾದೇವಿ ಮುಂತಾಗಿ ಕರೆದು ಉಪಾಸನೆ ಮಾಡುತ್ತಾರೆ. ಈ ಕಾಲದ ದೇವತೆಗಳನ್ನು ಗೃಹ ಸೂತ್ರಗಳು ಸ್ಮೃತಿಗಳು ಉಪನಿಷತ್ತುಗಳು, ಪುರಾಣಗಳು ಮುಂತಾದ ಸಾಹಿತ್ಯಿಕ ಆಕರಗಳು ವಿವಿಧ ಬಗೆಯಿಂದ ವರ್ಣಿಸುತ್ತವೆ. ಬುಡಕಟ್ಟುಗಳಿಂದಲೂ ಶಕ್ತಿ ದೇವತೆಗಳನ್ನು ತಮ್ಮ ಯುದ್ಧ ಸಂಸ್ಕೃತಿಗಳ ಪ್ರತೀಕಗಳಾಗಿ ಅವುಗಳನ್ನು ಆರಾಧಿಸಿಕೊಂಡು ಬರಲಾಗುತ್ತಿದೆ. ಗ್ರಾಮೀಣ ಮಟ್ಟದಿಂದ ಹಿಡಿದು ನಗರ ಮಟ್ಟದವರೆಗೂ ಶಕ್ತಿ ದೇವತೆಗಳ ಆರಾಧನೆಯನ್ನು ಕಾಣಬಹುದು. ಪ್ರಸ್ತುತ ಅಧ್ಯಯನದಲ್ಲಿ ಕುಣಿಗಲ್ ಪಟ್ಟಣದ ಕೆಲವು ಶಕ್ತಿ ದೇವಾಲಯಗಳನ್ನು ಕುರಿತು ವಿವೇಚಿಸಲಾಗಿದೆ.

ದುರ್ಗಾ ಭವಾನಿ ದೇವಾಲಯ

ಈ ದೇವಾಲಯವು ಕುಣಿಗಲ್ ದೊಡ್ಡಕೆರೆ ಏರಿಯ ಮೇಲಿದ್ದು ದಕ್ಷಿಣಾಭಿಮುಖವಾಗಿದೆ. ತಳವಿನ್ಯಾಸದಲ್ಲಿ ಗರ್ಭಗುಡಿ, ನವರಂಗ ಮತ್ತು ಮುಖಮಂಟಪ ಹೊಂದಿದ್ದು ಸುಮಾರು ೧೬-೧೭ನೇ ಶತಮಾನಕ್ಕೆ ಸೇರಿದ್ದುದ್ದಾಗಿದೆ. ಗರ್ಭಗುಡಿಯಲ್ಲಿ ದುರ್ಗಾ ಭವಾನಿ ವಿಗ್ರಹವಿದ್ದು ಪೂರ್ವಕ್ಕೆ ಮುಖ ಮಾಡಿದ್ದು ವಿಗ್ರಹವು ಸುಮಾರು ೩ ಅಡಿ ಎತ್ತರವಿದ್ದು ದೇವಿಯು ದ್ವಿಭುಜ ಹಾಗೂ ನಾಲ್ಕು ಕೈಗಳನ್ನು ಹೊಂದಿದ್ದಾಳೆ. ಮಹಿಷಮರ್ಧನ ಮಾಡುತ್ತಿರುವ ಭಂಗಿಯಲ್ಲಿದ್ದು ಎಡ ಮತ್ತು ಬಲದಲ್ಲಿ ದ್ವಾರಪಾಲಕರನ್ನು ಕಾಣಬಹುದಾಗಿದೆ. ಭಿತ್ತಿಯ ದೇವಕೋಷ್ಟಕದಲ್ಲಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ.

ನವರಂಗಕ್ಕೆ ಪೂರ್ವ ಮತ್ತು ದಕ್ಷಿಣದಿಂದ ಪ್ರವೇಶದ್ವಾರವಿದೆ ನವರಂಗದಲ್ಲಿನ ನಾಲ್ಕು ಕಂಬಗಳು ಚಚ್ಚೌಕವಾಗಿದ್ದು, ವಿಶೇಷ ಕೆತ್ತನೆಯಿಂದ ಕೂಡಿವೆ. ಭೈರವ, ವೀರಭದ್ರ, ಶಿವಲಿಂಗ, ನಾಗಬಂದ, ಯಾಳಿ, ಆಂಜನೇಯ, ಗಜ, ನಂದಿ, ಪದ್ಮ, ಹಾಲು ಉಣಿಸುತ್ತಿರುವ ಹಸು, ಕಾಳಿಂಗ ಮರ್ಧನ, ಬಾಲಕೃಷ್ಣ, ಕಾರ್ತಿಕೆಯಾ, ಗೋಪಾಲಕೃಷ್ಣ, ಗಣಪತಿ, ಶೈವಸಂತ, ಮತ್ಸ್ಯ, ಹಂಸ ಮತ್ತು ಚಿತ್ರಗಳನ್ನು ಕೆತ್ತಲಾಗಿದೆ. ನವರಂಗದ ಮೇಲ್ಛಾವಣಿಯಲ್ಲಿ ಭುವನೇಶ್ವರಿಯನ್ನು ಬಿಡಿಸಲಾಗಿದೆ. ದೇವಾಲಯದ ಮುಖ್ಯದ್ವಾರವು ಸಾಧಾರಣವಾಗಿದೆ. ತೆರೆದ ಮುಖಮಂಟಪವಿದ್ದು ನಾಲ್ಕು ಕಂಬಗಳನ್ನು ಕಾಣಬಹುದಾಗಿದೆ.

ಸರಸ್ವತಿ ಮತ್ತು ಪಾರ್ವತಿ ಗುಡಿಗಳು

ಈ ದೇವಾಲಯವು ವಿಜಯನಗರ ಕಾಲಾವಧಿಯಲ್ಲಿ ನಿರ್ಮಾಣಗೊಂಡಿದ್ದು, ದೊಡ್ಡ ಕೆರೆಯ ಏರಿಯ ಮೇಲೆ ಪೂರ್ವಭಿಮುಖವಾಗಿ ಈ ದೇವಾಲಯವನ್ನು ಕಾಣಬಹುದಾಗಿದ್ದು ಸರಳ ತಳವಿನ್ಯಾಸದಲ್ಲಿದೆ. ಗರ್ಭಗುಡಿ, ಮುಖಮಂಟಪವಿದೆ. ಗರ್ಭಗುಡಿಯಲ್ಲಿ ಸರಸ್ವತಿ ದೇವಿಯು ಪೀಠದ ಮೇಲೆ ಸುಖಾಸೀನಳಾಗಿದ್ದು ಪ್ರಭಾವಳಿಯು ಲತಾ ಸುರಳಿಯಿಂದ ಕೂಡಿದ್ದು ಆಭರಣಗಳಿಂದ ಶೃಂಗಾರಗಳಾಗಿದ್ದು, ನಾಲ್ಕು ಕೈಗಳಲ್ಲಿ, ಪುಸ್ತಕ, ವೀಣೆ, ಆಯುಧ ಹಿಡಿದಿದ್ದಾಳೆ. ಅದೇ ರೀತಿ ಪಕ್ಕದ ಗುಡಿಯಲ್ಲಿ ಪಾರ್ವತಿಯ ಮೂರ್ತಿಯನ್ನು ಗರ್ಭಗೃಹದಲ್ಲಿ ಕಾಣಬಹುದಾಗಿದ್ದು ಪಾಣಿಪೀಠದ ಮೇಲೆ ಸ್ಥಾನಿಕ ಭಂಗಿಯಲ್ಲಿದೆ, ಕಿರೀಟಧಾರಿಯಾಗಿದ್ದು ಪ್ರಭಾವಳಿಯು ಲತಾ ಸುರಳಿಯಿಂದ ಕೂಡಿರುವುದನ್ನು ಕಾಣಬಹುದು. ಮಂಟಪದ ಮೇಲ್ಛಾವಣಿಯನ್ನು ಸಜ್ಜಾಯಿಂದ ಮುಚ್ಚಲಾಗಿದೆ.

ಗ್ರಾಮದೇವತೆ

ಕುಣಿಗಲ್ ಪಟ್ಟಣದ ಕೇಂದ್ರ ಭಾಗದಲ್ಲಿ ನಿರ್ಮಾಣಗೊಂಡಿದ್ದು ದಕ್ಷಿಣಾಭಿಮುಖವಾಗಿದೆ. ಮೂಲ ದೇವಾಲಯವು ನಗರೀಕರಣದಿಂದ ನಶಿಸಿದ್ದು ಇತ್ತೀಚೆಗೆ ನವೀಕರಣಗೊಂಡಿರುತ್ತದೆ. ಗರ್ಭಗೃಹ, ನವರಂಗ, ಹೊಂದಿದ್ದು, ಗರ್ಭಗುಡಿಯಲ್ಲಿ ದೇವತೆಯ ಮೂರ್ತಿಯ ಬದಲಿಗೆ ಪೀಠದ ಮೇಲೆ ಜ್ಯೋತಿಯನ್ನು ಇಡಲಾಗಿದ್ದು ಅದು ಹಾರದಂತೆ ನೋಡಿಕೊಳ್ಳಲಾಗಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಉಬ್ಬುಶಿಲ್ಪವಿದ್ದು ನವರಂಗದಲ್ಲಿ ಅಷ್ಟಲಕ್ಷ್ಮಿಯರ ವಿಗ್ರಹಗಳನ್ನು ಕಾಣಬಹುದಾಗಿದೆ. ದೇವಾಲಯದ ಮುಂದೆ ಬಲಿಪೀಠ ಇಡಲಾಗಿದೆ. ದೇವಾಲಯವನ್ನು ಕಲ್ಲು ಮತ್ತು ಸಿಮೆಂಟಿನಿಂದ ಕಟ್ಟಲಾಗಿದೆ.

ಮಂದೆ ಮಾರಮ್ಮನ ಗುಡಿ

ಇತ್ತೀಚೆಗೆ ರಸ್ತೆ, ಅಗಲೀಕರಣದಿಂದ ದೇವಾಲಯ ನಶಿಸಿದ್ದು ಲೋಕೋಪಯೋಗಿ ಇಲಾಖೆಯ ಆವರಣದಲ್ಲಿ ನಿರ್ಮಾಣಗೊಂಡಿದ್ದು, ಪೂರ್ವಾಭಿಮುಖವಾಗಿದೆ. ಜನರಿಗೆ ಮತ್ತು ಪ್ರಾಣಿಗಳಿಗೆ ರೋಗ ರುಜನಿಗಳು ಬಾರದಂತೆ ತಡೆಯುವ ಮಾರಮ್ಮನ ಮರೆಹೋಗಿದ್ದಾರೆ. ದೇವಾಲಯ ಗರ್ಭಗುಡಿ ಮತ್ತು ನವರಂಗದಿಂದ ಕೂಡಿದ್ದು ಗರ್ಭಗುಡಿಯಲ್ಲಿ ಕಪ್ಪು ಬಣ್ಣದ ದೇವಿಯ ವಿಗ್ರಹ ಇಡಲಾಗಿದೆ. ಪ್ರತಿ ಮಂಗಳವಾರ ಅಲ್ಲದೆ ದೇವಿಗೆ ವಿಶೇಷ ಪೂಜೆ ಮಾಡಲಾಗುತ್ತದೆ.

ರೇಣುಕಾ ಎಲ್ಲಮ್ಮ ದೇವಿ

ಪಟ್ಟಣದ ಡೊಡ್ಡಪೇಟೆ ರಸ್ತೆಯಲ್ಲಿರುವ ದೇವಾಲಯವಾಗಿದ್ದು ಪೂರ್ವಾಭಿಮುಖವಾಗಿದೆ. ಸುಮಾರು ೧೮-೧೯ನೇ ಶತಮಾನದಲ್ಲಿ ದೇವಾಲಯವು ನಿರ್ಮಾಣಗೊಂಡಿದ್ದು ಇತ್ತೀಚೆಗೆ ನವೀಕರಣಗೊಂಡಿದೆ. ತಳವಿನ್ಯಾಸದಲ್ಲಿ ಗರ್ಭಗೃಹ ಮತ್ತು ನವರಂಗವನ್ನು ಹೊಂದಿದ್ದು ಗರ್ಭಗುಡಿಯಲ್ಲಿ ಪಾಣಿಪೀಠದ ಮೇಲೆ ರೇಣುಕ ಎಲ್ಲಮ್ಮನನ್ನು ಪ್ರತಿಷ್ಠಾಪಿಸಲಾಗಿದೆ. ದೇವಿಯ ಎಡ ಮತ್ತು ಬಲಕ್ಕೆ ಜಮದಗ್ನಿ ಮಹಾಋಷಿ ಮತ್ತು ಗಣಪತಿಯನ್ನು ಇರಿಸಲಾಗಿದೆ. ವಿಶಾಲವಾದ ನವರಂಗವಿದ್ದು ದೇವಾಲಯದ ಮುಂದೆ ದೀಪಸ್ಥಂಭ, ಸಪ್ತಮಾತೃಕೆಯರು ಮತ್ತು ನಾಗರ ವಿಗ್ರಹಗಳನ್ನು ಕಾಣಬಹುದಾಗಿದೆ.

ಕೊಲ್ಲಾಪುರದಮ್ಮ ದೇವಾಲಯ

ಈ ದೇವಾಲಯವು ಕುಣಿಗಲ್ ಪಟ್ಟಣದ ದೊಡ್ಡ ಪೇಟೆ ರಸ್ತೆಯಲ್ಲಿದ್ದು, ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿದೆ, ಮೂಲ ದೇವಸ್ಥಾನವನ್ನು ಕೆಡವಿ ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ. ತಳವಿನ್ಯಾಸದಲ್ಲಿ ಗರ್ಭಗುಡಿ, ನವರಂಗ ಮತ್ತು ಮುಖಮಂಟಪವನ್ನು ಹೊಂದಿದೆ. ಗರ್ಭಗುಡಿಯಲ್ಲಿ ದುರ್ಗಾ ದೇವಿಯನ್ನು ಪ್ರತಿಷ್ಠಾಪಿಸಲಾಗಿದ್ದು, ದೇವಿಯ ಎಡ ಮತ್ತು ಬಲಕ್ಕೆ ಸರಸ್ವತಿ ಮತ್ತು ಕೊಲ್ಲಾಪುರದಮ್ಮನ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ವಿಶಾಲವಾದ ನವರಂಗದಲ್ಲಿ ನಾಲ್ಕು ಕಂಬಗಳಿವೆ ಮುಖ್ಯದ್ವಾರದ ಅಕ್ಕ ಪಕ್ಕ ದ್ವಾರಪಾಲಕರಿದ್ದಾರೆ. ದೇವಾಲಯದ ಎದುರಿಗೆ ದೀಪಸ್ಥಂಭ, ಬಲಿಪೀಠ, ಕೊಂಡದ ಹೊಂಡ, ನಾಗರ ಗುಡಿಯನ್ನು ಕಾಣಬಹುದಾಗಿದೆ.

ಮುಳ್ಕಟಮ್ಮ ದೇವಾಲಯ

ಕುಣಿಗಲ್ ಪಟ್ಟಣದಿಂದ ಪಶ್ಚಿಮಕ್ಕೆ ೧ ಕಿ.ಮೀ. ದೂರದಲ್ಲಿ ಮುಳ್ಕಟಮ್ಮನ ದೇವಾಲಯವಿದ್ದು

ಹೆಸರಿದೆ. (ಶಾಸನ ಸಂಪುಟ-೨೪, ಕು-೨೮, ಪು-೨೦೫) ಶಾಂತಿನಾಥರ ಬಸದಿಯು ರಕ್ಷಣೆ ಇಲ್ಲದೆ ಪಾಳುಬಿದ್ದಿದೆ.

೨. ಕುಣಿಗಲ್ ಪಟ್ಟಣದಲ್ಲಿ ಇತ್ತಿಚೇಗೆ ಪಾರ್ಶ್ವನಾಥರ ದಿಗಂಬರ ಬಸದಿ ಕಾಣಬಹುದಾಗಿದೆ. ಈ ಜೈನ ಬಸದಿಯು ಗರ್ಭಗುಡಿ ಮತ್ತು ನವರಂಗವನ್ನು ಒಳಗೊಂಡಿದ್ದು ಗರ್ಭಗುಡಿಯಲ್ಲಿ ಪೀಠದ ಮೇಲೆ ಜೈನರ ೨೩ನೇ ತೀರ್ಥಂಕರರಾದ ಪಾರ್ಶ್ವಾನಾಥನ ವಿಗ್ರಹ ಕಾಣಬಹುದಾಗಿದೆ. ನವರಂಗದಲ್ಲಿ ಜೈನ ಧರ್ಮಕ್ಕೆ ಸಂಬಂಧಿಸಿದ ವಿಗ್ರಹಗಳನ್ನು ನೋಡಬಹುದಾಗಿದೆ. ಪಾರ್ಶ್ವನಾಥರು ಸುಖಾಸನದಲ್ಲಿ ಕುಳಿತಿದ್ದು ತಲೆಯ ಮೇಲೆ ನಾಗರ ಎಡೆ ಮತ್ತು ಪ್ರಭಾವಳಿಯಿಂದ ಕೂಡಿದ್ದು ಮೂರ್ತಿಯನ್ನು ಅಮೃತ ಶಿಲೆಯಿಂದ ಮಾಡಲಾಗಿದೆ.

ಇಸ್ಲಾಂ ಸ್ಮಾರಕಗಳು (ಧಾರ್ಮಿಕ) ಕಟ್ಟಡಗಳು

ಕುಣಿಗಲ್ ಪಟ್ಟಣವು ಇಸ್ಲಾಂ ಮತದವರನ್ನು ಒಳಗೊಂಡಿದ್ದು ಅವರ ನಂಬಿಕೆ ಆಚರಣೆಗೆ ತಕ್ಕಂತೆ ಧಾರ್ಮಿಕ ಕಟ್ಟಡಗಳನ್ನು ಕಾಣಬಹುದಾಗಿದೆ. ಮುಖ್ಯವಾಗಿ ಮಸೀದಿಗಳು ಮತ್ತು ದರ್ಗಾಗಳನ್ನು ಒಳಗೊಂಡಿದೆ.

ಮುಸಲ್ಮಾನ ಬಾಂದವರು ಕುಣಿಗಲ್ ಪಟ್ಟಣದಲ್ಲಿ ಪ್ರಾರ್ಥನೆ ಸಲ್ಲಿಸುವ ಸಲುವಾಗಿ ಕೋಟೆ ಬೀದಿ ಎಂಬಲ್ಲಿ ಮಸೀದಿ ಕಟ್ಟಿಕೊಂಡಿದ್ದಾರೆ. ಪೂರ್ವಾಭಿಮುಖವಾಗಿದ್ದು ಸಾಕಷ್ಟು ವಿಸ್ತೀರ್ಣ ಒಳಗೊಂಡಿದೆ. ಇಂಡೋ-ಇಸ್ಲಾಮಿಕ್ ಶೈಲಿಯಲ್ಲಿ ಮಸೀದಿ ರಚನೆಗೊಂಡಿದ್ದು ಮಸೀದಿಯ ಮುಂದಿನ ಬಾಗಿಲದಾರಿ ಅಮಲಕ ಆಕಾರವುಳ್ಳ ಕಮಾನುಗಳಿಂದ ಕಟ್ಟಲಾಗಿ, ಪುಷ್ಕಳವಾದ ಸುರುಳಿಗಳಿಂದ ಅಲಂಕೃತವಾಗಿದೆ. ಮಸೀದಿಯಲ್ಲಿನ ಪ್ರಾರ್ಥನೆ ಗೂಡು ಮತ್ತು ಅದರ ಸುತ್ತ ಇರುವ ಗೋಡೆಗಳು ಅತಿ ನಾಜೂಕಾದ ಸುರಳಿ, ನಕ್ಷತ್ರಗಳಿಂದ ಕೂಡಿದೆ. ಕುಂಭ ಪೀಠಗಳ ಮೇಲಿನ ಅರ್ಧ ಸ್ಥಂಭ ಚಿತ್ರಣ ಭಾರತೀಯ ಮಾದರಿಯಲ್ಲಿದ್ದು ಅತ್ಯಂತ ರಮಣೀಯವಾಗಿದೆ. ಅಲ್ಲದೆ ಎತ್ತರವಾದ ಬುರ್ಜಗಳನ್ನು ಕಾಣಬಹುದು.

ದರ್ಗಾಗಳು

ಇಸ್ಲಾಂ ಧರ್ಮದಲ್ಲಿ ದರ್ಗಾಗಳು ಧಾರ್ಮಿಕ ಕೇಂದ್ರಗಳಾಗಿದ್ದು ನಂಬಿಕೆ ಆಚರಣೆಗಳನ್ನು, ಆಸೆ-ಆಕಾಂಕ್ಷೆಗಳನ್ನು ಅಲ್ಲಾನಲ್ಲಿ ಒಪ್ಪಿಸುವುದಕ್ಕಾಗಿ, ಧರ್ಮಪ್ರಚಾರಕ್ಕಾಗಿ ಮುಲ್ಲಾಗಳು ಮತ್ತು ಸೂಫಿ-ಸಂತರು ಈ ದರ್ಗಾಗಳಲ್ಲಿ ಇದ್ದುಕೊಂಡು ಮುಸಲ್ಮಾನ ಬಾಂದವರ ಕಷ್ಟ-ಸುಖಗಳನ್ನು, ದುಃಖ ದುಮ್ಮಾನಗಳನ್ನು ಈಡೇರಿಸುವ ಸಲುವಾಗಿ ದರ್ಗಾಗಳು ನಿರ್ಮಾಣಗೊಂಡಿರುವುದು ವಿಶೇಷವಾಗಿದೆ.

ಕುಣಿಗಲ್ ಪಟ್ಟಣದಲ್ಲಿ ಒಟ್ಟು ೩ ದರ್ಗಾಗಳನ್ನು ಕಾಣಬಹುದಾಗಿದೆ.

೧. ಅಕೀಂ ಷಾ ಆಲಿ ದರ್ಗಾ

೨. ಶಾಲಿಂಷಾ ಕಾದ್ರಿ ದರ್ಗಾ

೩. ಅತಾಷ ವಲೀ ದರ್ಗಾ

ಈ ದರ್ಗಾಗಳ ಸ್ಥಾಪನೆ ಕರ್ನಾಟಕದಲ್ಲಿ ಬಹುಮನಿ ಸುಲ್ತಾನರ ಕಾಲದಿಂದಲೂ ಬೆಳೆದು ಬಂದಿದ್ದು ಹೈದರಾಲಿ ಮತ್ತು ಟಿಪ್ಪು ಸುಲ್ತಾನ ಕಾಲದಲ್ಲಿ ಕುಣಿಗಲ್ ಪಟ್ಟಣದಲ್ಲಿ ಪ್ರಭಾವ ಬೀರಿದ್ದು, ಬೆಳವಣಿಗೆಗೆ ಕಾರಣವಾಗಿದೆ ಎನ್ನಬಹುದು. ಈ ದರ್ಗಾಗಳಲ್ಲಿ ತಮ್ಮ ಧರ್ಮ ಗುರುಗಳ ಸಮಾಧಿ

ಇದ್ದು ಅವರ ಆಸೆ-ಅಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಹೂವು, ಗಂಧ, ಸಕ್ಕರೆ, ಹಸಿರುಬಣ್ಣದ ಬಟ್ಟೆ, ಧೂಪವನ್ನು ಇಟ್ಟು ಪ್ರಾರ್ಥನೆ ಮಾಡುವುದು ವಾಡಿಕೆಯುಂಟು.

ಕ್ರಿಶ್ಚಿಯನ್ ಧರ್ಮ

ವಿಶ್ವದಲ್ಲಿಯೇ ಅತಿದೊಡ್ಡ ಧರ್ಮ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು ಪ್ರಪಂಚದ ಎಲ್ಲಾ ಕಡೆ ಧರ್ಮ ಪ್ರಚಾರ ಮಾಡಿರುವುದು ಕಂಡುಬಂದಿದ್ದು ಇದರ ಪ್ರಭಾವ ಕುಣಿಗಲ್ ಪಟ್ಟಣದ ಮೇಲೆಯೂ ಬೀರಿದ್ದು ಕ್ರಿಶ್ಚಿಯನ್ ಧರ್ಮ ನೆಲೆಯೂರಲು ಅನುವು ಮಾಡಿಕೊಟ್ಟಿದೆ.

ಯೇಸುಕ್ರಿಸ್ತ ಕ್ರೈಸ್ತಧರ್ಮ ಸ್ಥಾಪಕ. ಈತ ಮನುಕುಲದ ಸಂರಕ್ಷಣೆಗಾಗಿ ಧರೆಗಿಳಿದು ಬಂದ ದೇವಪುತ್ರನೆಂದು ಕ್ರೈಸ್ತ ಧರ್ಮಿಯರ ನಂಬಿಕೆ. ಮನುಕುಲದ ಮೇಲೆ ಗಾಢ ಪ್ರಭಾವ ಬೀರಿದ ಧಾರ್ಮಿಕ ವ್ಯಕ್ತಿಗಳಲ್ಲಿ ಯೇಸುವಿನ ಹೆಸರು ಮೊದಲನೆಯ ಸ್ಥಾನದಲ್ಲಿ ನಿಲ್ಲುತ್ತದೆ. ಕ್ರಿಶ್ಚಿಯನ್ ಧರ್ಮದ ಜನಾಂಗ ವಿಶ್ವದ ಎಲ್ಲಾ ಕಡೆಯೂ ನೆಲೆಯೂರಿದೆ.

ಕ್ರೈಸ್ತ ಮಿಷನರಿಗಳ ಪಾತ್ರ

ಕ್ರಿ.ಶ. ೧೫ನೇ ಶತಮಾನದಲ್ಲಿ ಪಶ್ಚಿಮ ಕರಾವಳಿ ಪ್ರದೇಶದಲ್ಲಿ ಪೋರ್ಚುಗೀಸರು ಕಂಡುಬಂದ ಅನಂತರ ಕ್ರೈಸ್ತ ಧರ್ಮಿಯರ ಚಟುವಟಿಕೆಗಳು ಗೋವಾ, ಕರ್ನಾಟಕ, ಮಲಬಾರ್ ಮುಂತಾದ ಪ್ರದೇಶಗಳಲ್ಲಿ ವ್ಯಾಪಕವಾಗಿ ಕಂಡುಬರುತ್ತದೆ. ಕ್ರೈಸ್ತ ಮಿಷನರಿಗಳು ಕೈಗೊಂಡ ಧಾರ್ಮಿಕ ಚಟುವಟಿಕೆಗಳು, ಸ್ಥಾಪಿಸಿದ ಶಿಕ್ಷಣ ಕೇಂದ್ರಗಳು ನಡೆಸಿದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಭಾವ ಇಡೀ ಭಾರತದಲ್ಲಿ ಹರಡಿತು. ಕ್ರೈಸ್ತ ಧರ್ಮದ ಹಿನ್ನಲೆಯಿಂದಲೂ ಕರ್ನಾಟಕ ಭಾರತದಲ್ಲಿ ಮುಖ್ಯ ಸ್ಥಾನವನ್ನು ಪಡಿದಿದೆ.[೮]

೧೯ನೇ ಶತಮಾನದಲ್ಲಿ ವಿಸ್ಲಿಯನ್ ಮಿಷನ್‌ರವರು ಗುಬ್ಬಿ, ಕುಣಿಗಲ್, ತುಮಕೂರು, ಹಾಸನ, ಶಿವಮೊಗ್ಗಗಳಲ್ಲಿ ಮಿಷನರಿಗಳನ್ನು ಸ್ಥಾಪಿಸುತ್ತಾರೆ.[೯] ಕುಣಿಗಲ್ ಪಟ್ಟಣದಲ್ಲಿ ಕ್ರೈಸ್ತ ಧರ್ಮಿಯರು ನೆಲೆಸಿದ್ದು ಅಲ್ಪಸಂಖ್ಯಾತರರಾಗಿದ್ದಾರೆ. ಚರ್ಚ್‌ಗಳನ್ನು ನಿರ್ಮಾಣ ಮಾಡಿಕೊಂಡು ಶಾಂತಿ ಬೋಧನೆ ಮತ್ತು ಧರ್ಮ ಪ್ರಸಾರ ಮಾಡುತ್ತಿದ್ದಾರೆ. ಕ್ರೈಸ್ತ ಮಿಷನರಿ ಸಂಘವು ವಿದ್ಯಾ ಸಂಸ್ಥೆಗಳನ್ನು ಸ್ಥಾಪಿಸಿ ಶಿಕ್ಷಣ ನೀಡುತ್ತಿವೆ. ಆಸ್ಪತ್ರೆಗಳನ್ನು ತೆರೆಯುವುದರ ಮೂಲಕ ಆರೋಗ್ಯ ಸೇವೆ ನೀಡುತ್ತಾರೆ. ಸಮಾಜದಲ್ಲಿ ಕ್ರೈಸ್ತ ಬಾಂಧವರು ಅನ್ಯೋನ್ಯವಾಗಿದ್ದಾರೆ.

೩.೫. ಮೂರ್ತಿ ಶಿಲ್ಪಗಳು

ಶಿಲ್ಪ ಎನ್ನುವ ಮಾತು ಮೊದಲು ಬಹಳ ವ್ಯಾಪಕವಾದ ಅರ್ಥವನ್ನು ಪಡಿದಿದ್ದು, ಪ್ರಸಿದ್ಧವಾದ ೬೪ ಕಲೆಗಳಲ್ಲಿ 'ಶಿಲ್ಪ' ಎನ್ನುವ ಹೆಸರು ಅನ್ವಯವಾಗುತ್ತಿತ್ತು. ಮುಂದೆ ಈ ಪದದ ವ್ಯಾಪ್ತಿ ಪರಿಮಿತಿಗೊಂಡು ಶಿಲ್ಪ ಎಂದರೆ ಮೂರ್ತಿಗಳ ನಿರ್ಮಾಣ ಎಂಬ ಅರ್ಥಕ್ಕೆ ಸೀಮಿತವಾಯಿತು.[೧೦]

ಜಗತ್‌ಸೃಷ್ಟಿಯು ಯಾವಾಗ ಮೊದಲಾಯಿತೋ ಆಗಲೇ ಶಿಲ್ಪವು ಪ್ರಾರಂಭವಾಗಿದೆಯೆಂದು ವೇದವು ಹೇಳಿದೆ. ಈ ಜಗತ್ತಿನ ಸೃಷ್ಟಿಕರ್ತನನ್ನು ಜಗತ್ ಶಿಲ್ಪಿ ಎಂದು ವರ್ಣಿಸಿರುವುದುಂಟು. ಭಾರತೀಯ ಕಲೆಯಲ್ಲಿ ವಾಸ್ತು, ಮೂರ್ತಿ, ಚಿತ್ರಕಲೆಗಳಿಗೆ ಸಂಬಂಧಿಸಿದ ಒಟ್ಟಾರೆ ಅಧ್ಯಯನವನ್ನು 'ಶಿಲ್ಪಶಾಸ್ತ್ರವೆಂದು'

ಗುರುತಿಸಲಾಗುತ್ತದೆ. 'ಮೂರ್ತಿ' ಎಂಬ ಪದಕ್ಕೆ ಪರ್ಯಾಯವಾಗಿ ಬಳಸಿದ ಪದಗಳಿಂದ ಪ್ರತಿಮಾ ಬಿಂಬ, ಪ್ರತಿಕೃತಿ, ವಿಗ್ರಹ ಮುಂತಾದ ಶಿಲ್ಪಗಳು ಅದೊಂದು ಭೌತಿಕ ವಸ್ತು ಎಂಬಂತೆ ಅರ್ಥಮಾಡಿಕೊಡುತ್ತದೆ.[೧೧] ಅರಣ್ಯಕಗಳು, ಋಗ್ವೇದ, ಸ್ಮೃತಿಗಳು ಮುಂತಾದ ಧಾರ್ಮಿಕ ಗ್ರಂಥಗಳಲ್ಲಿ ಶಿಲ್ಪ ಮತ್ತು ಶಿಲ್ಪಿಗೆ ಸಂಬಂಧಿಸಿದಂತೆ, ಶಿಲ್ಪಶಾಸ್ತ್ರದ ಬಗ್ಗೆ ಮಾಹಿತಿಯನ್ನು ಪಡೆಯಬಹುದಾಗಿದೆ.

ಕಾಶ್ಯಪಶಿಲ್ಪ, ಮನಸಾರ, ಸಮರಾಂಗಣ ಸೂತ್ರದಾರ, ಶಿಲ್ಪ ರತ್ನಂ ಮಯಮತಂ, ಮಯವಸ್ತುಶಾಸ್ತ್ರ, ವಿಶ್ವಕರ್ಮ, ವಾಸ್ತುಶಾಸ್ತ್ರ, ಸಕಲಾಧಿಕಾರ, ಕಾಶ್ಯಪಸಂಹಿತೆ, ದೇವತಾ ಮೂರ್ತಿ, ಲಕ್ಷಣ ಪ್ರಸಾದ ಮಂಡನ, ರಾಜವಲ್ಲಭರಂತಹ ಇಪ್ಪತು ಗ್ರಂಥಗಳು ಅತಿ ಪ್ರಮುಖವಾಗಿವೆ. ಕಾರಣ ಇವು ಶಿಲ್ಪಶಾಸ್ತ್ರದ ಬಗ್ಗೆ ತಿಳಿಸುತ್ತದೆ.[೧೨]

*** ಶೈವ ಶಿಲ್ಪಗಳು**

ಶಿವನನ್ನು ಮಲ್ಲಿಕಾರ್ಜುನ, ಪಶುಪತಿ, ಮಹೇಶ್ವರ, ರುದ್ರ, ಕಲ್ಲೇಶ್ವರ, ಭೋಗೇಶ್ವರ, ಮುಕ್ತೆಶ್ವರ, ಅರ್ಧನಾರೇಶ್ವರ, ನೀಲಕಂಠೇಶ್ವರ ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ಶಿವನನ್ನು ಹೆಚ್ಚಾಗಿ ಲಿಂಗದ ರೂಪದಲ್ಲಿ ಪೂಜೆ ಮಾಡುತ್ತಿದ್ದು, ಮೂರ್ತಿ ರೂಪದಲ್ಲಿ ಪೂಜಿಸುವುದು ಕಡಿಮೆ ಶಿವನನ್ನು ಪೂಜಿಸುವವರನ್ನು (ಆರಾಧಿಸುವವರು) ಶೈವ ಪಂಥಕ್ಕೆ ಸೇರಿಸಲಾಗಿದೆ. ಶಿವನ ಲೀಲಾವಳಿಗಳು ಶಿಲ್ಪರೂಪದಲ್ಲಿ ಭಿತ್ತಿಯ ಮೇಲೆ, ಕಂಬಗಳ ಮೇಲೆ ಕೆತ್ತಲ್ಪಟ್ಟಿರುತ್ತಾರೆ. ಪ್ರಸ್ತುತ ಅಧ್ಯಯನದಲ್ಲಿ ಸಾಕಷ್ಟು ಶೈವ ದೇವಾಲಯಗಳು ಕಾಣಿಸಿವೆ. ಕುಣಿಗಲ್ ಪಟ್ಟಣದಲ್ಲಿ ಆಡಳಿತ ನಡೆಸಿದ ಅರಸು ಮನೆತನಗಳು ಶೈವಧರ್ಮದ ಅನುಯಾಯಿಯಾಗಿದ್ದು ಸಾಕಷ್ಟು ಪ್ರೊತ್ಸಾಹ ಮತ್ತು ಸಹಕಾರ ನೀಡಿದ್ದಾರೆ. ಸೋಮೇಶ್ವರ, ಪದ್ಮೇಶ್ವರ, ಪಂಚಲಿಂಗೇಶ್ವರ, ಶಿವರಾಮೇಶ್ವರ, ಕಲ್ಲೇಶ್ವರ ಮತ್ತು ಚಂದ್ರಮೌಳೇಶ್ವರ ದೇವಾಲಯಗಳನ್ನು ಕಾಣಬಹುದು.

ಶಿವಲಿಂಗ

ಲಿಂಗವು ಶೈವಧರ್ಮದ ಪ್ರತೀಕ ಶಿವನನ್ನು ಲಿಂಗ ರೂಪದಲ್ಲಿ ಪೂಜಿಸುತ್ತಾರೆ ಲಿಂಗಾತ್ ಸರ್ವಂ ಸಮುತ್ಪನ್ನಂ ಲಯಂ ತಸ್ಮಿನ್ ಪ್ರಕೀರ್ತಿತಮ್ ಲಿಂಗದಿಂದಲೇ ಸಕಲ ಜಗತ್ತು ಹುಟ್ಟುತ್ತದೆ. ಮತ್ತು ಅಲ್ಲಿಯೇ ಲಯವಾಗುತ್ತದೆ.[೧೩] ಸುಪ್ರಭೇದಾಗಮದ ಪ್ರಕಾರ ಗರ್ಭಗೃಹದಲ್ಲಿ ಸ್ಥಾಪಿತಗೊಂಡ ಅಚಲ ಲಿಂಗಗಳಲ್ಲಿ ಒಂಬತ್ತು ವಿಧಗಳಿವೆ. ಅವು ಸ್ವಯಂಭು, ಪುರವ, ದೈವತ್ವ, ಗಾಣಪತ್ಯ, ಅಸುರ, ಸುರ, ರಾಕ್ಷಸ, ಮಾನುಷ, ಬಾಣಲಿಂಗಗಳಾಗಿವೆ,[೧೪] ಮನುಷ್ಯಾಕೃತ ಲಿಂಗಗಳು ಬಹುವಾಗಿ ಕಂಡುಬರುತ್ತವೆ. ಇದು ಬ್ರಹ್ಮಭಾಗ, ವಿಷ್ಣು ಭಾಗ, ವೃತ್ತಾಕಾರದ ಪೂಜಾ ಭಾಗವು ರುದ್ರ ಭಾಗ, ರುದ್ರಭಾಗದಲ್ಲಿ ಬ್ರಹ್ಮ ಸೂತ್ರವಿರುತ್ತದೆ ಮತ್ತು ಭಿನ್ನ ಭಿನ್ನ ಶಿರೋವರ್ತನಗಳಿರುತ್ತವೆ.ಅದುದರಿಂದ ಪ್ರತಿಯೊಂದು ದೇವಾಲಯದಲ್ಲಿ ಇರುವ ಮನುಷ್ಯಾಕೃತ ಲಿಂಗಗಳೂ ತ್ರಿಮೂರ್ತಿಗಳ ಸಂಕೇತವಾಗಿದೆ.[೧೫]

ಕುಣಿಗಲ್ ಪಟ್ಟಣದ ಸೋಮೇಶ್ವರ ದೇವಾಲಯದ ಗರ್ಭಗುಡಿಯಲ್ಲಿ ಉದ್ಭವಮೂರ್ತಿ ಇದೆ. ಸುಮಾರು ೧/೨ ಅಡಿ ಎತ್ತರವಾಗಿದ್ದು ಕಪ್ಪು ಶಿಲೆಯಿಂದ ಕೂಡಿದ ಗುಂಡಿನಂತಿದ್ದು ಸುತ್ತಲು ಪಾಣಿಪೀಠದಂತೆ ಮಾಡಿ ಎಡಭಾಗಕ್ಕೆ ಜಲಹರಿಮಾಡಿದ್ದಾರೆ. ಪಂಚಲಿಂಗೇಶ್ವರ ಗುಡಿಯಲ್ಲಿ ಸಾಲಾಗಿ ೫ ಗರ್ಭಗೃಹಗಳಿದ್ದು ಪ್ರತಿಯೊಂದು ಗರ್ಭಗುಡಿಯಲ್ಲಿ ಒಂದೊಂದು ಲಿಂಗ ಪ್ರತಿಷ್ಠಾಪಿಸಿದ್ದಾರೆ. ಲಿಂಗವು ಸುಮಾರು ೨೧/೨

ಅಡಿ ಎತ್ತರವಿದ್ದು ಕಪ್ಪು ಶಿಲೆಯಿಂದ ನಿರ್ಮಾಣವಾಗಿವೆ. ಇದು ಮೂರು ಹಂತದಲ್ಲಿದ್ದು ಪೀಠಪಾಣಿಬಟ್ಟಲು, ಶಿರೋಭಾಗಗಳನ್ನು ಹೊಂದಿದೆ. ಪೀಠದಲ್ಲಿ ಉಪಾನ, ಜಗತಿ, ಪದ್ಮ, ತ್ರಿಪಟ್ಟ ಕುಮುದ ಗಮನ ಸೆಳೆಯುತ್ತವೆ ನಂತರ ಪಾಣಿಪಟ್ಟಿಯಲ್ಲಿ ಜಲಹರಿಯಿದೆ.

ಭೈರವ ಶಿಲ್ಪ

ಭೈರವ ಶಬ್ದಕ್ಕೆ ಭಯಂಕರ ಎಂಬರ್ಥವಿದೆ.[೧೬] ಭೂತಪ್ರೇತ ಪಿಶಾಚಿಗಳ ಉಚ್ಚಾಟನೆಗೆಂದು ಭೈರವನ ಪೂಜೆ ಪ್ರಸಿದ್ಧಿವಾಗಿದೆ. ಶಿಲ್ಪರತ್ನದ ಪ್ರಕಾರ ಭಯಂಕರ ಮುಖ ಉಳ್ಳವನಾದ ಇವನು ನಾಲ್ಕು ಕೈಗಳನ್ನು ಹೊಂದಿದ್ದು ಖಡ್ಗ, ತ್ರಿಶೂಲ, ಡಮರು, ಮತ್ತು ರುಂಡವನ್ನು ಹಿಡಿದಿರುತ್ತಾನೆ. ಕೋರೆಹಲ್ಲುಗಳನ್ನು ಹೊಂದಿದವನಾಗಿದ್ದು ತಲೆಕೂದಲು ನೆಟ್ಟಗೆ ನಿಂತಿರುತ್ತವೆ. ಕೊರಳಿನಲ್ಲಿ ರುಂಡಮಾಲೆಯನು ಧರಿಸಿದವನು ಹಾವುಗಳಿಂದ ಅಲಂಕರಿಸಿಕೊಂಡಿರುವನು ಮತ್ತು ನಾಯಿಯೊಂದಿಗೆ ಇವನನ್ನು ಗುರುತಿಸಲಾಗುತ್ತದೆ ಆದುದರಿಂದ ಭೈರವನನ್ನು ಕ್ಷೇತ್ರ ಪಾಲನೆಂದು ಹೇಳಲಾಗುತ್ತದೆ.[೧೭]

ರಾಮೇಶ್ವರ ದೇವಾಲಯದ ಮುಖ ಛಾವಣಿಯ ಮುಂದೆ ಬಲಭಾಗದ ಸಣ್ಣಗುಡಿಯಲ್ಲಿ ಭೈರವನ ಶಿಲ್ಪವಿದೆ. ೨ ಅಡಿ ಎತ್ತರವಾಗಿದೆ. ಚತುರ್ಭುಜ ದಾರಿಯಾರ ಭೈರವನು ತ್ರಿಭುಂಗಿಯಲ್ಲಿರುವನು. ತನ್ನ ಕೈಯಲ್ಲಿ ಕ್ರಮವಾಗಿ ಕತ್ತಿ, ಢಮರು, ತ್ರಿಶೂಲ, ಕಪಾಲದ ಜೊತೆಗೆ ರುಂಡವನ್ನು ಹಿಡಿದಿರುವನು. ಕಿರೀಟಧಾರಿಯಾದ ಶಿಲ್ಪವು ನಗ್ನವಾಗಿದ್ದು, ಕಂಠಹಾರ, ಕೊರಳಸರ, ಉದರಬಂಧ, ಕಾಲ್ಕಡಗ, ಕಿಂಕಿಣಿ, ಮಣಿಸರ ಇತ್ಯಾದಿ ಆಭರಣಗಳನ್ನು ಧರಿಸಿದ್ದು ಎಡಭಾಗದಲ್ಲಿ ರುಂಡದಿಂದ ಬೀಳುತ್ತಿರುವ ರಕ್ತವನ್ನು ಸವಿಯಲು ನಾಯಿಯ ನಾಲಿಗೆ ಚಾಚಿ ಮೇಲ್ಮುಖ ಮಾಡಿದೆ.

ಗಣಪತಿ ಶಿಲ್ಪಗಳು

ಗಣಪತಿಯು ಭಾರತೀಯ ಜಯ, ಶುಭ ವೈಭವದ ಸಂಕೇತ, ಶಿವ, ಬ್ರಹ್ಮಾಂಡ, ಗಣೇಶ, ವರಾಹ, ಸ್ಕಂದ, ಬ್ರಹ್ಮ-ದೈವರ್ತ, ಮತ್ಸ್ಯ, ವಾಮನ, ಪದ್ಮ ಮೊದಲಾದ ಪುರಾಣಗಳು ಹಾಗೂ ರೂಪಮಂಡನ, ಕಾಮಿಕಾಮಗಳು ಗಣಪತಿಯನ್ನು ಉಲ್ಲೇಖಿಸಿವೆ.[೧೮] ಶಿವಪುರಾಣವು ಗಣಪತಿಯ ಹುಟ್ಟಿನ ಬಗ್ಗೆ ತಿಳಿಸುತ್ತದೆ. ಗಣಪತಿಯ ನಾಲ್ಕು ಕೈಗಳಿರುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಗಣಪತಿಯನ್ನು ಬಾಲಗಣಪ, ತರುಣಗಣಪತಿ, ಭಕ್ತಿ ವಿಘ್ನೇಶ್ವರ ವೀರವಿಘ್ನೇಶ, ಮಹಾಗಣಪತಿ, ಪ್ರಸನ್ನ ಗಣಪತಿ, ಧ್ವಜಗಣಪತಿ ಉರ್ದ್ವಗಣಪತಿ, ಉನ್ಮತ್ತ ಗಣಪತಿ, ಏಕದಂತ, ನೃತ್ಯಗಣಪತಿ ಮತ್ತು ಮೂಷಿಕವಾಹನ ಎಂಬುದಾಗಿ ನಾನಾ ಹೆಸರಿನಿಂದ ಕರೆಯಲಾಗುತ್ತದೆ.[೧೯]

ಸಾಮಾನ್ಯವಾಗಿ ಗಣಪತಿಯ ಶಿಲ್ಪಗಳು ಕುಳಿತ ಭಂಗಿಯಲ್ಲಿದ್ದು ಆನೆಮುಖ ಸುತ್ತಿದಸೊಂಡಿಲು. ದೊಡ್ಡಹೊಟ್ಟೆ, ನಾಲ್ಕು ಕೈಗಳಿಂದ ಕೂಡಿದವನಾಗಿ ಪಾಶ, ಅಂಕುಶ, ಅಭಯ, ಮೋದಕಧಾರಿಯಾಗಿ ಕಂಡುಬರುತ್ತಾನೆ. ಇಲಿಯು ಗಣಪತಿಯ ವಾಹನವಾಗಿರುತ್ತದೆ. ಕುಣಿಗಲ್ ಪಟ್ಟಣದ ಶಿವರಾಮೇಶ್ವರ, ಸೋಮೇಶ್ವರ, ವೆಂಕಟರಮಣ, ಚಂದ್ರಮೌಳೇಶ್ವರ ಗುಡಿಯಲ್ಲಿ ಗಣಪತಿ ವಿಗ್ರಹ ಕಾಣಬಹುದಾಗಿದೆ. ಪದ್ಮೇಶ್ವರ ಗುಡಿಯಲ್ಲಿ ಗಣಪತಿಯ ಶಿಲ್ಪವಿದೆ. ಸುಮಾರು ೨ ಅಡಿ ಎತ್ತರವಿದೆ. ಕಪ್ಪುಶಿಲೆಯಿಂದ ಮಾಡಲ್ಪಟ್ಟಿದ್ದು ನಾಲು ಕೈಗಳನ್ನು ಹೊಂದಿದ್ದು ಕೈಗಳಲ್ಲಿ ದಂಡ, ಪರಶು, ಅಭಯ ಅಸ್ತ, ಮತ್ತು ಪಾಶವನ್ನು ಕಾಣಬಹುದಾಗಿದ್ದು ಪಾಣಿಪಟ್ಟಿಯ ಮೇಲೆ ಸುಖಾಸನದಲ್ಲಿ ಕುಳಿತಿದ್ದಾನೆ. ಭುಜದಲ್ಲಿ

ಸ್ಕಂದಮಾಲೆ, ಅಗಲವಾದ ಕಿವಿ, ಕಿರೀಟಧಾರಿ ಹಾಗೂ ಪ್ರಭಾವಳಿಯಿಂದ ಕೂಡಿದ್ದು ಹೊಟ್ಟೆಯನ್ನು ಹಾವು ಸುತ್ತುವರೆಯಲ್ಪಟ್ಟಿದೆ.

ಸೂರ್ಯ

ಸೋಮೇಶ್ವರ ದೇವಾಲಯದಲ್ಲಿ ೩ ಅಡಿ ಎತ್ತರದ ಸೂರ್ಯನ ವಿಗ್ರಹವಿದ್ದು ಕಪ್ಪು ಶಿಲೆಯಿಂದ ಮಾಡಲ್ಪಟ್ಟಿದ್ದು ಸೂರ್ಯನು ಪೀಠದ ಮೇಲೆ ಸ್ಥಾನಿಕ ಭಂಗಿಯಲ್ಲಿರುವನು. ದ್ವಿಭುಜಧಾರಿಯಾದ ಸೂರ್ಯನು ಎರಡು ಕೈಗಳಲ್ಲಿ ಪದ್ಮವನ್ನು ಹಿಡಿದಿದ್ದು, ಕಿರೀಟಧಾರನಾಗಿದ್ದಾನೆ ಹಿಂಭಾಗ ಪ್ರಭಾವಳಿ ಇದೆ. ಕಂಠಹಾರ, ಕೊರಳಹಾರ, ಕಾಲ್ಗಡಗ, ಉದರಬಂಧವಿದ್ದು ಆಭರಣ ಧರಿಸಿದ್ದಾನೆ. ಪಾದದ ಎಡಬಲಕ್ಕೆ ಸೇವಕರಿದ್ದಾರೆ. ಹಾಗೂ ಪೀಠದ ಸುತ್ತ ಅಶ್ವಗಳ ಸಾಲು ನಿಂತಿದೆ. ಅಲ್ಲದೆ ನವಗ್ರಹಗಳಿಂದ ಸುತ್ತುವರಿದ ಪ್ರಭಾವಳಿಯನ್ನು ಕಾಣಬಹುದಾಗಿದೆ.

ನಂದಿಶಿಲ್ಪ

ಶಿವನಗಣ ದೇವತೆಗಳಲ್ಲಿ ಕಂಡುಬರುವ ನಂದಿ ನಂದೀಶ ಅಥವಾ ನಂದೀಶ್ವರನನ್ನು ಮಾನವ ರೂಪದಲ್ಲಿ ೩ ಕಣ್ಣುಗಳನ್ನು, ನಾಲ್ಕು ಕೈಗಳನ್ನು ಹೊಂದಿದ್ದು. ಹುಲಿಚರ್ಮವನ್ನು ಧರಿಸಿರುವನೆಂದು ಹೇಳಲಾಗಿದೆ.[೨೦] ಇವನನ್ನು ವೃಷಭರೂಪದಲ್ಲಿ ಗುರುತಿಸಲಾಗುತ್ತದೆ. ಪ್ರತಿ ಶಿವಾಲಯದಲ್ಲೂ ಶಿವನ ಎದುರಿಗೆ ವೃಷಭರೂಪದ ನಂದಿ ಶಿಲ್ಪವನ್ನು ಕಾಣುತ್ತೇವೆ. ನಂದಿಯು ಶಿವನ ವಾಹನ ಎಂದು ಪುರಾಣಗಳಲ್ಲಿ ಹೇಳಿದೆ. ಶಿವನನ್ನು ವೃಷಧ್ವಜ, ವೃಷಕೇತನ ಎಂದು ಕರೆಯಲಾಗಿದೆ. ಸಿಂಧೂ ಸಂಸ್ಕೃತಿಯಲ್ಲಿಯೂ ವೃಷಭಕ್ಕೆ ಪ್ರಾಮುಖ್ಯತೆ ಇದ್ದುದನ್ನು ಕಾಣುತ್ತೇವೆ. ಒಟ್ಟಾರೆ ನಂದಿಯು ಶೈವ ದೇವಾಲಯಗಳಲ್ಲಿ ಅತ್ಯಂತ ಪ್ರಾಮುಖ್ಯತೆ ಪಡೆದ ಶಿಲ್ಪವೆಂದು ತಿಳಿದುಬರುತ್ತದೆ. ಸೋಮೇಶ್ವರ ದೇವಾಲಯದಲ್ಲಿ ಶಿವಲಿಂಗಕ್ಕೆ ಎದುರಾಗಿ ನಂದಿಯ ಶಿಲ್ಪವಿದೆ. ೨ ಅಡಿ ಎತ್ತರ ಮತ್ತು ೩ ಅಡಿ ಉದ್ದವಿದ್ದು ದುಂಡಾಗಿದೆ. ಗಂಟೆಹಾರ, ಹಣೆಪಟ್ಟಿ ಕೊರಳಪಟ್ಟಿ, ಡುಬ್ಬ ಬಳಸಿದ ಪದಕ ಹಾರ, ಗೆಜ್ಜೆಯಿದ್ದು ಅಲಂಕೃತಗೊಂಡಿದೆ. ಕಾಲುಗಳನ್ನು ಮಡಿಚಿಕೊಂಡು ಎಡಗಾಲನ್ನು ಬಗ್ಗಿಸಿದೆ ಈ ನಂದಿ ವಿಗ್ರಹವನ್ನು ಕಪ್ಪು ಶಿಲೆಯಿಂದ ಮಾಡಲಾಗಿದೆ.

ವೀರಭದ್ರ ಶಿಲ್ಪಗಳು

ರುದ್ರನ ಉಗ್ರರೂಪಗಳ ಗುಂಪಿಗೆ ಸೇರಿದ ಇನ್ನೊಂದು ಪ್ರಚಲಿತ ಮೂರ್ತಿಯೆಂದರೆ ವೀರಭದ್ರನದು. ವೀರಭದ್ರನನ್ನು ರುದ್ರಗಣದಲ್ಲಿ ಸೇರಿಸಿದವನೆಂದೂ ವ್ಯವಹರಿಸುವುದಿಂದ ಶಿವನ ಲೀಲಾವತಾರಗಳಲ್ಲಿ ಒಂದು ಎಂದೇ ಎಣಿಕೆ. ಅವನ ಮೂರ್ತಿ ಲಕ್ಷಣದಲ್ಲಿ ಉಗ್ರ, ಅತಿಕ್ರೂರ, ಸರ್ಪದೋಷನಿಬರ್ಹಣ, ಕರಾಳಾಟ್ಟಹಾಸ, ಗದಾಮುಷ್ಟಿ ಹಸ್ತ, ಭುಜಂಗಗಣ ಭೂಷಿತ, ಭಯದ ಪಾಲನೇತ್ರಾಸನ, ದಿಗಂಬರ ಮೊದಲಾದ ವಿವರಗಳಿವೆ. ಕನ್ನಡನಾಡಿನಲ್ಲಿ ವೀರಭದ್ರನ ಮೂರ್ತಿಗಳು ಹೆಚ್ಚಾಗಿ ಕಂಡುಬರುತ್ತವೆ. ವೀರಭದ್ರನನ್ನು ವೀರಯೋಧ ದೇವತೆಯೆಂತಲೂ ವೀರಪರಂಪರೆಯ ಪ್ರತೀಕವಾದ ದೇವತೆಯೆಂತಲೂ ಕರೆಯಲಾಗಿದೆ. ಶೈವಾಗಮಗಳಲ್ಲಿ ವೀರಭದ್ರನಿಗೆ ಒಂದು ಸ್ಥಾನವಿರುವುದು ಹಾಗೂ ವೀರಭದ್ರಾಗಮವೂ ಇರುವುದು ಗಮನಾರ್ಹ.

ವೀರಭದ್ರನು ಕಪ್ಪು ಮೈಬಣ್ಣದವನು. ಮೂರು ಕಣ್ಣುಳ್ಳವನ್ನು, ನಾಲ್ಕು ಕೈಗಳಲ್ಲಿ ಖಡ್ಗ, ಬಿಲ್ಲು,

ಬಾಣ, ಗುರಾಣಿಗಳನ್ನು ಹಿಡಿದಿರುವನು ರುಂಡ ಮಾಲೆಯನ್ನು ಪಾದಾರಕ್ಷೆಯನ್ನು ಧರಿಸಿರುವನು ಅವನ ಸೊಂಟಪಟ್ಟಿಯಲ್ಲಿ ವಸ್ತ್ರವನ್ನು ಧರಿಸಿರುವನು.[21]

*** ವೈಷ್ಣವ ಶಿಲ್ಪಗಳು**

ವೈಷ್ಣವ ಶಿಲ್ಪಗಳಲ್ಲಿ ವಿಷ್ಣುಶಿಲ್ಪವನ್ನು ಮುಖ್ಯವಾಗಿ ಕಾಣುತ್ತೇವೆ. ವಿಷ್ಣುವು ಲೋಕಕಂಟಕರನ್ನು ನಿಗ್ರಹಿಸಲು, ಧರ್ಮವನ್ನು ರಕ್ಷಿಸಲು ೧೦ ಅವತಾರಗಳನ್ನು ಎತ್ತಿರುವನೆಂದು ಪುರಾಣಗಳು ಉಲ್ಲೇಖಿಸುತ್ತವೆ. ಅವು ಕ್ರಮವಾಗಿ ಮತ್ಸ್ಯ, ಕೂರ್ಮ, ವರಹ, ನರಸಿಂಹ, ವಾಮನ, ಪರಶುರಾಮ, ರಘುರಾಮ, ಕೃಷ್ಣ, ಬುದ್ಧ, ಮತ್ತು ಕಲ್ಕಿ.[22] ಮಾನಸಾರವು ವಿಷ್ಣುವಿನ ಸಾಮಾನ್ಯ ವಿವರಣೆಯನ್ನು ಕೊಡುತ್ತದೆ. ನಾಲ್ಕು ಕೈಗಳಿಂದ ಎರಡು ಕಣ್ಣುಗಳಿಂದ ಕೂಡಿದವನಾಗಿದ್ದು ವಿಜೃಂಭಿಸುವ ಕಿರೀಟವನ್ನು ಹಳದಿ ಬಣ್ಣದ ವಸ್ತ್ರವನ್ನು ಧರಿಸಿರುವನು. ಅವನ ಎದೆಯ ಮೇಲೆ ಶುಭಕಾರಕನಾದ ಶ್ರೀವಸ್ತ್ರ ಮುದ್ರೆಯು ಇರುವುದು ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗಧಾ, ಪದ್ಮಗಳನ್ನು ಹಿಡಿದಿರುವನು. ಮೊಣಕಾಲಿನವರೆಗೂ ವನಮಾಲೆಯನ್ನು ಧರಿಸಿರುವನು. ಸಾಮಾನ್ಯವಾಗಿ ವಿಷ್ಣುವಿನ ಎಡಬಲದಲ್ಲಿ ಲಕ್ಷ್ಮಿ ಮತ್ತು ಭೂದೇವಿ ಇರುವರು. ವಿಷ್ಣು ಶಿಲ್ಪದಲ್ಲಿ ಸ್ಥಾನಿಕ, ಆಸೀನ ಮತ್ತು ಶಯನ ಎಂಬ ಮೂರು ವಿಧಗಳಿವೆ. ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ವೈಷ್ಣವ ಮೂರ್ತಿಶಿಲ್ಪಗಳಲ್ಲಿ ಚನ್ನಕೇಶವ, ಕೋದಂಡರಾಮ, ರಂಗನಾಥ, ಗೋಪಾಲಕೃಷ್ಣ, ಆಳ್ವಾರರು ಹನುಮ, ಗರುಡ ಮುಂತಾದವುಗಳು ಕಂಡುಬರುತ್ತವೆ.

ಚನ್ನಕೇಶವ

ಶ್ರೀಚನ್ನಿಗರಾಯ ಮತ್ತು ನರಸಿಂಹ ದೇವಾಲಯದಲ್ಲಿ ಚನ್ನಕೇಶವನ ವಿಗ್ರಹ ಕಾಣಬಹುದಾಗಿದೆ. ಎತ್ತರವಾದ ಪಾಣಿಪೀಠದ ಮೇಲೆ ಸ್ಥಾನಿಕ ಭಂಗಿಯ ಸೌಮ್ಯಕೇಶವನ ವಿಗ್ರಹ ಕಾಣಬಹುದಾಗಿದ್ದು ಸುಮಾರು ೩ ಅಡಿ ಎತ್ತರವಿದೆ. ಕಪ್ಪು ಶಿಲೆಯಿಂದ ಮಾಡಲಾಗಿದ್ದು ಪಾಣಿಪೀಠದಲ್ಲಿ ಗರುಡನ ಉಬ್ಬುಶಿಲ್ಪ ಮತ್ತು ಎಡಗಡೆ ಜಲಹರಿಯನ್ನು ಕಾಣಬಹುದು. ಶಂಖ, ಚಕ್ರ, ಗದಾ ಮತ್ತು ಪದ್ಮವನ್ನು ಹಿಡಿದಿದ್ದು ಕಿರೀಟಧಾರನಾಗಿದ್ದಾನೆ. ಹಿಂದೆ ಪ್ರಭಾವಳಿ ಸುರಳಿಯಿಂದ ಅಲಂಕೃತಗೊಂಡಿದ್ದು ಪಾದದ ಎಡ-ಬಲದಲ್ಲಿ ಶ್ರೀದೇವಿ ಮತ್ತು ಭೂದೇವಿಯನ್ನು ಕಾಣಬಹುದು.

ನರಸಿಂಹ

ಕುಣಿಗಲ್ ಪಟ್ಟಣದ ನರಸಿಂಹ ಗುಡಿಯಲ್ಲಿ ನರಸಿಂಹನ ವಿಗ್ರಹ ಕಾಣಬಹುದಾಗಿದ್ದು ಸುಮಾರು ೧½ ಅಡಿ ಎತ್ತರವಿದ್ದು ಚತುರ್ ಭುಜಗಳಿಂದ ಕೂಡಿದ್ದು ಶಂಖ, ಚಕ್ರ, ಗದಾ ಮತ್ತು ಅಭಯ ಹಸ್ತ ಕಾಣಬಹುದು. ಹಿಂದೆ ಪ್ರಭಾವಳಿ ಸುರಳಿಯಿಂದ ಅಲಂಕೃತಗೊಂಡಿದೆ. ಪಾಣಿ ಪೀಠದ ಮೇಲೆ ಸ್ಥಾನಿಕ ಭಂಗಿಯಲ್ಲಿದ್ದು, ಪಾದದ ಎಡ-ಬಲಭಾಗದಲ್ಲಿ ಶ್ರೀದೇವಿ ಮತ್ತು ಭೂದೇವಿಯನ್ನು ಕಾಣಬಹುದು. ಕಪ್ಪು ಶಿಲೆಯಿಂದ ವಿಗ್ರಹವನ್ನು ಕೆತ್ತಲಾಗಿದೆ.

ಗರುಡ

ಗರುಡನು ವಿಷ್ಣುವಿನ ವಾಹನವಾಗಿದ್ದು ಎಲ್ಲಾ ವಿಷ್ಣುವಿನ ದೇವಾಲಯಗಳಲ್ಲಿ ಕಾಣಬಹುದಾಗಿದೆ. ಸಾಮಾನ್ಯವಾಗಿ ಗರಡನಿಗೆ ದ್ವಿಭುಜವಿರುತ್ತವೆ. ಎರಡು ಕೈಗುಳನ್ನು ಕಾಣಬಹುದು. ಭುಜದ ಹಿಂದೆ

ರೆಕ್ಕೆಯನ್ನು ಕಾಣಬಹುದು. ಕುಣಿಗಲ್ ಪಟ್ಟಣದ ನರಸಿಂಹಗುಡಿಯಲ್ಲಿ ಗರುಡನಿಗೆ ವಿಶೇಷವಾಗಿ ಚತುರ್ಭುಜವಿದ್ದು ನಾಲ್ಕು ಕೈಗಳಿರುವುದು ವಿಶೇಷ. ತ್ರಿಭಂಗಿಯಲ್ಲಿದ್ದು ಸುಮಾರು ೧ ೧/೨ ಅಡಿ ಎತ್ತರವಿದ್ದು ಕಪ್ಪು ಶಿಲೆಬಳಸಿ ವಿಗ್ರಹ ಮಾಡಿದ್ದಾರೆ.

ಆಳ್ವಾರರು

ವೈಷ್ಣವ ಧರ್ಮದಲ್ಲಿ ಆಳ್ವಾರರ ಪಾತ್ರ ವಿಶಿಷ್ಟವಾಗಿದ್ದು, ಪೆರಿಯಾಳ್ವಾರ್, ನಮ್ಮಾಳ್ವಾರ್, ಬೂದತ್ತಳ್ವಾರ್, ಪೇಯಾಳ್ವಾರ್, ತಿರುಮಂಗ್ಯೆ ಆಳ್ವಾರ್, ತೊಂಡರಪೋಡಿ ಆಳ್ವಾರ್, ಕುಲಶೇಖರ ಆಳ್ವಾರ್, ತಿರುಮಳೈಶೈಯಳ್ವಾರ್ ಮತ್ತು ಅಂಡಾಳ್ ಆಳ್ವಾರ್ ಪ್ರಮುಖರಾಗಿದ್ದಾರೆ. ನರಸಿಂಹ ದೇವಾಲಯ ಮತ್ತು ತುಡಿಕೆ ವೆಂಕಟರಮಣ ದೇವಾಲಯದಲ್ಲಿ ಆಳ್ವಾರರ ಶಿಲ್ಪಗಳನ್ನು ಕಾಣಬಹುದಾಗಿದೆ.

ಆಂಜನೇಯ

ಆಂಜನೇಯ ರಾಮನ ಭಂಟ (ಸೇವಕ) ನಾಗಿದ್ದು ವೈಷ್ಣವ ದೇವಾಲಯಗಳಲ್ಲಿ ಆಂಜನೇಯ ವಿಗ್ರಹಗಳನ್ನು ಕಾಣಬಹುದು. ಕೋಟೆ ಆಂಜನೇಯ ಸ್ವಾಮಿ ದೇವಾಲಯದಲ್ಲಿ ೫ ಅಡಿ ಎತ್ತರದ ಆಂಜನೇಯ ವಿಗ್ರಹವಿದ್ದು, ತ್ರಿಭಂಗಿಯಲ್ಲಿ ನಿಂತಿದ್ದು ಬಲಗೈಯನ್ನು ಮೇಲೆತ್ತಿದ್ದಾನೆ. ಬಾಲವು ಉದ್ದವಾಗಿದ್ದು ಗಂಟೆಯನ್ನು ಸೇರಿಸಲಾಗಿದೆ. ಕಿರೀಟಧಾರಿಯಾದ ಆಂಜನೇಯ ದ್ವಿಭುಜ ಹೊಂದಿದ್ದಾನೆ. ಕಾಲ್ಗಡಗ ಹಾಕಿದ್ದು, ದಕ್ಷಿಣದ ಕಡೆ ಮುಖಮಾಡಿದ್ದಾನೆ. ಬಾಲಕ್ಕೆ ಘಂಟೆಯನ್ನು ಕಟ್ಟಲಾಗಿದೆ. ಈ ಶಿಲ್ಪವನ್ನು ಎತ್ತರವಾದ ಗ್ರಾನೈಟ್ ಶಿಲೆಯಲ್ಲಿ ಕೆತ್ತಿಲಾಗಿದೆ.

ಕೋದಂಡರಾಮ

ನರಸಿಂಹ ದೇವಾಲಯದ ಮುಖಮಂಟಪದ ಗುಡಿಯಲ್ಲಿ ಕೋದಂಡರಾಮನ ವಿಗ್ರಹವಿದೆ. ಒಂದೇ ಪಾಣಿಪೀಠದ ಮೇಲೆ ರಾಮ, ಲಕ್ಷ್ಮಣ ಮತ್ತು ಸೀತೆ ಸ್ಥಾನಿಕ ಭಂಗಿಯಲ್ಲಿದ್ದು, ರಾಮನ ಕೈಯಲ್ಲಿ ಬಿಲ್ಲು ಬಾಣ ಕಾಣಬಹುದು. ಬಲಬದಿಯಲ್ಲಿ ಹನುಮ ಕೈಮುಗಿದು ಕುಳಿತಿದ್ದು ಕಪ್ಪು ಶಿಲೆಯಿಂದ ಮಾಡಲಾಗಿದೆ.

*** ಶಾಕ್ತ ಮೂರ್ತಿಶಿಲ್ಪಗಳು**

ಮಾತೃದೇವತೆಯ ರೂಪದಲ್ಲಿರುವ ಶಕ್ತಿದೇವತೆಯನ್ನು ಆರಾಧಿಸುವ ಪಂಥವನ್ನು ಶಾಕ್ತ ಪಂಥವೆಂದು ಕರೆಯುತ್ತಾರೆ. ವೈದಿಕ ಕಾಲದಲ್ಲಿ ಇಂದ್ರ, ಅಗ್ನಿ, ವರುಣ, ಸೂರ್ಯ, ವಿಷ್ಣು, ರುದ್ರ ಮುಂತಾದ ಪ್ರಧಾನ ದೇವತೆಗಳಾಗಿದ್ದು ಪುರುಷ ಪ್ರಧಾನ ಎನಿಸಿಕೊಂಡರೂ ಋಗ್ವೇದ, ಅಂಬ್ರನಿಸೂಕ್ತ ಮತ್ತು ರಾತ್ರಿ ಸೂಕ್ತಗಳು ಮಾತೃದೇವತೆಯ ಆರಾದನೆಯ ಮೂಲಗಳಂತಿವೆ. ದೇವತೆಗಳ ತಾಯಿ ಅದಿತಿಯನ್ನು ಅಲಂಕಾರಿಯಾಗಿ ಸೃಷ್ಟಿಗೆ ಹೋಲಿಸಲಾಗಿದೆ.[೨೩] ಪುರಾಣಗಳ ಕಾಲದಲ್ಲಿ ಹೆಚ್ಚು ಮಾನ್ಯತೆಯನ್ನು ಪಡೆದ ತ್ರಿಮೂರ್ತಿಗಳನ್ನು ಅವರವರ ಪತ್ನಿಯರ ರೂಪದಲ್ಲಿ ಶಕ್ತಿಯನ್ನು ಗುರ್ತಿಸಿರುವುದು ಕಂಡುಬರುತ್ತದೆ. ಶಿಲ್ಪಗಳಲ್ಲಿ ಶಕ್ತಿಯನ್ನು ಶಾಂತ ಮತ್ತು ಘೋರ ರೂಪಗಳಲ್ಲಿ ಕಾಣುತ್ತೇವೆ. ಪತಿಯ ಜೊತೆಯಲ್ಲಿ ಗುರುತಿಸುವಾಗ ಶಾಂತ ರೂಪದಲ್ಲಿ ಮತ್ತು ಎರಡು ಕೈಗಳನ್ನು ಹೊಂದಿರುವಂತೆ ಒಂದು ಕೈಯಲ್ಲಿ ಕಮಲದ ಮೊಗ್ಗನ್ನು ಹಿಡಿದಿರುವಂತೆ ತೋರಿಸಲಾಗುತ್ತದೆ. ಘೋರ ರೂಪದಲ್ಲಿ ಶಿವನ ಶಕ್ತಿಯಾದ ಕಾಳಿಯನ್ನು ಹೆಚ್ಚಾಗಿ ಕಾಣುತ್ತೇವೆ. ಈ

ಸಂದರ್ಭಗಳಲ್ಲಿ ಅವಳೊಬ್ಬಳನ್ನೆ ನಾಲ್ಕು, ಆರು, ಎಂಟು ಕೈಗಳಿಂದಲೂ ವಿವಿಧ ಆಯುಧಗಳಿಂದಲೂ ಘೋರ ರೂಪದಲ್ಲಿ ತೋರಿಸಲಾಗುತ್ತದೆ.[೨೪]

ಲಕ್ಷ್ಮೀ ಶಿಲ್ಪಗಳು

ತ್ರಿಮೂರ್ತಿಗಳಲ್ಲಿ ಪಾಲನ ಕರ್ತನಾದ ವಿಷ್ಣುವಿನ ಪತ್ನಿಯಾಗಿ ಕಂಡುಬರುವ ಲಕ್ಷ್ಮಿ ಅಥವಾ ಶ್ರೀಯು ವೈಭವ, ಸಂಮೃದ್ಧಿ ಮತ್ತು ಸೌಂದರ್ಯದ ಸಂಕೇತ, ಜೊತೆಗೆ ವೈವಿಧ್ಯಮಯ ಶಕ್ತಿ ಬಳ್ಳವಳು ಶಿಲ್ಪಗಳಲ್ಲಿ ಇವಳನ್ನು ಕಮಲದ ಮೇಲೆ ಪರ್ಯಾರಕಾಸನದಲ್ಲಿ ಅಥವಾ ಪದ್ಮಾಸನದಲ್ಲಿ ಕುಳಿತಂತೆ ದ್ವಿಭುಜೆ ಅಥವಾ ಚತುರ್ಭುಜ ಉಳ್ಳವಳನ್ನಾಗಿ ತೋರಿಸಲಾಗಿದೆ. ಕಮಲ, ಶ್ರೀಫಲ, ಶಂಖ, ಅಮೃತಘಟ, ಮಾತುಲಿಂಗಖೇಟಕ, ಗದಾ ಮುಂತಾದ ವಿಶಿಷ್ಟವಾದ ಆಯುಧಗಳನ್ನು ಹೊಂದಿರುತ್ತಾಳೆ. ಲಕ್ಷ್ಮೀಯನ್ನು ೮ ರೂಪದಲ್ಲಿ ಕಲ್ಪಿಸಲಾಗಿದೆ. ಮಹಾಲಕ್ಷ್ಮಿ, ಧನಲಕ್ಷಿ, ದಾನ್ಯಲಕ್ಷ್ಮಿ, ಧೈರ್ಯಲಕ್ಷ್ಮಿ, ವೀರಲಕ್ಷ್ಮೀ ವಿದ್ಯಾಲಕ್ಷ್ಮಿ, ಸಂತಾನಲಕ್ಷ್ಮಿ, ಮತ್ತು ಭಾಗ್ಯಲಕ್ಷ್ಮಿ ಇವರೇ ಅಷ್ಟ ಲಕ್ಷ್ಮಿಯರು.[೨೫] ಕುಣಿಗಲ್ ಪಟ್ಟಣದ ನರಸಿಂಹಸ್ವಾಮಿ ಮತ್ತು ತುಡಿಕೆ ವೆಂಕಟರಮಣ ದೇವಾಲಯದಲ್ಲಿ ಲಕ್ಷ್ಮೀಯ ವಿಗ್ರಹವಿದ್ದು, ಪ್ರಸನ್ನಳಾಗಿ ಪದ್ಮದ ಮೇಲೆ ಅಸೀನಳಾಗಿದ್ದಾಳೆ, ದ್ವಿಭುಜೆಯಾಗಿದ್ದು ತನ್ನ ಎರಡು ಕೈಗಳಲ್ಲಿ ಕಮಲದ ಮೊಗ್ಗನ್ನು ಹಿಡಿದಿದ್ದಾಳೆ. ಹಿಂಭಾಗ ಪ್ರಭಾವಳಿಯಿಂದ ಕೂಡಿದ್ದು ಕಿರೀಟಧಾರಿಣಿಯಾಗಿದ್ದು ಕಪ್ಪು ಶಿಲೆಯಿಂದ ಕೆತ್ತಲ್ಪಟ್ಟಿದೆ.

ಮಹಿಷಮರ್ಧನಿ ಶಿಲ್ಪಗಳು

ಶಿವನ ಶಕ್ತಿಯಾದ ಪಾರ್ವತಿಯು ಅನೇಕ ರೂಪಗಳಲ್ಲಿ ಮಹಿಷಮರ್ಧಿನಿಯೂ ಒಂದು. ಇದು ಪಾರ್ವತಿಯ ಉಗ್ರರೂಪ, ಶಾಸ್ತ್ರ ಗ್ರಂಥಗಳಲ್ಲಿ ಉಗ್ರರೂಪದ ಯುವತಿಯಂತೆ ರೂಪುಗೊಂಡಿರುವಳು. ಮಹಿಷಮರ್ಧಿನಿಯು ಮಹಿಷಾಸುರನ ಮರ್ಧನಕ್ಕಾಗಿ ಶಿವ, ವಿಷ್ಣು, ಯಮ, ಚಂದ್ರ, ಇಂದ್ರ ಹೀಗೆ ಬೇರೆ ಬೇರೆ ದೇವತೆಗಳ ಒಂದೊಂದು ಶಕ್ತಿಯನ್ನು ಪಡೆದುಕೊಂಡು ಅವತಾರ ಎತ್ತಿರುವಳು. ಶಿಲ್ಪಗಳಲ್ಲಿ ಅವಳ ಪಾದದ ಕೆಳಗೆ ಮಹಿಷನು ಬಿದ್ದಿರುವನು. ಕೋಣದ ತಲೆಯು ನೆಲೆದ ಮೇಲೆ ಬಿದ್ದಿರುತ್ತದೆ. ಅವನ ಕತ್ತಿನ ಭಾಗದಿಂದ ಮನುಷ್ಯ ಮುಖವು ಹೊರಬಂದಿರುತ್ತದೆ. ದೇವಿಯು ಶೂಲದಿಂದ ಅವನನ್ನು ಸಂಹರಿಸುವಂತೆ ಚಿತ್ರಿಸಲಾಗಿದೆ (ಸಿಂಹವಾಹನವಾಗಿರುತ್ತದೆ).[೨೬]

ಸೋಮೇಶ್ವರ ಗುಡಿಯ ಮುಖಮಂಟಪದ ಕಂಬದಲ್ಲಿ ಮಹಿಷಮರ್ಧಿನಿಯ ಶಿಲ್ಪವು ಕಂಡುಬರುತ್ತದೆ. ೬ ಕೈಗಳನ್ನು ಹೊಂದಿದ್ದು ತ್ರಿಶೂಲದಿಂದ ಮಹಿಷನ ತಲೆಯನ್ನು ಹಿಡಿದು ಕೊಲ್ಲುತ್ತಿರುವ ಹಾಗೂ ಕೋಣನ ಚಿತ್ರ ಕಂಡುಬರುತ್ತದೆ. ಕುಣಿಗಲ್ ಪಟ್ಟಣದ ದುರ್ಗಾಭವಾನಿ ದೇವಾಲಯ ಮತ್ತು ಶಿವರಾಮೇಶ್ವರ ದೇವಾಲಯದಲ್ಲಿ ಮಹೀಷಾಸುರಮರ್ದಿನಿ ಮೂರ್ತಿಗಳನ್ನು ಕಾಣಬಹುದಾಗಿದೆ.

೩.೬. ಶಾಸನಗಳು

ಭಾರತದ ಪ್ರಾಚೀನ ಚರಿತ್ರೆಯನ್ನು ರಚಿಸಲು ಸಾಹಿತ್ಯಾಧಾರಗಳಿಂತಲೂ ಶಾಸನಗಳು ಉಪಯುಕ್ತವಾಗಿವೆ. ಚರಿತ್ರೆಯ ಅಭಾವದಿಂದ ವಂಶಾವಳಿ ಕಾಲ ಇತ್ಯಾದಿಗಳನ್ನು ನಿರ್ಧರಿಸಲು ಶಾಸನಗಳನ್ನಾವಲಂಬಿಸಬೇಕು. 'ಶಾಸನ' ಎಂಬ ಪದವು ಸಂಸ್ಕೃತದ 'ಶಾಸ್' ಎಂಬ ಧಾತುವಿನಿಂದ ಬಂದಿದ್ದು 'ಶಾಸ್' ಎಂದರೆ ಅಜ್ಞಾಪಿಸು, ನಿಯಂತ್ರಿಸು, ಶಿಕ್ಷಿಸು ಎಂಬ ಅರ್ಥ ನೀಡುತ್ತದೆ.[೨೭]

ಶಾಸನಗಳನ್ನು ರಾಜಶಾಸನ, ತಾಮ್ರಪಟಶಾಸನ, ದಾನಶಾಸನ, ಜಯಪತ್ರ, ಯೂಪಸ್ಥಭಶಾಸನ, ಪ್ರತಿಮಾಶಾಸನ, ವಿಜಯಶಾಸನ, ವೀರಗಲ್ಲು, ಮಾಸ್ತಿಗಲ್ಲು, ನಿಷದಿಗಲ್ಲು ಮತ್ತು ತುರುಗೋಳ ವೀರಗಲ್ಲುಗಳೆಂಬುದಾಗಿ ವಿಭಾಗಿಸಿದ್ದು[೨೮] ಪ್ರಾಕೃತ, ಸಂಸ್ಕೃತ, ಕನ್ನಡ, ಅರೇಬಿಕ್, ಪಾಳಿ ಮೊದಲಾದ ಭಾಷೆಗಳಲ್ಲಿ ರಚಿತಗೊಂಡಿವೆ. ಶಾಸನದ ರಚನೆಯಲ್ಲಿ ಲಿಪಿಯ ಪಾತ್ರ ಬಹುಮುಖ್ಯವಾದದ್ದು. ಅಶೋಕನು ಬ್ರಾಹ್ಮಿ ಲಿಪಿ ಮತ್ತು ಖರೋಪಿ ಲಿಪಿಯಲ್ಲಿ ಶಾಸನಗಳನ್ನು ಹಾಕಿಸಿ ಸಫಲನಾಗಿದ್ದಾನೆ. ತರುವಾಯ ಕಾಲಾವಧಿಯಲ್ಲಿ ಅರಸರು ತಮ್ಮ ಆಡಳಿತಕ್ಕೆ ಅನುಕೂಲವಾಗುವಂತೆ ಅವರದೇ ಆದ ಲಿಪಿಗಳನ್ನು ಮತ್ತು ಭಾಷೆಗಳಲ್ಲಿ ಶಾಸನಗಳನ್ನು ಹಾಕಿಸಿದ್ದಾರೆ. ಪ್ರಸ್ತುತ ಕುಣಿಗಲ್ ಪಟ್ಟಣದ ಅಧ್ಯಯನಕ್ಕೆ ಸಂಬಂಧಿಸಿದಂತೆ ೧೨ ಶಾಸನಗಳು ಕಂಡುಬಂದಿದ್ದು, ಇವು ಕರ್ನಾಟಕ ಶಾಸನ ಸಂಪುಟ-೨೪ರಲ್ಲಿ ಪ್ರಕಟಣೆಗೊಂಡಿದ್ದು ಇನ್ನು ಹೊಸ ಹೊಸ ಶಾಸನಗಳು ಈ ಪ್ರದೇಶದಲ್ಲಿ ಕಂಡುಬರುತ್ತಿದ್ದು ನಿಯತಕಾಲಿಕೆಗಳಲ್ಲಿ ಪ್ರಕಟಗೊಳ್ಳುತಿವೆ. ಅವುಗಳಲ್ಲಿ ಕೆಲವು ಶಾಸನಗಳನ್ನು ಸಂಕ್ಷಪ್ತ ವಿವರವನ್ನು ನೀಡಲು ಇಲ್ಲಿ ಪ್ರಯತ್ನಿಸಿದ್ದೇನೆ.

ಕುಣಿಗಲ್ ಪಟ್ಟಣದ ಪ್ರಮುಖ ಶಾಸನಗಳು

ಸಂಖ್ಯೆ-೦೧

ಸ್ಥಳ : **ಪೋಲಿಸ್ ಸ್ಟೇಷನ್ ಹೂರಗೆ ಬಿದ್ದಿರುವ ತುಂಡಿನಲ್ಲಿ ಮತ್ತು ಅದೇ ಸ್ಟೇಷನ್ನಿನ ತೊಲೆ ಕಲ್ಲಿನ ಮೇಲೆ.**

ಆಧಾರ : **ತುಮಕೂರು ಜಿಲ್ಲೆಯ ಶಾಸನ ಸಂಪುಟ-೨೪, ಕು-೧೩, ಪು-೧೯೫**

ಕಾಲಮಾನ : **ಶಾಲಿವಾಹನ ಶಕವರ್ಷ ೧೫೯೫.**

ಭಾಷೆ : **ಕನ್ನಡ**

ರಾಜವಂಶ : **ಮೈಸೂರು ಒಡೆಯರು (ಚಿಕ್ಕ ದೇವರಾಜ ಒಡೆಯರು)**

ಶಾಸನ ಸಾರಾಂಶ

ಈ ಶಾಸನವು ೩ ಸಾಲುಗಳಿಂದ ಕೂಡಿದ್ದು, ಕೆಲವು ಅಕ್ಷರಗಳು ನಶಿಸಿವೆ. ಚಿಕ್ಕದೇವರಾಜ ಒಡೆಯರ ಆಳ್ವಿಕೆಯಲ್ಲಿ ತಲಕಾಡಿನ ಸಿದ್ದರಾಜಯ್ಯ ಎಂಬ ಅಧಿಕಾರಿಯು ಸ್ವಸ್ತಿ ಶ್ರೀ ವಿಜಯಭ್ಯುದಯ ಶಾಲಿವಾಹನಶಕ ವರ್ಷ ೧೫೯೫ ಪ್ರಮದೀಚ ಸಂವತ್ಸರದ ಮಾಗ ಶುದ್ಧಂ ೨ನೇ ಬುಧವಾರದಂದು ಕುಣಿಗಲ್ ಪಟ್ಟಣದಲ್ಲಿ ಒಂದು ಕಲ್ಲಿನ ಕೋಟೆಯ ಹೆಬ್ಬಾಗಿಲನ್ನು ನಿರ್ಮಿಸಿದ್ದು ಆ ಕೋಟೆಯ ಹೆಬ್ಬಾಲಿಗೆ ಮೈಸೂರ ಬಾಗಿಲು ಎಂದು ಹೆಸರಿಡಲಾಯಿತ್ತೆಂದು ಉಲ್ಲೇಖಿಸಿದೆ.

ಸಂಖ್ಯೆ-೦೨

ಸ್ಥಳ : **ಸೋಮೇಶ್ವರ ದೇವಾಲಯಕ್ಕೆ ದಕ್ಷಿಣದಲ್ಲಿರುವ ತೋಟದ ಗುಂಡಿನ ಮೇಲೆ**

ಆಧಾರ : **ತುಮಕೂರು ಜಿಲ್ಲೆಯ ಶಾಸನ ಸಂಪುಟ-೨೪, ಕು-೧೪, ಪು-೧೯೫**

ಶಾಸನದ ಸಾರಾಂಶ

ಈ ಶಾಸನವು ೭ ಸಾಲುಗಳಿಂದ ಕೂಡಿದ್ದು ಅಕ್ಷರಗಳು ಸ್ಪಷ್ಟವಾಗಿ ಕಾಣುತ್ತವೆ. ಕುಣಿಗಲ್ ಕೋಟೆಯಲ್ಲಿನ ಶ್ರೀಸೋಮೇಶ್ವರ ದೇವರಿಗೆ ಮಾಯಣ್ಣ ಎಂಬುದವನು ಹೂವಿನ ತೋಟವನ್ನು ದಾನವಾಗಿ

ನೀಡಿರುವುದನ್ನು ಉಲ್ಲೇಖಿಸಿದೆ. ಈ ಶಾಸನದ ಕೊನೆಯಲ್ಲಿ ಶಾಪಾಶಯನವಿದ್ದು, ಈ ಶಾಸನವನ್ನು ಹಾನಿಗೊಳಪಡಿಸಿದರೆ ಗಂಗೆಯ ದಡದಲ್ಲಿ (ಗಂಗಾತೀರ) ಗೋವನ್ನು ಕೊಂದ ಪಾಪಕ್ಕೂ ಹಾಗೂ ವಾರಣಸಿಯಲ್ಲಿ ತನ್ನ ತಂದೆ-ತಾಯಿಯನ್ನು ಕೊಂದ ಪಾಪಕ್ಕೆ ಒಳಗಾಗುವರೆಂದು ಉಲ್ಲೇಖಿಸಿದೆ. ಇದೊಂದು ದಾನ ಶಾಸನವಾಗಿದೆ.

ಸಂಖ್ಯೆ-೦೩

ಸ್ಥಳ	**: ಸೋಮೇಶ್ವರ ದೇವಾಲಯದ ಮಹಾದ್ವಾರ ಬಳಿ ಬಂಡೆಯ ಮೇಲಿದೆ**
ಆಧಾರ	**: ತುಮಕೂರು ಜಿಲ್ಲೆಯ ಶಾಸನ ಸಂಪುಟ-೨೪, ಕು-೧೫, ಪು-೧೯೬**
ಕಾಲಮಾನ	**: ಖರ ಸಂವತ್ಸರ ಕಾರ್ತೀಕ**

ಶಾಸನ ಸಾರಾಂಶ

ಈ ಶಾಸನವು ೪ ನಾಲ್ಕು ಸಾಲುಗಳಿಂದ ಕೂಡಿದ್ದು, ಖರಸಂವತ್ಸರದ ಕಾರ್ತೀಕ ಶೂ ೧ ಲೂ ರಾಮಚಂದ್ರ ಕುಂಬಾರರಮಯಿದುನ ಸಿಂಗಾರಿ ಎಂದು ಉಲ್ಲೇಖಿಸಲಾಗಿದೆ. ಬಹುಶಃ ಸಿಂಗಾರಿ ಎಂಬಾತ ಸೋಮೇಶ್ವರ ದೇವಾಲಯಕ್ಕೆ ದಾನ ನೀಡಿರಬಹುದು, ಅಲ್ಲದೆ ಶಾಸನದಲ್ಲಿ ಕುಂಬಾರ ಎಂಬ ಪದ ಬಳಸಿರುವುದರಿಂದ ಆಗಿನ ಕಾಲಮಾನದಲ್ಲಿ ವೃತ್ತಿಯಾಧಾರಿತ ವರ್ಗವ್ಯವಸ್ಥೆ ಇತ್ತೆಂದು ತಿಳಿದುಬರುತ್ತದೆ.

ಸಂಖ್ಯೆ-೦೪

ಸ್ಥಳ	**: ನರಸಿಂಹ ದೇವಾಲಯದ ಈಶಾನ್ಯ ಭಾಗದ ಆಂಜನೇಯ ಗುಡಿಯ ಬಳಿಯಿದೆ.**
ಆಧಾರ	**: ತುಮಕೂರು ಜಿಲ್ಲೆಯ ಶಾಸನ ಸಂಪುಟ-೨೪, ಕು-೧೬, ಪು-೧೯೬**
ಭಾಷೆ	**: ಕನ್ನಡ**
ಕಾಲಮಾನ	**: ಅಕ್ಷಯ ಸಂವತ್ಸರದ ವೈಶಾಖ ಬಹುತ್ತುಲು**
ರಾಜವಂಶ	**: ಎಲಹಂಕ ನಾಡಪ್ರಭು ಕೆಂಪೆಗೌಡರ ಆಡಳಿತ ಅವಧಿ**

ಶಾಸನದ ಸಾರಾಂಶ

ಈ ಶಾಸನವು ೨೧ ಸಾಲುಗಳಿಂದ ಕೂಡಿದ್ದು ಕೆಲವು ಅಕ್ಷರಗಳು ನಶಿಸಿವೆ. ಇದೊಂದು ದಾನ ಶಾಸನವಾಗಿದ್ದು, ಶುಭಮಸ್ತು ಶ್ರೀರಾಮಚಂದ್ರಾಯನಮಃ ಅಕ್ಷಯ ಸಂವತ್ಸರದ ಬ ೧೦ಲು ಎಂದು ಪ್ರಾರಂಭವಾತ್ತದೆ. ಕುಣಿಗಿಲ ಕೋಟೆಯ ಕಸಪನಾಯಕ, ಚಿಕ್ಕಲಿಂಗ ಮತ್ತು ಹಿರಿಯಲಿಂಗ ಮೊದಲಾದ ಸಕಲ ರಾಜ್ಯದೆಲ್ಲರಿಗೂ ಸಂಬಂಧಪಟ್ಟ ತಮಗೂ ಹಾಗೂ ಕೆಂಪೇಗೌಡ ಅಯ್ಯನವರಿಗೂ ಧರ್ಮವಾಗಲೆಂದು ತಿರುಪತಿ ಮತ್ತು ಕಂಚಿಯ ದೇವಾಲಯಕ್ಕೆ ಹಣವನ್ನು ದಾನವಾಗಿ ಕೊಡಲಾಯಿತೆಂದು ಉಲ್ಲೇಖಿಸಿದೆ. ಶಾಸನದ ಉಳಿದ ಭಾಗ ನಶಿಸಿದ್ದು ಸ್ಪಷ್ಟವಾಗಿ ಓದಲು ಸಾಧ್ಯವಾಗುತ್ತಿಲ್ಲ.

ಸಂಖ್ಯೆ-೦೫

ಸ್ಥಳ	: ನರಸಿಂಹ ದೇವಾಲಯದ ಉತ್ತರ ದಿಕ್ಕಿನ ಪಂಚಾಂಗದ ಜಗತಿಕಲ್ಲಿನ ಮೇಲೆ
ಆಧಾರ	: ತುಮಕೂರು ಜಿಲ್ಲೆಯ ಶಾಸನ ಸಂಪುಟ-೨೪, ಕು-೧೭, ಪು-೧೯೭

ಕಾಲಮಾನ : **ಶಾಲಿವಾಹನ ಶಕ ೧೪೧೫**

ರಾಜವಂಶ : **ಬಹುಶಃ ವಿಜಯನಗರ ಸಾಮ್ರಾಜ್ಯ**

ಶಾಸನದ ಸಾರಾಂಶ

ಈ ಶಾಸನವು ೨ ಸಾಲುಗಳನ್ನು ಒಳಗೊಂಡಿದ್ದು, ಶಾಸನವು ಸಂಪೂರ್ಣವಾಗಿ ನಾಶ ಹೊಂದಿದ್ದು ಕಾಲಮಾನ ಮಾತ್ರ ಕಂಡುಬರುತ್ತದೆ. ಶಾಸನದಲ್ಲಿ ಜಯಾಭ್ಯುದಯ ಶಾಲಿವಾಹನ ಶಕವರ್ಷ ೧೪೧೫ನೇ ವರ್ತಮಾನದ ಪ್ರಮಾದೀಚ ಸಂವತ್ಸರ ಹಾರಾಯರು ಪ್ರಥ್ವೀರಾಜ್ಯಂಗೆ ದಲು. . . . ಎಂದು ಉಲ್ಲೇಖಿಸಿದ್ದು, ಕ್ರಿ.ಶ.ಕ್ಕೆ ಬದಲಾಯಿಸಿದಾಗ ೧೪೯೩–೯೪ ಎಂದಾಗುತ್ತದೆ. ಆದರೆ ರಾಜನ ಬಗ್ಗೆ ಉಳಿದ ಅಂಶಗಳು ನಶಿಸಿವೆ.

ಸಂಖ್ಯೆ–೦೬

ಸ್ಥಳ : **ಕುಣಿಗಲ್ ದೊಡ್ಡ ತೂಬಿನ ಮೇಲ್ಭಾಗದ ಕಲ್ಲಿನಲ್ಲಿದೆ**

ಆಧಾರ : **ತುಮಕೂರು ಜಿಲ್ಲೆಯ ಶಾಸನ ಸಂಪುಟ–೨೪, ಕು.೧೮, ಪು–೧೯೭**

ಕಾಲಮಾನ : **ಕ್ರಿ.ಶ. ೧೩೬೪**

ಭಾಷೆ : **ಕನ್ನಡ**

ರಾಜವಂಶ : **ವಿಜಯನಗರ ಸಾಮ್ರಾಜ್ಯ**

ಶಾಸನದ ಸಾರಾಂಶ

ಈ ಶಾಸನವು ೨ ಸಾಲುಗಳಿಂದ ಕೂಡಿದ್ದು, ಬಹಳ ಅಪರೂಪವಾದ ಶಾಸನವಾಗಿದೆ. ಸ್ವಸ್ತಿ ಶ್ರೀಶಕವರುಷ ೧೩೧೬ನೇಯ ಭಾವ ಸಂವತ್ಸರ ಭಾದ್ರಪದ ಶು ೧ ಶುಕ್ರವಾರದಲು ಸೂರ್ಯ ಉದಯವಾದ ಘಳಿಗೆ ೧೭ನೇಯ ಧನುರ್ಲಗ್ನದಲು ಶ್ರೀಮನ್ಮಹಾ ಪ್ರಧಾನಂ ಇರುಗಪ್ಪದಂಣಾಯ್ಕ ಒಡೆಯರ ಹೆಸರ ತೂಬಿನ ಕಂಬ ಪ್ರತಿಷ್ಠೆ ಆದ ಲಗ್ನ ಮಂಗಳ ಮಹಾಶ್ರೀ ಎಂದು ಉಲ್ಲೇಖಿಸಿದ್ದು, ಕೆರೆಯ ತೂಬಿನ ಕಂಬವನ್ನು ಮಹಾಪ್ರಧಾನನಾದ ಇರುಗಪ್ಪ ದಣ್ಣಾಯಕ ಒಡೆಯರು ಪ್ರತಿಸ್ಥಾಪಿಸಿರುವುದನ್ನು ಕಾಣಬಹುದು. ವಿಶೇಷತೆ ಎಂದರೆ ಆಗಿನ ಕಾಲದಲ್ಲಿ ಸಮಯಕ್ಕೆ ಎಷ್ಟು ಮಹತ್ವ ನೀಡಿದ್ದರು ಮತ್ತು ಅನುಕರಣೆ ಮಾಡುತ್ತಿದ್ದರೆಂದು ಗೊತ್ತಾಗುತ್ತದೆ. (ಶಕವರುಷ ೧೩೧೬ನ್ನು ಕ್ರಿ.ಶ.ಕ್ಕೆ ಬದಲಾಯಿಸಿದರೆ ೧೩೯೪ ಆಗುತ್ತದೆ.)

ಸಂಖ್ಯೆ–೦೭

ಸ್ಥಳ : **ನರಸಿಂಹ ದೇವಾಲಯದ ಉತ್ತರ ದಿಕ್ಕಿನ ಗೋಡೆಯ ಮೇಲಿದೆ.**

ಆಧಾರ : **ತುಮಕೂರು ಜಿಲ್ಲೆಯ ಶಾಸನ ಸಂಪುಟ–೨೪, ಕು–೨೦, ಪು–೧೯೭**

ಶಾಸನದ ಸಾರಾಂಶ

ಈ ಶಾಸನವು ೬ ಸಾಲುಗಳಿಂದ ಕೊಡಿದ್ದು, ಆಕಾಲದಲ್ಲಿ, ಪ್ರಚಲಿತದಲ್ಲಿದ್ದ ಅಳತೆ ಮಾಪನದ ಬಗ್ಗೆ ಉಲ್ಲೇಖಿಸುತ್ತದೆ. "ಇ ಕೋಲಲಿ ಬಿಸುಗೂರ ಗಡಿಬ ಗದೆ ಕಂಬ ೧ಕ್ಕೆ ಕೋಲು ೩೩ ಹೊಲ ಕಂಬ

೧ಕ್ಕೆ ಕೋಲು ೪೬" ಎಂದು ತಿಳಿಸಿದೆ. ಬಹುಶಃ ಆಕಾಲದಲ್ಲಿ ಗದ್ದೆ ಮತ್ತು ಹೊಲದ ಭೂಮಿಯನ್ನು ಕೋಲುಗಳ ಮೂಲಕ ಅಳಯುತ್ತಿರಬಹುದು, ಅದೇ ರೀತಿ ಬಿಸುಗೂರ ಪ್ರದೇಶದಲ್ಲಿ ೩೩ ಮತ್ತು ೪೬ ಕೋಲುಗಳ ವಿಸ್ತೀರ್ಣದ ಗದ್ದೆ ಮತ್ತು ಹೊಲವನ್ನು ದೇವಾಲಯಕ್ಕೆ ದಾನ ಮಾಡಿರಬಹುದೆಂದು ಊಹಿಸಬಹುದು.

ಸಂಖ್ಯೆ-೦೮

ಸ್ಥಳ : **ಉರಿತಿರುಮಲ ದೇವಾಲಯದ ಉತ್ತರ ದಿಕ್ಕಿನ ಬಂಡೆಯ ಮೇಲೆ**

ಆಧಾರ : **ತುಮಕೂರು ಜಿಲ್ಲೆಯ ಶಾಸನ ಸಂಪುಟ-೨೪, ಕು-೨೨, ಪು-೧೯೮**

ಶಾಸನದ ಸಾರಾಂಶ

ಈ ಶಾಸನವು ೩ ಸಾಲುಗಳಿಂದ ಕೂಡಿದ್ದು, ಕಾಲಮಾನ ದಾನಕೊಟ್ಟವರು ತೆಗೆದುಕೊಂಡವರ ಬಗ್ಗೆ ಮಾಹಿತಿ ಇರದೆ ಕೇವಲ ದೇವಾಲಯಕ್ಕೆ ಸಂಬಂಧಿಸಿದ ಭೂಮಿಯ ಬಗ್ಗೆ ಉಲ್ಲೇಖಿಸುತ್ತದೆ. ಯಿಲ್ಲಿಂದೀಚೆಗೆ ಉರಿ-ತಿರುಮಲದೇವರ ಭೂಮಿ ಎಂದು ಬರೆಯಲಾಗಿದೆ.

ಸಂಖ್ಯೆ-೦೯

ಸ್ಥಳ : **ಗಣೇಶ ದೇವಾಲಯಕ್ಕೆ ಉತ್ತರದಲ್ಲಿ ಮುರಿದು ಬಿದ್ದಿರುವ ತಳಪಾದಿಕಲ್ಲು**

ಆಧಾರ : **ತುಮಕೂರು ಜಿಲ್ಲೆಯ ಶಾಸನ ಸಂಪುಟ-೨೪, ಕು-೨೩, ಪುಟ-೧೯೮**

ಭಾಷೆ : **ಸಂಸ್ಕೃತ**

ಶಾಸನದ ಸಾರಾಂಶ

ಈ ಶಾಸನವು ನಾಲ್ಕು ಸಾಲುಗಳಿಂದ ಕೂಡಿದ್ದು, ರಾಜವಂಶ ಮತ್ತು ಕಾಲಮಾನದ ಬಗ್ಗೆ ಉಲ್ಲೇಖಿಸಿಲ್ಲಾ "ಅಗ್ನಿ ಚಿತ್ತು ವಾಜಪೇಯ ಸರ್ಬ್ಬ ಮಹಾಕ್ರತುಗಳು ಪಿಳ್ಳೆಲ್ಕೆ ಕಲ್ಲಂದೊಳಗೆ ಮೂಗಂಡುಗದ ೧೦ ಕೂಳಗ ಯಾಳರುತಂ ಮಯ ಹೆರೂಕ್ಷ ಹೊಂನೆಯ" ಬಹುಶಃ ಯಾವುದೋ ಯಜ್ಞ ಯಾಗಾದಿ ಮಾಡಿರುವ ಬ್ರಹ್ಮಣರಿಗೆ ಮೂಗಂಡುಗದ ೧೦ ಕೂಳಗ ದಾನ ನೀಡಿರಬಹುದು.

ಸಂಖ್ಯೆ-೧೦

ಸ್ಥಳ : **ಕೃಷ್ಣಾಸಾಗರ ಗ್ರಾಮದಲ್ಲಿರುವ ಕಲ್ಲು**

ಆಧಾರ : **ತುಮಕೂರು ಜಿಲ್ಲೆಯ ಶಾಸನ ಸಂಪುಟ-೨೪, ಕು-೨೫, ಪು-೧೯೯**

ಕಾಲಮಾನ : **ಶಾಲಿವಾಹನ ಶಕವರ್ಷ ೧೫೨೧**

ಭಾಷೆ : **ಕನ್ನಡ**

ರಾಜವಂಶ : **ವಿಜಯನಗರ ಕಾಲಮಾನ**

ಶಾಸನ ಸಾರಾಂಶ

ಈ ಶಾಸನವು ೨೬ ಸಾಲುಗಳಿಂದ ಕೂಡಿದ್ದು ಕೆಲವು ಪದಗಳು ನಶಿಸಿಹೋಗಿವೆ. ಇದೊಂದು ದಾನ ಶಾಸನವಾಗಿದೆ. ವಿಜಯನಗರದ ಸಾಮಾಂತನಾಗಿ ಎಲಹಂಕಾದಲ್ಲಿ ಹಿರಿಯ ಕೆಂಪೇಗೌಡರು

ಆಳ್ವಿಕೆ ನಡೆಸುತ್ತಿದ್ದು ಅವನ ಪತ್ನಿ ವೆಂಕಟಕೃಷ್ಣಾಂಜಮ್ಮನವರು ಅಗ್ರಹಾರಕ್ಕೆ ದಾನ ನೀಡಿದ ಕುರಿತು ಮಾಹಿತಿ ನೀಡಲಾಗಿದೆ.

ಕುಣಿಗಲ್ ಪಟ್ಟಣದ ಪಶ್ಚಿಮ ದಿಕ್ಕಿನಲ್ಲಿ ವೆಂಕಟ ಕೃಷ್ಣಾ ಸಾಗರದ ಅಗ್ರಹಾರಕ್ಕೆ ಕುಣಿಗಲ್ ದೊಡ್ಡ ಕೆರೆ ಕೆಳಗೆ ೩೦ ಖಂಡುಗದ ಹೊಲ ಮತ್ತು ೨೦ ಖಂಡುಗದ ಗದ್ದೆಯನ್ನು ವೃತ್ತಿ ೧೯ರ ಅನ್ವಯ ಬ್ರಾಹ್ಮಣರಿಗೆ ದಾನ ನೀಡಲಾಗಿದೆ. ಈ ದಾನವನ್ನು ತಮ್ಮ ಮಾವನವರಾದ ಕೆಂಪೇಗೌಡ ಹಾಗೂ ಅತ್ತೆಯವರಾದ ಲಿಂಗಾಜಮ್ಮನವರಿಗೆ ಪುಣ್ಯವಾಗಲೆಂದು ದಾನವಾಗಿ ನೀಡಲಾಗಿದೆ. ಅಗ್ರಹಾರದಲ್ಲಿನ ಗಂಗಾಧರ ಬಟ್ಟರಿಗೆ ಕ್ಷೇತ್ರ ೧, ಯಲಂಬಟ್ಟರಿಗೆ ೧, ವೆಂಕಟಾದ್ರಿ ಬಟ್ಟರಿಗೆ ೧, ನರಸವದಾನಿಗೆ ೧, ವೆಂಗಂ ಬಟ್ಟರಿಗೆ ೧, ನಾಗಂ ಬಟ್ಟರಿಗೆ ೧, ವೆಂಕಟಾದ್ರಿಗೆ ೧, ರಾಮಬಟ್ಟರಿಗೆ ೧, ಶೇಷಾದ್ರಿ ಬಟ್ಟರಿಗೆ ೧, ಅಂಬಾವ ದಾನಿಗೆ ೧, ಶುಭ ಬಟ್ಟರಿಗೆ ೧, ವೆಂಕಟ ಬಟ್ಟರಿಗೆ ೧, ಶೇಷಗಿರಿಗೆ ೧, ವೆಂಕಟ ಪತಿಗೆ ೧, ನಾರಾಯಣನಿಗೆ ೧, ದಾಳಪಗೆ ೧, ಉಳಿದ ಹೆಸರುಗಳು ಅಸ್ಪಷ್ಟವಾಗಿವೆ. ಈ ಜಾಗವನ್ನು ತಮ್ಮ ಪುತ್ರ ಪಾರಂಪರ್ಯವಾಗಿ ತಮ್ಮ ದಾನ ಮುಂದುವರೆಯುವಂತೆ ಈ ಶಿಲಾಶಾಸನದಲ್ಲಿ ಹಾಕಲಾಗಿದೆ.

ವೀರಗಲ್ಲುಗಳು

ಸಾಮಾನ್ಯವಾಗಿ ಯುದ್ಧದಲ್ಲಿ ಅಥವಾ ಹೋರಾಟದಲ್ಲಿ ಮಡಿದ ವೀರನ ಸ್ಮಾರಕವಾಗಿ ನೆಟ್ಟ ಕಲ್ಲುಗಳಿಗೆ ವೀರಗಲ್ಲುಗಳೆನ್ನುತ್ತಾರೆ. ವೀರಗಲ್ಲು ಬರಹ ಅಥವಾ ಶಾಸನಗಳನ್ನು ಕೆತ್ತುವ ಜೊತೆಗೆ ವೀರನ ಶಿಲ್ಪವನ್ನು ಕೆತ್ತಲಾಗುತ್ತದೆ. ಇಂತಹ ವೀರಗಲ್ಲುಗಳು ಯಾವ ವೀರನ ಸ್ಮಾರಕವಾಗಿಯೇ ಆ ವೀರನ ಶೌರ್ಯವನ್ನು ಸಾರುತ್ತವೆ. ಈ ವೀರಗಲ್ಲುಗಳಲ್ಲಿ ವೀರನ ಶೌರ್ಯವನ್ನು ಕೊಂಡಾಡುವುದರ ಜೊತೆಗೆ ಆತನ ಮನೆಯವರಿಗೆ ಬಿಟ್ಟ ದಾನ ದತ್ತಿ ವಿಷಯವನ್ನು ಒಳಗೊಂಡಿರುತ್ತದೆ. ಹೀಗೆ ವೀರಗಲ್ಲುಗಳ ಒಂದು ರೀತಿಯಿಂದ ದಾನ ಶಾಸನಗಳು ಆಗಬಹುದು. ಗೋಗ್ರೋಹಣದ ವೀರಗಲ್ಲುಗಳು, ಬೇಟೆಯಲ್ಲಿ ಮಡಿದ ವೀರನ ಸ್ಮಾರಕಗಳು, ದಾರಿ ಕಳ್ಳರೊಡನೆ ಹೋರಾಡಿ ಮಡಿದ ವೀರ ಸ್ಮಾರಕಗಳು, ಹೆಂಗಸರ ಮಾನಭಂಗ ಸಮಯದಲ್ಲಿ ಹೋರಾಡಿ ಮಡಿದ ಸ್ಮಾರಕಗಳು, ರಣರಂಗದಲ್ಲಿ ಹೋರಾಡಿ ಮಡಿದ ವೀರಗಲ್ಲುಗಳು, ಊರ ಜಗಳದಲ್ಲಿ ಮಡಿದವರ ಸ್ಮಾರಕಗಳು, ಹೀಗೆ ವೀರಗಲ್ಲುಗಳಲ್ಲಿ ಅನೇಕ ಪ್ರಭೇದವನ್ನು ಕಾಣಬಹುದು.

ಉದಾ:– ಬೇಗೂರು ಕೆರೆ ಏರಿಯ ಮೇಲೆ ಸುಮಾರು ೪ ಅಡಿ ಎತ್ತರ ಮತ್ತು ೨೧/ೄ ಅಡಿ ಅಗಲವಿದ್ದು, ಮೂರು ಹಂತಗಳಿಂದ ಕೂಡಿದ ವೀರಗಲ್ಲು ಕಾಣಬಹುದು. ಕೆಳಹಂತದಲ್ಲಿ ಸ್ವಲ್ಪ ಭಾಗ ಮಣ್ಣಿನಿಂದ ಮುಚ್ಚಿಹೋಗಿದೆ. ವೀರನು ಬಲಗೈಯಲ್ಲಿ ಕತ್ತಿಯನ್ನು ಹಿಡಿದಿದ್ದು ಪಕ್ಕದಲ್ಲಿ ಇಬ್ಬರು ಸ್ತ್ರೀಯರು ಇದ್ದು ಒಬ್ಬಳು ಬಲಗೈಯನ್ನು ಇನ್ನೊಬ್ಬಳು ಎಡಗೈಯನ್ನು ಮೇಲಕ್ಕೆ ಎತ್ತಿದ್ದಾರೆ ಅವರ ಮತ್ತೊಂದು ಕಮಂಡಲ ಹಿಡಿದಿದ್ದಾರೆ.

೩ನೇ ಹಂತದಲ್ಲಿ ಲಿಂಗ, ನಂದಿ ಮತ್ತು ಸೂರ್ಯ ಚಂದ್ರರ ಚಿತ್ರ ಬಿಡಿಸಲಾಗಿದೆ. ಈ ಶಿಲ್ಪವನ್ನು ಗಮನಿಸಿದಾಗ ವೀರನು ಮರಣ ಹೊಂದಿದಾಗ ಅವನ ಇಬ್ಬರು ಸತಿಯರು ಮರಣ ಹೊಂದುತ್ತಿದ್ದಾರೆ. ಇದರ ಜ್ಞಾಪಕವಾಗಿ ಈ ಶಿಲ್ಪವನ್ನು ಕೆತ್ತಿಸಿದ್ದಾರೆ. ಬಹುಶಃ ಇದೊಂದು ವೀರ ಮಹಾಸತಿಗಲ್ಲು ಎಂದು ಹೇಳಬಹುದು. ಇನ್ನೊಂದು ಕುಣಿಗಲ್ ದೊಡ್ಡ ಕೆರೆಯ ಏರಿಯ ಒಳಭಾಗದ ಮಂಟಪದಲ್ಲಿ ಒಂದು

ವೀರಗಲ್ಲನ್ನೂ ಕಾಣಬಹುದು. ಈ ವೀರಗಲ್ಲಿನಲ್ಲಿ ಕೆಲವು ಹಂತಗಳು ಭೂಮಿಯಲ್ಲಿ ಮುಚ್ಚಿಹೋಗಿದೆ. ವೀರನು ಕುದುರೆ ಸವಾರನಾಗಿದ್ದು ತನ್ನ ಬಲಗೈಯನ್ನು ಮೇಲೆತ್ತಿದ್ದಾನೆ ಅವನ ತಲೆಯ ಮೇಲೆ ಸೇವಕರು ಛತ್ರಿ ಚಾಮರವನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ.

ಮಹಾಸತಿ ಅಥವಾ ಮಾಸ್ತಿಕಲ್ಲು

ಮಾಸ್ತಿ ಎಂಬುದು ಮಹಾಸತಿ ಪದದ ತದ್ಭವರೂಪ, ಪ್ರಾಚೀನ ಕಾಲದ ಜನರು ತಾವು ಅನುಸರಿಸಿದ ಧರ್ಮದಲ್ಲಿ ಗಂಡ ಸತ್ತಾಗ ಅವನೊಡನೆ ಸತಿಯೂ ಚಿತೆ ಏರುವುದನ್ನು ಒಂದು ಮೌಲ್ಯವೆಂದು ಪರಿಗಣಿಸಲಾಗುತ್ತಿತ್ತು. ಈ ರೀತಿ ಚಿತೆಯೇರಿದ ಸ್ತ್ರೀಯರನ್ನು ಮಹಾಸತಿ ಎಂದು ಕರೆಯುತ್ತಿದ್ದರು. ಇದೊಂದು ಸ್ತ್ರೀ ಸಮಾಜಕ್ಕೆ ಆದರ್ಶಪ್ರಾಯವೂ, ಗೌರವಯುತವು ಆಗಿತ್ತು. ಪ್ರಾಚೀನ ಕಾಲದಲ್ಲಿ ಸ್ತ್ರೀಯರು ದಾಳಿಕೋರ ಕಾಮುಕರಿಂದ ತಮ್ಮ ಮಾನರಕ್ಷಣೆಗಾಗಿ ಹಾಗೂ ಅಂದಿನ ಕಾಲದಲ್ಲಿ ಗಂಡ ಸತ್ತ ವಿಧವೆಯವರಿಗೆ ಮನ್ನಣೆ ಇರಲಿಲ್ಲ. ಅವರ ಸ್ಥಿತಿ ಬಹಳ ಶೋಚನಿಯವಾಗಿತ್ತು. ಈ ಕಾರಣದಿಂದ ಗಂಡನು ಸತ್ತ ಎಂಬ ಸುದ್ದಿ ಕೇಳಿದೊಡನೆ ಸತಿಯು ಚಿತೆಯನ್ನೆರುತ್ತಿದ್ದಳು. ಹೀಗೆ ಗಂಡ ಸತ್ತಾಗ ಚಿತಯನ್ನೇರಿ ಸಾವನಪ್ಪಿದವರ ನೆನಪಿಗಾಗಿ ನಿಲ್ಲಿಸಿದ ಕಲ್ಲುಗಳೇ ಮಾಸ್ತಿ ಅಥವಾ ಮಹಾಸತಿ ಕಲ್ಲುಗಳು.

ವಿಶೇಷವಾಗಿ ಸ್ಮಾರಕಗಳಲ್ಲಿ ಸ್ತ್ರೀಯು ತನ್ನ ಬಲಗೈಯನ್ನು ಮೇಲಕ್ಕೆತ್ತಿರುತ್ತಾಳೆ, ಅಂಗೈ ಸ್ಪಷ್ಟವಾಗಿದ್ದು ಬೆರಳುಗಳು ಬಿಡಿಬಿಡಿಯಾಗಿರುತ್ತವೆ. ಕೆಲವು ಕಲ್ಲುಗಳಲ್ಲಿ ಸ್ತ್ರೀ ಚಿತ್ರದ ಹಿಂದೆ ಬೆಂಕಿಯ ಜ್ವಾಲೆಗಳಿರುವಂತೆ ಕೆತ್ತನೆ ಇರುತ್ತದೆ.

ಉದಾ:– ಕುಣಿಗಲ್ ದೊಡ್ಡ ಕೆರೆ ಏರಿಯ ಮೇಲೆ ೨ ಅಡಿ ಎತ್ತರದ ಒಂದು ಸ್ಮಾರಕವಿದ್ದು ವೀರ ಹಾಗೂ ಸತಿಯ ಚಿತ್ರವಿದ್ದು, ವೀರನು ತನ್ನ ಕೈಯಲ್ಲಿ ಈಟಿಯನ್ನು ಹಿಡಿದಿದ್ದಾನೆ. ಅವನ ಸೊಂಟದಲ್ಲಿ ಕತ್ತಿಯಿದೆ. ಅವನ ಪಕ್ಕದಲ್ಲಿ ಸ್ತ್ರೀ ಚಿತ್ರವಿದ್ದು ಬಲಗೈಯನ್ನು ಮೇಲಕ್ಕೆತ್ತಿದ್ದು ಕೈಯಲ್ಲಿ ನಿಂಬೆಹಣ್ಣು ಹಿಡಿದಿದ್ದಾಳೆ ಎಡಗೈಯಲ್ಲಿ ಕಮಂಡಲ ಹಿಡಿದಿರುವ ಮಹಾಸತಿ ಕಲ್ಲನ್ನು ಕಾಣಬಹುದಾಗಿದೆ.

ಅಡಿಟಿಪ್ಪಣಿಗಳು

೦೧. ಗೋಪಾಲ. ಬಾ.ರಾ., ಕರ್ನಾಟಕದ ಕಲೆಗಳು–ವಾಸ್ತು, ಸಂಪುಟ ೪, ೨೦೦೩, ಪು. ೧ ಮತ್ತು ೨

೦೨. ಮಹಂತೇಶ್. ಎನ್. ಎಸ್., ಹೊಸದುರ್ಗ ತಾಲೂಕು ಪರಿಸರದ ಸಾಂಸ್ಕೃತಿಕ ಅಧ್ಯಯನ, (ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨, ಪು. ೧೩೪

೦೩. ಅದೇ., ಪು.೧೪೨

೦೪. ಅದೇ., ಪು.೧೬೨

೦೫. ಕೃಷ್ಣರಾವ್ ಎಂ. ವಿ. ಮತ್ತು ಕೇಶವಭಟ್ಟ ಎಂ., ಕರ್ನಾಟಕದ ಇತಿಹಾಸ ದರ್ಶನ, ೧೯೭೦, ಪು.೭೩೦

೦೬. ದತ್ತಾತ್ರೇಯ ಜಿ. ಕುಲಕರ್ಣಿ., ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು, (ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ಪು.೨೬೨

೦೭. ಮಹಂತೇಶ ಎನ್. ಎಸ್., ಪೂರ್ವೋಕ್ತ, ಪು.೧೭೫

೦೮. ಕನ್ನಡ ವಿಷಯ ವಿಶ್ವಕೋಶ, ೨೦೦೯, ಪು.೧೩೮

೦೯. ಅದೇ., ಪು.೨೩೨

೧೦. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ೨೦೦೭, ಪು.೫೨೩

೧೧. ದತ್ತಾತ್ರೇಯ ಜಿ. ಕುಲಕರ್ಣಿ., ಪೂರ್ವೋಕ್ತ, ಪು.೨೩೦

೧೨. ಕರಗುಂದ ಟಿ. ಪಂಕಜಾಕ್ಷಿ., ಶಿಲ್ಪಸೌಂದರ್ಯ, ೧೯೯೮, ಪು.೫

೧೩. ದತ್ತಾತ್ರೇಯ ಜಿ. ಕುಲಕರ್ಣಿ., ಪೂರ್ವೋಕ್ತ, ಪು.೨೩೮

೧೪. ಅದೇ., ಪು.೨೩೮

೧೫. ಅದೇ., ಪು.೨೩೮

೧೬. ರಹಮತ್ ತರೀಕೆರೆ., ಕರ್ನಾಟಕ ನಾಥಪಂಥ, ೨೦೦೬, ಪು.೬೦

೧೭. ದತ್ತಾತ್ರೇಯ ಜಿ. ಕುಲಕರ್ಣಿ., ಪೂರ್ವೋಕ್ತ, ಪು.೨೫೫

೧೮. ಅದೇ., ಪು.೨೩೬

೧೯. ಅದೇ., ಪು.೨೩೬

೨೦. ಮಹಂತೇಶ ಎನ್. ಎಸ್., ಪೂರ್ವೋಕ್ತ, ಪು.೨೨೦

೨೧. ದತ್ತಾತ್ರೇಯ ಜಿ. ಕುಲಕರ್ಣಿ., ಪೂರ್ವೋಕ್ತ, ಪು.೨೫೮

೨೨. ಅದೇ., ಪು.೨೬೮

೨೩. ಮಹಂತೇಶ ಎನ್. ಎಸ್., ಪೂರ್ವೋಕ್ತ, ಪು.೨೨೫

೨೪. ಅದೇ., ಪು.೨೨೮

೨೫. ಅದೇ., ಪು.೨೨೮

೨೬. ಅದೇ., ಪು.೨೨೯

೨೭. ಮಂಜುನಾಥ ಎಂ.ಜಿ. ಮತ್ತು ದೇವರಾಜ ಜಿ.ಕೆ., ಕನ್ನಡ ಲಿಪಿ ವಿಕಾಸ, ೨೦೦೪, ಪು.೩೬

೨೮. ಗೋಪಾಲ್ ಆರ್ (ಸಂ.)., ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ೨೦೦೮, ಪು.೫೦

❑❑❑

-☸-

ಅಧ್ಯಾಯ : ನಾಲ್ಕು

ಕೆರೆ ಮತ್ತು ಬಾವಿಗಳು ಹಾಗೂ ಇತರೆ ಸ್ಮಾರಕಗಳು

೪.೧. ಕೆರೆ ಮತ್ತು ಬಾವಿಗಳು

ನಮ್ಮ ಸಂಸ್ಕೃತಿಯಲ್ಲಿ ಸಾಗರ, ಸರೋವರ, ನದಿಗಳು, ಕೆರೆ ಮತ್ತು ಬಾವಿಗಳ ನೀರು ಪವಿತ್ರವಾಗಿದ್ದು ಪಂಚಭೂತಗಳಲ್ಲಿ ಒಂದಾಗಿದೆ. ಇದು ವಿಶ್ವದಲ್ಲಿರುವ ಕೋಟ್ಯಂತರ ಜೀವರಾಶಿಗಳಾದ ಸಸ್ಯ ಮತ್ತು ಪ್ರಾಣಿವರ್ಗಗಳಿಗೆ ಅತ್ಯಂತ ಅವಶ್ಯಕವಾಗಿದೆ.

ಮಾನವನ ನಾಗರೀಕತೆ ಬೆಳೆದದ್ದು ನೀರಿರುವ ಹತ್ತಿರದ ನದಿ ಪಾತ್ರದಲ್ಲಿ, ನದಿಗಳ ನೀರು ಮಳೆಯಾದಾಗ ಹರಿಯುವುದು ಸಹಜ ಸೃಷ್ಠಿ ಎನಿಸಿದರೆ, ಕೆರೆಗಳು ಮಾತ್ರ ಮಾನವ ನಿರ್ಮಿತ ಎನ್ನಬಹುದು. ಮಳೆಯಾದಾಗ ತಗ್ಗುಗಳಿರುವ ಸಾಕಷ್ಟು ಪ್ರಮಾಣದಲ್ಲಿ ನೀರು ಸಂಗ್ರಹಗೊಳ್ಳುವ ಪ್ರದೇಶವನ್ನೇ ಮಾನವ ಕೆರೆಗಳನ್ನಾಗಿ ನಿರ್ಮಿಸಿಕೊಂಡಿದ್ದುದು ಅವನ ಚಿಂತನ ಶೀಲತೆಗೆ ಸಾಕ್ಷಿಯಾಗಿದೆ. ಬದುಕನ್ನು ಕಟ್ಟಿಕೊಳ್ಳಲು ಆರಂಭಿಸಿದಾಗಿನಿಂದಲೂ ಕೆರೆಗಳ ನಿರ್ಮಾಣಕ್ಕೂ ಮಾನವ ಯೋಚಿಸಿದ ಯೋಜನೆ ಬಹುದೊಡ್ಡದಾಗಿದೆ. ಕೊರತೆಯ ನೀಗುವಿಕೆಯಾನ್ನು ಈ ರೀತಿಯಲ್ಲಿ ಪ್ರಯತ್ನಿಸಿದ್ದುದು ಪ್ರಯೋಜನದ ಚಾರಿತ್ರಿಕ ಸಂಗತಿಯಾಗಿದೆ ವಿಶ್ವ ಸೃಷ್ಠಿಯನ್ನು ಅರಿತು ಕೆರೆಸೃಷ್ಠಿಗೆ ಕಾರಣವಾದ ಈ ಬಗೆಯ ಜಲಸೃಷ್ಠಿ ಫಲವಂತಿಕೆಯ ಪ್ರತಿರೂಪ, ಇಂದು ಭಾರತ ದೇಶದ ಭೂಗೋಳದ ಕುರಿತು ಆಲೋಚಿಸಿದಾಗ ಪ್ರತಿ ಗ್ರಾಮ, ಪಟ್ಟಣಗಳು ಕೆರೆಗಳನ್ನೂ ಹೊಂದಿದೆ. ಕೆರೆಗಳಿಲ್ಲದೆ ಊರಿಲ್ಲ ಎಂಬುವಷ್ಟರ ಮಟ್ಟಿಗೆ ಕೆರೆಗಳು ಸೃಷ್ಠಿಯಾಗಿದೆ. ಕೆರೆಗಳ ಬಗ್ಗೆ ಬಹುದೊಡ್ಡ ಇತಿಹಾಸವಿದೆ, ಜನಪದರ ಬಾಳಿನ ಜೀವನಾಡಿಯಾಗಿರುವ ಕೆರೆಗಳ ನಿರ್ಮಿತಿಗೆ ಕಾಲ ಕಾಲಕ್ಕೆ ಜನತೆ ತಮ್ಮನ್ನೂ ಅರ್ಪಿಸಿಕೊಳ್ಳುತ್ತಾ ಬಂದಿರುವ ಇದು ನಮ್ಮವರ ಉದಾತ್ತ ಸಂಸ್ಕೃತಿಯ ಬೀಜಮಂತ್ರವೂ ಹೌದು.

ಮಾನವನ ಸಂಸ್ಕೃತಿಯ ವಿಕಾಸದಲ್ಲಿ ನೀರು ಅಮೋಘವಾದ ಪ್ರಭಾವವನ್ನು ಬೀರಿದೆ ಸಕಲ ಜಲಚರ ಜೀವಿಗಳಿಗೆ ನೀರು ಅನಿವಾರ್ಯವಾದ ಮೂಲ ಧಾತುವಾಗಿದೆ. ಎಲ್ಲಾ ಜೀವಿಗಳಿಗೂ ಜೀವಪೋಷಕವಾಗಿದ್ದು, ಮಾನವನ ಉಗಮ ಮತ್ತು ವಿಕಾಸದಲ್ಲಿ ನೀರಿನ ಪಾತ್ರ ಪ್ರಮುಖವಾದುದಾಗಿದೆ.

ಹೀಗೆ ಪ್ರಕೃತಿಯಲ್ಲಿ ನೀರು ಪ್ರಮುಖ ಪಾತ್ರವಹಿಸಿದ್ದು ಸಸ್ಯ ಮತ್ತು ಜೀವಿಗಳಿಗೆ ವಿಕಾಸಹೊಂದಲು ಸಾಕಷ್ಟು ಅನುಕೂಲ ಮಾಡಿಕೊಟ್ಟಿದೆ ಎನ್ನಬಹುದು.

"ಕೆರೆಯಂ ಕಟ್ಟಿಸು, ಬಾವಿಯಂ ಸವೆಸು ದೇವಗಾರಮಂ
ಮಾಡಿಸಜ್ಜೆರೆಯೊಳ್ಳಿಕ್ಕಿದ ನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯ
ನಂಬಿದರ್ಗ್ಗೆ ರೆವೆಟ್ಟಾಗಿರುವ ಶಿಷ್ಟರಂ ಪೂರೆಯನ್ನುತ್ತಿಂತೆಲ್ಲವಂ
ಪಿಂದೆ ತಾಯೆರದಳ್ವಾಲೆರವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ"[೧]

ಈ ಮೇಲಿನ ಶಾಸನದಲ್ಲಿ ವಿಜಯನಗರ ಅರಸ ಪ್ರೌಢ ಪ್ರತಾಪದೇವರಾಯನ ಮಂತ್ರಿಯಾದ ಲಕ್ಷ್ಮೀಧರನು ಕೂಸಾಗಿದ್ದಾಗ ಅವನ ತಾಯಿ ಹಾಡಿಹಾಲೆರೆಯುತ್ತಾ ಬುದ್ಧಿವಾದದ ಮಾತುಗಳನ್ನು ಮಗನ ಕಿವಿಗೆ ಹೇಳುತ್ತಾ, ಕೆರೆ, ಬಾವಿಗಳ ನಿರ್ಮಾಣದ ಮಹತ್ವದ ಬಗ್ಗೆ ತಿಳಿಸಿಕೊಡಲಾಗಿದೆ.

ಭಾರತದಲ್ಲಿ ಕೆರೆಗಳು ಸುಮಾರು ಎರಡು ಸಾವಿರ ವರ್ಷಗಳಿಂದಲೂ ಕಂಡುಬಂದಿವೆಯಾದರೂ, ಕರ್ನಾಟಕದಲ್ಲಿ ಕೆರೆಗಳ ನಿರ್ಮಾಣ ಕಾರ್ಯವು ಅಷ್ಟೇನು ಭರದಿಂದ ಸಾಗಿರಲಿಲ್ಲಿ. ಕಲ್ಯಾಣಿ ಚಾಲುಕ್ಯರ ಕಾಲದಿಂದ ಕೆರೆಗಳ ನಿರ್ಮಾಣ ಕಾರ್ಯವು ಹೊಸತೊಂದು ಚೈತನ್ಯವನ್ನು ಪಡೆಯಿತು. ಈ ಕಾಲವನ್ನು ಕೆರೆಗಳ ಸುವರ್ಣಯುಗವೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿರುತ್ತಾರೆ.[೨]

ವಿಜಯನಗರದ ಕಾಲದಲ್ಲಿ ಅಧಿಕವಾಗಿ ಕೆರೆ, ಕುಂಟೆ ಮತ್ತು ಕಾಲುವೆಗಳನ್ನು ನಿರ್ಮಿಸಲಾಯಿತು. ಇದರೊಂದಿಗೆ ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರವನ್ನು ಪೂರೈಸುವ ಸಲುವಾಗಿ ಹೆಚ್ಚುವರಿ ಭೂಮಿಯನ್ನು ಕೃಷಿಗೆ ಒಳಪಡಿಸಲಾಯಿತು. ಇವುಗಳಿಗೆ ನೀರನ್ನು ಪೂರೈಸಲು ಕೃತಕ ಜಲಸಂಗ್ರಹಗಳಾದ ಕೆರೆಗಳು ಹೆಚ್ಚು ಬಳಕೆಗೆ ಬಂದವು.

ಈ ಕೆರೆಗಳ ವಿಷಯವಾಗಿ ನಮಗೆ ಪ್ರಥಮವಾಗಿ ಸಿಗುವ ದಾಖಲೆ ಕರ್ನಲ್ ಮೆಕೆಂಜೀ (೧೭೯೯–೧೮೦೬) ಮಾಡಿದ ಮೈಸೂರು ಸಂಸ್ಥಾನದ ಸರ್ವೆಯ ವಿವರಗಳಲ್ಲಿ ಪ್ರತಿಯೊಂದು ಹೋಬಳಿಯಲ್ಲಿ ಅಂದು ಇದ್ದಂತಹ ಕೆರೆ, ಕಟ್ಟೆ, ಕುಂಟೆ ಮತ್ತು ಬಾವಿಗಳ ಸಂಖ್ಯೆ ನಮಗೆ ಸಿಗುತ್ತದೆ. ಆದರೆ ಅವುಗಳಿಂದ ನೀರಾವರಿಯಾಗುತ್ತದ್ದ ಜಮೀನಿನ ವಿವರವಾಗಲಿ, ಕೆರೆಗಳ ವಿವರವಾಗಲಿ ನಿಖರವಾಗಿ ತಿಳಿಯುವುದಿಲ್ಲ.[೩] ೧೭೯೯ರ ಕರ್ನಲ್ ಮೆಕೆಂಜೀ ಸಮೀಕ್ಷೆ ಪ್ರಕಾರ ತುಮಕೂರು ಜಿಲ್ಲೆಯಾದ್ಯಂತ ಸರಿಸುಮಾರು ೨೧೧೩ ಸಣ್ಣ ಮತ್ತು ದೊಡ್ಡ ಕೆರೆಗಳ ಬಗ್ಗೆ ಮೊದಲ ಅಂಕಿ–ಅಂಶ ದೊರೆಯುತ್ತದೆ. ಅದರ ಪ್ರಕಾರ ಕುಣಿಗಲ್ ತಾಲ್ಲೂಕುನಲ್ಲಿ ೪೩೨ ಕೆರೆಗಳಿದ್ದವೆಂದು ತಿಳಿದುಬಂದಿದೆ.[೪]

ಫ್ರಾನ್ಸಿಸ್ ಬೂಕಾನನ್ ರವರು ಕೆರೆ ಮತ್ತು ಕಟ್ಟೆಗಳನ್ನು ಹೀಗೆ ಗುರ್ತಿಸಿದ್ದಾರೆ. ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ನಿರ್ಮಿಸಲ್ಪಟ್ಟ ಚಿಕ್ಕ ಸರೋವರವನ್ನೇ ಕಟ್ಟೆ ಎಂದು ಕೃಷಿ ಭೂಮಿಗೆ ನೀರುಣಿಸುವ ದೊಡ್ಡ ಸರೋವರವನ್ನು ಕೆರೆಯೆಂದು ಕರೆದಿದ್ದಾರೆ.[೫] ಒಂದು ಕೆರೆಯನ್ನು ನಿರ್ಮಿಸಬೇಕಾದರೆ ಏನೆಲ್ಲಾ ಕ್ರಮ ಮತ್ತು ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕೆಂಬ ವಿವರಗಳು ಈ ಕೆಳಕಂಡಂತಿವೆ.

- ಕೆರೆಕಟ್ಟುವವನಾದ ರಾಜನು ಸಂತೃಪ್ತನಾಗಿಯೂ, ಸಂತೋಷದಿಂದ ಕೂಡಿದವನಾಗಿಯೂ ಮತ್ತು ಆಚಂದ್ರಾರ್ಕವಾಗಿ ಹೆಸರುಗಳಿಸಿಕೊಳ್ಳುವವನಾಗಿ ಅಂತಹವನು ಕೆರೆಯ ನಿರ್ಮಾಣಕ್ಕೆ ತೊಡಗಿಕೊಳ್ಳಬೇಕು.

- ಜಲಶಾಸ್ತ್ರದಲ್ಲಿ (ಪಯಸ್‌ಶಾಸ್ತ್ರ) ನೈಪುಣ್ಯತೆಯನ್ನು ಹೊಂದಿದ ಬ್ರಾಹ್ಮಣನು ಈ ಕಾರ್ಯದಲ್ಲಿ ತೊಡಗಬೇಕು.
- ಉತ್ತಮ ಜೇಡಿಮಣ್ಣು ಕೂಡಿರುವಂತಹ ಪ್ರದೇಶವನ್ನು ಕೆರೆಕಟ್ಟುವುದಕ್ಕೆ ಆಯ್ದುಕೊಳ್ಳಬೇಕು.
- ನದಿ ನೀರಿನ ಆಶ್ರಯವು ಕೆರೆಯಿಂದ ಸುಮಾರು ಮೂರು ಮೈಲಿಗಳಷ್ಟು ದೂರದಲ್ಲಿರಬೇಕು.
- ಬೆಟ್ಟಗಳ ಸಾಲುಗಳು ಇದ್ದಲ್ಲಿ, ಅವುಗಳನ್ನು ಕೆರೆಯನ್ನು ನಿರ್ಮಿಸಲು ಉಪಯೋಗಿಸಬೇಕು.
- ಬೆಟ್ಟಗಳ ನಡುವಿನ(ಕಣಿವೆ) ಪ್ರದೇಶದಲ್ಲಿ ಅತಿದೊಡ್ಡದಲ್ಲದ ಮತ್ತು ಸದೃಡವಾದ ಗೋಡೆ (ಏರಿ)ಯನ್ನು ಕಟ್ಟಬೇಕು.
- ಕೆರೆಯ ಪ್ರದೇಶದ ಸಮೀಪದಲ್ಲಿ ಫಲ ಕೊಡುವ ಭೂಮಿಯಿರಬೇಕು.
- ಕೆರೆಯ ನೀರಿನ ಹರವು ವಿಸ್ತೀರ್ಣವಾಗರಬೇಕು, ಹಾಗೆಯೇ ಆಳವಾಗಿಯೂ ಇರಬೇಕು.
- ಸಮೀಪದಲ್ಲಿಯೇ ಕಲ್ಲುಗಣಿಗಳು ಇದ್ದು ಅಲ್ಲಿ ಉದ್ದವಾದ ಮತ್ತು ಸಮನಾದ ಕಲ್ಲುಗಳು ದೊರೆಯಬೇಕು.
- ಕೆರೆಯ ಸಮೀಪದಲ್ಲಿರುವ ಜಮೀನು ಫಲವಾತ್ತಾಗಿರಬೇಕು ಹಾಗೂ ಅಲ್ಲಿ ಹಣ್ಣು, ಹಂಪಲುಗಳ ವನಗಳು ಇರಬೇಕು ಮತ್ತು ಜಮೀನು ಸಮನಾಗಿ ಏರಿಳಿತವಿಲ್ಲದೆ ಇರಬೇಕು.
- ಕೆರೆಯ ತೂಬುಗಳಲ್ಲಿನ ಕಲ್ಲು ಅಥವಾ ನಿಯಂತ್ರಕಗಳು ಭದ್ರವಾಗಿರಬೇಕು ಮತ್ತು ಇದನ್ನು ನೀರಿನ ಒತ್ತಡದಿಂದ ಕಾಪಾಡುವಷ್ಟು ಸದೃಢವಾಗರಬೇಕು.
- ಕೆರೆಗಳನ್ನು ಕಟ್ಟುವ ತಂತ್ರಜ್ಞಾನವನ್ನು ಹೊಂದಿರುವಂತಹ ಹನ್ನೆರಡು ಮಂದಿ ಇರಬೇಕು ಮತ್ತು ಅವರೆಲ್ಲರೂ ಮೇಲೆ ಉಲ್ಲೇಖಿಸಿದ ಹನ್ನೊಂದು ಅಂಶಗಳನ್ನು ಅರಿತಿರಬೇಕು.[೬]

ಒಂದು ಕೆರೆಯನ್ನು ನಿರ್ಮಿಸಬೇಕಾದಾಗ ತೆಗೆದುಕೊಳ್ಳಬೇಕಾದ ಅತೀ ಮುಖ್ಯವಾದ ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ಇದೇ ಶಾಸನ ತಿಳಿಸುತ್ತದೆ. ಅವುಗಳು ಈ ರೀತಿಯಾಗಿವೆ.

೧. ಕೆರೆಯಿಂದ ನೀರು ಸ್ರವಿಸಬಾರದು.

೨. ಕೆರೆಯ ಪಾತ್ರದಲ್ಲಿನ ಮಣ್ಣು ಉಪ್ಪಿನಂಶದಿಂದ ಕೂಡಿರಬಾರದು.

೩. ಎರಡು ರಾಜ್ಯಗಳ ನಡುವಿನ ಗಡಿ ಪ್ರದೇಶವನ್ನು ಆಯ್ಕೆ ಮಾಡಬಾರದು.

೪. ಕೆರೆಯ ಮಧ್ಯಭಾಗವನ್ನು ಗಮನಿಸಬೇಕು, ಅವು ಎತ್ತರ ಅಥವಾ ಉಬ್ಬಾಗಿರಬಾರದು.

೫. ಸ್ವಲ್ಪ ಜಮೀನಿದ್ದು ಅಧಿಕ ನೀರು ಬರುವಂತಹ ಜಾಗವನ್ನು ಆಯ್ಕೆ ಮಾಡಬಾರದು.

ಹೀಗೆ ವಿಜಯನಗರ ಕಾಲದಲ್ಲಿ ತಂತ್ರಜ್ಞಾನವು ಎಷ್ಟರ ಮಟ್ಟಿಗೆ ಬೆಳೆದಿತ್ತು ಎಂಬುದು ನಮಗೆ ಈ ಶಾಸನದಿಂದ ತಿಳಿದುಬರುತ್ತದೆ. ಅವರು ನಿಸರ್ಗವನ್ನು ಉಪಯುಕ್ತವಾಗಿ ಬಳಸಿಕೊಂಡು ಕೆರೆ ಕಟ್ಟುವ ಕಾರ್ಯಕ್ಕೆ ಸಾಕಷ್ಟು ಮಹತ್ವವನ್ನು ನೀಡಿದ್ದರೆಂಬುದು ಮೇಲಿನ ಶಾಸನದಿಂದ ಸ್ಪಷ್ಟವಾಗುತ್ತದೆ. ಕೆರೆಗಳನ್ನು

ನಿರ್ಮಿಸುವುದಕ್ಕೆ ಕಲ್ಲು, ಕಲ್ಲಿನ ತೂಬು, ಇಟ್ಟಿಗೆ, ಸುಣ್ಣ ಮತ್ತು ಗಾರೆ ಮುಂತಾದ ಸಾಮಾಗ್ರಿಗಳನ್ನು ಬಳಸುತ್ತಿದ್ದರು ಎಂದು ಶಾಸನವು ತಿಳಿಸುತ್ತದೆ.[೭]

ಏರಿ ನಿರ್ಮಾಣ

ಏರಿಯು ಕೆರೆಯ ಒಂದು ಪ್ರಮುಖ ಭಾಗ ಸಾಮಾನ್ಯವಾಗಿ ಕುಣಿಗಲ್ ಪರಿಸರದ ಎಲ್ಲಾ ಕೆರೆಗಳ ಏರಿಗಳು ಮಣ್ಣಿನಿಂದ ನಿರ್ಮಿಸಿದಂತಿವೆ. ಇವು ಕೆರೆಗಳಿಗೆ ಆಧಾರ ಸ್ತಂಭಗಳಾಗಿ ನೀರನ್ನು ಸಂಗ್ರಹಿಸುತ್ತವೆ. ಈ ಭಾಗವನ್ನು ಅತ್ಯಂತ ಗಟ್ಟಿಯಾಗಿ ಕಟ್ಟಬೇಕಾಗುತ್ತದೆ. ಮಣ್ಣನು ಹಾಕಿ, ನೀರಿನಿಂದ ನೆನೆಸಿ ಗಟ್ಟಿಮಾಡಿ ಅದರ ಮೇಲೆ ಏರಿಯನ್ನು ನಿರ್ಮಿಸಲು ಮಣ್ಣನು ಹಾಕುತ್ತಾ ಹೋಗುತ್ತಾರೆ. ಈ ರೀತಿ ಪದೇ ಪದೇ ಮಾಡುವುದರಿಂದ ಮಣ್ಣು ಚೆನ್ನಾಗಿ ಕೂಡಿಕೊಂಡು ಗಟ್ಟಿಯಾಗುತ್ತದೆ. ಬಹುತೇಕವಾಗಿ ಕೆರೆಯ ತಳಭಾಗದ ಮಣ್ಣನ್ನು ಆಗೆದು ಏರಿಕಟ್ಟಲು ಉಪಯೋಗಿಸುತ್ತಾರೆ. ಇದರಿಂದ ಕೆರೆಯ ತಳಭಾಗ ಹೆಚ್ಚು ನೀರು ಸಂಗ್ರಹಗೊಳ್ಳುತ್ತದೆ.

ಸಾಮಾನ್ಯವಾಗಿ ಕೆರೆ ಏರಿಯ ತಳಭಾಗವು ವಿಶಾಲವಾಗಿದ್ದು ಅದು ಮೇಲಕ್ಕೆ ಹೋದಂತೆ ಕಿರಿದಾಗುತ್ತಾ ಹೋಗುತ್ತದೆ. ಕೆರೆಯ ಏರಿಯ ನೀರಿರುವ ಭಾಗಕ್ಕೆ ಸಾಮಾನ್ಯವಾಗಿ ಕಲ್ಲಿನ ಜೋಡಣೆಯನ್ನು ಹೊಂದಿಸಿರುತ್ತಾರೆ. ಇದಕ್ಕೆ ಕಟ್ಟುವಾಡ ಅಥವಾ ಕಟುವಾಡವೆಂದು ಹೆಸರು. ಕಲ್ಲಿನ ಜೋಡಣೆಯು ಇದ್ದ ಪಕ್ಷದಲ್ಲಿ ಏರಿಗೆ ಆಗುವ ಧಕ್ಕೆಯನ್ನು ಮತ್ತು ಮಣ್ಣು ಕೊರೆತವನ್ನು ಸಹ ಸಾಕಷ್ಟು ಮಟ್ಟಿಗೆ ತಡೆಯುತ್ತದೆ. ಕೆಲವೊಮ್ಮೆ ಏರಿಯ ಎರಡೂ ಕಡೆಗಳಲ್ಲಿ ಕಟುವಾಡಗಳನ್ನು ಗಮನಿಸಬಹುದು. ಏರಿಯ ಆಯಾ ಕಟ್ಟಿನ ಭಾಗವು ಇಳಿಜಾರಾಗಿರುತ್ತದೆ. ಈ ಇಳಿಜಾರು ರಚನೆಯು ನೀರಿನ ಒತ್ತಡವನ್ನು ವಿರುದ್ಧ ದಿಕ್ಕಿನಿಂದ ತಡೆದು ಏರಿಗೆ ಸಾಕಷ್ಟು ಬಲವನ್ನು ಕೊಡುವಲ್ಲಿ ಸಹಾಯಕವಾಗಿರುತ್ತದೆ. ಇಳಿಜಾರು ಭಾಗದಲ್ಲಿ ಕೆಲವು ಸಸ್ಯಗಳನ್ನು ಬೆಳೆದು ಅದನ್ನು ಮತ್ತಷ್ಟು ಬಲಪಡಿಸುವಪದ್ಧತಿಯು ವಾಡಿಕೆಯಲ್ಲಿ ಇರುವುದನ್ನು ಗಮನಿಸಬಹುದು.

ಕೆರೆಗಳ ಏರಿಯು ಅಂಕು ಡೊಂಕಾಗಿಯೇ ಕಟ್ಟಿರುತ್ತಾರೆ ಕಾರಣ ನೀರಿನಿಂದ ಏರಿಗೆ ಬೀಳುವ ಒತ್ತಡವು ಸಮನಾಗಿ ಹಂಚಿಕೆಯಾಗುತ್ತದೆ ಮತ್ತು ಏರಿ ಒಡೆದಲ್ಲಿ ಅದನ್ನು ಸಲುಭವಾಗಿ ಸರಿಪಡಿಸಲು ಸಹಾಯಕವಾಗಿದೆ ಹಾಗೂ ಏರಿಯ ಮೇಲೆ ಒಂದು ಬಂಡಿ ಜಾಡಿನಷ್ಟು ವಿಸ್ತೀರ್ಣದ ಜಾರಿ ಬಿಟ್ಟಿದ್ದು ಓಡಾಟಕ್ಕೆ ಮತ್ತು ರಕ್ಷಣಾ ಸಂಚಾರಕ್ಕೆ ಅನುಕೂಲವಾಗಿದೆ.

ತೂಬುಗಳ ರಚನೆ

ತೂಬುಗಳು ಕೆರೆಯ ಒಂದು ಅವಿಭಾಜ್ಯ ಅಂಗ, ತೂಬುಗಳೇ ಕೆರೆಯ ನೀರನ್ನು ಹೊರಗೆ ಹೋಗದಂತೆ ತಡೆ ಹಿಡಿದಿಡುವ ಸಾಧನಗಳಾಗಿವೆ. ಅವುಗಳನ್ನು ನಾವು ಇಂದಿನ ನಲ್ಲಿಗಳಿಗೆ ಹೋಲಿಸಬಹುದು. ತೂಬುಗಳನ್ನು ಸಾಮಾನ್ಯವಾಗಿ ಕಲ್ಲಿನಿಂದ ರಚಿಸಿದ್ದು, ಎರಡು ಅಥವಾ ನಾಲ್ಕು ಕಂಬಗಳಿಂದ ಕೂಡಿರುತ್ತವೆ. ಎರಡು ಕಂಬಗಳ ನಡುವಿನಲ್ಲಿ ಒಂದು ಅಡ್ಡ ಕಲ್ಲನ್ನು ಇರಿಸಲಾಗುತ್ತದೆ. ನಂತರ ಉದ್ದವಾದ ಕಲ್ಲುಗಳ ಮೇಲ್ಭಾಗದಲ್ಲಿ ಅಡ್ಡಗಲ್ಲನ್ನು ಹಾಸಲಾಗುತ್ತದೆ. ಈ ಎರಡು ಅಡ್ಡಗಲ್ಲುಗಳ ನಡುವೆ ಸುಮಾರು ೨೫ಸೆಂ.ಮೀ ವ್ಯಾಸದ ರಂಧ್ರವಿರುತ್ತದೆ. ಇದರ ಮೂಲಕವಾಗಿ ರಂಧ್ರದ ಅಳತೆಗೆ ತಕ್ಕ ವ್ಯಾಸವುಳ್ಳ ಮರದ ತುಂಡನ್ನು ಇಟ್ಟು ರಂಧ್ರವನ್ನು ಮುಚ್ಚಲಾಗುತ್ತದೆ. ಈ ಮರದ ದಿಮ್ಮಿಯನ್ನು

ಮೇಲಕ್ಕೆತ್ತಿದಾಗ ನೀರು ಕಾಲುವೆಯ ಮುಖಾಂತರ ಹರಿದು ಅಚ್ಚುಕಟ್ಟು ಪ್ರದೇಶಕ್ಕೆ ಹೋಗುತ್ತದೆ. ಮರದ ಒಂದು ವಿಶೇಷತೆ ಎಂದರೆ. ಅದು ನೀರಿನಲ್ಲಿ ನೆನೆದಾಗ ನೀರು ಕುಡಿದು ಹಿಗ್ಗುತ್ತದೆ. ಈ ರೀತಿಯಾಗಿ ಹಿಗ್ಗಿದ ಮರದ ತುಂಡು ರಂಧ್ರದಲ್ಲಿ ಬಿಗಿಯಾಗಿ ಕುಳಿತು ಹೊರಕಾಲುವೆಯ ಮುಖಾಂತರ ನೀರು ಹರಿಯುವುದನ್ನು ಆದಷ್ಟು ಮಟ್ಟಿಗೆ ತಡೆಯುತ್ತದೆ. ಇಂದು ಸಹ ಅನೇಕ ಕಡೆಗಳಲ್ಲಿ ಮರವನ್ನು ಬಳಸುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಲೋಹವನ್ನು ಬಳಕೆ ಮಾಡಲಾಗುತ್ತಿದೆ. ತೂಬಿನ ಮೇಲ್ಭಾಗದಲ್ಲಿರುವ ಕಲ್ಲಿನ ಮೇಲೆ ಸಾಮಾನ್ಯವಾಗಿ ಗಜಲಕ್ಷ್ಮೀಯ ಉಬ್ಬುಶಿಲ್ಪವಿರುತ್ತದೆ. ಇದರಿಂದ ಆ ಕೆರೆಯನ್ನು ವಿಜಯನಗರ ಕಾಲದ ಕೆರೆಯೆಂದು ಗುರುತಿಸಬಹುದಾಗಿದೆ.[೮]

ಕೋಡಿಯ ನಿರ್ಮಾಣ

ಕೋಡಿಯು ಬಹಳ ಮುಖ್ಯವಾದ ಕೆರೆಯ ಭಾಗಗಳ್ಲೊಂದು ಕೋಡಿಯ ಪ್ರದೇಶವನ್ನು ಆಯ್ಕೆ ಮಾಡಿ ಅದನ್ನು ಅಳವಡಿಸುವುದರಲ್ಲಿಯೇ ಕೆರೆಯನ್ನು ಕಟ್ಟುವವನಿಗೆ ಇರುವ ಸಾಮರ್ಥ್ಯವನ್ನು ತೋಡಿಸಿಕೊಡುತ್ತದೆ. ಸಾಮಾನ್ಯವಾಗಿ ಕೋಡಿಯು ಕೆರೆಯ ನೀರಿರುವ ಯಾವುದಾದರೂ ಒಂದು ದಿಕ್ಕಿಗೆ ಇರುತ್ತದೆ. ಏರಿಯ ದಿಕ್ಕಿನಲ್ಲಿ ಇರುವುದಿಲ್ಲ ಕೆರೆಯಲ್ಲಿ ನೀರು ಸಂಗ್ರಹವಾಗಿ ಗರಿಷ್ಠ ಮಟ್ಟ ತಲುಪಿದಾಗ ಹೆಚ್ಚುವರಿ ನೀರು ಈ ಕೋಡಿಯ ಮೂಲಕ ಹಾದು ಹೋಗುತ್ತದೆ. ಅತೀ ಹೆಚ್ಚು ನೀರು ಬಂದಾಗ ಕೆರೆ ಏರಿಗೆ ಒತ್ತಡ ಬೀಳುತ್ತದೆ. ಆ ಒತ್ತಡವನ್ನು ತಡೆಯಲು ಕೋಡಿಗಳನ್ನು ಅಳವಡಿಸಲಾಗುತ್ತದೆ. ಒಂದು ಕೆರೆಯ ಕೋಡಿ ಬಿತ್ತೆಂದರೆ ಆ ಕೆರೆಗೆ ಗರಿಷ್ಠ ಮಟ್ಟದ ನೀರು ಬಂದಿದೆಯೆಂದು ಅರ್ಥ ಕೆಲವೊಂದು ಕಡೆಯಲ್ಲಿ ಕೋಡಿ ಬಿದ್ದು ನೀರು ಹರಿದು ಹೋಗುವ ಪ್ರದೇಶದ ಸಮೀಪದಲ್ಲಿಯೇ ಮತ್ತೊಂದು ಕೆರೆಯನ್ನು ನಿರ್ಮಿಸಿರುತ್ತಾರೆ. ಕೆರೆಯ ಗರಿಷ್ಠ ಮಟ್ಟ ಹಾಗೂ ಕೋಡಿಯ ಮಟ್ಟ ಒಂದೇ ಆಗಿರಬೇಕು, ಕೆರೆಯು ಅತೀ ದೊಡ್ಡದಾಗಿದ್ದರೆ ಎರಡು ಕೋಡಿಗಳಿರುವುದನ್ನು ನೋಡಬಹುದು.

ಕಾಲುವೆಗಳ ವ್ಯವಸ್ಥೆ

ಕಾಲುವೆಯು ಕೆರೆಯ ಇನ್ನೊಂದು ಭಾಗವಾಗಿದೆ. ಕೆರೆಯ ನೀರನ್ನು ನಿಯಂತ್ರಿಸಿ ಆಯಕಟ್ಟು ಪ್ರದೇಶಕ್ಕೆ ನೀರು ಹಾಯಿಸುವ ಮಾರ್ಗಕ್ಕೆ ಕಾಲುವೆ ಎಂದು ಹೆಸರು. ಕಾಲುವೆಗಳನ್ನು ನಾವು ಎರಡು ರೀತಿಯಾಗಿ ವರ್ಗೀಕರಿಸಬಹುದು ಅದರಂತೆ ಮೊದಲನೆಯದು ಕೆರೆಗೆ ನೀರು ಬರುವ ಕಾಲುವೆ ಮತ್ತು ಎರಡನೆಯದು ಕೆರೆಯಿಂದ ಆಯಕಟ್ಟು ಪ್ರದೇಶಕ್ಕೆ ನೀರು ಹಾಯಿಸಲು ಕಾಲುವೆಗಳು, ನೀರನ್ನು ಕಾಲುವೆಗಳ ಮೂಲಕ ಏರಿಯ ಕೆಳಭಾಗದಿಂದ ಹಾಯಿಸುತ್ತಿದ್ದರು. ಇವುಗಳಿಗೆ ತೂಬುಗಳನ್ನು ಇರಿಸಿ ಕೆರೆಯ ನೀರನ್ನು ಸಮರ್ಪಕವಾಗಿ ನಿಯಂತ್ರಿಸುತ್ತಿದ್ದರು. ಕಾಲುವೆಯು ಕೆರೆ ಏರಿಯ ಕೆಳಗಡೆಯಿಂದ ಹಾದು ಬರುತ್ತದೆ. ಇವುಗಳನ್ನು ಸಹ ಕಲ್ಲುಗಳಿಂದ ಕಟ್ಟಲಾಗಿರುತ್ತದೆ. ಹತ್ತಿರದ ದೇವಾಲಯಕ್ಕೆ ನೀರನ್ನು ಹಾಯಿಸುವ ನಾಲೆಗೆ ಮರವನ್ನು ಬಳಸಿದ್ದರೆಂದು ತುಮಕೂರು ಜಿಲ್ಲೆಯ ರಾಮಚಂದ್ರನ ಹಳ್ಳಿಯ ಶಾಸನವು ತಿಳಿಸುತ್ತದೆ.[೯] ಒಂದು ಕೆರೆಗೆ ಒಂದು, ಎರಡು, ಮೂರು ಅಥವಾ ನಾಲ್ಕು ಕಾಲುವೆಗಳು ಸಹ ಇರುತ್ತಿದ್ದವು. ಅವುಗಳು ವಿವಿಧ ಎತ್ತರಗಳಲ್ಲಿ ಇರುತ್ತಿದ್ದವು ಕೆರೆಯು ತುಂಬಿದ್ದಾಗ ಮೇಲ್ಮಟ್ಟದಲ್ಲಿದ್ದ ಕಾಲುವೆಯಿಂದ ನೀರನ್ನು ಹಾಯಿಸಿಕೊಳ್ಳಲಾಗುತ್ತಿತ್ತು. ನೀರು ಕೆಳಮಟ್ಟಕ್ಕೆ ಬಂದಾಗ ಕೆಳಮಟ್ಟದ ಕಾಲುವೆಗಳಿಂದ ನೀರನ್ನು ಹಾಯಿಸಲಾಗುತ್ತಿತ್ತು. ಈ ವಾಡಿಕೆಯು ಇಂದಿಗೂ ಪ್ರಚಲಿತವಾಗಿದೆ.

ಜಲಾನಯನ ಪ್ರದೇಶ (Catchment Area)

ಈ ಪ್ರದೇಶವು ಸಾಮಾನ್ಯವಾಗಿ ಕೆರೆಯ ಭಾಗಕ್ಕಿಂತ ಎತ್ತರದಲ್ಲಿರುತ್ತದೆ. ಸಾಮಾನ್ಯವಾಗಿ ಈ ಪ್ರದೇಶದಲ್ಲಿ ಅಧಿಕ ಮಳೆಯಾಗುತ್ತದೆ ಮತ್ತು ಇಲ್ಲಿ ಬೀಳುವ ಮಳೆಯ ನೀರು ಹರಿದು ಬಂದು ಕೆರೆಯನ್ನು ಸೇರುತ್ತದೆ.

ಸಾಮಾನ್ಯವಾಗಿ ಗುಡ್ಡಗಳ ನಡುವಿನ ಕಣಿವೆ ಪ್ರದೇಶಕ್ಕೆ ಜಲಾನಯನ ಪ್ರದೇಶವೆಂದು ಹೆಸರು. ಇಲ್ಲಿರುವ ಕಾಡುಗಳು ಮತ್ತು ಸಸ್ಯ ರಾಶಿಗಳು ಮಳೆಯ ನೀರನ್ನು ತಮ್ಮ ಬೇರುಗಳಲ್ಲಿ ಹಾಗೂ ಒಣಗಿದ ಎಲೆಗಳ ನಡುವಿನ ಪದರಗಳಲ್ಲಿ ಮತ್ತು ಮಣ್ಣಿನಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತವೆ. ಕಾಲ ಕ್ರಮದಲ್ಲಿ ಈ ಪ್ರದೇಶದಲ್ಲಿ ಸಂಗ್ರಹಗೊಂಡ ನೀರು ಸಣ್ಣ ಝರಿಯಂತೆ ಹರಿದು ಬಂದು ನದಿಗಳಾಗಿ ಮಾರ್ಪಾಡಾಗುತ್ತವೆ. ಕೆಲವು ಝರಿಗಳು ಹಳ್ಳಗಳಾಗಿ ಕೆರೆಯ ಪ್ರದೇಶಕ್ಕೆ ಬಂದು ಸೇರುತ್ತದೆ.

ಸಾಮಾನ್ಯವಾಗಿ ಈ ರೀತಿಯಾಗಿ ಹರಿದುಬರುವಂತಹ ನೀರಿಗೆ ಅಡ್ಡಲಾಗಿ ಕಟ್ಟೆಯನ್ನು ನಿರ್ಮಿಸಿ ಕೆರೆಯನ್ನು ಕಟ್ಟುತ್ತಾರೆ. ಇದರಲ್ಲಿ ಮುಖ್ಯವಾಗಿ ಗಮನದಲ್ಲಿರಿಸಿಕೊಳ್ಳಬೇಕಾದ ಸಂಗತಿಯೆಂದರೆ ಮಳೆ ಬೀಳುವ ಪ್ರದೇಶ ಮತ್ತು ಕೆರೆಗೆ ಹರಿದುಬಂದು ಸೇರುವ ನೀರಿನ ಪ್ರಮಾಣಗಳು ಪರಸ್ಪರ ಸಂಬಂಧವನ್ನು ಹೊಂದಿರುತ್ತದೆ.

ಕೆರೆಯ ತಳ

ಕೆರೆಯ ತಳ ಎಂದು ಗುರುತಿಸುವ ಭಾಗವು ಸಾಮಾನ್ಯ ಭೂ ಪ್ರದೇಶವಾಗಿದ್ದು, ಇಲ್ಲಿ ನೀರು ಸಂಗ್ರಹಗೊಳ್ಳುತ್ತದೆ. ಕೆರೆಯ ಈ ಭಾಗದಲ್ಲಿ ಚಿಕ್ಕ ಹಳ್ಳಗಳಿಂದ ನೀರು ಹರಿದು ಬಂದು ಶೇಖರಣೆಗೊಳ್ಳುತ್ತದೆ. ಹೆಚ್ಚು ಮಳೆಯಾಗಿ ಅಧಿಕ ನೀರು ಬಂದಂತೆ, ನೀರಿನ ಹರಿವು ವಿಸ್ತಾರಗೊಳ್ಳುವುದರೊಂದಿಗೆ ಕೆರೆಯು ತುಂಬುತ್ತಾ ಹೋಗುತ್ತದೆ, ಭೂ ಮಟ್ಟದಿಂದ ಕೆರೆ ಕಟ್ಟೆಯ ಗರಿಷ್ಠ ಮಟ್ಟ ಮುಟ್ಟಿದೆಯೆನ್ನುತ್ತಾರೆ. ಕನಿಷ್ಠ ಮಟ್ಟದ ನೀರು ನಿಲ್ಲುವ ಕೆರೆಯ ಭೂ ಭಾಗಕ್ಕೆ ಕೆರೆಯ ತಳ ಎಂದು ಹೆಸರು ಕೆರೆಯಲ್ಲಿ ಒಬ್ಬ ವ್ಯಕ್ತಿಯ (ಆಳೆತ್ತರ) ಎತ್ತರದಷ್ಟೇ ನೀರು ಇರಬೇಕು ಮತ್ತು ತುಂಬಬೇಕು ಅದಕ್ಕಿಂತ ಹೆಚ್ಚಿನ ನೀರು ಬಂದ ಪಕ್ಷದಲ್ಲಿ ಆ ನೀರು ಕೋಡಿಯ ಮೂಲಕ ಹರಿದು ಹೋಗಬೇಕು ಎಂದು ತಿಮ್ಮಲಾಪುರದ ಕೆರೆಯ ಸಮೀಪದಲ್ಲಿ ದೊರೆತಿರುವ ಶಾಸನವು ದಾಖಲಿಸಿರುವುದು ಪ್ರಶಂಸನಾರ್ಹ, ಇದರಿಂದ ಒಂದು ಕೆರೆಯಲ್ಲಿ ಗರಿಷ್ಠ ಮಟ್ಟದ ನೀರಿನ ಪ್ರಮಾಣ ಎಷ್ಟಿರಬೇಕು ಎಂಬುದರ ಬಗೆಗೆ ತಿಳಿದುಬರತ್ತದೆ.

ಮತ್ತೊಂದು ಅಂಶವು ಆ ಗರಿಷ್ಠ ಮಟ್ಟಕ್ಕಿಂತ ಅಧಿಕ ನೀರು ಬಂದಲ್ಲಿ ಕೆರೆ ಏರಿಗೆ ಅಪಾಯವಾಗಬಹುದು. ಈ ಪ್ರದೇಶದಲ್ಲಿ ಮೂರು ಕೆರೆಗಳು ಇದ್ದು ಅವುಗಳು ಒಂದಕ್ಕೊಂದು ಹೊಂದಿಕೊಂಡಿವೆ. ಹೆಚ್ಚುವರಿ ನೀರು ಒಂದು ಕೆರೆಗೆ ಹರಿದು ಬಂದರೆ ಆ ನೀರು ಎರಡನೆಯ ಕೆರೆಯಲ್ಲಿ ಸಂಗ್ರಹವಾಗುತ್ತದೆ.

ಆಯಾಕಟ್ಟು ಅಥವಾ ಅಚ್ಚುಕಟ್ಟು ಪ್ರದೇಶ

ಕೆರೆಯ ಅಥವಾ ನೀರು ಸಂಗ್ರಹವಾಗುವ ವಿರುದ್ಧ ದಿಕ್ಕಿನ ಪ್ರದೇಶಕ್ಕೆ ಆಯಕಟ್ಟು ಅಥವಾ ಅಚ್ಚುಕಟ್ಟು ಪ್ರದೇಶವೆಂದು ಹೆಸರು ಸಾಮಾನ್ಯವಾಗಿ ಈ ಪ್ರದೇಶದಲ್ಲಿಯೇ ವ್ಯವಸಾಯವನ್ನು ಮಾಡುತ್ತಾರೆ.

ಕೆರೆಯ ನೀರಾವರಿಗೆ ಒಳಪಟ್ಟ ಅಂದರೆ ಕೃಷಿ ಮಾಡಲ್ಪಟ್ಟ ಪ್ರದೇಶಕ್ಕೆ ಆಯಾಕಟ್ಟು ಅಥವಾ ಅಚ್ಚುಕಟ್ಟು ಪ್ರದೇಶವೆಂದು ಹೆಸರು. ಆಯಾಕಟ್ಟಿನ ಪ್ರದೇಶವನ್ನು ಸಮನಾಗಿಸುವ ಕಾರ್ಯದಿಂದ ಕೆರೆಯ ನೀರು ಆಯಾಕಟ್ಟಿಗೆ ಸಮರ್ಪಕವಾಗಿ ಒದಗುತ್ತದೆ ಎಂದು ಸಹ ತಿಳಿಸುತ್ತದೆ. ಇದಲ್ಲದೆ ಆಯಕಟ್ಟಿನ ಪ್ರದೇಶವನ್ನು ಅದರ ಗುಣದಂತೆ ಉತ್ತಮ, ಮಧ್ಯಮ ಮತ್ತು ಅಧಮ ಎಂದು ವಿಂಗಡಿಸಿ ಆ ಕೆರೆಯ ನೀರನ್ನು ಸಮರ್ಪಕವಾಗಿ ಹಂಚಿಕೊಳ್ಳಬೇಕೆಂದು ಕ್ರಿ.ಶ ೧೪೪೭ರ ವಿಜಯನಗರ ಕಾಲದ ಶಾಸನದ ತೇದಿಯು ಹೇಳುತ್ತದೆ.[೧೦] ಹೀಗೆ ಕೆರೆಯ ನೀರಿನ ಸಂಗ್ರಹದ ಮೇಲೆ ಅಚ್ಚುಕಟ್ಟು ಪ್ರದೇಶವು ಅವಲಂಭಿಸಿರುತ್ತದೆ ಎಂಬುದು ಈ ಮೇಲಿನ ಅಂಶಗಳಿಂದ ತಿಳಿದುಬರುತ್ತದೆ.

ಕೆರೆಗಳ ನಿರ್ವಹಣೆ

ನೀರಾವರಿ ಕಾಮಾಗಾರಿಗಳ ನಿರ್ಮಾಟಕ್ಕಿಂತ ಅವುಗಳ ನಿರ್ವಹಣೆ ಅಥವಾ ಪಾಲನೆ ಮತ್ತು ದುರಸ್ಥಿ ಮಹತ್ವದ ವಿಚಾರವಾಗಿದೆ. ಯಾವುದೇ ನೀರಾವರಿ ಕಾಮಗಾರಿಗಳು ದೀರ್ಘಕಾಲ ಸುಸ್ಥಿರವಾಗಿರುವುದಿಲ್ಲ ಕೆರೆಗಳೂ ಕೂಡ ಇದಕ್ಕೆ ಹೊರತಲ್ಲ, ಸೂಕ್ಷ್ಮವೂ, ಸಕಾಲಿಕವೂ ಆದ ನಿರ್ವಹಣೆ ಹಾಗೂ ದುರಸ್ಥಿಯಿಂದ ಕಾಮಗಾರಿ ಉಪಯುಕ್ತತೆಯ ಅವಧಿಯನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ.

ಕೆರೆಗಳ ನಿರ್ವಹಣಾ ಕಾರ್ಯವು ಸಾಮಾನ್ಯವಾಗಿ ಈ ಕೆಳಗಿನಂತಿರುತ್ತದೆ.

೧. ಕೆರೆ ಮತ್ತು ಕಾಲುವೆಗಳಲ್ಲಿರುವ ಹೊಳನ್ನು ಕಾಲಕಾಲಕ್ಕೆ ತೆಗೆಸುವುದು.

೨. ಕೆರೆಯ ಏರಿ ಅಥವಾ ದಂಡೆಯನ್ನು ಮಳೆ ಅಥವಾ ಇನ್ನಿತರ ಕಾರಣದಿಂದ ಹಾನಿಗೊಂಡಿದ್ದರೆ ಸರಿಪಡಿಸುವುದು.

೩. ತೂಬು ಮತ್ತು ಕೋಡಿ ಹಾನಿಗೊಂಡರೆ ಕಾಲಕಾಲಕ್ಕೆ ದುರಸ್ತಿ ಮಾಡುವುದು.

೪. ಕೆರೆಯಂಗಳಕ್ಕೆ ಒತ್ತುವರಿಯಾಗದಂತೆ ರಕ್ಷಿಸುವುದು.

೫. ಕೆರೆಯ ಗಾತ್ರ ಅವಶ್ಯವಿದ್ದರೆ ವಿಸ್ತರಿಸುವುದು ಮತ್ತು ಮೆಟ್ಟಿಲುಗಳನ್ನು ನಿರ್ಮಿಸುವುದು.

೬. ನೀರಿನ ಬಳಕೆ ಕುರಿತಾದ ವಿವಾದ ಬಗೆಹರಿಸುವುದು.

ಕುಣಿಗಲ್ ಪಟ್ಟಣ ಪ್ರಮುಖ ಕೆರೆ ಮತ್ತು ಬಾವಿಗಳು

ಕುಣಿಗಲ್ ಪಟ್ಟಣವನ್ನು ಹೊಂದಿಕೊಂಡಂತೆ ಕೆರೆ ಮತ್ತು ಬಾವಿಗಳನ್ನು ಕಾಣಬಹುದಾಗಿದ್ದು, ಇವು ನಿತ್ಯ ಬಳಕೆಯ ಅನುಕೂಲಕ್ಕಾಗಿ ಕೃಷಿ ಚಟುವಟಿಕೆ, ಪಶುಪಕ್ಷಿಗಳ ಬಳಕೆಗಾಗಿ ನಿರ್ಮಾಣಗೊಂಡಿರುವುದೆಂದು ತಿಳಿದುಬರುತ್ತದೆ. ಅದೇ ರೀತಿ ಕುಣಿಗಲ್ ಪಟ್ಟಣದ ವ್ಯಾಪ್ತಿಯಲ್ಲಿ ಬರುವ ಕೆರೆ ಮತ್ತು ಬಾವಿಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಕುಣಿಗಲ್ ದೊಡ್ಡಕೆರೆ

ಈ ಕೆರೆಯು ತಾಲ್ಲೂಕಿನಲ್ಲಿಯೇ ವಿಸ್ತೀರ್ಣದಲ್ಲಿ ದೊಡ್ಡದೆಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು ಕುಣಿಗಲ್ ಪಟ್ಟಣಕ್ಕೆ ಹೊಂದಿಕೊಂಡಂತೆ ಉತ್ತರ ದಿಕ್ಕಿನಲ್ಲಿದೆ. ಈ ಕೆರೆಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕೆರೆಯ

ತೂಬಿನ ಕಲ್ಲಿನಲ್ಲಿನ ಶಾಸನದ ಪ್ರಕಾರ ಕುಣಿಗಲ್ ಕೆರೆಯ ತೂಬನ್ನು ಕ್ರಿ.ಶ ೧೩೯೪ರಲ್ಲಿ ಮಂತ್ರಿ ವರ್ಯನಾದ ಇರುಗಪ್ಪ ದಣ್ಣಾಯಕನು ಕಟ್ಟಿಸಿದನೆಂದು ಉಲ್ಲೇಖಿಸುತ್ತದೆ.[೧೧] ಬಹುಶ ಈ ಕೆರೆಯನ್ನು ಇರುಗಪ್ಪ ದಣ್ಣಾಯಕನೆ ಕಟ್ಟಿಸಿರಬಹುದು ಅಂದರೆ ಕೆರೆಯನ್ನು ಕಟ್ಟಿಸುವ ಹಂತದಲ್ಲಿಯೇ ತೂಬನ್ನ ನಿರ್ಮಿಸುತ್ತಾರೆ. ಅಲ್ಲದೆ ಈ ಕೆರೆಯ ತೂಬಿನ ಕಲ್ಲಿನ ಮೇಲೆ ಗಜಲಕ್ಷ್ಮಿಯ ಉಬ್ಬುಶಿಲ್ಪವಿರುವುದರಿಂದ ವಿಜಯನಗರ ಕಾಲದ್ದು ಎಂದು ಹೇಳಬಹುದು.

ಕುಣಿಗಲ್ ಕೆರೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಒಂದು ಐತಿಹ್ಯವಿದೆ. ಉತ್ತರ ಭಾರತದ ಅರಸನಾದ 'ನೃಗ' ಎಂಬುವನು ಒಮ್ಮೆ ದಕ್ಷಿಣ ಭಾರತದ ಕಡೆಗೆ ಪ್ರವಾಸ ಕೈಗೊಳ್ಳುತ್ತಾನೆ. ತನ್ನ ಪ್ರವಾಸವನ್ನು ಮುಂದುವರೆಸುತ್ತಾ ಕುಣಿಗಲ್ ಕಡೆ ಬಂದು ತಂಗಿದ್ದು ಅಲ್ಲಯೇ ಇದ್ದ ಬಾವಿಯಲ್ಲಿ ಸ್ನಾನಮಾಡುತ್ತಾನೆ ಇದರಿಂದ ಅವನಿಗೆ ಅಂಟುಕೊಂಡಿದ್ದ ತೊನ್ನುರೋಗ ಅಥವಾ ಕುಷ್ಠರೋಗ ಗುಣವಾಗುತ್ತದೆ. ಇದರ ಬಗ್ಗೆ ಸ್ಥಳೀಯರಲ್ಲಿ ವಿಚಾರಿಸಿದಾಗ ದಕ್ಷಿಣ ಕಾಶೀ ಎಂದೇ ಪ್ರಸಿದ್ಧವಾಗಿರುವ ಶಿವಗಂಗೆಯಲ್ಲಿ ಹುಟ್ಟುವ ನದಿಗಳಾದ ನಳೀನಿ, ನಾಗಿಣೀ ಮತ್ತು ಕಮಲ ನದಿಗಳ ಝರಿಗಳು ಹರಿದು ಬಂದು ಇಲ್ಲಿ ಸಂದಿಸುತ್ತವೆಂದು ಹೇಳುತ್ತಾರೆ. ಇದರಿಂದ ಸಂತೋಷಗೊಂಡ ನೃಗ ಚಕ್ರವರ್ತಿ ಇಂತಹ ಪುಣ್ಯಕ್ಷೇತ್ರದಲ್ಲಿ ನನ್ನ ಕಾಯಿಲೆ ಗುಣವಾದ ಜ್ಞಾಪಕರ್ತವಾಗಿ ದೊಡ್ಡ ಕೆರೆಯನ್ನು ಕಟ್ಟಿಸಿದನೆಂದು ಐತಿಹ್ಯವಿದೆ.

ಕುಣಿಗಲ್ ದೊಡ್ಡ ಕೆರೆಯು ತುಂಬಿದ್ದಾಗ ೧೪ ಮೈಲಿಗಳಷ್ಟು ಸುತ್ತಳತೆಯನ್ನು ಹೊಂದಿದೆ. ಕೆರೆಯ ಏರಿಯು ಪೂರ್ವಕ್ಕೆ ಅಭಿಮುಖವಾಗಿ ಕಟ್ಟಲಾಗಿದ್ದು ಮಣ್ಣು ಮತ್ತು ಕಲ್ಲು (ಕರೆಕಲ್ಲು)ಗಳನ್ನು ಬಳಸಿಕೊಂಡು ಕಟ್ಟಿದ್ದಾರೆ. ಏರಿಯು ಸುಮಾರು ೨ಕಿ.ಮೀ ಉದ್ದ ಹಾಗೂ ೧೧ ಮೀಟರ್ ಎತ್ತರವನ್ನು ಹೊಂದಿದ್ದು ಕೆರೆಯ ಏರಿಯನ್ನು ಅಂಕುಡೊಂಕಾಗಿ ಕಟ್ಟಿದು ನೀರಿನ ಒತ್ತಡವನ್ನು ಕಾಪಾಡಲು ಏರಿಯ ಒಳಗಡೆಯ ದಡಕ್ಕೆ ಕಟುವಾಡವನ್ನು ನಿರ್ಮಿಸಿರುವುದು ಕಂಡುಬಂದಿದ್ದು, ಏರಿಯನ್ನು ಉತ್ತರ ದಕ್ಷಿಣಕ್ಕೆ ಕಟ್ಟಲಾಗಿದೆ.

ಈ ಕೆರೆಯು ಸುಮಾರು ೧೩೨೧ ಹೆಕ್ಟೇರ್ ಅಂದರೆ ೩೨೬೨ ಎಕರೆ ಭೂಮಿಗೆ ನೀರುಣಿಸುವ ಸಾಮರ್ಥ್ಯವನ್ನು ಹೊಂದಿದ್ದು, ಶಿಂಷಾನದಿ, ನಾಗಿನಿ ನದಿಯ ನೀರು ಹಾಗೂ ಮಳೆಗಾಲದಲ್ಲಿ ಪೂರ್ವದ ದಿಕ್ಕಿನಿಂದ ಹರಿದು ಬರುವ ಜಲಾನಯನ ಪ್ರದೇಶದಿಂದ ಈ ಕೆರೆಗೆ ನೀರು ಹರಿದು ಬರುತ್ತದೆ. ಸುಮಾರು ೫೩೨.೨೦ ಎಂ.ಸಿ.ಎಫ್.ಟಿ ಪ್ರಮಾಣದಷ್ಟು ನೀರಿನ ಒಟ್ಟು ಸಂಗ್ರಹಣ ಸಾಮಥ್ಯವನ್ನು ಹೊಂದಿದೆ. ಎರಡು ತೂಬುಗಳನ್ನು ಹೊಂದಿದ್ದು, ತೂಬಿನ ರಚನೆಯು ಕಲ್ಲು ಕಂಬಗಳಿಂದ ಕೂಡಿದ್ದು ಎರಡು ಕಂಬಗಳನ್ನು ನಿಲ್ಲಿಸಿ ಅದರ ಮೇಲೆ ಅಗಲವಾದ ಕಂಬವನ್ನು ಮಲಗಿಸಿದ್ದು ಮಧ್ಯದ ಭಾಗಕ್ಕೆ ರಂಧ್ರಮಾಡಿ ಕಬ್ಬಿಣದ ಸಲಾಕೆ ಜೋಡಿಸಲಾಗಿದೆ. ತೂಬಿನ ಕಲ್ಲು ಗಜಲಕ್ಷ್ಮಿಯ ಉಬ್ಬುಶಿಲ್ಪದಿಂದ ಕೂಡಿದೆ. (ಶಾಸನ ಕೆತ್ತಿದ್ದಾರೆ) ಸುಮಾರು ೧೧೩.೭೦ ಮೀಟರ್ ಉದ್ದದ ಒಂದು ಕೋಡಿಯನ್ನು ಹೊಂದಿದ್ದು ಕಲ್ಲು ಮತ್ತು ಸಿಮೆಂಟ್‌ನಿಂದ ಕಟ್ಟಲಾಗಿದೆ. ಕೋಡಿಯ ಮೇಲೆ ಅಗಲವಾದ ಕಲ್ಲು ಚಪ್ಪಡಿಯನ್ನು ಹೊದಿಸಲಾಗಿದೆ ಹಾಗೂ ಏರಿಯು ಕುಸಿದು ಬೀಳದಂತೆ ಕಲ್ಲು ಚಪ್ಪಡಿಯನ್ನು ಏರಿಗೆ ಹೊರಗಿಸಿ ನಿಲ್ಲಿಸಲಾಗಿದೆ. ಕುಣಿಗಲ್ ದೊಡ್ಡ ಕೆರೆಯು ಎಡ ಮತ್ತು ಬಲ ಕಾಲುವೆ ಎಂಬಂತೆ ೨ ಕಾಲುವೆಗಳನ್ನು ಒಳಗೊಂಡಿದೆ.

೧. ರಾಮಬಾಣದ ಹಂತ ಕಾಲುವೆ RBC (ಬಲ ಭಾಗದ ಕಾಲುವ)ಯು ಸುಮಾರು ೧೧.೮೦ಕಿ.ಮೀಟರ್ ಉದ್ದವಿದ್ದು ೩೮೮೧ಹೆಕ್ಟೇರ್ ವಿಸ್ತೀರ್ಣಕ್ಕೆ ನೀರೊದಗಿಸುತ್ತದೆ.

೨. ಲಕ್ಷ್ಮಿದೇವಿ ಹಂತ ಕಾಲುವೆ LBC (ಎಡ ಭಾಗದ ಕಾಲುವೆ)ಯು ಸುಮಾರು ೫.೨೦ಕಿ.ಮೀ ಉದ್ದವಿದ್ದು ೧೮೮೦ ಹೆಕ್ಟೇರ್ ವಿಸ್ತೀರ್ಣಕ್ಕೆ ನೀರೊದಗಿಸುತ್ತದೆ.

ಈ ಮೇಲಿನ ೨ ಕಾಲುವೆಗಳನ್ನು ಸಿಮೆಂಟ್ ಮತ್ತು ಕಲ್ಲಿನಿಂದ ಕಟ್ಟಲಾಗಿದ್ದು ಇನ್ನು ಸುಸ್ಥಿತಿಯಲ್ಲಿವೆ. ಮುಖ್ಯ ಕಾಲುವೆಯ ಜೊತೆಗೆ ೩ ಉಪ ಕಾಲುವೆಗಳನ್ನು ಕಾಣಬಹುದು.

೧. ಚೊಟ್ನಹಳ್ಳಿ ಅಣೆ ಕಾಲುವೆ ೬.ಕಿ.ಮೀ ಉದ್ದವಿದ್ದು ೧೬೫ ಹೇಕ್ಟೇರ್ ಕೃಷಿ ಭೂಮಿಗೆ ನೀರುಣಿಸುತ್ತದೆ.

೨. ಮಣ್ಣು ಅಣೆ ಕಾಲುವೆ ೧.೬೦ ಕಿ.ಮೀ ಉದ್ದವಿದ್ದು ೪೦ ಹೆಕ್ಟೇರ್ ಕೃಷಿ ಭೂಮಿಗೆ ನೀರುಣಿಸುತ್ತದೆ.

೩. ನಡೆಮಾವಿನಪುರ ಅಣೆಕಾಲುವೆ ೧೦ ಕಿ.ಮೀ ಉದ್ದವಿದ್ದು ೫೭೫ ಹೆಕ್ಟೇರ್ ಕೃಷಿ ಭೂಮಿಗೆ ನೀರುಣಿಸುತ್ತದೆ.

ಕುಣಿಗಲ್ ದೊಡ್ಡ ಕೆರೆಯು ಸುಮಾರು ೧೧೯೧ ಹೇಕ್ಟೇರ್‌ನಷ್ಟು ಭತ್ತದ ಬೆಳೆ ಬೆಳೆಯಲು ನೀರಾವರಿ ಒದಗಿಸುತ್ತದೆ. ಹಾಗೂ ೧೩೦ ಹೆಕ್ಟೇರ್ ನಷ್ಟು ಬಾಗಾಯ್ತು (ತೋಟಗಾರಿಕೆ ಬೆಳೆ) ವಿಸ್ತೀರ್ಣಕ್ಕೆ ನೀರಾವರಿ ಒದಗಿಸುತ್ತದೆ (ಬಾಳೆ, ಅಡಿಕೆ, ತೆಂಗು, ವಿಳೆದೆಲೆ).[೨] ಕೆರೆಯ ಏರಿಯು ಒಂದು ಒಂಡಿ ಜಾಡಿನಷ್ಟು ಅಗಲವಾಗಿದ್ದು ಒಡಾಡಲು ಅನುಕೂಲವಾಗಿದೆ, ಕೆರೆಯ ಏರಿಯ ಹಿಂಭಾಗ ರಾಜ್ಯ ಹೆದ್ದಾರಿಯು ಹಾದುಹೋಗಿದ್ದು ಮೈಸೂರು-ಕುಣಿಗಲ್-ತುಮಕೂರು ಸಂಪರ್ಕ ಕಲ್ಪಿಸುತ್ತದೆ.

ಕೆರೆಯ ಏರಿಯ ಮೇಲೆ ಆಂಜನೇಯ, ಸೋಮೇಶ್ವರ, ಪದ್ಮೇಶ್ವರ, ಪಂಚಲಿಂಗೇಶ್ವರ, ಕೋಟೆಯ ಅವಶೇಷ, ವೀರಗಲ್ಲುಗಳು, ನಾಗರಕಲ್ಲುಗಳು ಮತ್ತು ಕಲ್ಯಾಣ ಮಂಟಪವನ್ನು ಕಾಣಬಹುದಾಗಿದೆ. ಶಿವರಾತ್ರಿಯಂದು ವಿಶೇಷ ಪೂಜೆ ಹಾಗೂ ಅನ್ನಸಂತರ್ಪಣೆ ಮಾಡಲಾಗುತ್ತದೆ. ಈ ಎಲ್ಲಾ ದೇವಾಲಯಗಳು ದಾರ್ಮಿಕ ದತ್ತಿ ಇಲಾಖೆಗೆ ಸೇರಿದ್ದು ಪ್ರತಿನಿತ್ಯ ಪೂಜೆ ನಡೆಯುತ್ತದೆ, ಕೆರೆ ತುಂಬಿದಾಗ ತೆಪ್ಪೋತ್ಸವ, ಹೆಣ್ಣು ಮಕ್ಕಳು ಗಂಗಮ್ಮನ ಪೂಜೆ ಮಾಡುತ್ತಾರೆ, ಗಂಗೆ ಪೂಜೆಗಾಗಿ ದೂರದ ಸ್ಥಳದಿಂದ (ಉತ್ಸವ ಮೂರ್ತಿ) ದೇವರನ್ನು ತಂದು ಇಲ್ಲಿ ಗಂಗಾಸ್ನಾನ ಮಾಡಿಸುತ್ತಾರೆ. ಗಣೇಶನ ವಿಸರ್ಜನೆ ಮಾಡುತ್ತಾರೆ.

ಇತ್ತೀಚೀನ ದಿನಗಳಲ್ಲಿ ಈ ಕೆರೆಯ ನಿರ್ವಹಣೆಯು ಹೇಮಾವತಿ ಅಚ್ಚುಕಟ್ಟು ವ್ಯಾಪ್ತಿಗೆ ಸೇರಿದ್ದು ಸಂರಕ್ಷಣೆ ಮಾಡಲಾಗುತ್ತಿದೆ. ಕುಣಿಗಲ್ ಕೆರೆಗೆ ಗೊರೂರಿನ ಹೇಮಾವತಿ ನಾಲೆಯಿಂದ ನೀರನ್ನು ಹರಿಸಿ ತುಂಬಿಸಲಾಗುತ್ತದೆ. ಈ ಕೆರೆಯಿಂದ ಕುಣಿಗಲ್ ಪಟ್ಟಣಕ್ಕೆ ದಿನಬಳಕೆಗಾಗಿ ಮತ್ತು ಕುಡಿಯಲು ನೀರನ್ನು ಪಂಪ್ ಸೆಟ್‌ಗಳ ಮೂಲಕ ಸರಬರಾಜು ಮಾಡಲಾಗುತ್ತದೆ. ಮಳೆಗಾಲದಲ್ಲಿ ಬೆಳೆಗಳಿಗೆ ನೀರನ್ನು ಹರಿಸಲಾಗುತ್ತದೆ ಬೇಸಿಗೆಯಲ್ಲಿ ಮಾತ್ರ ಕುಣಿಗಲ್ ಪಟ್ಟಣಕ್ಕೆ ಮಾತ್ರ ಬಳಕೆ ಮಾಡಿಕೊಳ್ಳಲಾಗುತ್ತಿದೆ.

ಜನಪದರು ಈ ಕೆರೆಯ ಸೊಬಗನ್ನು ತಮ್ಮ ಹಾಡು ಬಾಷೆಯಲ್ಲಿ ಹೊಗಳಿದ್ದಾರೆ.

"ಮೂಡಲ್ ಕುಣಿಗಲ್ ಕೆರೆ ನೋಡೋರ್‌ಗೆ ಒಂದ್ ಐಭೋಗ

ಮೂಡಿ ಬರುತಾನೆ ಚಂದಿರಾಮ ತಾನಂದನೂ

ಮೂಡಿ ಬರುತಾನೆ ಚಂದಿರಾಮ" ಎಂದು ಹೊಗಳಿ ಜನಪ್ರಿಯಗೊಳಿಸಿದ್ದಾರೆ. ಒಟ್ಟಾರೆ ಕುಣಿಗಲ್ ದೊಡ್ಡಕರೆಯು ಸಾಂಸ್ಕೃತಿಕ ಕೇಂದ್ರವಾಗಿ ಹೊರಹೊಮ್ಮಿದೆ ಎಂದು ಹೇಳಬಹುದು.

ಕುಣಿಗಲ್ ಚಿಕ್ಕಕೆರೆ

ಹೆಸರು ಹೇಳುವಂತೆ ಕುಣಿಗಲ್ ಚಿಕ್ಕಕೆರೆಯು ಪಟ್ಟಣದಿಂದ ದಕ್ಷಿಣ ಭಾಗದಲ್ಲಿ ಇರುವಂತಹ ಕೆರೆಯಾಗಿದ್ದು ವಿಸ್ತೀರ್ಣದಲ್ಲಿ ಚಿಕ್ಕದಾಗಿದ್ದು ಸುಮಾರು ೯೭.೭೬ ಹೆಕ್ಟೇರ್‌ನಷ್ಟಿದೆ. ಏರಿಯು ಸುಮಾರು ೧೫೦೦ ಮೀಟರ್ ಅಂದರೆ ೧.೫ ಕಿ.ಮೀ ಉದ್ದವಾಗಿದ್ದು, ಏರಿಯ ಅಗಲ ೮ ಮೀಟರ್‌ನಷ್ಟಿದೆ, ಎತ್ತರ ೭.೨ ಮೀಟರ್‌ನಷ್ಟಿದ್ದು ಇಳಿಜಾರಾಗಿದೆ. ಏರಿಯ ನಿರ್ಮಾಣವನ್ನು ಮಣ್ಣು ಮತ್ತು ಕಲ್ಲುಗಳನ್ನು ಬಳಸಿಕೊಂಡು ಕಟ್ಟಲಾಗಿದೆ. ರಾಜ್ಯ ಹೆದ್ದಾರಿ ತುಮಕೂರು– ಮೈಸೂರು ಮಾರ್ಗವು ಏರಿಯ ಮೇಲೆ ಹಾದುಹೋಗಿದೆ.

ಈ ಕೆರೆಯು ಒಂದು ಕೋಡಿಯನ್ನು ಹೊಂದಿದ್ದು ಸುಮಾರು ೧೦೦ ಮೀಟರ್ ಉದ್ದವಾಗಿದ್ದು ಕಲ್ಲು ಮತ್ತು ಸಿಮೆಂಟ್ ಬಳಸಿ ಕಟ್ಟಲಾಗಿದ್ದು ಸುಸ್ಥಿತಿಯಲ್ಲಿದೆ. ಹಾಗೂ ಎರಡು ತೂಬುಗಳನ್ನು ಒಳಗೊಂಡಿದ್ದು ಜೀರ್ಣೋದ್ಧಾರಗೊಂಡಿದ್ದು ಸಿಮೆಂಟ್ ಕಟ್ಟಡದಿಂದ ರೂಪುಗೊಂಡಿದೆ. ಮಧ್ಯಭಾಗದಲ್ಲಿ ಕಬ್ಬಿಣದ ಸಲಾಕೆ ಅಳವಡಿಸಿ ನೀರನ್ನು ನಿಯಂತ್ರಿಸಲಾಗುತ್ತದೆ. ಸುಮಾರು ೨೦೬ ಹೆಕ್ಟೇರ್ ಅಚ್ಚುಕಟ್ಟು ಭೂಮಿಗೆ ನೀರುಣಿಸುತ್ತದೆ. ಎಡ ಮತ್ತು ಬಲದಂಡೆ ಎಂಬಂತೆ ಎರಡು ಕಾಲುವೆಗಳನ್ನು ಒಳಗೊಂಡಿದ್ದು ಎಡದಂಡೆ ಕಾಲುವೆಯು ೩.೨೫ ಕಿ.ಮೀಟರ್ ಉದ್ದವನ್ನು ಬಲದಂಡೆಯ ಕಾಲುವೆಯು–೨ ಕಿ.ಮೀಟರ್ ಉದ್ದವಾಗಿದೆ. ಈ ಕೆರೆಯು ೧೫೬ ಹೆಕ್ಟೇರ್ ಗದ್ದೆ ಭೂಮಿಗೆ ನೀರುಣಿಸುತ್ತದೆ ಹಾಗೂ ಸುಮಾರು ೫೦ಹೆಕ್ಟೇರ್ ತೋಟಗಾರಿಕಾ ಬೆಳೆಗೆ ನೀರುಣಿಸುವ ಸಾಮರ್ಥ್ಯ ಹೊಂದಿದೆ.[೧೩]

ಚಿಕ್ಕಕೆರೆಯು ಮಳೆಯಾಶ್ರಿತ ಕೆರೆಯಾಗಿದ್ದು ಸರಣಿ ಕೆರೆಗಳ ಸಾಲಿಗೆ ಸೇರುತ್ತದೆ ಸುಮಾರು ವರ್ಷಗಳಿಂದ ಮಳೆಯ ಅಬಾವದಿಮದ ಕೆರೆಯು ಬತ್ತಿಹೋಗಿದ್ದು ನಿರ್ವಹಣೆ ಇಲ್ಲದೆ ಪಟ್ಟಣದಿಂದ ಹೊರಬರುವ ಕೊಳಚೆ ನೀರು, ತ್ಯಾಜ್ಯಪದಾರ್ಥಗಳಿಂದ ಕಲುಷಿತಗೊಂಡಿದ್ದು ಅವಸಾನದತ್ತ ಸಾಗಿದೆ.

ಬೇಗೂರು ಕೆರೆ

ಬೇಗೂರು ಕೆರೆಯು ಕುಣಿಗಲ್ ಪಟ್ಟಣದಿಂದ ಆಗ್ನೇಯ ದಿಕ್ಕಿನಲ್ಲಿದ್ದು, ಸರಣಿ ಕೆರೆಗಳ ಗುಂಪಿಗೆ ಸೇರುತ್ತದೆ. ಈ ಕೆರೆಯ ನಿರ್ಮಾಣದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಜನಪದರ ಹೇಳಿಕೆ ಪ್ರಕಾರ ನಾಡಪ್ರಭು ಕೆಂಪೆಗೌಡನು ಕಟ್ಟಿಸಿದನೆಂದು ಹೇಳುತ್ತಾರೆ.

ಕೆರೆಯನ್ನು ಪೂರ್ವಕ್ಕೆ ಅಭಿಮುಖವಾಗಿ ಕಟ್ಟಲಾಗಿದ್ದು ಮಣ್ಣು ಮತ್ತು ಕಲ್ಲುಗಳನ್ನು ಬಳಸಿಕೊಳ್ಳಲಾಗಿದೆ. ಏರಿಯ ಉದ್ದ ೧.೮ ಕಿ.ಮೀ, ಎತ್ತರ ೭ ಮೀಟರ್ ಇದೆ. ಏರಿಯನ್ನು ನೀರಿನ ಒತ್ತಡದಿಂದ ರಕ್ಷಿಸಲು ಕಟುವಾಡ ಮಾಡಲಾಗಿದೆ. ಬೇಗೂರು ಕೆರೆಯು ಸುಮಾರು ೨೮೩ ಹೆಕ್ಟೇರ್ (೫೮೮ ಎಕರೆ) ಕೃಷಿ ಭೂಮಿಗೆ ನೀರುಣಿಸುತ್ತದೆ. ಕೆರೆಯ (ಅಂಗಳ) ವಿಸ್ತೀರ್ಣ ೪೪೪ ಎಕರೆ ಇದೆ.[೧೪] ಎರಡು ಕೋಡಿಗಳನ್ನು ಹೊಂದಿದ್ದು ಬೇಗೂರು ಕಡೆಯ ಕೋಡಿಯು ೭೫ಮೀಟರ್ ಉದ್ದವನ್ನು ಮತ್ತು ಮಲ್ಲಾಘಟ್ಟ ಕಡೆಯ ಕೋಡಿಯು ೧೦೫ ಮೀಟರ್ ಉದ್ದವನ್ನು ಹೊಂದಿದೆ. ಅದೇ ರೀತಿ ಬೇಗೂರು ಕೆರೆಗೆ ಎರಡು ಕಾಲುವೆಗಳಿದ್ದು ಬಲದಂಡೆ ಕಾಲುವೆಯು ೨ ½ ಕಿ.ಮೀ. ಉದ್ದವನ್ನು

ಹೊಂದಿದೆ. ಈ ಕೆರೆಯು ೨ ತೂಬುಗಳನ್ನು ಒಳಗೊಂಡಿದ್ದು ಕಲ್ಲುಕಂಬಗಳಿಂದ ನಿರ್ಮಿಸಲಾಗಿದ್ದು, ತೂಬಿನ ಕಲ್ಲಿನ ಮೇಲೆ ಗಜಲಕ್ಷ್ಮಿಯ ಉಬ್ಬುಶಿಲ್ಪ ಕಾಣಬಹುದು, ಏರಿಯ ಮೇಲೆ ೨ ವೀರಗಲ್ಲುಗಳನ್ನು ಹಾಗೂ ಬೇಗೂರು ಕೋಡಿ ಬಳಿಯಲ್ಲಿ ಆಂಜನೇಯ ದೇವಾಲಯ ಕಾಣಬಹುದು.

ಸುಮಾರು ವರ್ಷಗಳಿಂದ ಮಳೆ ಇಲ್ಲದ ಕಾರಣ ಕೆರೆಯು ಬತ್ತಿ ಹೋಗಿದೆ. ಭತ್ತದ ಬೆಳೆಯನ್ನು ಬೆಳೆಯುವ ಬದಲಾಗಿ ರಾಗಿ ಬೆಳೆ ಬೆಳೆಯಲಾಗುತ್ತದೆ. ಈ ಕೆರೆಯು ಹೇಮಾವತಿ ಅಚ್ಚುಕಟ್ಟು ವ್ಯಾಪ್ತಿಗೆ ಸೇರಿದ್ದು ಹೇಮಾವತಿ ನಾಲೆಯ ಕಾಮಗಾರಿ ಪ್ರಗತಿಯಲ್ಲಿದೆ. ಕೆರೆ ತುಂಬಿದಾಗ ತೆಪ್ಪೋತ್ಸವ ಹಾಗೂ ಗಂಗಮ್ಮನ ಪೂಜೆ ಮಾಡಲಾಗುತ್ತದೆ. ಅಲ್ಲದೆ ಬಲದಂಡೆ ಕಾಲುವೆಯ ನೀರು ಕುಣಿಗಲ್ ಕುದುರೆ ಫಾರಂಗೆ ಬಳಸಿಕೊಳ್ಳಲಾಗುತ್ತಿದೆ. ಬೆಳೆಗಳಿಗೆ ಹಾಯಿಸಿ ಉಳಿದ ನೀರು ಕುಣಿಗಲ್ ಚಿಕ್ಕಕೆರೆಯನ್ನು ಸೇರುತ್ತದೆ.

ಕುಣಿಗಲ್ ಪಟ್ಟಣದ ಕೆರೆಗಳ ತಂತ್ರಜ್ಞಾನ

ಕುಣಿಗಲ್ ಪಟ್ಟಣದ ಕೆರೆಗಳ ನಿರ್ಮಾಣದಲ್ಲಿ ತಂತ್ರಜ್ಞಾನ ಈ ಕೆಳಗಿನಂತೆ ಕಂಡುಬಂದಿದೆ.

೧. ಏರಿಯನ್ನು ಅಂಕು ಡೊಂಕಾಗಿ ನಿರ್ಮಿಸಿದ್ದು, ಇಳಿಜಾರಿಗೆ ಅಡ್ಡಲಾಗಿ ಏರಿ ಕಟ್ಟಲಾಗಿದೆ. ಇದರಿಂದ ನೀರಿನ ಒತ್ತಡವನ್ನು ವಿರುದ್ಧ ದಿಕ್ಕಿನಿಂದ ತಡೆದು ಏರಿಗೆ ಸಾಕಷ್ಟು ಬಲ ಕೊಡಲು ಸಹಾಯವಾಗಿದೆ.

೨. ಸರಣಿ ಕೆರೆಗಳ ನಿರ್ಮಾಣ ಮಾಡಲಾಗಿದೆ. ಇದರಿಂದ ಮಳೆಗಾಲದಲ್ಲಿ ನೀರಿನ ಪ್ರಮಾಣ ಹೆಚ್ಚಾದಾಗ ತುಂಬಿದ ನೀರು ಕೋಡಿಗಳ ಮೂಲಕ ಹೊರಹಾಕಿ ಕೆರೆಗಳನ್ನು ಸಂರಕ್ಷಣೆ ಮಾಡಲು ಅನುಕೂಲವಾಗಿದೆ.

೩. ಕೆರೆಗಳ ವಿಸ್ತೀರ್ಣಕ್ಕೆ ತಕ್ಕಂತೆ ತೂಬು ಮತ್ತು ಕಾಲುವೆಗಳ ನಿರ್ಮಾಣ ಹಾಗೂ ಏರಿಯ ಎತ್ತರವನ್ನು ಕಾಯ್ದುಕೊಂಡಿದ್ದಾರೆ.

೪. ಕಲ್ಲಿನ ಗಣಿಗಳು ಇರುವ ಕಡೆ ಹಾಗೂ ಜಲಾನಯನ ಪ್ರದೇಶವನ್ನು ಗಮನಿಸಿಕೊಂಡು ಕೆರೆಗಳ ನಿರ್ಮಾಣ ಮಾಡಿದ್ದಾರೆ.

೫. ನೀರನ್ನು ನಿಯಂತ್ರಿಸಲು ತೂಬುಗಳನ್ನು ಕಲ್ಲು ಕಂಬಗಳಿಂದ ನಿರ್ಮಿಸಿ, ಕಬ್ಬಿಣದ ಸಲಾಕೆ ಅಳವಡಿಸಿ ನಿಯಂತ್ರಿಸಲಾಗಿದೆ.

೬. ಸಂಚಾರದ ಅನುಕೂಲಕ್ಕಾಗಿ ಏರಿಯನ್ನು ಅಗಲವಾಗಿ ನಿರ್ಮಿಸಲಾಗಿದೆ.

ಈ ಮೇಲ್ಕಂಡ ತಂತ್ರಾಂಶಗಳನ್ನು ಬಳಸಿಕೊಂಡು ಕೆರೆನಿರ್ಮಾಣ ಮಾಡಿರುವುದರಿಂದ ಇಂದಿನವರೆಗೂ ಸುಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತವೆ.

ಕುಣಿಗಲ್ ಪಟ್ಟಣದ ಪ್ರಮುಖ ಬಾವಿಗಳು

ಬಾವಿಗಳು ವಿಸ್ತೀರ್ಣದಲ್ಲಿ ಚಿಕ್ಕದಾಗಿದ್ದು ಜನರು ಅನುಕೂಲಕ್ಕಾಗಿ ನಿರ್ಮಾಣಗೊಂಡಿರುವುದನ್ನು ಕಾಣಬಹುದಾಗಿದ್ದು, ಬಾವಿಗಳನ್ನು ಪುಷ್ಕರಣಿ, ಕಲ್ಯಾಣಿ, ಕೊಳ, ತಲಾಕ, ನೀರಿನ ಹೊಂಡ ಎಂದು ಕರೆಯುತ್ತಾರೆ. ಬಾವಿಗಳಲ್ಲಿ ಎರಡು ವಿಧವಾಗಿವೆ. ಜನರು ವಾಸವಾಗಿರುವಲ್ಲಿ ಅಗೆಯಲಾದ ಬಾವಿಗಳು ಕುಡಿಯುವ ಮತ್ತು ಬಟ್ಟೆಗಳನ್ನು ಒಗೆಯಲು ಉಪಯೋಗವಾದರೆ, ಹೊಲಗಳಲ್ಲಿ ತೆಗೆದ ಬಾವಿಗಳು

ನೀರಾವರಿ ಕಾರ್ಯಕ್ಕೆ ಉಪಯೋಗವಾಗುತ್ತವೆ. ಮೊದಲನೆಯ ವಿಧವಾದ ಬಾವಿಗಳ ರಚನೆ ಸಂಕೀರ್ಣತೆಯಿಂದ ಕೂಡಿದ್ದು, ಪೂಜೆ-ಪುನಸ್ಕಾರಗಳಿಗೆ ಮತ್ತು ಸಣ್ಣಪುಟ್ಟ ದೇವತೆಗಳ, ಮಂಟಪಗಳಿಂದ ಒಡಗೂಡಿರುತ್ತದೆ. ಆದರೆ ಹೊಲಗಳಲ್ಲಿಯೇ ಬಾವಿಗಳು ಬಾವಿಗೆ ತೆರೆದಿದ್ದು ನೀರಾವರಿ ಉಪಯೋಗಕ್ಕೆ ದಾರಿಹೋಕರ ಬಾಯಾರಿಕೆಗೆ ನಿವಾರಿಸಲೆಂದೇ ಕಟ್ಟಲಾಗಿದೆ.

ಕುಣಿಗಲ್ ದೊಡ್ಡ ಕೆರೆಯ ಮಧ್ಯಭಾಗದಲ್ಲಿ ಗಂಗೆ, ಗೌರಿ ಬಾವಿ ಇತ್ತೆಂದು ಜನಪದದ ಮೂಲಕ ತಿಳಿದುಬರುತ್ತದೆ. ಅಲ್ಲದೆ ಕುಣಿಗಲ್ ದೊಡ್ಡ ಕೆರೆಯ ಸೋಮೇಶ್ವರ ಗುಡಿಯ ಹಿಂಭಾಗ ಕಲ್ಲಿನಿಂದ ಕಟ್ಟಿದ ಚಚ್ಚೌಕವಾದ ೪೦x೪೦ ಅಡಿ ವಿಸ್ತೀರ್ಣದ ಮತ್ತು ೨೦ ಅಡಿ ಆಳವಾದ ಪುಷ್ಕರಣಿ ಇತ್ತೆಂದು ಈ ಪುಷ್ಕರಣಿಯ ನೀರನ್ನು ದೇವಾಲಯದ ಬಳಕೆಗೆ ಬಳಸುತ್ತಿದ್ದರೆಂದು ಹೇಳುತ್ತಾರೆ. ಆದರೆ ಇತ್ತೀಚಿನ ನಗರೀಕರಣದಿಂದ ಮುಚ್ಚಲ್ಪಟ್ಟಿದ್ದು ಕಣ್ಮರೆಯಾಗಿದೆ.[೧೫]

ಇಂದಿಗೂ ಸಹ ಕುಣಿಗಲ್ ದೊಡ್ಡ ಕೆರೆಯಲ್ಲಿ ೨ ಬಾವಿಗಳಿವೆ. ಒಂದು ಕುಣಿಗಲ್ ಪರಿವೀಕ್ಷಣಾ ಮಂದಿರದ ಮುಂಭಾಗದಲ್ಲಿದೆ, ಮತ್ತೊಂದು ಕುಣಿಗಲ್ ಕೆರೆಯ ಕೊತ್ತೆಗೆರೆ ಕೋಡಿಯ ಸಮೀಪ ಪದ್ಮೇಶ್ವರ ಗುಡಿಯ ಮುಂದೆ ಬಾವಿಯ ಕಟ್ಟಡವಿದ್ದು ಇಂದಿಗೂ ಸುಸ್ಥಿತಿಯಲ್ಲಿದೆ. ಈ ಮೆಲ್ಕಂಡ ಬಾವಿಗಳು ಸುಮಾರು ೩೦-೪೦ ಅಡಿ ಆಳವಿದ್ದು, ಸುಮಾರು ೬ ಅಡಿ ಸುತ್ತಳತೆಯ ವಿಸ್ತೀರ್ಣ ಹೊಂದಿದ್ದು ಕಲ್ಲಿನ ಕಟ್ಟದ ನಿರ್ಮಿಸಿ ನಾಲ್ಕು ಕಂಬಗಳನ್ನು ನಿಲ್ಲಿಸಿ ಅದರ ಮೇಲೆ ಒಂದು ಕಂಬವನ್ನು ಮಲಗಿಸಿ ಅದಕ್ಕೆ ೨ ಗಾಲಿಗಳನ್ನು ನೇತುಹಾಕಲಾಗಿದೆ. ಈ ಗಾಲಿಗಳಿಗೆ ಅಗ್ಗವನ್ನು ಕಟ್ಟಿ ಬಿಂದಿಗೆ ಅಥವಾ ಬಕೆಟ್‌ನ್ನು ಬಳಸಿ ನೀರನ್ನು ಮೇಲಕ್ಕೆ ಎತ್ತಲಾಗುತ್ತದೆ. ಈ ಬಾವಿಗಳು ಕುಡಿಯುವ ನೀರಿಗಾಗಿ ಹಾಗೂ ಸಭೆ ಸಮಾರಂಭಗಳ ಬಳಕೆಗಾಗಿ ಉಪಯೋಗಿಸಲಾಗುತ್ತಿತ್ತೆಂದು ತಿಳಿದುಬರುತ್ತದೆ.

ಕುಣಿಗಲ್ ಪಟ್ಟಣದಲ್ಲಿನ ಬಾವಿಗಳ ಬಗ್ಗೆ ನಿರ್ಮಾಣದ ಬಗ್ಗೆ ಯಾವುದೇ ಶಾಸನ ಆಧಾರಗಳು ಇರುವುದಿಲ್ಲ ಇಲ್ಲಿನ ಬಾವಿಗಳು ಸಾಂಸ್ಕೃತಿಕ ಕೇಂದ್ರವಾಗಿದ್ದು ಎಲ್ಲಾ ಜಾತಿ ಜನಾಂಗದ ಜನರು ತಮ್ಮ ನಿತ್ಯ ಬಳಕೆಗಾಗಿ ದೇವಾಲಯದ ಪೂಜೆ ಪುನಸ್ಕಾರಕ್ಕೆ, ಕುಡಿಯಲಿಕ್ಕೆ ಪ್ರಾಣಿ ಪಕ್ಷಿ ಮತ್ತು ವ್ಯವಸಾಯಕ್ಕೆ ಬಳಸಿಕೊಂಡಿರುವುದನ್ನು ಕಾಣಬಹುದಾಗಿದೆ.

ಕೆರೆ ನೀರಾವರಿ ಆಧಾರಿತ ಬೆಳೆಗಳು

ಇತಿಹಾಸ ಪೂರ್ವ ಕಾಲದಿಂದಲೂ ಕೃಷಿ ಆರ್ಥಿಕತೆಯ ಬೆನ್ನೆಲುಬಾಗಿದೆ. ಕುಣಿಗಲ್ ತಾಲ್ಲೂಕಿನ ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ. ಅಲ್ಲಿನ ಜನರ ಅರ್ಥ ವ್ಯವಸ್ಥೆಯು ವ್ಯವಸಾಯವನ್ನೇ ಅವಲಂಬಿಸಿದೆ. ಒಕ್ಕಲುತನದ ಅಭಿವೃದ್ಧಿಯೆಂದರೆ ಒಂದು ನಾಡಿನ ನಿಜವಾದ ಅಭಿವೃದ್ಧಿ ಎಂಬುದನ್ನು ನಮ್ಮ ಪ್ರಾಚೀನರು ಚೆನ್ನಾಗಿ ಮನಗಂಡಿದ್ದರು. ತಾಲ್ಲೂಕಿನ ಜನರ ವ್ಯವಸಾಯವು ಅಲ್ಲಿನ ಕೆರೆ, ಬಾವಿ, ಕಟ್ಟೆ, ಹಳ್ಳ, ಕೊಳ್ಳಗಳನ್ನು ಅವಲಂಬಿಸಿದೆ. ಕೆರೆ ನೀರಾವರಿ ಆಧಾರಿತವಾಗಿ ಬೆಳೆಯುವ ಬೆಳೆಗಳು ಈ ಕೆಳಗಿನಂತಿದೆ.

ಭತ್ತ, ರಾಗಿ, ಕಬ್ಬು, ಜೋಳ, ಅಡಿಕೆ, ತೆಂಗು, ಬಾಳೆ ಮತ್ತು ಇತರೆ ತೋಟಗಾರಿಕೆಯ ಬೆಳೆಗಳನ್ನು ಬೆಳೆಯುತ್ತಾರೆ.

ಮೀನುಗಾರಿಕೆ

ಮೀನು ಸಾಕಾಣಿಕೆಯು ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿರುವ ವೃತ್ತಿಯಾಗಿದ್ದು ಮೀನು

ಮನುಷ್ಯನ ದೇಹಕ್ಕೆ ಉತ್ತಮ ಆಹಾರವಾಗಿದೆ. ಪ್ರಸ್ತುತ ಕುಣಿಗಲ್ ಪಟ್ಟಣದ ಕೆರೆಗಳಲ್ಲಿ ಮೀನು ಸಾಕಾಣಿಕೆ ಪ್ರಮುಖ ವೃತ್ತಿಯಾಗಿದ್ದು ಬೆಸ್ತರು(ಗಂಗಾ ಮಾತಾ) ಎಂಬ ಜನಾಂಗದವರು ವೃತ್ತಿಯಲ್ಲಿ ತೊಡಗಿದ್ದಾರೆ. ಇದರಿಂದ ನೂರಾರು ಜನರಿಗೆ ಉದ್ಯೋಗ ನೀಡಿದೆ. ಮೀನಿನಲ್ಲಿ ಅಲವಾರು ತಳಿಗಳಿದ್ದು ೩-೪ ತಿಂಗಳಲ್ಲಿ ಮಾರಾಟಕ್ಕೆ ಸಿಗುತ್ತವೆ. ಜಿಲ್ಲಾ ಮೀನುಗಾರಿಕಾ ಅಭಿವೃದ್ಧಿ ಮಂಡಳಿಯು ಉತ್ತಮ ತಳಿಯ ಮೀನಿನ ಮರಿಗಳನ್ನು ಸಾಕಾಣಿಕೆಗೆ ನೀಡುತ್ತಾರೆ. ಇದರಿಂದ ಮತ್ಸ್ಯ ಉದ್ಯಮವು ಕೆರೆಗಳಿಂದ ಅಭಿವೃದ್ಧಿ ಹೊಂದಿದೆ ಎನ್ನಬಹುದು.

ಇಟ್ಟಿಗೆ ಉದ್ಯಮ

ಕೆರೆಗಳಲ್ಲಿನ ನೀರನ್ನು ಬಳಸಿಕೊಂಡು ಉತ್ತಮ ಗುಣಮಟ್ಟದ ಇಟ್ಟಿಗೆಗಳನ್ನು ತಯಾರಿಸಲಾಗುತ್ತಿದ್ದು ಇದರಿಂದ ನೂರಾರು ಜನರಿಗೆ ಉದ್ಯೋಗ ನೀಡಿದೆ ಜೊತೆಗೆ ಮನೆಗಳನ್ನು ಕಟ್ಟಲು ಅನುಕೂಲವಾಗಿದೆ ಇಟ್ಟಿಗೆ ಉದ್ಯಮದಿಂದ ಕೆರೆಗಳಲ್ಲಿನ ಹೂಳು ಮಣ್ಣನ್ನು ಹೊರತೆಗೆದಂತಾಗುತ್ತದೆ. ಇದರಿಂದ ಗುಂಡಿಗಳಾಗಿ ಮಳೆ ನೀರು ಭೂಮಿಯಲ್ಲಿ ಇಂಗಲು ಸಹಕಾರಿಯಾಗಿದೆ.

ಪಶುಪಾಲನೆ

ಕೆರೆ ನೀರಾವರಿಯಿಂದ ಪಶುಸಂಗೋಪನೆಗೆ ಅನುಕೂಲ ಮಾಡಿಕೊಟ್ಟಿದೆ ಪ್ರಾಚೀನ ಕಾಲದಿಂದಲೂ ಪಶುಸಂಗೋಪನೆ ನೀರಿನ ಆಸರೆಯ ಬಳಿಯೇ ವಿಕಸನಗೊಂಡಿದ್ದು ಸ್ವಾವಲಂಬನೆಗೆ ಅವಕಾಶ ಮಾಡಿಕೊಟ್ಟಿದೆ. ಕುರಿ, ಮೇಕೆ, ದನ, ಕರುಗಳು, ಎಮ್ಮೆ, ಸಿಮೇ ಹಸುಗಳನ್ನು ಸಾಕಾಣಿಕೆ ಮಾಡಿ ಹಾಲಿನ ಉತ್ಪಾದನೆಯಲ್ಲಿ ಪ್ರಗತಿ ಕಾಣಲು ಸಾಧ್ಯವಾಗಿದೆ. ಕೆರೆ ಅಂಗಳವು ಪ್ರಾಣಿಗಳಿಗೆ ಮೇವು, ಕುಡಿಯಲು, ಮೈತೊಳೆಯಲು ಅನುಕೂಲ ಮಾಡಿಕೊಟ್ಟಿದೆ ಎನ್ನಬಹುದು. ಒಟ್ಟಾರೆ ರೈತನು ಕೃಷಿಯ ಜೊತೆಗೆ ಪಶುಸಂಗೋಪನೆಯನ್ನು ಉಪಕಸುಬಾಗಿ ಮಾಡಿಕೊಂಡು ಸ್ವಾವಲಂಬನೆ ಸಾದಿಸಲು ಅನುವು ಮಾಡಿಕೊಟ್ಟಿದೆ.

ಕೆರೆಗಳಿಗೆ ಸಂಬಂಧಿಸಿದ ನಂಬಿಕೆ ಆಚರಣೆಗಳು

ಪ್ರಾಚೀನ ಮತ್ತು ಮಧ್ಯಕಾಲೀನ ಯುಗದಲ್ಲಿ ನೀರಾವರಿ ಕಾರ್ಯಗಳ ನಿರ್ಮಾಣದಲ್ಲಿ ಕೆರೆಗಳು ಆರ್ಥಿಕಾಭಿವೃದ್ಧಿಗೆ ಪೂರಕವಾದರೂ ಧಾರ್ಮಿಕ ಮಹೋನ್ನತಿಯ ಉದ್ದೇಶಗಳು ಪ್ರಧಾನವಾಗಿದ್ದವು. ಕೆರೆ ಕಾಲುವೆಗಳನ್ನು ನಿರ್ಮಿಸುವುದು ದೇವಾಲಯಗಳನ್ನು ನಿರ್ಮಿಸುವುದು, ಧಾರ್ಮಿಕ ಕಾರ್ಯ ಇಂತಹ ಕಾರ್ಯಗಳನ್ನು ಕೈಗೊಂಡ ವ್ಯಕ್ತಿ ಪುಣ್ಯಕ್ಕೆ ಆರ್ಹರಾಗುತ್ತಾರೆ ಎಂಬ ನಂಜಿಕೆ ಅಂದಿನಿಂದಲೂ ಜನರಲ್ಲಿ ಬೆಳೆದು ಬಂದಿದೆ. ಕುಣಿಗಲ್ ಪಟ್ಟಣದ ವ್ಯಾಪ್ತಿಯ ಕೆರೆಗಳನ್ನು ಕುರಿತಂತೆ ಕೆಲವು ನಂಬಿಕೆ ಆಚರಣೆಗಳನ್ನು ಇಲ್ಲಿ ಚರ್ಚಿಸಲಾಗಿದೆ. ಕೆರೆಗಳನ್ನು ಕಟ್ಟಲು ಅದನ್ನು ಬಳಸಿಕೊಳ್ಳಲು ಸಹ ಒಳ್ಳೆಯ ದಿನ ಮತ್ತು ಮೂಹರ್ತಗಳನ್ನು ನೋಡುತ್ತಿದ್ದರು ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಕುಣಿಗಲ್ ಪಟ್ಟಣದ ದೊಡ್ಡ ಕೆರೆಯ ತೂಬಿನ ಕಲ್ಲಿನ ಮೇಲಿರುವ ಶಾಸನ ಸಾಕ್ಷಿಯಾಗಿದೆ ಈ ಶಾಸನವು ವಿಜಯನಗರ ಕಾಲಕ್ಕೆ ಸಂಬಂಧಿಸಿದ್ದು ಈ ಕೆರೆಯ ತೂಬನ್ನು ಎರಡನೇ ಹರಿಹರನ ಆಡಳಿತ ಅವಧಿಯಲ್ಲಿ ಕ್ರಿ. ಶ. ೧೩೯೪ರಲ್ಲಿ ಮಂತ್ರಿವರ್ಯನಾದ ಇರುಗಪ್ಪ ದಾಣ್ಣನಾಯಕನ್ನು ಕಟ್ಟಿಸಿದನೆಂದು ಉಲ್ಲೇಖಿಸಿರುತ್ತದೆ.

ಈ ತೂಬಿನ ಕಲ್ಲನ್ನು ಪ್ರಶಕ್ತವಾದ ಶುಭಲಗ್ನದಲ್ಲಿ ಸ್ಥಾಪಿಸಲಾಯಿತು ಎಂದು ತಿಳಿಸುತ್ತಾ ಶಕವರ್ಷ ೧೩೧೬ರ ಭಾವನಾಮ ಸಂವತ್ಸರ ಭಾದ್ರಪದ ಶುಕ್ಲಪಕ್ಷದ ಮೊದಲ ದಿನದಂದು ಸೂರ್ಯೋದಯ ಏಳು ಘಟಕ ಸಂದ ನಂತರ ಧನುರ್ ಲಗ್ನದಲ್ಲಿ ತೂಬನ್ನು ಸ್ಥಾಪಿಸಲಾಯಿತು ಎಂದು ದಾಖಲಿಸಿದೆ.[೧೬] ಇಂತಹ ಯಾವುದೇ ಕಾರ್ಯದ ಆರಂಭದಲ್ಲಿ ಭೂಮಿ ಪೂಜೆ ಮಾಡುವಾಗ ಬುನಾದಿ ಕಲ್ಲನ್ನು ಹಾಕುವಾಗ ಮೊದಲ ಬಾರಿ ನೀರು ದೊರೆತಾಗ ತೂಬುಗಳನ್ನು ನಿರ್ಮಿಸುವಾಗ ಶಾಸನಗಳನ್ನು ನೆಡುವಾಗ ಈ ಮಾದರಿಯ ಪೂಜೆಗಳನ್ನು ಮಾಡುತ್ತಿದ್ದರು. ಅದೇ ರೀತಿ ಕುಣಿಗಲ್ ದೊಡ್ಡ ಕೆರೆಗೆ ಸಂಬಂಧಿಸಿದಂತೆ ಜನಪದ ಕಥೆ ಇದೆ. ಕೊತ್ತಪ್ಪ ಎಂಬ ವ್ಯಕ್ತಿಯು ಕುಣಿಗಲ್ ದೊಡ್ಡಕರೆ ಮತ್ತು ಕೊತ್ತಗೆರೆ ಕೆರೆಯನ್ನು ಕಟ್ಟಿಸಿ ಶಿವಗಂಗೆಯ ಬೆಟ್ಟದಲ್ಲಿ ಕುಳಿತು ಗಾಣದಿಂದ ಮೀನು ಹಿಡಿಯ ಬೇಕೆಂದು ಯೋಚಿಸಿ ಕೆರೆಯನ್ನು ನಿರ್ಮಾಣ ಮಾಡಲು ಪ್ರಾರಂಭಿಸುತ್ತಾನೆ. ಉಪ್ಪಾರರು ಮತ್ತು ವಡ್ಡಾ ಜನಾಂಗದವರು ಕೆರೆಯನ್ನು ಕಟ್ಟುವಲ್ಲಿ ನಿರತರಾಗುತ್ತಾರೆ. ಈ ಕೊತ್ತಪ್ಪ ಎಂಬ ಮೇಸ್ತ್ರೀಯು ಬಲಾಢ್ಯನಾಗಿದ್ದು ಕೆಲಸಗಾರರಿಗೆ ಕಿರುಕುಳ ಕೊಡುತ್ತಿದ್ದ ಇದರಿಂದ ಬೇಸತ್ತ ಕೆಲಸಗಾರರು ಕೆರೆಯ ಏರಿಗೆ ಬಲಿಕೊಡಲು ಮುಂದಾಗಿ ಸಮಯ ನೋಡಿ ಗುಂಡಿ ತೋಡಿ ಅದರಲ್ಲಿ ಕೆಡವಿ ಸಮಾಧಿ ಮಾಡುತ್ತಾರೆ. ಅದರ ಜ್ಞಾಪಕಾರ್ತಕ್ಕಾಗಿ ಕೆರೆಯ ಏರಿಯಲ್ಲಿ ಕೊತ್ತಪ್ಪನ ಗುಡಿ ಎಂದು ಕಟ್ಟಿದ್ದು ಪೂಜೆಮಾಡಲಾಗುತ್ತಿದೆ ಮುಂದೆ ಕೊತ್ತಪ್ಪನಿಂದ ಕೊತ್ತಗೆರೆ (ಕೊತ್ತಕೆರೆ) ಎಂಬುದಾಗಿ ಪ್ರಚಲಿತಕ್ಕೆ ಬಂದಿರುವುದನ್ನು ಕಾಣಬಹುದು.[೧೭]

ಅದೇ ರೀತಿ ಕುಣಿಗಲ್ ಪಟ್ಟಣದ ವ್ಯಾಪ್ತಿಯಲ್ಲಿ ಮಳೆ ಬಾರದ ಸಂದರ್ಭದಲ್ಲಿ ಊರಿನ ಎಲ್ಲಾ ಯುವಕರು ಒಟ್ಟಿಗೆ ಸೇರಿ ಜೇಡಿ ಮಣ್ಣಿನ ಮಳೆರಾಯನ ಮೂರ್ತಿಯನ್ನು ಮಾಡಿ ಮರದ ಹಲಗೆ ಮೇಲಿಟ್ಟು ಅರಿಶಿನ, ಕುಂಕುಮ ವಿಟ್ಟು ಹೂ ಪೂಜಿಸಿ ನಂತರ ಬೆತ್ತಲೆ ಇರುವ ಓರ್ವ ಬಾಲಕನು ಮಳೆರಾಯನ ವಿಗ್ರಹವನ್ನು ತಲೆಯ ಮೇಲೆ ಹೊತ್ತುಕೊಳ್ಳುತ್ತಾನೆ. ಇವನ ಹಣೆಗೆ ಅರಿಶಿನ-ಕುಂಕುಮ ಹಚ್ಚಿ ಕೊರಳಿಗೆ ಹೂಮಾಲೆ ಹಾಕಿರುತ್ತಾರೆ. ಹುಡುಗರೆಲ್ಲರೂ ಸೇರಿಕೊಂಡು ಗ್ರಾಮದ ಪ್ರತಿ ಮನೆ ಮನೆಗೆ ತೆರಳಿ ಹಾಡನ್ನು ಹೇಳುತ್ತಾರೆ.

ಹೊಯ್ಯೋ ಹೊಯ್ಯೋ ಮಳೆರಾಯ ಹೂವಿನ ತೋಟಕ್ಕೆ ನೀರಿಲ್ಲ
ಹೋಯ್ಯೋ ಹೋಯ್ಯೋ ಮಳೆರಾಯ ಬಾಳೇ ತೋಟಕೆ ನೀರಿಲ್ಲ
ಹೋಯ್ಯೋ ಹೋಯ್ಯೋ ಮಳೆರಾಯ ತೆಂಗಿನ ತೋಟಕೆ ನೀರಿಲ್ಲ
ಬಾರಪ್ಪೋ ಮಳೆರಾಯ...............

ಪ್ರತಿ ಮನೆಯ ಹೆಣ್ಣು ಮಕ್ಕಳು ಒಂದು ಕೊಡ ನೀರನ್ನು ಮಳೆರಾಯನ ಮೂರ್ತಿ ಹೊತ್ತ ಹುಡುಗನ ಮೇಲೆ ಸುರಿಯುತ್ತಾರೆ. ಅವನಿಗೆ ಅರಿಶಿನ ಕುಂಕುಮವಿಟ್ಟು ಪೂಜಿಸಿ ಗ್ರಾಮಕ್ಕೆ ಮಳೆ ಬರುವಂತೆ ಪ್ರಾರ್ಥಿಸುತ್ತಾರೆ. ಪ್ರತಿ ಮನೆಯವರು ದವಸ ಧಾನ್ಯ ನೀಡುತ್ತಾರೆ ಕೆಲವರು ಕಾಣಿಕೆ ನೀಡುತ್ತಾರೆ. ಊರೆಲ್ಲಾ ಪೂಜೆ ಮುಗಿದ ನಂತರ ಮಳೆರಾಯನ ಮೂರ್ತಿಯನ್ನು ಕೆರೆಯಲ್ಲಿ ವಿಸರ್ಜಿಸುತ್ತಾರೆ. ದವಸ ದಾನ್ಯಗಳನ್ನು ಮಾರಾಟ ಮಾಡಿ ಬಂದಂತಹ ಹಣದಿಂದ ಗ್ರಾಮದ ದೇವಸ್ಥಾನದಲ್ಲಿ ಪೂಜೆ ಮಾಡಿಸಿ ಪ್ರಸಾದವನ್ನು ಎಲ್ಲರಿಗೂ ಹಂಚಲಾಗುತ್ತದೆ. ಈ ಆಚರಣೆಯು ಕುಣಿಗಲ್ ಪಟ್ಟಣದಲ್ಲಿ ಪ್ರತಿವರ್ಷವು ಮಳೆ ಬಾರದೆ ಇದ್ದಾಗ ತಪ್ಪದೆ ಆಚರಿಸುತ್ತಾರೆ.

ದೊಡ್ಡಕೆರೆ ಮತ್ತು ಬೇಗೂರು ಕೆರೆಯ ಏರಿಯ ಹಿಂಬಾಗ ಆಂಜನೇಯನ ದೇವಾಲಯವಿದ್ದು ಕೆರೆಯ ಕೋಡಿಯನ್ನು ಕಾಯುವ ರಕ್ಷಕ ಎಂಬ ನಂಬಿಕೆ ಇದೆ. ಈ ದೇವಾಲಯಕ್ಕೆ ನೀರು ಬಾಗಿಲು ಆಂಜನೇಯ ಎಂದು ಹೆಸರು. ಪ್ರತಿ ದಿನ ಪೂಜೆ ಪುನಸ್ಕಾರಗಳು ನಡೆಯುತ್ತಿವೆ. ದೊಡ್ಡ ಕೆರೆ ಏರಿಯ ಮೇಲೆ ಸರಸ್ವತಿ ಮತ್ತು ಪಾರ್ವತಮ್ಮನ ಗುಡಿ ಇದೆ ಹಾಗೂ ಸೋಮೇಶ್ವರ ಗುಡಿಗೆ ಹೆಣ್ಣು ಮಕ್ಕಳು ಗಂಗಮ್ಮನ ಪೂಜೆ ಮಾಡುತ್ತಾರೆ. ಮಕ್ಕಳ ಫಲ ಇಲ್ಲದವರು, ಚರ್ಮದ ಕಾಯಿಲೆ ಇರುವವರು ಕೆರೆಯಲ್ಲಿ ತಣ್ಣೀರು ಮುಳುಗಿ ಮಡಿ ಬಟ್ಟೆಯಲ್ಲಿ ಹೊಸ ಸೀರೆ, ಅರಿಶಿನ-ಕುಂಕುಮ ತೊಂಬಿಟ್ಟನ್ನು ನೈವೇಧ್ಯ ಮಾಡಿ ಭಕ್ತಿಯಿಂದ ಪೂಜೆ ಸಲ್ಲಿಸುತ್ತಾರೆ. ವಿಶೇಷವಾಗಿ ಸೋಮವಾರ ಮತ್ತು ಶುಕ್ರವಾರ ಶುಭ ದಿನವಾಗಿದ್ದು ಇದನ್ನು ಗಂಗಮ್ಮನ ಪೂಜೆ ಅಥವಾ ವೀರಮಾಸ್ತಮ್ಮನ ಪೂಜೆ ಎಂದು ಕರೆಯುತ್ತಾರೆ. ಕೆರೆಗಳು ತುಂಬಿದಾಗ ತೆಪ್ಪೋತ್ಸವ ಮಾಡಲಾಗುತ್ತದೆ. ಕೆರೆಗಳು ತುಂಬಿ ಕೋಡಿ ಅರಿಯುವಾಗ ಹಂದಿಯನ್ನು ಬಲಿಕೊಡುವುದು ಕುಣಿಗಲ್ ಪಟ್ಟಣದ ಸಂಸ್ಕೃತಿಯ ಆಚರಣೆಯಾಗಿದೆ.

ಗಣಪತಿ ಉತ್ಸವವನ್ನು ಭರ್ಜರಿಯಾಗಿ ಆಚರಣೆ ಮಾಡಿ ೭-೧೪ ದಿನಗಳ ಕಾಲ ಪೂಜಿಸುತ್ತಾರೆ ಕೊನೆಯ ದಿನ ಪಟ್ಟಣದ ತುಂಬ ಮೆರವಣಿಗೆ ಮಾಡಿಸಿ ಕುಣಿಗಲ್ ಕೆರೆಗೆ ತಂದು ವಿಸರ್ಜನೆ ಮಾಡುತ್ತಾರೆ. ಪ್ರತಿ ವರ್ಷ ಸುಮಾರು ೮೦ ರಿಂದ ೧೦೦ ಗಣಪತಿಯ ಮೂರ್ತಿಗಳನ್ನು ವಿಸರ್ಜಿಸಲಾಗುತ್ತದೆ.

ದೊಡ್ಡ ಕೆರೆ ಏರಿಯ ಮೇಲೆ ವೀರಗಲ್ಲು ಮತ್ತು ನಾಗರ ಕಲ್ಲುಗಳು ಹೇರಳವಾಗಿದ್ದು, ಹೆಣ್ಣು ಮಕ್ಕಳು ನಾಗರ ಕಲ್ಲುಗಳನ್ನು ಪ್ರತಿಷ್ಠಾಪಿಸಿ ನಾಗದೋಷವನ್ನು ನಿವಾರಣೆ ಮಾಡಿಕೊಳ್ಳಲು ಪೂಜೆಪುನಸ್ಕಾರ ಕೈಗೊಳ್ಳುತ್ತಾರೆ.

ಕೆರೆಯು ಪವಿತ್ರವಾದುದೆಂಬ ಭಾವನೆಯು ಜನರಲ್ಲಿರುವುದನ್ನು ಕಾಣಬಹುದು. ಏಕೆಂದರೆ ಕೆರೆಗೆ ಪಂಚಕನ್ಯೆಯರು, ಅಪ್ಸರಾಸ್ತ್ರೀಯರು, ದೇವಾನುದೇವತೆಗಳು ಜಲವಿಹಾರಕ್ಕಾಗಿ ಆಗಮಿಸುತ್ತಾರೆಂಬ ನಂಬಿಕೆ ಇದೆ. ಹಾಗಾಗಿ ಈ ಕೆರೆಗಳ ಸುತ್ತಮುತ್ತಲಿನ ಗ್ರಾಮದೇವತೆಗಳು ಶಿವರಾತ್ರಿಯಿಂದ ಪ್ರಾರಂಭ ಮಾಡಿ ಯುಗಾದಿಯವರೆಗೆ ಗಂಗಾ ಸ್ನಾನಕ್ಕೆ ಆಗಮಿಸುತ್ತಾರೆ ಕೆಲವು ಗ್ರಾಮದ ದೇವತೆಗಳು ಶ್ರಾವಣ ಮತ್ತು ಕಾರ್ತಿಕ ಮಾಸದಲ್ಲಿ ಬರುತ್ತವೆ. ಇಲ್ಲಿಗೆ ಗ್ರಾಮದೇವತೆಗಳನ್ನು ಅರ್ಚಕ ವೃಂದ ಮತ್ತು ದೇವತೆಗಳ ಆರಾಧಕರು ಭಕ್ತಿ ಭಾವದಿಂದ ಕರೆತಂದು ಅವುಗಳಿಗೆ ಗಂಗಾಸ್ನಾನ ಮಾಡಿಸಿ, ಪೂಜಾ ಸಾಮಾಗ್ರಿಗಳನ್ನು ಮತ್ತು ಅಲಂಕರಣ ಸಾಮಾಗ್ರಿಗಳನ್ನು ಸ್ವಚ್ಚಗೊಳಿಸುತ್ತಾರೆ. ಅನಂತರ ಪುರೋಹಿತರು ದೇವತೆಗಳಿಗೆ ಪುಣ್ಯೋಜನೆ ಮಾಡಿಸಿ, ಗೋವಿನ ಗಂಜಲದಿಂದ ಶುದ್ಧೀಕರಿಸುತ್ತಾರೆ. ಕುಂಭಾಭಿಷೇಕ ಮಾಡಿ ಅಲಂಕರಣ ಮಾಡಿ ಅಭಿಷೇಕಕ್ಕೆ ಕೊನೆಯಲ್ಲಿ ಅಷ್ಟಗಂಧವನ್ನು ಬಳಸಿ, ವಿಶೇಷ ಪೂಜೆ ನೆರವೇರಿಸುತ್ತಾರೆ.

ಈ ಮೇಲ್ಕಂಡ ಅಂಶಗಳು ಕುಣಿಗಲ್ ಪಟ್ಟಣದ ಕೆರೆಗಳಿಗೆ ಸಂಬಂಧಿಸಿದ ನಂಬಿಕೆ ಆಚರಣೆಗಳಾಗಿದ್ದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿದೆ.

೪.೨. ಕೋಟೆ ಕೊತ್ತಲಗಳು

ಸಾಮಾನ್ಯವಾಗಿ ಕೋಟೆ ಎಂದರೆ ರಕ್ಷಣೆ ಆವರಣವುಳ್ಳ ಪ್ರದೇಶ ಎಂದರ್ಥ, ಅಂದರೆ ರಾಜರು ತನ್ನ ಪರಿವಾರ ಹಾಗೂ ಪ್ರಜೆಗಳ ಸಂಪತ್ತಿನ ರಕ್ಷಣೆಗಾಗಿ ನಿರ್ಮಿಸಿಕೊಂಡ ಭದ್ರವಾದ ಗೋಡೆ ಮತ್ತು ಬಾಗಿಲುಳ್ಳ ಕೋಟೆಯಾಗಿದೆ ಎಂದು ರಾಜನೀತಿ ಪ್ರಕಾಶದಲ್ಲಿ ಬೃಹಸ್ಪತಿಯ ವಚನವು ಉಲ್ಲೇಖಿಸಿದೆ.[೧೮]

ಕೋಟೆಗಳು ರಾಜಮನೆತನಗಳ ರಕ್ಷಣೆಯಲ್ಲಿ ಪಾತ್ರವಹಿಸುವುದಲ್ಲದೆ ಪ್ರಮುಖವಾಗಿ ಜೀವಿಸಲಿಕ್ಕೆ ಆದಾರವಾಗಿದ್ದವು, ಆಯಾಕಟ್ಟಿನ ಪ್ರದೇಶಗಳಲ್ಲಿ ವಿಶಾಲವಾಗಿ ಹಾಗೂ ಬಲಿಷ್ಠವಾಗಿ ನಿರ್ಮಾಣಗೊಂಡ ಗೋಡೆಗಳ ಆವರಣಕ್ಕೆ ಕೋಟೆಗಳೆಂದು ಕರೆಯಲಾಗಿದೆ.[೧೯]

ಕೋಟೆ ಎಂಬ ಪದಕ್ಕೆ ದುರ್ಗ, ಪುರಗಳೆಂಬ ಪದಗಳು ಬಳಕೆಯಾಗುತ್ತಿವೆ. 'ದುರ್ಗ' ವೆಂದರೆ ಅರಸ, ಆತನ ಸಂಬಂಧಿಕರು, ಸರದಾರರು, ರಾಜಪುರೋಹಿತರು ವಾಸಮಾಡುವ ಸ್ಥಳವೆಂದೂ, 'ಪುರ' ಎಂದರೆ ಅರಸ ವಾಸಮಾಡುವ ಸ್ಥಳವೆಂದು ಕರೆಯುತ್ತಾರೆ.[೨೦]

ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ ರಾಜನು ತನ್ನ ರಾಜ್ಯದ ಎಲ್ಲೆಯ ನಾಲ್ಕು ದಿಕ್ಕುಗಳಲ್ಲಿ ಶತ್ರುಗಳನ್ನು ತಡೆಗಟ್ಟಲು ಸೂಕ್ತವಾದ ಕೋಟೆಯನ್ನು ಕಟ್ಟಬೇಕೆಂದು ಹೇಳಿದ್ದಾನೆ.[೨೧] ಶುಕ್ರನ ನೀತಿಸಾರ, ಕೆಳದಿ ನೃಪವಿಜಯ, ಚನ್ನ ಬಸವ ಪುರಾಣ, ಮೋಹನತರಂಗಿಣಿ ಮೊದಲಾದ ಸಾಹಿತ್ಯ ಕೃತಿಗಳು ಕೋಟೆಯ ನಿರ್ಮಾಣದ ಬಗ್ಗೆ ಮಾಹಿತಿಯನ್ನು ನೀಡುತ್ತವೆ.[೨೨]

ದುರ್ಗಗಳಲ್ಲಿ ಹಲವು ವಿಧಗಳಿದ್ದು ಅವು ಜಲದುರ್ಗ, ಸ್ಥಳದುರ್ಗ, ಪಾಷಣದುರ್ಗ, ವನದುರ್ಗ, ಇಷ್ಟಕದುರ್ಗ, ಮೈತ್ರಿಕದುರ್ಗ, ನರದುರ್ಗ, ಮದುದುರ್ಗ ಪ್ರಮುಖವೆನಿಸಿವೆ.[೨೩]

ಪ್ರಸ್ತುತ ಕಣಿಗಲ್ ಪಟ್ಟಣದ ಕೋಟೆಯು ಸ್ಥಳ ದುರ್ಗವಾಗಿದೆ. ಭಾರತದಲ್ಲಿ ಕೋಟೆಗಳ ಇತಿಹಾಸವು ಇತಿಹಾಸ ಪೂರ್ವ ಕಾಲದಿಂದಲೇ ಆರಂಭವಾಗಿದೆ. ಹರಪ್ಪದಲ್ಲಿ ಕಂಡು ಬಂದಿರುವ ಕೋಟೆ ಪ್ರದೇಶವು ಹಸಿ ಇಟ್ಟಿಗೆ ಮತ್ತು ಮಣ್ಣಿನಿಂದ ನಿರ್ಮಾಣಗೊಂಡಿದ್ದು, ಭಾರತದ ಪ್ರಾಚೀನ ಕೋಟೆಗಳಲ್ಲಿ ಒಂದಾಗಿದೆ.[೨೪]

ಮೌರ್ಯರ ರಾಜದಾನಿಯಾದ ಪಾಟಲೀಪುತ್ರದ ಬಳಿ ಇರುವ ಬುಲು-ದಿ-ಬಾಪ್ ಎಂಬ ನೆಲೆಯಲ್ಲಿ ಕ್ರಿಶ ೧೯೮೬ರಲ್ಲಿ ಸ್ಪೋನರ್ ಉತ್ಖನನ ನಡೆಸಿದ ಮೇಲೆ ಕೋಟೆಯ ಅವಶೇಷಗಳು ದೊರೆತಿವೆ. ನಂತರ ಸನ್ನತಿಯಲ್ಲಿ ಶಾತವಾಹನರ ಕೋಟೆ ಶೋಧನೆಗೊಂಡಿದ್ದು, ಇಟ್ಟಿಗೆಯಿಂದ ನಿರ್ಮಾಣಗೊಂಡಿದೆ.[೨೫] ಕ್ರಿ.ಶ. ೪ ರಿಂದ ೬ನೇ ಶತಮಾನದವರೆಗೆ ಆಳಿದ ಕದಂಬರು ಬನವಾಸಿಯನ್ನು ರಾಜಧಾನಿಯಾನ್ನಾಗಿ ಮಾಡಿಕೊಂಡು ಅಲ್ಲಿಯ ಕೋಟೆಯನ್ನು ಭದ್ರಪಡಿಸಿದರು ಇವರ ಕಾಲದ ಕೋಟೆಯ ಅವಶೇಷಗಳು ಬನವಾಸಿ, ಗುಡ್ನಾಪುರ, ತಾಳಗುಂದ, ಹಲಸಿ ಮುಂತಾದ ಕಡೆ ದೊರೆತಿವೆ.[೨೬]

ಬಾದಾಮಿ ಚಾಲುಕ್ಯರು ಕ್ರಿ.ಶ. ೬ರಿಂದ ೮ನೇ ಶತಮಾನವರೆಗೆ ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದರು ಬಾದಾಮಿಯಲ್ಲಿ ನಿರ್ಮಿಸಿದ ಕೋಟೆಯು ಕರ್ನಾಟಕದ ಪ್ರಥಮ ಶಾಸನೋಕ್ತ ಕೋಟೆಯಾಗಿದೆ. ಚಾಲುಕ್ಯ ವಂಶದ ೧ನೇ ಪುಲಕೇಶಿಯು ಕ್ರಿಶ ೫೪೦ರಲ್ಲಿ ತನ್ನ ರಾಜದಾನಿಗೆ ಅಭೇದ್ಯವಾದ ಕೋಟೆಯನ್ನು ಭದ್ರಪಡಿಸಿದ ಸಂಗತಿ ಶಾಸನದಲ್ಲಿದೆ.[೨೭]

ನಂತರ ಬಂದ ರಾಜಮನೆತನಗಳ ಕಾಲದಲ್ಲಿ ಕೋಟೆಗಳು ನಿರ್ಮಾಣಗೊಂಡು ವಿಜಯನಗರ ಕಾಲದಲ್ಲಿ ಉನ್ನತಿ ಪಡೆದವು.

ಅನೇಕ ಪಾಳೆಗಾರರು ಸಹ ತಮ್ಮ ಆಳ್ವಿಕೆಗೆ ಒಳಪಟ್ಟ ಪ್ರದೇಶಗಳಲ್ಲಿ ಕೋಟೆಗಳನ್ನು ಕಟ್ಟಿಸಿದ್ದಾರೆ. ಮುಖ್ಯವಾಗಿ ಚಿತ್ರದುರ್ಗ, ಮಧುಗಿರಿ, ನಿಡಗಲ್ಲು, ಯಲಹಂಕಾನಾಡ ಪ್ರಭುಗಳು, ಕಿತ್ತೂರು ಮೊದಲಾದ ಪಾಳೆಗಾರರು ತಮ್ಮ ವ್ಯಾಪ್ತಿಯಲ್ಲಿ ಆರ್ಥಿಕ ಶಕ್ತಿಗನುಸಾರವಾಗಿ ಕೋಟೆಗಳನ್ನು ನಿರ್ಮಾಣ ಮಾಡಿಕೊಂಡು ಆಳ್ವಿಕೆ ನಡೆಸಿದ್ದಾರೆ.

ಕುಣಿಗಲ್ ಕೋಟೆ

ಕುಣಿಗಲ್ ತಾಲ್ಲೂಕಿನಲ್ಲಿ ಪ್ರಮುಖವಾಗಿ ೩ ಕೋಟೆಗಳಿದ್ದು ಅವುಗಳಲ್ಲಿ ಹುರ್ತಿದುರ್ಗ, ಹುಲಿಯೂರುದುರ್ಗದ ಕೋಟೆಗಳು ವನದುರ್ಗ ಮತ್ತು ಗಿರಿದುರ್ಗಗಳಿಂದ ಕೂಡಿದ್ದು ಉತ್ತಮ ಸ್ಥಿತಿಯಲ್ಲಿವೆ.

ಅದೇ ರೀತಿ ಕುಣಿಗಲ್ ಪಟ್ಟಣದಲ್ಲಿ ಸ್ಥಳದುರ್ಗ ಮಾದರಿಯ ಕೋಟೆಯ ರಚನೆಯನ್ನು ಕಾಣಬಹುದಾಗಿದ್ದು ಶಾಸನಗಳಲ್ಲಿ ಉಲ್ಲೇಖವಾಗಿದೆ. ಕುಣಿಗಲ್ ಪಟ್ಟಣವನ್ನು ಸುತ್ತುವರಿದಂತೆ ಕೋಟೆಯನ್ನು ಕಟ್ಟಲಾಗಿದ್ದು, ಗಂಗರ ಅರಸನಾದ ೨ನೇ ಶಿವಮಾರನು ಕ್ರಿ.ಶ ೭೮೫ರಲ್ಲಿ ಈ ಕೋಟೆಯನ್ನು ಕಟ್ಟಿಸಿದನು, ಮುಂದೆ ರಾಷ್ಟ್ರಕೂಟರ ಕಾಲದಲ್ಲಿ ವೀರಕಂಬಳರಾಯನು ಕ್ರಿ.ಶ ೧೨೯೦ರಲ್ಲಿ ಕೋಟೆಯನ್ನು ವೃದ್ಧಿಸಿದನು ಎಂದು ಎಸ್. ಕೆ.ಜೋಶಿಯವರು ಅಭಿಪ್ರಾಯಪಟ್ಟಿದ್ದಾರೆ[೨೮] (ಈ ಕೋಟೆಯ ನಿರ್ಮಾಣದ ಬಗ್ಗೆ ನಿಖರವಾದ ಮಾಹಿತಿ ಇರುವುದಿಲ್ಲ).

ಕುಣಿಗಲ್ ಕೋಟೆಯು ಭಾಗಶಃ ನಶಿಸಿದ್ದು ಅಲ್ಲಲ್ಲಿ ಅವಶೇಷಗಳು ಕಂಡುಬರುತ್ತದೆ. ದೊಡ್ಡ ಕೆರೆ ಏರಿಯ ಮೇಲಿರುವ ಸೋಮೇಶ್ವರ ಗುಡಿಯ ಪ್ರಾಕಾರ ಗೋಡೆಯನ್ನು ಹೊಂದಿಕೊಂಡಂತೆ ಪಟ್ಟಣವನ್ನು ಸುತ್ತುವರೆದು ಕೋಟೆ ನಿರ್ಮಾಣ ಮಾಡಲಾಗಿತ್ತು ಆದರೆ ಪ್ರಸ್ತುತ ಸಂದರ್ಭದಲ್ಲಿ ಸೋಮೇಶ್ವರ ಗುಡಿಯ ಹಿಂಭಾಗ ಸುಮಾರು ೩೦೦ಮೀಟರ್ ಉದ್ದದ ಕೋಟೆಯ ಅವಶೇಷ ಕಂಡುಬರುತ್ತದೆ.

ಶಾಸನಗಳಲ್ಲಿ ಕುಣಿಗಲ್ ಕೋಟೆಗೆ ನಾಲ್ಕು ಹೆಬ್ಬಾಗಿಲುಗಳಿದ್ದವೆಂದು ಉಲ್ಲೇಖಿಸಿವೆ. ಮೈಸೂರು ಬಾಗಿಲನ್ನು ಚಿಕ್ಕದೇವರಾಜ ಒಡೆಯರ ಆಡಳಿತದ ಅವಧಿಯಲ್ಲಿ ತಲಕಾಡು ಸಿದ್ದರಾಜಯ್ಯನೆಂಬ ಅಧಿಕಾರಿಯ ಒಂದು ಕೋಟೆ ಬಾಗಲು ನಿರ್ಮಿಸಿ ಆ ಬಾಗಿಲಿಗೆ ಮೈಸೂರು ಬಾಗಿಲು ಎಂದು ಹೆಸರಿಡಲಾಗಿದೆ (ಶಾಸನ ಸಂಖ್ಯೆ ಕು–೧೩, ೧೪ ಮತ್ತು ೧೬).[೨೯] ಮೈಸೂರು ಗೆಜೆಟಿಯರ್‌ನಲ್ಲಿ ಹಯವದನರಾವ್ ಸಿ. ಅವರು ಕುಣಿಗಲ್ ಪಟ್ಟಣದಲ್ಲಿ ಕೋಟೆ ಇದ್ದುದನ್ನು ಉಲ್ಲೇಖಿಸಿದ್ದು ಈ ಕೋಟೆಯನ್ನು ವೀರ ಕಂಬಳರಾಯ ಕ್ರಿ.ಶ. ೧೨೯೦ರಲ್ಲಿ ಕಟ್ಟಿಸಿದನೆಂದು ಹೇಳಿದ್ದಾರೆ.[೩೦]

ಕುಣಿಗಲ್ ಕೋಟೆಯ ನಿರ್ಮಾಣದ ಬಗ್ಗೆ ಸೂಕ್ಷ್ಮವಾಗಿ ಗಮನಿಸಿದಾಗ ಬಹುಶಃ ಗಂಗರ ಕಾಲದಲ್ಲಿ ನಿರ್ಮಾಣಗೊಂಡಿದ್ದು ನಂತರ ಗಂಗವಾಡಿಯನ್ನು ರಾಷ್ಟ್ರಕೂಟರು ವಶಪಡಿಸಿಕೊಂಡಾಗ ಈ ಕೋಟೆಯನ್ನು ಅಭಿವೃದ್ಧಿಪಡಿಸಿರಬೇಕು ಎಂದು ಹೇಳಬಹುದು. ವಿಜಯನಗರ ಅರಸರ ಸಾಮಂತರಾಗಿದ್ದ ಮೈಸೂರು ಒಡೆಯರು ಮತ್ತು ಯಲಹಂಕ ನಾಡ ಪ್ರಭುಗಳು ಆಡಳಿತದ ಅವಧಿಯಲ್ಲಿ ಈ ಕೋಟೆಯನ್ನು ಭದ್ರಪಡಿಸಿಕೊಂಡು ಆಡಳಿತ ನಡೆಸಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಇತ್ತೀಚೆಗೆ ನಗರೀಕರಣದಿಂದ ಪಟ್ಟಣವು ವಿಸ್ತಾರಗೊಳ್ಳುತ್ತಿದ್ದು ಈ ಕೋಟೆಯ ಅವಶೇಷ ಕಣ್ಮರೆಯಾಗುತ್ತಿದೆ.

ಇಂದಿಗೂ ಸಹ ಕೋಟೆಯ ನಾಮಾಂಕಿತದಿಂದ ಕೋಟೆಬೀದಿ, ಕೋಟೆಮೈದಾನ, ಕೋಟೆಆಂಜನೇಯ, ಕೋಟೆ ವೆಂಕಟರಯಣಸ್ವಾಮಿ, ಉರಿತಿರುಮಲ, ಕೋಟೆ ನರಸಿಂಹಸ್ವಾಮಿ, ಸೋಮೇಶ್ವರ, ನೀರು ಬಾಗಿಲು ಆಂಜನೇಯ, ಪದ್ಮೇಶ್ವರ, ಸಂತೇ ಬೀದಿ, ಶಿವರಾಮೇಶ್ವರ ಎಂಬ ದೇವಾಲಯಗಳು ಕೋಟೆಯ ಆವರಣದಲ್ಲಿದ್ದು ಕೋಟೆಯ ನಾಮಾಂಕಿತದಿಂದ ಆರಂಭಗೊಳ್ಳುವುದನ್ನು ಕಾಣಬಹುದಾಗಿದೆ.

ಸ್ಥಳೀಯರ ಹೇಳಿಕೆ ಪ್ರಕಾರ ಕುಣಿಗಲ್ ಕೋಟೆಗೆ ಸುರಂಗ ಮಾರ್ಗವಿದ್ದು ಸೋಮೇಶ್ವರ ಗುಡಿಯ

ಮಹಾದ್ವಾರಕ್ಕೆ ಸಂಪರ್ಕ ಕಲ್ಪಿಸುತ್ತಿತ್ತು. ಶತ್ರು ಪಡೆಯವರು ದಾಳಿಮಾಡುವ ಮುನ್ಸೂಚನೆಯಲ್ಲಿ ಈ ಸುರಂಗ ಮಾರ್ಗದಿಂದ ರಾಜಪರಿವಾರದವರು ಪಾರಾಗುತ್ತಿದ್ದರೆಂದು ಹೇಳುತ್ತಾರೆ.

೪.೩. ಕುದುರೆ ಫಾರಂ (ಅಶ್ವತಳಿ ಸಂವರ್ಧನ ಕೇಂದ್ರ)

ಮಾನವ ಬುದ್ಧಿಜೀವಿ ತನ್ನ ಆಸೆ ಆಕಾಂಕ್ಷೆಗಳ ಈಡೇರಿಕೆಗಾಗಿ ಪ್ರಾಣಿಗಳನ್ನು ಪಳಗಿಸಿಕೊಂಡು ಅವುಗಳನ್ನು ನಿತ್ಯ ಜೀವನದಲ್ಲಿ ಬಳಸಿಕೊಂಡಿರುವುದನ್ನು ಇತಿಹಾಸದುದ್ದಕ್ಕೂ ಕಾಣಬಹುದಾಗಿದೆ. ಕುದರೆಯು ಸಾಕು ಪ್ರಾಣಿಗಳ ಗುಂಪಿಗೆ ಸೇರಿದ್ದು, ಸಾರಿಗೆ ಸಂಪರ್ಕಕ್ಕೆ ಅನುಕೂಲವಾಗಿದೆ. ವೇದ-ಪುರಾಣಗಳಲ್ಲಿ ಅಶ್ವಮೇಧಯಾಗದ ಬಗ್ಗೆ ಉಲ್ಲೇಖವಿದ್ದು, ರಾಜನಾದವರು ೬೪ ಕಲೆಗಳಲ್ಲಿಯೂ ಪಾರಂಗತನಾಗಿರಬೇಕು. ಈ ೬೪ ಕಲೆಗಳಲ್ಲಿ ಕುದುರೆ ಸವಾರಿಯು ಪ್ರಮುಖವಾಗಿರುತ್ತದೆ. ಸೈನ್ಯ ವ್ಯವಸ್ಥೆಯಲ್ಲಿ ಗಜದಳ, ರಥದಳ, ಕಾಲುದಳ ಮತ್ತು ಅಶ್ವದಳವು ಪ್ರಮುಖವಾಗಿರುವುದನ್ನು ಕಾಣಬಹುದು. ವಿಜಯನಗರ ಅರಸರು ಸೈನ್ಯಕ್ಕೆ ಬೇಕಾದ ಕುದುರೆಗಳನ್ನು ಅರೇಬಿಯಾದಿಂದ ತರಿಸಿಕೊಳ್ಳುತ್ತಿದ್ದರೆಂದು ವಿದೇಶಿ ಬರವಣಿಗೆಯಲ್ಲಿ ದೃಢಪಟ್ಟಿದೆ. ಅಲ್ಲದೆ ಹಂಪಿ ಪರಿಸರದಲ್ಲಿ ಉತ್ಖನನದ ಸಂದರ್ಭದಲ್ಲಿ ದೊರೆತ ಕುದುರೆಯ ಎಲುಬಿನಿಂದ ಇದು ಅರೇಬಿಯಾದ ಕುದುರೆ ಎಂದು ಗುರುತಿಸಲಾಗಿದೆ.

ಅದೇ ರೀತಿ ೧೮ನೇ ಶತಮಾನದಲ್ಲಿ ಮೈಸೂರು ಹುಲಿ ಎಂದೇ ಪ್ರಸಿದ್ಧನಾದ ಟಿಪ್ಪುಸುಲ್ತಾನನ ಕಾಲದಲ್ಲಿ ತುಮಕೂರು ಜಿಲ್ಲೆಯ ಕುಣಿಗಲ್ ಪಟ್ಟಣದಲ್ಲಿ ಸುಮಾರು ೫೦೦ ಎಕರೆ ವಿಸ್ತೀರ್ಣದಲ್ಲಿ ಕುದುರೆ ಫಾರಂ ಸ್ಥಾಪನೆಗೊಂಡಿರುವುದನ್ನು ಕಾಣಬಹುದಾಗಿದೆ. ಕುದುರೆ ಫಾರಂ ಕುಣಿಗಲ್ ಕೆರೆಯಷ್ಟೆ ಪ್ರಸಿದ್ಧವಾಗಿದ್ದು, ವಿಶ್ವ ಮನ್ನಣೆ ಪಡೆದಿದೆ. ತಾಲ್ಲೂಕು ಕೇಂದ್ರದ ಹೃದಯ ಭಾಗದಲ್ಲಿರುವ ಈ ಅಶ್ವತಳಿ ಸಂವರ್ಧನ ಕೇಂದ್ರವು ರಾಜಧಾನಿ ಬೆಂಗಳೂರಿನಿಂದ ಸುಮಾರು ೭೨ ಕಿ.ಮೀ. ಅಂತರವನ್ನೂ ಹಾಗೂ ಜಿಲ್ಲಾ ಕೇಂದ್ರದಿಂದ ೩೮ ಕಿ.ಮೀ. ದೂರದಲ್ಲಿದೆ.

ಟಿಪ್ಪುಸುಲ್ತಾನನು ತನ್ನ ಸೈನಿಕರಿಗೆ ಕುದುರೆ ಸವಾರಿ ಕಲಿಸಲು ಸೈನ್ಯಕ್ಕೆ ಬೇಕಾದ ಕುದುರೆಗಳನ್ನೂ ಸಾಕಾಣಿಕೆ ಮತ್ತು ಯುದ್ಧ ತರಬೇತಿ ನೀಡಲು ಆರಂಭಿಸಿದ ನಂತರ ಇದು ಬ್ರಿಟೀಷರ ವಶವಾಯಿತು. ಬ್ರಿಟೀಷರು ಇದನ್ನು ನಿರ್ವಹಣೆ ಮಾಡಿದ್ದು, ಅವರ ಕಾಲದಲ್ಲೇ ನಿರ್ಮಿಸಿದ ಲಾಯಗಳು ಇಂದಿಗೂ ಬಳಕೆಯಲ್ಲಿದೆ ಬ್ರಿಟೀಷರು ಈ ಫಾರಂನ ಹೊಣೆಗಾರಿಕೆಯನ್ನು ಮೈಸೂರು ಅರಸರಿಗೆ ಹಸ್ತಾಂತರಿಸಿದರು.

ಸ್ವಾತಂತ್ರ್ಯ ನಂತರ ರಾಜ್ಯ ಸರ್ಕಾರದ ಪಶು ಸಂಗೋಪನೆ ಇಲಾಖೆಯ ನಿಯಂತ್ರಣದಲ್ಲಿದ್ದ ಈ ಸ್ಟಡ್ ಫಾರಂ ನಂತರ ಹತ್ತಾರು ವರ್ಷಗಳು ಬೆಂಗಳೂರು ಟರ್ಫ್ ಕ್ಲಬ್‌ಗೆ (ಬಿ.ಟಿ.ಸಿ.) ಕರ್ನಾಟಕ ಸರ್ಕಾರ ಗುತ್ತಿಗೆಗೆ ನೀಡಿತ್ತು. ಆದರೆ ಸರಿಯಾದ ನಿರ್ವಹಣೆ ಇಲ್ಲದೆ, ನಷ್ಟ ತಡೆಯಲಾಗದೆ ಬಿ.ಟಿ.ಸಿ. ತನ್ನ ಅವಧಿ ಮುಗಿಯುವುದರೊಳಗೆ ಗುತ್ತಿಗೆ ಒಪ್ಪಂದ ಕಡಿದುಕೊಂಡಿತು. ನಂತರ ಜಾಗತಿಕ ಟೆಂಡರ್ ಕರೆದಾಗ ಶ್ರೀ ಎಸ್. ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ೧೯೯೨ರ ಅಕ್ಟೋಬರ್‌ನಲ್ಲಿ ವಿಜಯ ಮಲ್ಯ ಒಡೆತನದ ಯುನೈಟೆಡ್ ರೇಸಿಂಗ್ ಅಂಡ್ ಬ್ಲಡ್ ಸ್ಟಾಕ್ ಬ್ರೀಡರ್ (ಯು.ಆರ್.ಬಿ.ಬಿ.) ಕಂಪನಿ 30 ವರ್ಷಗಳ ಅವಧಿಗೆ ಗುತ್ತಿಗೆ ಪಡೆದಿದೆ. ಸುಮಾರು 50 ರಿಂದ ೬೦ ಕೋಟಿ ರೂ. ವೆಚ್ಚ ಮಾಡಿ ಫಾರಂ ಅನ್ನು ಅಭಿವೃದ್ಧಿಪಡಿಸಿದೆ. ಕಂಪನಿ ಪ್ರತಿ ವರ್ಷ ೩೬ ಲಕ್ಷಗಳನ್ನು ಸರ್ಕಾರಕ್ಕೆ ಬಾಡಿಗೆಗಾಗಿ ನೀಡುತ್ತದೆ. ೨೦೨೨ರ ಸೆಪ್ಟಂಬರ್‌ಗೆ ಗುತ್ತಿಗೆ ಅವಧಿ ಮುಗಿಯಲಿದೆ.

ಕುಣಿಗಲ್‌ನಲ್ಲಿ ಅಶ್ವತಳಿ ಸಂವರ್ಧನ ಕೇಂದ್ರದ ಸ್ಥಾಪನೆಯ ಉದ್ದೇಶ

ಟಿಪ್ಪುಸುಲ್ತಾನನು ತನ್ನ ಸೈನ್ಯಕ್ಕೆ ಕುದುರೆಗಳನ್ನು ಹೊರ ದೇಶಗಳಾದ ಅರೇಬಿಯ ಮತ್ತು ಫ್ರಾನ್ಸ್‌ನಿಂದ ಆಮದು ಮಾಡಿಕೊಳ್ಳುತ್ತಿದ್ದ, ಇದರಿಂದ ಸೈನ್ಯದ ವೆಚ್ಚ ದುಬಾರಿಯಾಗಿದ್ದರಿಂದ ತನ್ನ ತಾಯ್ನಾಡಿನಲ್ಲಿಯೇ ಏಕೆ ಕುದುರೆಗಳ ಸಂತತಿಯನ್ನು ಸಂವರ್ಧನೆ ಮಾಡಬಾರದು ಎಂದು ಯೋಚಿಸಿ ಅರೇಬಿಯ ಮತ್ತು ಫ್ರಾನ್ಸ್‌ನಿಂದ ಉತ್ತಮ ತಳಿಯ ಕುದುರೆಗಳನ್ನು ತಂದು ಕುದುರೆ ಸಂವರ್ಧನೆ ಕೇಂದ್ರದ ಸ್ಥಾಪನೆಗೆ ಮುಂದಾಗುತ್ತಾನೆ.

ಕುದುರೆ ಸೂಕ್ಷ್ಮ ಪ್ರಾಣಿ, ಸಂತಾನೋತ್ಪತ್ತಿಗೆ ಅತ್ಯಂತ ಪ್ರಶಾಂತ ವಾತಾವರಣ ಬಯಸುತ್ತದೆ. ಅಂತಹ ವಾತಾವರಣ ಕುಣಿಗಲ್ ಪಟ್ಟಣದಲ್ಲಿರುವುದನ್ನು ಮನಗಂಡು ಸ್ಥಾಪನೆಗೆ ಮುಂದಾಗಿ ಯಶಸ್ವಿಯಾಗುತ್ತಾನೆ. ಅಲ್ಲದೆ ಕುಣಿಗಲ್ ಪ್ರದೇಶವು ಬಯಲು ಸೀಮೆಯಾಗಿದ್ದು, ಸಮಶೀತೋಷ್ಣ ವಾತಾವರಣ ಹೊಂದಿದೆ. ಕನಿಷ್ಟ ೨೦° C ರಿಂದ ೩೦° C ನಷ್ಟು ಉಷ್ಣಾಂಶವಿದ್ದು, ನೀರಿನ ಸೌಕರ್ಯವಿದೆ. ಉತ್ತರಕ್ಕೆ ಕುಣಿಗಲ್ ದೊಡ್ಡ ಕೆರೆ, ದಕ್ಷಿಣಕ್ಕೆ ಕುಣಿಗಲ್ ಚಿಕ್ಕೆರೆ, ಪೂರ್ವಕ್ಕೆ ಶಿವಗಂಗೆ ಬೆಟ್ಟ ಆಗ್ನೆಯಕ್ಕೆ ಬೇಗೂರು ಕೆರೆಗಳನ್ನು ಕಾಣಬಹುದಾಗಿದ್ದು, ಈ ಕೆರೆಗಳ ಮೇಲೆ ಬೀಸುವ ಗಾಳಿಯಿಂದ ಹಿತಕರವಾದ ತಂಪಾದ ವಾತಾವರಣ ನಿರ್ಮಾಣವಾಗುತ್ತದೆ. ಇದರಿಂದ ಕುದುರೆಗಳ ಸಾಕಣಿಕೆಗೆ ಮತ್ತು ಸಂತಾನೋತ್ಪತ್ತಿಗೆ ಪ್ರಶಾಂತವಾದ ವಾತಾವರಣ ಕಲ್ಪಿಸಿದಂತೆ ಆಗಿದೆ. ಅಲ್ಲದೆ ಕುದುರೆಗಳಿಗೆ ಬೇಕಾದ ಆಹಾರವಾದ ಹುಲ್ಲನ್ನು ಬೆಳೆಯಲು ಉತ್ತಮ ಭೂಮಿ ಇರುವುದರಿಂದ ಹುಲ್ಲು ಹುಲುಸಾಗಿ ಬೆಳೆಯುತ್ತದೆ, ನೀರಾವರಿ ಸೌಕರ್ಯ, ರಕ್ಷಣೆ, ಸಾಗಾಣಿಕೆಗೆ ತುಂಬಾ ಅನುಕೂಲವಾಗಿದೆ. ಆದ್ದರಿಂದ ಎಲ್ಲಿಯೂ ಸೀಗದ ವಾತಾವರಣದಿಂದಾಗಿ ಕುಣಿಗಲ್‌ನಲ್ಲಿ ಸ್ಥಾಪನೆಗೊಂಡಿದೆ ಎನ್ನಬಹುದು.

ಪ್ರಸ್ತುತ ಕುಣಿಗಲ್ ಸ್ಟಡ್ ಫಾರಂ ೪೩೦ ಎಕರೆ ವಿಸ್ತೀರ್ಣಹೊಂದಿದ್ದು, ಫಾರಂನಲ್ಲಿ ೨೪೦ ಕುದುರೆಗಳು ಇದ್ದು, ೧೦೦ ಹೆಣ್ಣು ಕುದುರೆ, ೦೪ ಬೀಜದ ಕುದುರೆ, ೫೨ ಎರಡು ವರ್ಷದೊಳಗಿನ ಮರಿಗಳು, ೫೭ ಒಂದು ವರ್ಷದೊಳಗಿನ ಮರಿಗಳಿವೆ, ಈ ವರ್ಷ ಹುಟ್ಟಿದ ೧೬ ಮರಿಗಳಿವೆ. ಫಾರಂನಲ್ಲಿ ನಿರ್ವಹಣೆಗೆ ೨೪೦ ಸ್ಥಳೀಯ ಸಿಬ್ಬಂದಿ ಇದ್ದಾರೆ. ಇದರಲ್ಲಿ ಹುಲ್ಲುಗಾವಲಿಗೆ ೬೦ ಮಂದಿ ಭದ್ರತೆಗೆ ೩೫ ಮಂದಿ, ಕುದುರೆಗಳ ಉಪಚಾರಕ್ಕೆ ೧೨೦ ಮಂದಿ ಖಾಯಂ ನೌಕರರು ಹಾಗೂ ವ್ಯವಸ್ಥಾಪಕರು, ೦೫ ಮಂದಿ ವೈದ್ಯರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಮಾಸಿಕ ೫೦ ಲಕ್ಷ ರೂ. ವರ್ಷಕ್ಕೆ ೦೬ ಕೋಟಿ ರೂ.ಗಳನ್ನು ಸಿಬ್ಬಂದಿ ಮತ್ತು ನಿರ್ವಹಣೆಗೆ ಉದ್ಯಮಿ ವಿಜಯ ಮಲ್ಯ ವೆಚ್ಚ ಮಾಡುತ್ತಿದ್ದಾರೆ. ದೇಶದಲ್ಲಿ ೪೦ ಸ್ಟಡ್ ಫಾರಂಗಳಿವೆ. ಅವುಗಳ ಪೈಕಿ ಕುಣಿಗಲ್ ಫಾರಂಗೆ ೨ನೇ ಸ್ಥಾನವಿದೆ. ಮುಂಬೈ, ದೆಹಲಿ, ಕಲ್ಕತ್ತಾ, ಚೆನ್ನೈ, ಹೈದರಾಬಾದ್ ಮತ್ತಿತರ ಕಡೆ ನಡೆಯುವ ರೇಸ್‌ಗಳಲ್ಲಿ ಈ ಕುಣಿಗಲ್ ಕುದುರೆಗಳದ್ದೇ ಮಿಂಚಿನ ಓಟ.

ಕುಣಿಗಲ್ ಕುದುರೆಗಳ ವಿಶೇಷತೆ

ಕುಣಿಗಲ್ ಕುದುರೆ ಕಿಂಬರ್ಲಿ ಎಂದರೆ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ವಾಸಿಯಾದ ಕುದುರೆಗಳಾಗಿವೆ. ಕಿಂಬರ್ಲಿ ಎಂಬ ಹೆಸರು ಚಿನ್ನದ ಗಣಿಯ ಹೆಸರಾಗಿದ್ದು, ಇದನ್ನೂ ಬ್ರಿಟಿಷರು ಕುಣಿಗಲ್ ಸ್ಟಡ್ ಫಾರಂನಲ್ಲಿದ್ದ ಕುದುರೆಗೆ ನಾಮಕರಣ ಮಾಡಿದ್ದರು. ಇಂಗ್ಲೆಂಡ್, ಮಲೇಶಿಯಾ,

ಸಿಂಗಾಪುರ್, ಐರ್ಲೆಂಡ್, ಅಮೇರಿಕಾ ಸಂಯುಕ್ತ ಸಂಸ್ಥಾನ ಮತ್ತಿತರ ರಾಷ್ಟ್ರಗಳಲ್ಲಿ ಕುದುರೆ ಸವಾರಿ ಮತ್ತು ರೇಸಿಂಗ್‌ನಲ್ಲಿ ಭಾಗವಹಿಸಿ ವಿಶ್ವ ಮನ್ನಣೆಗಳಿಸಿದ ಕುಣಿಗಲ್ ಸ್ಟಡ್ ಫಾರಂನ ಕೋಟಿ-ಕೋಟಿ ಬೆಲೆಬಾಳುವ ಬೀಜದ ಕುದುರೆಗಳ ಸಾಧನೆಯ ಮೂಲಕ ಕುಣಿಗಲ್‌ಗೆ ಕೀರ್ತಿತಂದ ಕಿಂಬರ್ಲಿಯ ತವರು ಕುಣಿಗಲ್ ಆಗಿರುತ್ತದೆ.

ರೇಸ್ ರಾಜ ಕುಣಿಗಲ್ ಕುದುರೆಯಾದರೆ ಕಿಂಬರ್ಲಿ ಖ್ಯಾತಿಯ ಕುಣಿಗಲ್ ಸ್ಟಡ್ ಫಾರಂನ ಕುದುರೆಗೆ ಎಲ್ಲಿಲ್ಲದ ಬೇಡಿಕೆ. ಚೆನ್ನೈ, ಮುಂಬೈ, ಹೈದರಾಬಾದ್, ದೆಹಲಿಯಲ್ಲದೆ, ಮಲೇಶಿಯಾ, ಸಿಂಗಾಪುರ, ಐರ್ಲೆಂಡ್ ಮತ್ತು ಅಮೇರಿಕಾ ರೇಸ್ ಕುದುರೆಗಳಿಗೂ ಕುಣಿಗಲ್ ಫಾರಂನ ಬೀಜದ ಕುದುರೆಯೇ ಬೇಕು. ಇದಕ್ಕೆ ಕಾರಣವೇನು? ಇಲ್ಲಿನ ಕುದುರೆಗಳಿಗೆ ೩ ಎಸ್ ಅಂದರೆ ಧಾರಕ ಶಕ್ತಿ (Stamina), ಅಗಾಧ ಶಕ್ತಿ (Streanth) ಹಾಗೂ ವೇಗ (Speed) ಇದೆ. ಇಲ್ಲಿರುವ ಕುದುರೆಗಳು ಥರೋಬ್ರೆಡ್ ತಳಿಯವು.[೩೧]

ಕುದುರೆಗಳಿಗಾಗಿ ಉತ್ಕೃಷ್ಟವಾದ ಹುಲ್ಲು ಬೆಳೆಸಲಾಗುತ್ತದೆ. ಅವು ರೋಡ್‌ಗ್ರಾಸಸ್, ಗ್ರೀನ್ ಪ್ಯಾನಿಕ್, ಲೂಸನ್, ಶಕ್ತಿ ವೇಗಕ್ಕೆ ಪೂರಕವಾಗಿದ್ದು, ಒಂದು ದಿನಕ್ಕೆ ಒಂದು ಹೆಣ್ಣು ಕುದುರೆಗೆ ೨೦-೨೫ ಕೆ.ಜಿ. ಮರಿ ಕುದುರೆಗೆ ೧೦-೧೫ ಕೆ.ಜಿ. ಹುಲ್ಲು ಬೇಕಾಗುತ್ತದೆ. ಕುದುರೆಗಳ ಆಯಸ್ಸು ೨೫ ವರ್ಷ ಮಾತ್ರ, ಎರಡೂವರೆ ವರ್ಷದ ಕುದುರೆಗಳು ಮಾತ್ರ ರೇಸ್‌ಗೆ ಲಾಯಕ್ಕು, ಇಲ್ಲೇ ಬೆಳೆದ ಕಿಂಬರ್ಲಿ ಕುದುರೆ ೭೦ರ ದಶಕದಲ್ಲಿ ವಿಶ್ವಕಪ್ ಗೆದ್ದಿದೆ. ಫ್ಯಾಂಟಾಯಿಸ್ ಕಿಂಗ್ ಹೆಸರಿನ ಕುದುರೆ ಬೆಂಗಳೂರು ಡರ್ಬಿ, ಫೀಟಿಂಗ್ ಕುದುರೆ ಮೈಸೂರು ಡರ್ಬಿ, ಅರೇಬಿಯನ್ ಪ್ರಿನ್ಸ್ ಮತ್ತು ಹೈದರಾಬಾದ್ ಡರ್ಬಿಯನ್ನು ಮೂಡಿಗೇರಿಸಿಕೊಂಡಿದೆ. ಸಿಂಗಾಪುರ ಮತ್ತು ಮಲೇಶಿಯಾದ ಟಿಂಕೂ ಗೋಲ್ಡ್ ಕಪ್ ಗಳಿಸಿದ್ದು, ವಿಶ್ವದಾಖಲೆ ಮೆರೆದಿದ್ದು ಇದೇ ಸ್ಟಡ್ ಫಾರಂನ ಕುದುರೆ.

ಕುದುರೆ ತಳಿ ಸಂವರ್ಧನೆ

ಕುಣಿಗಲ್ ಸ್ಟೆಡ್ ಫಾರಂನ ಕುದುರೆಗಳೆಲ್ಲವೂ ಥರೋಬ್ರೆಡ್ (Thoroughbred) ತಳಿಯವು. ಈ ತಳಿ ೧೮ನೇ ಶತಮಾನದಷ್ಟು ಹಿಂದಿನದು ಬೈರ್ಲಿಟರ್ಕ್, ಡೇರ್ಲಿ ಅರೇಬಿಯನ್ ಹಾಗೂ ಗಡಾಲ್‌ಫಿನ್ ಅರೇಭಿಯನ್ ಗಂಡು ಕುದುರೆ(ಸ್ಟ್ಯಾಲಿಯನ್)ಗಳನ್ನು ಇಂಗ್ಲೀಷ್ ಹೆಣ್ಣು ಕುದುರೆ (ಮೆರಿಸ್) ಗಳೊಂದಿಗೆ ಮಿಲನ ಮಾಡಿಸಿ, ಥರೋಬ್ರೆಡ್ ತಳಿ ಸಂವರ್ಧನೆ ಮಾಡಲಾಗಿದೆ.

ಈ ಕುದುರೆಗಳಿಗೆ ಓಡುವುದಷ್ಟೇ ಗೊತ್ತು, ಗಂಟೆಗೆ ಸರಾಸರಿ ೬೦ ಕಿ.ಮೀ ವೇಗದಲ್ಲಿ ಓಡುತ್ತವೆ. ಹುಟ್ಟಿದಾಗ ೫೦ ರಿಂದ ೫೫ ಕೆ.ಜಿ. ಯಷ್ಟಿರುವ ಈ ತಳಿಯ ಕುದುರೆ ಮರಿಗಳು ರೇಸ್‌ನಲ್ಲಿ ಭಾಗವಹಿಸುವ ವೇಳೆಗೆ (೨ ½ ವರ್ಷಗಳಲ್ಲಿ) ೫೦೦ ಕೆ. ಜಿ. ತೂಗುತ್ತದೆ. ಪ್ರತಿವರ್ಷ ೬೦ ಮರಿಗಳನ್ನು ಬೆಳೆಸಿ, ೩೦ ಮರಿಗಳನ್ನು ಮಾರಾಟ ಮಾಡುತ್ತಾರೆ. ಉಳಿದ ೨೫-೩೦ ಮರಿಗಳನ್ನು ಮಲ್ಯ (ಯು.ಬಿ. ಗ್ರೂಪ್ಸ್) ಒಡೆತನದ ಕಂಪನಿ ಇಟ್ಟುಕೊಳ್ಳುತ್ತದೆ. ಮಲೇಶಿಯಾ, ಸಿಂಗಾಪುರ, ಶ್ರೀಲಂಕಾಕ್ಕೂ ಕುದುರೆಗಳನ್ನು ರಫ್ತು ಮಾಡಲಾಗುತ್ತದೆ. ೨೦೦೯ರಲ್ಲಿ ಒಂದು ಕುದುರೆ ೨೦ ಲಕ್ಷ ರೂ.ಗೆ ಮಾರಾಟವಾಗಿದೆ. ಒಂದು ಹೆಣ್ಣು ಕುದುರೆ ೧೧ ತಿಂಗಳಲ್ಲಿ ಮರಿಯನ್ನು ಹಾಕುತ್ತದೆ.[೩೨]

ಕುಣಿಗಲ್ ಕುದುರೆಗಳ ಕೀರ್ತಿ ದೊಡ್ಡದು ವಿಶ್ವ ರೇಸಿಂಗ್‌ನಲ್ಲಿ ಛಾಪು ಮೂಡಿಸಿದ್ದ ಕಿಂಬರ್ಲಿ

ಬೀಜದ ಕುದುರೆ ತವರು ಇದೇ ಫಾರಂ, ಇದರ ಮರಿಗಳು ದೇಶದೊಳಗಿನ ರೇಸ್‌ಗಳಲ್ಲಿ ಹೆಸರು ಮಾಡಿದೆ. ಅಮೇರಿಕಾದ ರೇಸ್‌ನಲ್ಲಿ ಗೆದ್ದ ಮೊದಲ ಭಾರತೀಯ ಕುದುರೆ ಎಂಬ ದಾಖಲೆ ನಿರ್ಮಿಸಿರುವ ಆಡ್ಲರ್ ಇದೇ ಫಾರಂನದು ಇದು ಈವರೆಗೆ ಭಾಗವಹಿಸಿರುವ ೯ ರೇಸ್‌ಗಳಲ್ಲೂ ಚಾಂಪಿಯನ್ ಆಗಿದೆ ರೇಸ್ ಪ್ರಿಯರ ಕಣ್ಮಣಿಗಳಾಗಿದ್ದ ಬ್ರೇವ್ ಆಕ್ಟ್, ಬರ್ಡನ್ ಆಫ್ ಪ್ರೊಪ್, ತೇಜಾನೋ ಸ್ಟಾಲಿಯನ್ ಕುದುರೆಗಳು ಇಲ್ಲಿವೆ. ಇತ್ತೀಚೆಗೆ Air Support, Brave Act, Serious Splendor ತಳಿಗಳನ್ನು ಸಂವರ್ಧನೆ ಮಾಡಲಾಗುತ್ತಿದೆ.

ಆಹಾರ ಪದ್ಧತಿ

ಕುದುರೆಗಳು ಬಲಿಷ್ಠವಾಗಿ ಮತ್ತು ಸದೃಢವಾಗಿ ಬೆಳೆಯಬೇಕಾದರೆ ಉತ್ತಮ ಆಹಾರ ನೀಡಬೇಕಾಗುತ್ತದೆ. ಆದ್ದರಿಂದ ಕುದುರೆಗಳಿಗೆ ಬೇಕಾದ ಆಹಾರವನ್ನು (ಫೀಡ್ಸ್) ವನ್ನು ಆಸ್ಟ್ರೇಲಿಯಾ ಮತ್ತು ಐರ್ಲೆಂಡ್‌ನಿಂದ ಆಮದು ಮಾಡಿಕೊಳ್ಳಲಾಗುತ್ತದೆ. ಇದರಿಂದ ಉತ್ತಮ ಗುಣಮಟ್ಟ ಕಾಯ್ದುಕೊಳ್ಳಲು ಅನುಕೂಲವಾಗಿದೆ. ಇದರ ಜೊತೆಗೆ ಸುಮಾರು ೧೩೦ ಎಕರೆ ಪ್ರದೇಶದಲ್ಲಿ ಕುದುರೆಗೆ ಬೇಕಾದ ಹಸಿರು ಹುಲ್ಲನ್ನು ಬೆಳೆಯಲು ೬೦ ಮಂದಿ ನೇಮಿಸಲಾಗಿದೆ. ಬೇಗೂರು ಫಾರಂ, ಹೇರೂರು ಕಾವಲ್ ಮತ್ತು ರಾಮಭಾಣ ಫಾರಂ ಎಂಬುದಾಗಿ ೩ ವಿಭಾಗದಲ್ಲಿ ಕುದುರೆಗೆ ಬೇಕಾದ ಉತ್ಕೃಷ್ಟವಾದ ಹಸಿರು ಹುಲ್ಲನ್ನು ನರ್ಸರಿ ಪ್ಲಾಂಟ್‌ಗಳಲ್ಲಿ ಬೆಳೆಸಲಾಗುತ್ತದೆ. ಈ ಮೂರು ಫಾರಂಗಳಿಂದ ಪ್ರತಿನಿತ್ಯ ೪–೫ ಟನ್ ಹುಲ್ಲನ್ನು ಉತ್ಪಾದಿಸಲಾಗುತ್ತಿದೆ. ೨೩೦ ಕುದುರೆಗಳಿಗೆ ಹುಲ್ಲು ಸಮೃದ್ಧಿಯಾಗುತ್ತದೆ.[೩೩]

ಆರೋಗ್ಯ ರಕ್ಷಣೆ

ಕುದುರೆಯು ಸೂಕ್ಷ್ಮ ಪ್ರಾಣಿಯಾಗಿದ್ದು, ವಿಶೇಷವಾಗಿ ಜಾಗೃತಿಯಿಂದ ಪೋಷಿಸಬೇಕಾಗುತ್ತದೆ. ಸುಮಾರು ೧೭೦ ಮಂದಿಯನ್ನು ಕುದುರೆಗಳ ಉಪಚಾರಕ್ಕೆ ನೇಮಿಸಲಾಗಿದ್ದು, ಇವುಗಳನ್ನು ನಿರ್ವಹಿಸಲು ದುಬಾರಿ ವೆಚ್ಚ ತಗಲುತ್ತದೆ. ಕುದುರೆಗಳ ಆರೋಗ್ಯದ ರಕ್ಷಣೆಯಿಂದ ಪ್ರತ್ಯೇಕವಾದ ಕೊಠಡಿಗಳನ್ನು ನಿರ್ಮಿಸಿದ್ದು, ಅತ್ಯಾಧುನಿಕ ಸೌಲಭ್ಯವುಳ್ಳ ಪಶು ಆಸ್ಪತ್ರೆ ತೆರೆಯಲಾಗಿದ್ದು ೦೫ ಮಂದಿ ವೈದ್ಯರನ್ನು ನೇಮಿಸಲಾಗಿದೆ. ವೈದ್ಯರು ಪ್ರತಿ ಕುದುರೆಗಳ ಆರೋಗ್ಯ ಗಮನಿಸುತ್ತಾರೆ. ಅಪಾಯ ಎಂದರೆ ಅಲ್ಲೇ ಇರುವ ಆಸ್ಪತ್ರೆಗೆ ದಾಖಲಿಸುತ್ತಾರೆ. ಈ ಆಸ್ಪತ್ರೆಯು ಅತ್ಯಾಧುನಿಕವಾಗಿದ್ದು, X-ray, Endo Scopes, Ultra Sound Scanner, operation theater, ಕುದುರೆಯ ಲಾಯ, ನೀರಿನ ಶುದ್ಧಿಕರಣ ಘಟಕ, Lunging rings, ಕುದುರೆಗಳಿಗೆ ಪ್ರತಿನಿತ್ಯ ಅಭ್ಯಾಸ ಮಾಡಲು ನಾಲ್ಕು ಟ್ರಾಕ್‌ಗಳನ್ನು ನಿರ್ಮಾಣ ಮಾಡಲಾಗಿದ್ದು, ಪ್ರತಿಯೊಂದು ಕುದುರೆಗಳನ್ನು ಬೇರೆ ಬೇರೆ ಕೊಠಡಿಯಲ್ಲಿ ಕಟ್ಟಲಾಗಿದ್ದು, ವಿಶೇಷವಾದ ಲಾಯಗಳ ನಿರ್ಮಾಣವಾಗಿದೆ. ಕೊಠಡಿಗೆ ಗಾಳಿ, ಬೆಳಕು, ಆಗೂ ಸ್ವಚ್ಛತೆಗಾಗಿ ಒಂದೊಂದು ಕುದುರೆಗೆ ಒಬ್ಬೊಬ್ಬ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ. ಒಟ್ಟಾರೆ ಕುದುರೆ ಫಾರಂ ಇಡೀ ಭಾರತದಲ್ಲಿಯೇ ಅತ್ಯಾಧುನಿಕ ಆಡಳಿತ ನಿರ್ವಹಣೆಗೆ ಒಳಪಟ್ಟಿದೆ ಎನ್ನಬಹುದು. ಅದೇ ರೀತಿ ಕುದುರೆಗಳನ್ನು ಪತ್ತೇ ಹಚ್ಚಲು (Identification) ಮೈ ಮೇಲೆ ಗುರುತು ಸಂಖ್ಯೆಯನ್ನು ಅಚ್ಚೆ ಹಾಕಿದ್ದಾರೆ. ಈ ರೀತಿ ಗುರುತು ಮಾಡಿರುವುದರಿಂದ, ಅವುಗಳ ಚಲನ–ವಲನವನ್ನು ಸುಲಭವಾಗಿ ಪತ್ತೇ ಹಚ್ಚಬಹುದಾಗಿದ್ದು, ಪ್ರತ್ಯೇಕವಾಗಿ ಎಲ್ಲಾ ಕುದುರೆಗಳ ಬಗ್ಗೆ ವರದಿ ನೀಡುತ್ತಾರೆ.

ಕುಣಿಗಲ್ ಸ್ಟೆಡ್ ಫಾರಂನಲ್ಲಿ ಕಂದು ಬಣ್ಣದ, ಕಪ್ಪು ಬಣ್ಣದ ಹಾಗೂ ಕಂದು ಮತ್ತು ಕಪ್ಪು ಮಿಶ್ರಿತ ಬಣ್ಣದ ಕುದುರೆಗಳನ್ನು ಕಾಣಬಹುದು.[೩೪]

ಕುದುರೆ ಫಾರಂನ ಪರಿಸರ

ಕುದುರೆ ಫಾರಂನ ಪರಿಸರವು ಹೆಚ್ಚು ಹಸಿರಿನಿಂದ ಕೂಡಿದ್ದು, ಪ್ರಸ್ತುತ ೪೩೦ ಎಕರೆ ಪ್ರದೇಶಕ್ಕೂ ೬ ಅಡಿ ಎತ್ತರದ ರಕ್ಷಣಾ ಗೋಡೆ ನಿರ್ಮಿಸಲಾಗಿದ್ದು, ಕುದುರೆಗಳು ಹೊರಗೆ ಹೋಗದಂತೆ ರಕ್ಷಣೆ ಮಾಡಲಾಗಿದೆ. ಒಳಗಿನ ಪರಿಸರದಲ್ಲಿ ಶ್ರೀಗಂಧ, ಹುಣಸೆ, ಬೇವು, ನೀಲಗಿರಿ, ರೋಸ್‌ವುಡ್, ಬೀಟೆ, ತೇಗ, ಹೊನ್ನೆ ಸೇರಿದಂತೆ ೩೦೦ ರಿಂದ ೩೫೦ಕ್ಕೂ ಹೆಚ್ಚು ವೈವಿಧ್ಯಮಯ ಮರಗಳಿವೆ. ಇಲ್ಲಿರುವ ಬಹುತೇಕ ಮರಗಳ ವಯಸ್ಸು ೧೦೦ ರಿಂದ ೧೫೦ ವರ್ಷಗಳಾಗಿದೆ. ನವಿಲು, ಕಿಂಗ್‌ಫಿಷರ್, ಹಮ್ಮಿಂಗ್‌ಬರ್ಡ್, ಗಿಣಿ, ಮೊಲ ಸೇರಿದಂತೆ ಅಸಂಖ್ಯಾ ಪ್ರಾಣಿ–ಪಕ್ಷಿ ಸಂಕುಲವೂ ಉಂಟು Google Earthನಲ್ಲೂ ಇದಕ್ಕೆ ವಿಶೇಷ ಮಾನ್ಯತೆ ಇದೆ. ಅದೇ ರೀತಿ ಫಾರಂನ ಒಳಗೆ ಕುದುರೆಗಳಿಗೆ ಮೇಯುವುದಕ್ಕೆ ಹುಲ್ಲನ್ನು ಬೆಳೆಸಿದ್ದಾರೆ. ಹಾಗೂ ಪ್ರತ್ಯೇಕ ರಕ್ಷಣಾ ಗೋಡೆಯಂತೆ ಕಬ್ಬಿಣದ ಕಂಬಿಗಳ ಬೇಲಿ ನಿರ್ಮಿಸಿ ಮೇವನ್ನು ಮೇಯುವುದಕ್ಕೆ ಬಿಡಲಾಗಿದೆ.

ಕುದುರೆಗಳನ್ನು ಕಟ್ಟಿಹಾಕಲು ಹೆಂಚಿನ ಮನೆಯಿಂದ ನಿರ್ಮಿಸಿದ ಲಾಯಗಳನ್ನು ಕಾಣಬಹುದಾಗಿದೆ. ಕುಡಿಯುವ ನೀರಿಗಾಗಿ ತೊಟ್ಟಿಗಳು ಇವೆ. ತರಬೇತಿಗೆ Tracking lineಗಳನ್ನು ನಿರ್ಮಾಣ ಮಾಡಿದ್ದಾರೆ. ಬ್ರಿಟಿಷ್ ಅಧಿಕಾರಿಗಳ ಕಾಲದ ಅತಿಥಿಗೃಹ ಮತ್ತು ಗಾಜಿನ ಮನೆಯನ್ನು ಕಾಣಬಹುದಾಗಿದ್ದು, ಪ್ರಸ್ತುತ ೫೦೦ ಎಕ್ಕರೆ ವಿಸ್ತೀರ್ಣದಲ್ಲಿ ೪೩೦ ಎಕ್ಕರೆ ಮಾತ್ರ ಇದೆ ಉಳಿದ ೭೦ ಎಕರೆಯನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪರಿವೀಕ್ಷಣ ಮಂದಿರ, ಲೋಕೋಪಯೋಗಿ ಇಲಾಖೆ, ಬಸ್‌ನಿಲ್ದಾಣ, Court complex ಮತ್ತು Kunigal By passಗೆ ಬಿಟ್ಟುಕೊಡಲಾಗಿದೆ.[೩೫]

ಕುಣಿಗಲ್ ಸ್ಟಡ್‌ಫಾರಂ ಐತಿಹಾಸಿಕ ನೆಲೆಯಾಗಿದ್ದು, ಇಂದು ಪ್ರವಾಸಿ ತಾಣವಾಗಿದೆ. ಬೇರೆ ಬೇರೆ ರಾಷ್ಟ್ರಗಳಿಂದ ಪ್ರವಾಸಿಗರು ಇಲ್ಲಿ ಬರುತ್ತಾರೆ. (ಇಂಗ್ಲೆಂಡ್, ಜಪಾನ್, ಅಮೇರಿಕಾ, ಇಟಲಿ, ರಷ್ಯಾ ಇತ್ಯಾದಿ) ಅಲ್ಲದೆ ಹೊರ ಪ್ರದೇಶಗಳಿಂದ ಪ್ರವಾಸಿಗರು ಬರುತ್ತಿದ್ದು, ಕುಣಿಗಲ್ ಪಟ್ಟಣದ ಕೀರ್ತಿಯನ್ನು ಹೆಚ್ಚಿಸಿದೆ. ಕುಣಿಗಲ್ ಫಾರಂನ ಕುದುರೆಗಳು ರೇಸ್‌ನಲ್ಲಿ ಛಾಪು ಮೂಡಿಸಿದ್ದು, ಹಲವಾರು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದೆ. ಹಾಗೂ ಕುಣಿಗಲ್ ಪಟ್ಟಣದ ಹೆಸರನ್ನು ದೇಶ ವಿದೇಶಗಳಲ್ಲೂ ಪ್ರಚಾರ ಪಡಿಸಿವೆ.

ಕುದುರೆ ಫಾರಂನ ರಕ್ಷಣೆ

ಇತ್ತೀಚಿನ ಬೆಳವಣಿಗೆಯ ಪ್ರಕಾರ ಇಲ್ಲಿನ ಕುದುರೆಗಳಿಗೆ ಮತ್ತು ಅಪೂರ್ವ ವನಸಿರಿ ಹಾಗೂ ವಿಶ್ವಖ್ಯಾತಿಗೆ ಕೊಡಲಿ ಬೀಳಲಿದೆ. ಕಾರಣ ಬೆಂಗಳೂರು–ನೆಲಮಂಗಲದಿಂದ ಹಾದು ಬರುವ ರೈಲು ಮಾರ್ಗವು (ಫಾರಂ ಮಧ್ಯದಲ್ಲಿ ೧೦೦ ಮೀ. ಅಗಲ ಮತ್ತು ೧೦೫೦ ಮೀ. ಉದ್ದ ರೈಲು ಹಾದು ಹೋಗಲಿದ್ದು, ೬೦:೪೦ ಅನುಪಾತದಲ್ಲಿ ಇಬ್ಭಾಗವಾಗುತ್ತದೆ) ಸ್ಟಡ್ ಫಾರಂ ಹೃದಯವನ್ನು ಸೀಳಲಿದೆ. ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಅಧಿಕಾರಾವಧಿಯಲ್ಲಿ ಮಂಜೂರಾದ ಬೆಂಗಳೂರು– ಹಾಸನ ರೈಲು ಮಾರ್ಗವು ಇದೀಗ ಕಾರ್ಯರೂಪಕ್ಕೆ ಬಂದಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

ವಿಶೇಷವೆಂದರೆ ಈಗಾಗಲೇ ಬೆಂಗಳೂರಿನಿಂದ ತುಮಕೂರು, ತಿಪಟೂರು, ಅರಸೀಕೆರೆ ಮಾರ್ಗವಾಗಿ ಹಾಸನಕ್ಕೆ ಹೋಗಲು ರೈಲುಮಾರ್ಗವಿದ್ದು, ಇದು ಸುತ್ತು ಬಳಸಿ ಹೋಗುವ ಮಾರ್ಗವಾಗಿದೆ. ನೆಲಮಂಗಲದಿಂದ ಕುಣಿಗಲ್ ಹಾದು ಹಾಸನಕ್ಕೆ ಹೊರಟರೆ ಸಮಯ ಉಳಿತಾಯ, ಕುಣಿಗಲ್–ಶ್ರವಣಬೆಳಗೊಳಕ್ಕೆ ರೈಲು ಸಂಪರ್ಕ ಕಲ್ಪಿಸಿ ಹಾಸನ–ಮಂಗಳೂರಿಗೆ ಲಿಂಕ್ ಕಲ್ಪಿಸಲು ಅಧಿಕಾರಿಗಳು ಯೋಚಿಸಿ ಕೆಲಸ ಪ್ರಾರಂಭಿಸಿದ್ದಾರೆ. ಒಂದು ವೇಳೆ ರೈಲು ಹಾದು ಹೋದರೆ ಕುದುರೆ ಸಂತತಿಗೆ ಕಂಟಕವಾಗುತ್ತದೆ. ಏಕೆಂದರೆ ರೈಲುಗಳು ಮಾಡುವ ಶಬ್ದದಿಂದ ಕುದುರೆ ಸಂತತಿಗೆ ಮಾರಕವಾಗುತ್ತದೆ. ಸ್ಥಳೀಯರು ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದು, ಉಳಿವಿಗಾಗಿ ಹೋರಾಟ ನಡೆಸುತ್ತಿದ್ದಾರೆ. ಅಧಿಕಾರಿಗಳು ಈ ಮಾರ್ಗವಾಗಿ ರೈಲ್ವೆ ಹಳಿ ನಿರ್ಮಿಸಿ ಈ ಫಾರಂ ಅನ್ನು ತಾಲ್ಲೂಕಿನ ರಂಗನಾಥ ಸ್ವಾಮಿ ಗುಡ್ಡದ ಕಾವಲಿನ ೫೫೦ ಎಕರೆ ಪ್ರದೇಶಕ್ಕೆ ಸ್ಥಳಾಂತರಿಸಿ, ಸದ್ಯ ರೈಲ್ವೆ ಹಳಿಗೆ ಹೋಗಿ ಉಳಿಯುವ ಜಾಗದಲ್ಲಿ ಬಡ–ಬಗ್ಗರಿಗೆ ವಸತಿ ಕಲ್ಪಿಸುವ ವಾದವು ಕೇಳಿಬರುತ್ತಿದೆ. ಒಟ್ಟಾರೆ ಐತಿಹಾಸಿಕ ತಾಣವಾಗಿರುವ ಕುಣಿಗಲ್ ಸ್ಟಡ್ ಫಾರಂ ವಿಶ್ವವಿಖ್ಯಾತ ಹೊಂದಿದ್ದು, ಇದರ ರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯ ಎಂದು ಹೇಳಬಹುದು.

ಅಡಿಟಿಪ್ಪಣಿಗಳು

೦೧. ವಾಸುದೇವನ್ ಸಿ. ಎಸ್., ಹಂಪಿ ಪರಿಸರದ ಕೆರೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು.೪

೦೨. ಅದೇ., ಪು.೨೦

೦೩. ಸೂರ್ಯನಾಥ ಕಾಮತ್, ದೇವರಕೊಂಡಾರೆಡ್ಡಿ ಮತ್ತು ಜಗನ್ನಾಥ್ ಎಸ್., ಇತಿಹಾಸ ದರ್ಶನ, ಸಂಪುಟ–೭, ೧೯೯೨, ಪು.೯೩

೦೪. ನಾಗರಾಜ್ ಟಿ.ಪಿ., ತುಮಕೂರು ಜಿಲ್ಲೆಯ ಪ್ರಾಚೀನ ನೀರಾವರಿ ವ್ಯವಸ್ಥೆ, ಗೋಪಾಲ್ ಆರ್. (ಸಂ.)., ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ೨೦೦೯, ಪು. ೩೩೨ ಮತ್ತು ೩೩೩

೦೫. ರಾಜರಾಮ ಹೆಗಡೆ (ಸಂ.)., ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ, ೨೦೦೨, ಪು.೧೦೨

೦೬. ವಾಸುದೇವನ್ ಸಿ. ಎಸ್., ಪೂರ್ವೋಕ್ತ, ಪು.೨೨

೦೭. ಅದೇ., ಪು.೨೩

೦೮. ಅದೇ., ಪು.೪೬

೦೯. ಅದೇ., ಪು.೪೩

೧೦. ಅದೇ., ಪು.೪೦

೧೧. ರೈಸ್. ಬಿ.ಎಲ್ (ಸಂ.)., ತುಮಕೂರು ಜಿಲ್ಲಾ ಶಾಸನ ಸಂಪುಟ ೨೪, ಕುಣಿಗಲ್-೧೮, ಪು.೧೯೭

೧೨. ಕುಣಿಗಲ್ ತಾಲೂಕಿನ ನೀರಾವರಿ ಇಲಾಖೆಯ ಅಂಕಿ-ಅಂಶ ವರದಿ, ೨೦೧೦-೧೧

೧೩. ಅದೇ.

೧೪. ಅದೇ.

೧೫. ಕ್ಷೇತ್ರಕಾರ್ಯದ ವೇಳೆ ಚಂದ್ರಮೌಳೇಶ್ವರ ದೇವಾಲಯ ಅರ್ಚಕರಿಂದ ಮಾಹಿತಿ ಸಂಗ್ರಹಣೆ

೧೬. ವಾಸುದೇವನ್ ಸಿ. ಎಸ್., ಪೂರ್ವೋಕ್ತ, ಪು.೮೮

೧೭. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸ್ಥಳೀಯರಿಂದ ಮಾಹಿತಿ ಸಂಗ್ರಹಣೆ

೧೮. ರಾಜಪ್ರಕಾಶ., ವಾರಣಾಸಿ, ೧೯೧೬, ಪು.೨೦೨

೧೯. ಲಕ್ಷ್ಮಣ್ ಅಳವಂದಿ., ಇತಿಹಾಸ ಕೋಶ-೩, ೧೯೯೮, ಪು.೪೪

೨೦. ಗಿಲ್ಬರ್ಟ್ ಸಿಕ್ವೇರಾ., ಪೂರ್ವ ಪ್ರಾಚೀನ ಇತಿಹಾಸ, ೨೦೦೪, ಪು.೫೨

೨೧. ತಿಪ್ಪೇಸ್ವಾಮಿ ಎ. ಎಸ್., ರಕ್ಷಣಾ ವಾಸ್ತುಶಿಲ್ಪ-ಚಿತ್ರದುರ್ಗ ಜಿಲ್ಲೆ, (ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪, ಪು.೧೧೧

೨೨. ಅದೇ., ಪು.೧೧೧

೨೩. ಅದೇ., ಪು.೧೧೩

೨೪. ಗುರುರಾಜಚಾರ್ ಎಸ್ (ಅನುವಾದ)., ಲೋಥಾಲ್ ಮತ್ತು ಸಿಂಧೂ ನಾಗರೀಕತೆ, ೧೯೯೪, ಪು.೧೩

೨೫. ನಾಗೇಗೌಡ ಎಚ್. ಎಲ್ (ಸಂ.)., ಪ್ರವಾಸಿ ಕಂಡ ಇಂಡಿಯಾ, ಸಂಪುಟ-೧, ೧೯೬೪, ಪು.೩೪

೨೬. ಚನ್ನಬಸಪ್ಪ ಎಸ್. ಪಾಟೀಲ್., ಕರ್ನಾಟಕ ಕೋಟೆಗಳು, ಸಂಪುಟ-೧, ೧೯೯೯, ಪು.೦೬

೨೭. ಶೀಲಾಕಾಂತ ಪತ್ತಾರ., ಬಾದಾಮಿ ಒಂದು ಸಾಂಸ್ಕೃತಿಕ ಅಧ್ಯಯನ, ೨೦೦೦, ಪು.೨೭೪

೨೮. ಹಯವದನರಾವ್ ಸಿ., ಮೈಸೂರು ಗೆಜೆಟಿಯರ್, ಸಂಪುಟ-೫, ಪು.೫೦೦

೨೯. ಜ್ಯೋತಿ ಎಸ್. ಕೆ., 'ತುಮಕೂರು ಜಿಲ್ಲೆಯ ಕೋಟೆ-ಕೊತ್ತಲಗಳು', ನಂಜುಂಡ ಸ್ವಾಮಿ ಬಿ (ಸಂ.)., ಕಲ್ಪಸಿರಿ, ಸ್ಮರಣಸಂಚಿಕೆ, ೨೦೦೨, ಪು.೨೫೦

೩೦. ರೈಸ್ ಬಿ.ಎಲ್., ಪೂರ್ವೋಕ್ತ, ಕು-೧೪, ಕು-೧೩, ಪು.೧೬

೩೧. ವಿಜಯ ಕರ್ನಾಟಕ ದಿನಪತ್ರಿಕಾ ವರದಿ, ೧೯ ಫೆಬ್ರವರಿ, ೨೦೧೦, ಬೆಂಗಳೂರು

೩೨. ಪ್ರಜಾವಾಣಿ ದಿನಪತ್ರಿಕಾ ವರದಿ, ೧೮ ಮಾರ್ಚ್, ೨೦೧೦, ಬೆಂಗಳೂರು

೩೩. ವಿನೋದ್‌ಗೌಡ., ಕುದುರೆ ಫಾರಂನ ಸಿಬ್ಬಂದ್ದಿ, ಅವರಿಂದ ಪಡೆದ ಮಾಹಿತಿ.

೩೪. ಅದೇ.

೩೫. ಕ್ಷೇತ್ರಕಾರ್ಯದಲ್ಲಿ ಕಲೆಹಾಕಿದ ಮಾಹಿತಿ ಸಂಗ್ರಹಣೆ.

❑❑❑

-☸-

ಅಧ್ಯಾಯ : ಐದು

ಸಮಾಜ ಮತ್ತು ಸಂಸ್ಕೃತಿ

೫.೧. ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಸ್ಥಿತಿಗತಿ

೫.೨. ನಂಬಿಕೆ ಮತ್ತು ಆಚರಣೆಗಳು

೫.೩. ಜಾತ್ರೆ – ಉತ್ಸವಗಳು

೫.೪. ಹಬ್ಬ – ಹರಿದಿನಗಳು

೫.೧. ಸಾಮಾಜಿಕ , ಧಾರ್ಮಿಕ ಮತ್ತು ಆರ್ಥಿಕ ವ್ಯವಸ್ಥೆ

ಸಾಮಾಜಿಕ ವ್ಯವಸ್ಥೆ

ಪ್ರಾಣಿಗಳಂತೆ ಕಾಡು-ಮೇಡುಗಳಲ್ಲಿ ಅಲೆಯುತ್ತಿದ್ದ ಮಾನವ ಸಂಘಟಿತ ಬದುಕನ್ನು ಕಲಿತು ಒಂದೆಡೆ ನಿಂತ ನೆಲೆಯೇ ಸಮಾಜ. ಇದು ಮಾನವನ ಆಧ್ಯಾತ್ಮಿಕ ಪ್ರಗತಿ ಮತ್ತು ಸಾಂಸ್ಕೃತಿಕ ವಿಕಾಸಕ್ಕೆ ಬೇಕಾದ ಅಡಿಪಾಯ ಸ್ವಾಸ್ಥ್ಯ ಸಮಾಜಕ್ಕೆ ಪರಸ್ಪರ ಅರಿವು, ಸಹಕಾರ, ಸಹಬಾಳ್ವೆ, ಸಹನೆ ಸಹಿಷ್ಣತೆ, ಕರುಣೆ, ನಿರ್ಮತ್ಸರದಂತಹ ಉದಾತ್ತ ಮಾನವೀಯ ಮೌಲ್ಯಗಳ ನಿರಂತರ ಅರಿವು ಅನುಕೂಲದ ಉಳುವಿಗೆ ನೆರವು, ಇದನ್ನೇ ಹಂಬಲಿಸಿದ ನಮ್ಮ ಪ್ರಾಚೀನ ಋಷಿ ಮುನಿಗಳು ವಿಶ್ವದ ಬಗ್ಗೆ ಕಳಕಳಿಯಿಂದ ಹೇಳಿದ ಮಾತೇ 'ವಸುಧೈಕ ಕುಟುಂಬ' ಎಂದಿದ್ದಾರೆ. ಈ ಮಾತು ಸಮಾಜದಲ್ಲಿ ಜೀವಂತಿಕೆ ಪಡೆಯುವುದು ಸುಲಭವೇನಲ್ಲ ಏಕೆಂದರೆ ಸಮಾಜ ಎಂಬುವುದು ಅಧ್ಯಯನಕ್ಕೂ ಸಿಲುಕದ, ಅಳತೆಗೂ ನಿಲುಕದ, ಅಂತರಾಳದ ಅನನ್ಯ ಜಟಿಲ ಪದರಗಳಿಂದಾಗಿರುವ ಸಂಕೀರ್ಣ ವ್ಯವಸ್ಥೆಯೇ ಸಾಮಾಜಿಕ ವ್ಯವಸ್ಥೆಯಾಗಿದೆ.[೧] ಇಂತಹ ಸಂಕೀರ್ಣದ ಸಾಮಾಜಿಕ ವ್ಯವಸ್ಥೆಯ ಅಧ್ಯಯನವನ್ನು ಕುಣಿಗಲ್ ಪಟ್ಟಣದ ಚೌಕಟ್ಟಿಗೆ ಒಳಪಡಿಸುವ ಮೂಲಕ ತಿಳಿಯಬಹುದಾಗಿದೆ. "ಜನ್ಮತಾಜಾಯತೇ ಶೂದ್ರ: ಸಂಸ್ಕಾರತ ದ್ವಿಜಉಚ್ಚತಾ" ಎಂಬಂತೆ ಮೂಲತಃ ಹುಟ್ಟಿನಲ್ಲಿ ಎಲ್ಲರೂ ಶೂದ್ರರಾಗಿಯೇ ಹುಟ್ಟುತ್ತಾರೆ. ಆನಂತರ ಜೀವನದಲ್ಲಿ ಸಂಸ್ಕಾರ ಹೊಂದಿದವರು ಬ್ರಾಹ್ಮಣತ್ವ (ದ್ವಿಜತ್ವ) ಪಡೆಯುತ್ತಾರೆ. ಇದು ಭಗವದ್ಗೀತೆಯ ಶ್ರೀಕೃಷ್ಣನ ವಾಣಿ. ಅಂದರೆ ಹುಟ್ಟಿನಿಂದ ಎಲ್ಲರೂ ಸರಿಸಮಾನರು ಕ್ರಮೇಣ ತಮ್ಮ ಗುಣ ಹಾಗೂ ವೃತ್ತಿಗನುಗುಣವಾಗಿ ವಿವಿಧ ವರ್ಗಗಳಾಗಿ ರೂಪುಗೊಳ್ಳುತ್ತವೆ.[೨]

ಪ್ರಾಚೀನ ಭಾರತದ ಸಂದರ್ಭದಲ್ಲಿ ವ್ಯಕ್ತಿಗಳನ್ನು ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಅವರು ಕೈಗೊಳ್ಳುತ್ತಿದ್ದ ಉದ್ಯೋಗ ಮತ್ತು ವೃತ್ತಿಗಳ ಹಿನ್ನೆಲೆಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಸಾಹಿತ್ಯಕ ಕುರುಹುಗಳಿಂದ ಮನದಟ್ಟಾಗುತ್ತದೆ.[೩]

ಬ್ರಾಹ್ಮಣರು

ಬ್ರಾಹ್ಮಣರು ವೇದಾಧ್ಯಯನಗಳಿಂದ ನಿಷ್ಕಲ್ಮಷವಾದ ಮನಸ್ಸಿನಿಂದ ಪರಮಾತ್ಮನ ಸೃಷ್ಟಿಯ ರಹಸ್ಯವನ್ನು ಪರಿಚಯ ಮಾಡಿಕೊಡುತ್ತ ತನ್ನ ತಪಸ್ಸಿನ ಜ್ಞಾನವನ್ನು ಲೋಕಹಿತಕ್ಕಾಗಿ ವಿನಿಯೋಗಿಸುತ್ತಾನಾದ್ದರಿಂದ ಅವನನ್ನು ಪರಮಾತ್ಮನ ಮುಖದಿಂದ ಬಂದವನೆನ್ನುವರು. ಕುಣಿಗಲ್ ಪಟ್ಟಣದಲ್ಲಿ ಬ್ರಾಹ್ಮಣರು ಸಮಾಜದಲ್ಲಿ ಇತರ ವರ್ಗಗಳಿಗಿಂತಲೂ ಉನ್ನತವಾದ ಸ್ಥಾನವನ್ನು ಪಡೆದುಕೊಂಡಿದ್ದರು. ಬ್ರಾಹ್ಮಣರು ಸಮಾಜದಲ್ಲಿ ಗೌರವ ಮತ್ತು ಪೂಜನೀಯ ಸ್ಥಾನವನ್ನು ಹೊಂದಿದ್ದರು.

ಇವರು ಷಟ್ಕರ್ಮ ನಿರತರಾಗಿದ್ದು, ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ ಮತ್ತು ಪರಿಗ್ರಹ ಇವೇ ಷಟ್ಕರ್ಮಗಳಾಗಿದ್ದವು. ಇವುಗಳನ್ನು ಕಟ್ಟುನಿಟ್ಟಿನಿಂದ ಆಚರಿಸುತ್ತಿದ್ದರು. ಕುಣಿಗಲ್ ಪಟ್ಟಣದಲ್ಲಿ ಆಳ್ವಿಕೆ ಮಾಡಿದ ರಾಜಮನೆತನಗಳ ಕಾಲದಲ್ಲಿ ರಾಜರು, ಅಧಿಕಾರಿಗಳು, ಶ್ರೀಮಂತರು ಬ್ರಾಹ್ಮಣರಿಗೆ ಭೂಮಿಯನ್ನು ದಾನ ನೀಡಿದರ ಬಗ್ಗೆ ಶಾಸನಗಳು ಉಲ್ಲೇಖಿಸಿವೆ.

ಕ್ರಿ.ಶ. ೧೫೮೯ರಲ್ಲಿ ಯಲಹಂಕನಾಡ ಪ್ರಭುಗಳಾದ ಹಿಮ್ಮಡಿ ಕೆಂಪೇಗೌಡರ ಮಡದಿಯರಾದ ವೆಂಕಟ ಕೃಷ್ಣರಾಜಮ್ಮನವರು ವೆಂಕಟಕೃಷ್ಣಸಾಗರ ಎಂಬ ಅಗ್ರಹಾರ ಸ್ಥಾಪಿಸಿ, ಗಂಗಾಧರ ಭಟ್ಟರಿಗೆ ಕುಣಿಗಲ್ ದೊಡ್ಡ ಕೆರೆ ಕೇಳಗೆ ಹೊಲ ಮತ್ತು ಗದ್ದೆ ಭೂಮಿಯನ್ನು ದಾನವಾಗಿ ನೀಡಿದರೆಂದು ಶಾಸನವು ಉಲ್ಲೇಖಿಸುತ್ತದೆ.[೪]

ಕ್ಷತ್ರಿಯರು

ಕ್ಷತ್ರಿಯರು ಧೈರ್ಯ-ಸ್ಥೈರ್ಯ, ಸಾಹಸ, ತೇಜಸ್ಸು ಗುಣಗಳಿಗೆ ಪ್ರಸಿದ್ಧರಾಗಿದ್ದರು. ಭುಜ ಬಲದ ಪರಾಕ್ರಮಗಳಿಗೆ ಸುಪ್ರಸಿದ್ದರಾದವರು, ತಮ್ಮ ಶಕ್ತಿ ಸಾಮರ್ಥ್ಯಗಳಿಂದ ಸಮಾಜವನ್ನು ರಕ್ಷಿಸಿ ಎಲ್ಲೆಯನ್ನು (ಗಡಿ) ವಿಸ್ತರಿಸಿಕೊಳ್ಳುತ್ತಾ ತಮ್ಮ ಪ್ರಾಣವನ್ನು ಪಣಕಿಟ್ಟು ಹೋರಾಟ ಮಾಡುವುದು, 'ಸತ್ತರೆ ಸ್ವರ್ಗ-ಗೆದ್ದರೆ ರಾಜ್ಯ' ಎಂಬ ವೀರ ಉಕ್ತಿಯಂತೆ ನಡೆಯುವವರೇ ಕ್ಷತ್ರಿಯರಾಗಿದ್ದರು. ಇವರು ಅಂದಿನ ಸಮಾಜದ ಬೆನ್ನೆಲುಬಾಗಿದ್ದರು. ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ರಕ್ಷಿಸುವುದು, ಅಶಕ್ತರಿಗೆ ಆಶ್ರಯ ನೀಡುವುದು ಕಷ್ಟಸಹಿಷ್ಣುತೆಗಳಲ್ಲಿ ಬಾಗಿಯೂಗುವುದು ಕ್ಷತ್ರಿಯರ ಮಾನವೀಯ ಅಂಶಗಳಾಗಿದ್ದವು.

ವೈಶ್ಯರು

ಪ್ರಾಚೀನ ಕಾಲದಲ್ಲಿ ವೈಶ್ಯರು ಸಮಾಜದ ವರ್ಣವ್ಯವಸ್ಥೆಯಲ್ಲಿ ಮೂರನೇ ಸ್ಥಾನವನ್ನು ಪಡೆದಿದ್ದರು. ವೈಶ್ಯರು ವರ್ತಕರು ಅಥವಾ ವ್ಯಾಪಾರಿಗಳಾಗಿದ್ದುಕೊಂಡು ಆರ್ಥಿಕ ವ್ಯವಸ್ಥೆಯನ್ನು ನಿಯಂತ್ರಿಸುತ್ತಿದ್ದರು. ವ್ಯಾಪಾರವೇ ಇವರ ಪ್ರಮುಖ ವೃತ್ತಿಯಾಗಿದ್ದು, ಇವರನ್ನು ಶೆಟ್ಟಿಗರು ಎಂದು ಕರೆಯುತ್ತಾರೆ. ಕುಣಿಗಲ್ ಪಟ್ಟಣವು ಪ್ರಾಚೀನ ಕಾಲದಿಂದಲೂ ವ್ಯಾಪಾರ ಕೇಂದ್ರವಾಗಿದ್ದು, ವ್ಯಾಪಾರಿಗಳ ಬಗ್ಗೆ ಶಾಸನ ಉಲ್ಲೇಖಿಸುತ್ತದೆ. ಚೋಳರ ಆಡಳಿತದ ಅವಧಿಯಲ್ಲಿ ರಾಜೇಂದ್ರ ಚೋಳಪುರ (ಕುಣಿಗಲ್) ವು ವ್ಯಾಪಾರ ಕೇಂದ್ರವಾಗಿತ್ತು ೧ನೇ ರಾಜೇಂದ್ರ ಚೋಳನ ಹೆಸರಿನಲ್ಲಿ ಸ್ಥಾಪನೆಗೊಂಡಿದ್ದ ಶಿವಾಲಯಕ್ಕೆ ಸುತ್ತಲೂ ೪ ದಿಕ್ಕುಗಳ ೧೫೦೦ ನಖರರು (ವ್ಯಾಪಾರಿಗಳು) ದಾನ ನೀಡಿರುವುದಾಗಿ ತಿಳಿಸಿದೆ. ಆದರೆ ಇಷ್ಟೊಂದು ಸಂಖ್ಯೆಯ ನಕರು ದಾನ ಮಾಡಿರುವುದನ್ನು ನೋಡಿದರೆ ಅಂದು ವಿಕ್ರಮ ಚೋಳ ಮಂಡಲದಲ್ಲಿ ವ್ಯಾಪಾರ ವಹಿವಾಟು ಹೆಚ್ಚು ನಡೆಯುತ್ತಿತ್ತೆಂದು ತೋರುತ್ತದೆ.[೫]

ಕ್ರಿ.ಶ. ೧೮೯೮ರಲ್ಲಿ ಕುಣಿಗಲು ಚನ್ನಬಸಪ್ಪನ ಮಗನಾದ ರೇಷ್ಮೆ ದಲ್ಲಾಳಿ ವೀರಸೆಟ್ಟಪ್ಪ ಮತ್ತು ಆತನ ಹೆಂಡ್ತಿ ಗಂಗಮ್ಮನವರು ಕಗ್ಗರೆ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗೆ ದಾನ ನೀಡುತ್ತಾರೆ. ಈ ಶಾಸನ ದೇವಸ್ಥಾನದ ಬಂಡಿಯ ಚಕ್ರದ ಮೇಲಿದೆ.[೬]

ಕ್ರಿ.ಶ. ೧೫೩೪ ರಲ್ಲಿ ಅನಂಥನಾಥ ಚೈತ್ಯಾಲಯಕ್ಕೆ ಗಪಣದ ಮಾಚರಸಯ್ಯಸೆಟ್ಟಿ ಮತ್ತು ಮದಮಣ ಸೆಟ್ಟಿಯ ಮಗ ಪಡುವಣ ಸೆಟ್ಟಿಯು ದಾನ ನೀಡಿರುವುದಾಗಿ ಶಾಸನ ಉಲ್ಲೇಖಿಸುತ್ತದೆ.[೭]

ಪ್ರಸ್ತುತವಾಗಿ ಈಗಲು ಸಹ ಕುಣಿಗಲ್ ಪಟ್ಟಣದಲ್ಲಿ ವೈಶ್ಯರು (ವ್ಯಾಪಾರಿ ವರ್ಗ) ಹೆಚ್ಚಿನ ಸಂಖ್ಯೆಯಲ್ಲಿ ವರ್ತಕರ ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ. ಇವರಲ್ಲಿ ಗಾಣಿಗಶೆಟ್ಟರು, ಬಣಜಿಗ ಶೆಟ್ಟರು, ಬಂಜಾರಶೆಟ್ಟರು, ಕೊಮ್ಮಟಿಗರು ಎಂಬುದಾಗಿ ಸಮಾಜದಲ್ಲಿ ಗುರ್ತಿಸಿಕೊಂಡಿದ್ದಾರೆ.

ಶೂದ್ರರು

ಪ್ರಾಚೀನ ಸಮಾಜದಲ್ಲಿ ಕಂಡು ಬರುವ ನಾಲ್ಕನೇ ವರ್ಗವೇ ಶೂದ್ರರಾಗಿದ್ದರು. ಈ ವರ್ಗವು ಬಹು ದೊಡ್ಡ ಗುಂಪಾಗಿತ್ತು. ವರ್ಣಗಳಲ್ಲೇ ಶ್ರೇಷ್ಠರೆಂದು ಗುರುತಿಸಿಕೊಂಡಿದ್ದ ಬ್ರಾಹ್ಮಣ ವರ್ಗ, ಸಮಾಜದಲ್ಲಿ ಆಳ್ವಿಕೆಯ ಸೂತ್ರವನ್ನೇ ಕೈಯಲ್ಲಿ ಹಿಡಿದ ಕ್ಷತ್ರೀಯರು ಮತ್ತು ವೈಶ್ಯರೆಂದು ಕರೆದುಕೊಳ್ಳುತ್ತಿದ್ದ ವ್ಯಾಪಾರ ವರ್ಗಗಳನ್ನು ಬಿಟ್ಟರೆ ಉಳಿದ ಎಲ್ಲಾ ಜಾತಿಗಳನ್ನು ಶೂದ್ರರು ಎಂದು ಕರೆಯುತ್ತಿದ್ದರು.

ಉದಾ:– ಅಕ್ಕಸಾಲಿಗರು, ಮಡಿವಾಳರು, ಕುಂಬಾರರು, ಕಮ್ಮೂರರು, ಬಡಗಿಗಳು, ಚಮ್ಮಾರರು, ನೇಕಾರರು, ಕೃಷಿಕರು ಮುಂತಾದವರು ಶೂದ್ರ ವರ್ಗಕ್ಕೆ ಸೇರುತ್ತಿದ್ದರು. ಶೂದ್ರರು ಸಾಮಾಜಿಕವಾಗಿ ಕೆಳಸ್ತರದಲ್ಲಿದ್ದು, ಉಳಿದ ವರ್ಣದವರು ಮಾಡದೇ ಬಿಟ್ಟ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಇವರು ಇನ್ನೊಬ್ಬರ ಆಶ್ರಯದಲ್ಲೇ ಇದ್ದುದ್ದರಿಂದ ಸ್ವತಂತ್ರವಾದ ಆಸ್ತಿ ಅಂತಸ್ತು ಇಲ್ಲದೆ ಬಡವರಾಗಿದ್ದರು ಆದರೂ ಕೂಡ ತಮ್ಮ ಕೆಲಸವನ್ನು ಕೀಳೆಂದು ಪರಿಗಣಿಸಿರಲಿಲ್ಲ. ಶೂದ್ರರಿಗೆ ವೇದಗಳನ್ನು ಓದುವುದಕ್ಕಾಗಲೀ, ಯಜ್ಞಯಾಗಗಳಲ್ಲಿ ಪಾಲ್ಗೊಳ್ಳುವುದಕ್ಕಾಗಲೀ ಅನುಮತಿ ಇರಲಿಲ್ಲ.

ಪ್ರಸ್ತುತ ಕುಣಿಗಲ್ ಪಟ್ಟಣದಲ್ಲಿ ಪ್ರಾಚೀನ ವರ್ಣವ್ಯವಸ್ಥೆ ಬದಲಾವಣೆಗೊಂಡಿದ್ದು, ಬ್ರಾಹ್ಮಣರು, ಒಕ್ಕಲಿಗರು ಮತ್ತು ಲಿಂಗಾಯಿತರು ಮೇಲ್ವರ್ಗಕ್ಕೆ ಸೇರಿದ್ದು, ವೃತ್ತಿ ಪರ ಜನಾಂಗಗಳಾದ ಕಮ್ಮಾರರು, ಕುಂಬಾರರು, ಗಾಣಿಗರು, ಅಕ್ಕಸಾಲಿಗರು, ಉಪ್ಪಾರರು, ಅಗಸರು, ನೇಕಾರರು, ಗೊಲ್ಲರು, ಕುರುಬರು ಮತ್ತು ತಿಗಳರು ಸಮಾಜದಲ್ಲಿದ್ದು ಮೇಲ್ವರ್ಗದವರೊಂದಿಗೆ ಹೊಂದಾಣಿಕೆಯಾಗಿದ್ದಾರೆ. ಕೆಳಸ್ತರದಲ್ಲಿ ವಡ್ಡರು, ಮಾದಿಗರು, ಹೊಲೆಯರು ಎಂಬ ಜನಾಂಗಗಳಿದ್ದು ಅಸ್ಪೃಶ್ಯರು ಎಂದು ಪರಿಗಣಿಸಿದ್ದಾರೆ.

ಕುಟುಂಬ ವ್ಯವಸ್ಥೆ

ಯಾವುದೇ ಒಂದು ಪ್ರದೇಶದಲ್ಲಿನ ಸಾಮಾಜಿಕ ಸ್ಥಿತಿಗತಿ ಅಥವಾ ವ್ಯವಸ್ಥೆಯನ್ನು ತಿಳಿಯಬೇಕಾದರೆ, ಅಲ್ಲಿನ ಕುಟುಂಬ ವ್ಯವಸ್ಥೆಯನ್ನು ತಿಳಿಯಬೇಕಾಗುತ್ತದೆ.

ಇಂತಹ ಕುಟುಂಬ ವ್ಯವಸ್ಥೆಯಲ್ಲಿ ತಂದೆ–ತಾಯಿ, ಸಹೋದರರು, ಅವರ ಪತ್ನಿಯರು, ಮಕ್ಕಳು, ಸೊಸೆಯರು, ಮೊಮ್ಮಕ್ಕಳು, ಅಜ್ಜ–ಅಜ್ಜಿ ಹೀಗೆ ಮೂರು ಇಲ್ಲವೆ ನಾಲ್ಕು ತಲೆಮಾರಿನ ಜನರು ಒಂದೇ ಮನೆಯಲ್ಲಿ ವಾಸಿಸುತ್ತಿದ್ದರು. ಪುರುಷ ಪ್ರಧಾನ ಪಾತ್ರವಹಿಸುತ್ತಿದ್ದನು. ಕುಟುಂಬದ ಸರ್ವ ಸದಸ್ಯರನ್ನು ಸಾಕಿ–ಸಲುಗುವುದು ಯಜಮಾನನ ಕರ್ತವ್ಯವಾಗಿತ್ತು. ಕುಟುಂಬದ ಹಿರಿಯರಿಗೆ ಎಲ್ಲರೂ ಗೌರವದಿಂದ

ನಡೆಸುಕೊಳ್ಳುತ್ತಿದ್ದರು. ಹಿರಿಯರು ಕಿರಿಯರಿಗೆ ಅಷ್ಟೇ ಪ್ರೀತಿ-ವಾತ್ಸಲ್ಯ ತೋರಿಸುತ್ತಿದ್ದರು. ಪ್ರಸ್ತುತ ಕುಣಿಗಲ್ ಪಟ್ಟಣದಲ್ಲಿ ಅವಿಭಕ್ತ ಕುಟುಂಬಗಳು ಕಂಡು ಬಂದರೂ ಅವುಗಳು ಹೆಚ್ಚಿನ ಸಂಖ್ಯೆಯಲ್ಲಿಲ್ಲಾ. ಇತ್ತೀಚಿನ ನಗರೀಕರಣದಿಂದ ಅವಿಭಕ್ತ ಕುಟುಂಬಗಳು ಕಣ್ಮರೆಯಾಗುತ್ತಿದ್ದು, ಹೆಚ್ಚಾಗಿ ವಿಭಕ್ತ ಕುಟುಂಬಗಳೇ ಕಂಡು ಬರುತ್ತಿವೆ. ಒಂದು ಮನೆಯಲ್ಲಿ ಗಂಡ-ಹೆಂಡ್ತಿ ಮತ್ತು ಮಕ್ಕಳು ಸೇರಿ ೪-೫ ಜನ ಸದಸ್ಯರಿರುತ್ತಾರೆ. ಆದರೆ ಹಿಂದಿನ ಅವಿಭಕ್ತ ಕುಟುಂಬಗಳಲ್ಲಿ ೧೫-೨೦ ಜನ ಸದಸ್ಯರಿಂದ ತುಂಬಿ ತುಳುಕುತ್ತಿತ್ತು. ಆದರೆ ಇತ್ತೀಚೆಗೆ ಅವಿಭಕ್ತ ಕುಟುಂಬಗಳು ಕಣ್ಮರೆಯಾಗುತ್ತಿವೆ.

ಸ್ತ್ರೀಯರ ಸ್ಥಾನಮಾನ

ಭಾರತೀಯ ಸಮಾಜದ ಸಾಮಾಜಿಕ ವ್ಯವಸ್ಥೆ ವೈವಿಧ್ಯತೆಯಿಂದ ಕೂಡಿದ್ದು, ವೈದಿಕ ಯುಗದಲ್ಲಿ ಸ್ತ್ರೀಯರು ಗೌರವಯುತವಾದ ಪೂಜ್ಯನೀಯ ಸ್ಥಾನವನ್ನು ಪಡೆದಿದ್ದರು. ಎಲ್ಲಿ ಸ್ತ್ರೀಯರನ್ನು ಪೂಜಿಸುತ್ತಾರೋ ಅಲ್ಲಿ ದೇವತೆಗಳು ವಾಸಿಸುತ್ತಾರೆ ಎಂಬ ಭಾವನೆಯಿದೆ. ಪುರುಷರಂತೆಯೇ ವಿದ್ಯಾರ್ಜನೆಗೂ ಅರ್ಹನಾಗಿದ್ದು, ಋಗ್ವೇದದಲ್ಲಿ ಹಲವು ಸ್ತ್ರೀಯರ ಹೆಸರುಗಳು ಕೇಳಿಬರುತ್ತದೆ. ಅಪಲಾ, ಲೋಪಮುದ್ರ, ವಿಶ್ವಾವರಾ, ಘೋಷಾ ಋಷ್ಠಿ, ಗಾರ್ಗಿ ಮತ್ತು ಮೈತ್ರಿಯರು ವಿದ್ಯಾರ್ಜನೆಯಲ್ಲಿ ಪಾರಂಗತರಾಗಿದ್ದರು.

ಪ್ರಾಚೀನ ಕರ್ನಾಟಕದ ಸಾಂಸ್ಕೃತಿಕ ಸಮಾಜದ ಆದರ್ಶ ಸಂಸಾರಗಳಲ್ಲಿ ಒಳ್ಳೆಯ ಹೆಂಡತಿ ಮತ್ತು ಒಳ್ಳೆಯ ಸೊಸೆಗೂ ಉತ್ತಮ ಸ್ಥಾನವಿದ್ದರೂ ಹೆಣ್ಣು ಮಗು ಬಯಸಿ ಪಡೆಯುವ ಮಗುವಾಗಿರಲಿಲ್ಲ. ಏಕೆಂದರೆ ಹೆಣ್ಣು ಹೇಗಿದ್ದರೂ ಮನೆಯನು ಬಿಟ್ಟು ಹೋಗುವವಳು, ಗಂಡು ಮಕ್ಕಳು ಮನೆಯಲ್ಲಿಯೇ ಇದ್ದುಕೊಂಡು ತಮ್ಮ ದುಡಿಮೆಯಿಂದ ತಂದೆ-ತಾಯಿಗಳನ್ನು ಪೋಷಿಸುವರು ಎಂಬ ಬಲವಾದ ನಂಬಿಕೆಯನ್ನು ಇಟ್ಟಿದ್ದಾರೆ. ಆದರೆ ಮಗಳು ವಿಧವೆಯಾದಾಗ ಮಾಡಬೇಕಾದ ಸಹಗಮನ ಮಾಡುವ ಭಯವೂ ತಂದೆ ತಾಯಿಗಳಿಗೆ ಇತ್ತು. ಸ್ತ್ರೀಯರು ಶಿಕ್ಷಣ ಪಡೆಯಲು ಅನರ್ಹರೆಂದು ತಮ್ಮ ಜೀವನದುದ್ದಕ್ಕೂ ಪೋಷ್ಯರಾಗಿಯೇ ಬಾಳಬೇಕೆಂದು ಸ್ಮೃತಿಗಳು ತಿಳಿಸಿಕೊಟ್ಟಿವೆ.

ಗಂಗ ವಂಶದ ಭೂತೂಕನು ರಾಷ್ಟ್ರಕೂಟರ ಅಮೋಘವರ್ಷನ ಮಗಳಾದ ಚಂದ್ರಲಬ್ಬೆಯನ್ನು ವಿವಾಹವಾಗಿದ್ದ, ಕ್ರಿ.ಶ. ೮೮೬ ರಲ್ಲಿ ಚಂದ್ರಲಬ್ಬೆಯು 'ಕುಣಿಗಲ್ ನಾಡಿನ' ಆಡಳಿತ ನೋಡಿಕೊಳ್ಳುತ್ತಿದ್ದಳು.[೮] ಇದರಿಂದ ಗಂಗರ ಕಾಲದ ಆಡಳಿತದಲ್ಲಿ ರಾಣಿಯರು ಪಾಲ್ಗೊಳ್ಳುತ್ತಿದ್ದರೆಂಬುದು ವಿಶೇಷ ಸಂಗತಿ, ರಾಜ ಸೇನಾ ಚಟುವಟಿಕೆಯಲ್ಲಿ ತೊಡಗಿದಾಗ ರಾಣಿಯರು ಆಡಳಿತ ಮೇಲ್ವಿಚಾರಣೆಯೊಂದಿಗೆ ತೆರಿಗೆಯನ್ನು ವಸೂಲಿ ಮಾಡುತ್ತಿದ್ದರು ಹಾಗೂ ರಾಜ-ರಾಣಿಯರ ಜಂಟಿ ಹೆಸರಿನಲ್ಲಿ ದಾನದತ್ತಿಗಳನ್ನು ನೀಡಲಾಗುತ್ತಿತ್ತೆಂದು ಶಾಸನದಿಂದ ತಿಳಿದುಬಂದಿದೆ.

ನಾಡಪ್ರಭು ಕೆಂಪೆಗೌಡರ ಆಡಳಿತದ ಅವಧಿಯಲ್ಲಿ (ಕ್ರಿ.ಶ. ೧೫೪೯) ಆತನ ಹೆಂಡತಿಯರಾದ ವೆಂಕಟ ಕೃಷ್ಣರಾಜಮ್ಮನವರು ಕುಣಿಗಲ್ ಪಟ್ಟಣದಲ್ಲಿ ಅಗ್ರಹಾರವನ್ನು ಮಾನ್ಯ ಮಾಡಿ ಬ್ರಾಹ್ಮಣರಿಗೆ ದಾನ ನೀಡಿರುವುದನ್ನು ಕಾಣಹುದಾಗಿದೆ.[೯]

ಕ್ರಿ.ಶ. ೧೫೪೫ ರಲ್ಲಿ ನಾಡಪ್ರಭು ಕೆಂಪೆಗೌಡರ ಪಟದ ನಾಟಕಶಾಲೆಯ ಶೃಂಗಾರಮ್ಮನವರು ಶೃಂಗಾರಸಾಗರವೆಂಬ ಅಗ್ರಹಾರ, ಕೆರೆ ಹಾಗೂ ಬಸವ ಮಂಟಪವನ್ನು ಕಟ್ಟಿಸಿದ್ದಳು.[೧೦] ಇದರಿಂದ ಸ್ತ್ರೀಯರಿಗೆ ಸಮಾಜದಲ್ಲಿ ಯಾವ ರೀತಿಯ ಗೌರವ ಮತ್ತು ಮಹತ್ವ ನೀಡುತ್ತಿದ್ದರೆಂದು ತಿಳಿದುಬರುತ್ತದೆ.

ಧಾರ್ಮಿಕ ವ್ಯವಸ್ಥೆ

ಯಾವುದೇ ಒಂದು ಪ್ರದೇಶದ ಅಧ್ಯಯನ ಮಾಡಬೇಕಾದರೆ ಅಲ್ಲಿನ ಧಾರ್ಮಿಕ ಸ್ಥಿತಿಗತಿ ಬಗ್ಗೆ ತಿಳಿದುಕೊಳ್ಳಬೇಕಾಗುತ್ತದೆ. ಧಾರ್ಮಿಕ ವ್ಯವಸ್ಥೆಯು ಆ ಪ್ರದೇಶದ ಸಂಸ್ಕೃತಿಯ ಅವಿಭಾಜ್ಯ ಅಂಗವೂ ಮತ್ತು ಜನರ ಜೀವನದ ಸಂಸ್ಕೃತಿಯ ಜೀವಾಳವೂ ಹೌದು. ಒಂದು ಸಮಾಜದಲ್ಲಿ ನೈತಿಕ ಜೀವನ ನಡೆಸುವಲ್ಲಿ ಧರ್ಮದ ಪಾತ್ರ ಬಹಳ ಪ್ರಮುಖವಾಗಿರುತ್ತದೆ. ಸಾಂಸ್ಕೃತಿಕ ಕೇಂದ್ರಗಳಾಗಿದ್ದ ದೇವಾಲಯಗಳು ಮಾನವನ ಧಾರ್ಮಿಕ ಶ್ರದ್ಧೆ, ಭಕ್ತಿ ಹಾಗೂ ಮತಧರ್ಮಗಳ ಕೇಂದ್ರ ಬಿಂದುಗಳಾಗಿ ಬೆಳೆದು ಬಂದಿವೆ. ಮಾನವ ಧರ್ಮವನ್ನು ಬಿಟ್ಟು ಬದುಕಲಾರ ಬೇರೆ ಬೇರೆ ಮತ ಧರ್ಮಗಳು ಸಮಾಜವನ್ನು ಪೋಷಿಸುತ್ತಾ ಮತ್ತು ಸಮಾಜದಿಂದ ಪೋಷಿಸಲ್ಪಡುತ್ತಾ ಬೆಳೆದುಬಂದಿರುವುದನ್ನು ಎಲ್ಲಾ ಪ್ರದೇಶಗಳಲ್ಲಿ ಗಮನಿಸಿದಂತೆ ಕುಣಿಗಲ್ ಪಟ್ಟಣದ ವ್ಯಾಪ್ತಿಯಲ್ಲಿಯೂ ಕಾಣಬಹುದು. ಈ ಪ್ರದೇಶದಲ್ಲಿ ಶೈವಧರ್ಮ, ವೈಷ್ಣವ ಧರ್ಮವಿದ್ದರೂ, ಶೈವ ಧರ್ಮದ ಪ್ರಾಬಲ್ಯತೆ ಹೆಚ್ಚು ಎಂಬುದನ್ನು ಇಲ್ಲಿ ಕಟ್ಟಲಾಗಿರುವ ದೇವಾಲಯಗಳಿಂದಲೇ ತಿಳಿದುಕೊಳ್ಳಬಹುದು. ಅಲ್ಲದೆ ಧಾರ್ಮಿಕ ತಿಕ್ಕಾಟಗಳು, ವಿರಸಗಳು ನಡೆದಿದ್ದವು ಎನ್ನುವುದಕ್ಕೆ ಈ ಪ್ರದೇಶದಲ್ಲಿ ಕಣ್ಮರೆಯಾಗಿರುವ ಜೈನ ಬಸದಿಗಳನ್ನು ಸಾಕ್ಷಿಯಾಗಿಟ್ಟುಕೊಂಡು ಹೇಳಬಹುದು. ಈ ಪ್ರದೇಶದಲ್ಲಿ ಮುಖ್ಯವಾಗಿ ಶೈವ ಮತ್ತು ವೈಷ್ಣವ ಧರ್ಮದ ಪ್ರಾಬಲ್ಯಕಾಣಬಹುದಾಗಿದೆ.

ಶೈವ ಧರ್ಮ

ಶೈವ ಧರ್ಮ ಎಂದರೆ ಶಿವನ ಆರಾದನೆ ಮಾಡುವವರಾಗಿದ್ದು ಭರತ ಖಂಡದಲ್ಲಿ ಶೈವಧರ್ಮವು ಅತ್ಯಂತ ಪ್ರಾಚೀನವಾದ ಧರ್ಮಗಳಲ್ಲೊಂದು. ಕರ್ನಾಟಕದಲ್ಲಿಯೂ ಪ್ರಾಚೀನ ಕಾಲದಿಂದಲೂ ಶೈವಧರ್ಮ ಆಚರಣೆಯಲ್ಲಿತ್ತು. ಶಿವನನ್ನು ಸ್ಥಿರವಾಗಿ ಪೂಜಿಸುವುದು ಮುಖ್ಯವಾಗಿ ಕಂಡು ಬರುತ್ತಿದ್ದು, ಪ್ರಸ್ತುತ ಅಧ್ಯಯನವಾದ ಕುಣಿಗಲ್ ಪಟ್ಟಣದಲ್ಲಿ ಶೈವಧರ್ಮ ತನ್ನ ಅಸ್ಥಿತ್ವವನ್ನು ಉಳಿಸಿಕೊಂಡು ಬಂದಿದೆ. ಇದಕ್ಕೆ ಈ ಪ್ರದೇಶದಲ್ಲಿ ಕಂಡು ಬರುವ ಹೆಚ್ಚು ಶೈವ ಸಂಬಂಧಿ ದೇವಾಲಯಗಳೇ ಸಾಕ್ಷಿಯಾಗಿದೆ.

ಕುಣಿಗಲ್ ಪಟ್ಟಣದಲ್ಲಿ ಶಿವನ ಆರಾಧಕರು ಶಿವನನ್ನು ನಾನಾ ಹೆಸರುಗಳಿಂದ ಪೂಜಿಸುತ್ತಿರುವುದನ್ನು ಕಾಣಬಹುದು. ಅವುಗಳಲ್ಲಿ ಪಂಚಲಿಂಗೇಶ್ವರ, ಪದ್ಮೇಶ್ವರ, ಶಿವರಾಮೇಶ್ವರ, ಸಿದ್ದಲಿಂಗೇಶ್ವರ, ಚಡೀಕೇಶ್ವರ, ಚಂದ್ರಮೌಳೇಶ್ವರ, ಬಸವೇಶ್ವರ, ರೇವಣಸಿದ್ದೇಶ್ವರ, ಕಲ್ಲೇಶ್ವರ, ವೀರಭದ್ರೇಶ್ವರ ಮುಂತಾದ ಹೆಸರುಗಳಿಂದ ಕೂಡಿದ ಶೈವ ದೇವಾಲಯಗಳನು ಕಾಣಬಹುದು. ಶೈವಧರ್ಮದ ಮುಖ್ಯ ಕೇಂದ್ರ ಶಿವಾಲಯ ಇಂತಹ ಗುಡಿಗಳ ನಿರ್ಮಾಣಕ್ಕೆ ಭಕ್ತರು ದಾನಗಳನ್ನು ನೀಡಿರುವುದು ಕುಣಿಗಲ್ ಶಾಸನದಲ್ಲಿ ಉಲ್ಲೇಖಿಸಿದೆ. ಕ್ರಿ.ಶ.೧೦೧೮–೧೦೫೪ ರವರೆಗೆ ಆಳಿದ ರಾಜಾಧಿರಾಜ ದೇವ ಚೋಳನು ಕ್ರಿ.ಶ. ೧೦೪೪ರಲ್ಲಿ ಕುಣಿಗಲ್‌ನ್ನು ರಾಜೇಂದ್ರ ಚೋಳಪುರವೆಂದು ಪುನರ್ ನಾಮಕರಣ ಮಾಡಿ ಅಲ್ಲಿನ ಶಿವದೇವಾಲಯ ನಿರ್ಮಿಸಿ ಅಂಗ,ರಂಗ, ಬೋಗಕ್ಕೆ ಕುಣಿಗಲ್ ಕೆರೆಯ ಕೆಳಗಿನ ೩೦ ಕೊಳಗದ ಗದ್ದೆ, ಭೂಮಿ ದಾನ ನೀಡುತ್ತಾನೆ.

ಚೋಳರು ನೀಡಿದ ದಾನ, ದತ್ತಿ, ಮತ್ತು ಪ್ರೋತ್ಸಾಹದಿಂದ ಶೈವ ಧರ್ಮದ ಬೆಳವಣಿಗೆಯಲ್ಲಿ ಮುಖ್ಯಪಾತ್ರವಹಿಸಿದ್ದಾರೆ ಎನ್ನಬಹುದು.

ಕ್ರಿ.ಶ.೧೧೩೪ರಲ್ಲಿ ಹೊಯ್ಸಳ ವಿಷ್ಣುವರ್ಧನನು ಕುಣಿಗಲು ನಾಡಿನ ಕಾವಗೌಡನಹಳ್ಳಿಯ ರಾಮೇಶ್ವರ ದೇವರಿಗೆ ಕಾಳಯುಕ್ತ ಸಂವತ್ಸರದ ಆಶ್ವಯುಜ ಶುದ್ಧ ಪಂಚಮಿ ಸೋಮವಾರದಂದು ದೊಡ್ಡ ಕೆರೆ

ಕೆಳಗಿನ ಗದ್ದೆಯನ್ನು ದಾನವಾಗಿ ಬಿಟ್ಟುಕೊಡುತ್ತಾನೆ.[೧೧] ಕ್ರಿ.ಶ. ೧೫೧೫ರಲ್ಲಿ ವಿಜಯನಗರದ ಕೃಷ್ಣದೇವರಾಯನ ಭುಜಬಲ ಪ್ರತಾಪನೆನಿಸಿದ ಮಾದೆನಾಯಕರು ಶ್ರೀಪುರದ ಸೋಮೇಶ್ವರ ದೇವರಿಗೆ ಅಂಗರಂಗ ವೈಭವಕ್ಕಾಗಿ ಎಲೆಯೂರ ಸ್ಥಳದ ಗ್ರಾಮವನ್ನು ದಾನವಾಗಿ ಬಿಡಲಾಯಿತು.[೧೨] ಈ ಮೇಲ್ಕಂಡ ಅಂಶಗಳನ್ನು ಗಮಿನಿಸಿದರೆ ಕುಣಿಗಲ್ ಪಟ್ಟಣದಲ್ಲಿ ಶೈವಧರ್ಮದ ಬೆಳವಣಿಗೆ ರಾಜಮನೆತನದವರು ಆಗೂ ಜನ ಸಾಮಾನ್ಯರು ಪ್ರೋತ್ಸಾಹ ನೀಡಿದ್ದಾರೆಂದು ತಿಳಿದುಬರುತ್ತದೆ.

ವೈಷ್ಣವ ಧರ್ಮ

ಶೈವರು ಶಿವನನ್ನು ಆರಾಧಿಸಿದರೆ ವೈಷ್ಣವರು ವಿಷ್ಣುವನ್ನು ಆರಾಧಿಸುತ್ತಾರೆ. ಜಗತ್ತಿನ ರಕ್ಷಣೆಯು ಇವನ ಕಾರ್ಯವಾಗಿದೆ. ವೈದಿಕ ಧರ್ಮವು ವರ್ಣಾಶ್ರಮ ಧರ್ಮವನ್ನು ಯಜ್ಞಯಾಗಾದಿ ಪ್ರಕ್ರಿಯೆಗಳನ್ನೂ ಪುರಸ್ಕರಿಸಿದ್ದಷ್ಟೇ ಅದರ ಜೊತೆಗೆ ಬೆಳೆದು ಬಂದ ಇನ್ನೊಂದು ಧರ್ಮ ಭಾಗವತ, ಋಗ್ವೇದ ಕಾಲದಲ್ಲಿ ಅಪ್ರದಾನ ದೇವತೆಯಾಗಿದ್ದ ವಿಷ್ಣುವು ಭಾಗವತ ಕಾಲದಲ್ಲಿ ಭಗವಂತನ ಸ್ಥಾನಕ್ಕೇರಿದ ಮೇಲೆ ಭಾಗವತ ಧರ್ಮಕ್ಕೆ ವೈಷ್ಣವ ಧರ್ಮ ಎಂಬ ಹೆಸರು ಪ್ರಾಪ್ತವಾಯಿತು.

ರಾಮಾನುಜಾಚಾರ್ಯರು ಕ್ರಿ.ಶ. ೧೨ನೇ ಶತಮಾನದಲ್ಲಿ ತಮಿಳುನಾಡಿನಲ್ಲಿ ಚೋಳರ ಉಪಟಳದಿಂದ ಬೇಸತ್ತು ಕರ್ನಾಟಕಕ್ಕೆ ಬಂದ ನಂತರ ಇಲ್ಲಿ ಹೊಯ್ಸಳರ ವಿಷ್ಣುವರ್ಧನ ಆಶ್ರಯ ಪಡೆದು ಶ್ರೀ ವೈಷ್ಣವ ಧರ್ಮವನ್ನು ಪ್ರಚಾರ ಮಾಡಿದರು. ರಾಮಾನುಚಾರ್ಯರು ತೊಣ್ಣುರು, ಮೇಲುಕೋಟೆ ಬೇಲೂರುಗಳಲ್ಲಿ ತಂಗಿದ್ದು, ಧರ್ಮ ಪ್ರಚಾರ ಕೈಗೊಂಡರು. ಪ್ರಸ್ತುತ ಕುಣಿಗಲ್ ಪಟ್ಟಣವು ವೈಷ್ಣವ ಧರ್ಮದ ಆರಾಧನ ಕೇಂದ್ರವಾಗಿದ್ದು, ಹಲವಾರು ವೈಷ್ಣವ ದೇವಾಲಯಗಳು ನಿರ್ಮಾಣಗೊಂಡಿರುವುದನ್ನು ಕಾಣಬಹುದಾಗಿದೆ.

ನರಸಿಂಹಸ್ವಾಮಿ ದೇವಾಲಯ, ತುಡಿಕೆ ವೆಂಕಟರಮಣ ದೇವಾಲಯ, ಚನ್ನಿಗರಾಯ ದೇವಾಲಯ ಮತ್ತು ಉರಿತಿರುಮಲ ದೇವಾಲಯಗಳು ನಿರ್ಮಾಣಗೊಂಡಿದ್ದು, ವಿಷ್ಣುವಿನ ಆರಾಧನೆಗೆ ಅವಕಾಶ ಕಲ್ಪಿಸಲಾಗಿತ್ತೆಂದು ತಿಳಿದುಬರುತ್ತದೆ.

ಕ್ರಿ.ಶ. ೧೧೫೭ರ ಶಾಸನದಲಿ ದ್ವಾರಸಮುದ್ರದಲ್ಲಿ ಆಡಳಿತ ನಡೆಸುತ್ತಿದ್ದ ಹೊಯ್ಸಳ ವಿಷ್ಣುವರ್ದನನು ಗಂಡು ಮಗುವಾದ ಸಂತೋಷಕ್ಕೆ ಶ್ರೀಧರಪುರದ ಮಹಾಜನರಿಗೆ ಕೊತ್ತಂಗೆರೆಯನ್ನು ಅಗ್ರಹಾರವನ್ನಾಗಿ ಪರಿವರ್ತಿಸಿ, ಕೇಶವ ದೇವರ ಜೀರ್ಣೋದ್ಧಾರ ಮಾಡಿಸಲು, ಹಣ, ತೋಟ, ಗದ್ದೆ, ಪಶು ಮುಂತಾದ ದಾನಗಳನ್ನು ನೀಡಿದನೆಂದು ಉಲ್ಲೇಖಿಸಿದೆ. ಅದೇ ಶಾಸನದಲ್ಲಿ ಮುಂದುವರೆದು ವಿಷ್ಣುವರ್ದನನು ಬೇರೆ ಬೇರೆ ಕಾಲಗಳಲ್ಲಿ ರಾಮ,ಕೃಷ್ಣ, ಬುದ್ದ ಮತ್ತು ಮತ್ಸ್ಯನಾಗಿ ಅವತರಿಸಿ ಅನ್ಯಾಯವನ್ನು ಅಳಿಸಿ ಹಾಕಲು ಕಲಿಯುಗದಲ್ಲಿ ಹುಟ್ಟಿದನೆಂದು ಬಣ್ಣಿಸುತ್ತದೆ[೧೩] (ಕಲಿಯುಗದೊಳ್ ಅನ್ಯಾಯವಂ ಮಾಣಿಸಲು ಯಾದವಸಿಂಹಂ ವಿಷ್ಣು ಭೂಪಂ ಜನಿಸಿಪಲವು ಧರ್ಮ್ಮಂಗ).

ಕ್ರಿ.ಶ. ೧೬೭೧ರಲ್ಲಿ ಮೈಸೂರಿನ ಒಡೆಯರಾದ ದೇವರಾಜ ಒಡೆಯರು ತಮಗೆ ಸ್ವಯಾರ್ಜಿತವಾಗಿ ಬಂದ ಕುಣಿಗಲ್ ಹೋಬಳಿ ಕೊತ್ತಗೆರೆ ಸ್ಥಳಕ್ಕೆ ಸಲ್ಲುವ ಜಾಣಗರೆ ಗ್ರಾಮವನ್ನು ಶ್ರೀರಂಗಪಟ್ಟಣದ ರಂಗನಾಥಸ್ವಾಮಿಗೆ ದಾನ ನೀಡಿರುವುದು ಈ ಮೇಲಿನ ಶಾಸನದಲ್ಲಿ ಉಲ್ಲೇಖಿವಾಗಿದೆ.[೧೪]

ಒಟ್ಟಾರೆ ಹೊಯ್ಸಳ ವಿಷ್ಣವರ್ದನನ ಕಾಲದಲ್ಲಿ ರಾಮಾನುಜಾಚಾರ್ಯರು ಜನಸಾಮಾನ್ಯರಿಗೂ ದೀಕ್ಷೆ ನೀಡಿ ದೇವಾಲಯಕ್ಕೆ ಪ್ರವೇಶ ನೀಡಿದ್ದಾರಿಂದ ವೈಷ್ಣವ ಪಂಥವು ಕರ್ನಾಟಕದಲ್ಲಿ ಬೆಳೆಯಲು

ಮೂಲ ಕಾರಣವಾಯಿತು. ಪ್ರಸ್ತುತ ಕುಣಿಗಲ್ ಪಟ್ಟಣದಲ್ಲಿ ನಾಲ್ಕಾರು ವೈಷ್ಣವ ದೇವಾಲಯಗಳನ್ನು ಕಾಣಬಹುದಾಗಿದ್ದು, ದೇವಾಲಯದಲ್ಲಿ (ಆಳ್ವಾರರ ಮೂರ್ತಿಗಳನ್ನು) ಕಾಣಬಹುದು. ಇದರಿಂದ ಕುಣಿಗಲ್ ಪಟ್ಟಣದಲ್ಲಿಯು ರಾಮಾನುಜಾಚಾರ್ಯರ ಪ್ರಭಾವದಿಂದ ಶ್ರೀವೈಷ್ಣವ ಪಂಥದ ಬೆಳವಣಿಗೆಗೆ ಕಾರಣರಾಗಿದ್ದಾರೆ ಎನ್ನಬಹುದು.

ಜೈನ ಧರ್ಮ

ಪ್ರಾಚೀನ ಕಾಲದಲ್ಲಿ ಜೈನಧರ್ಮ ಈ ಪ್ರದೇಶದಲ್ಲಿ ನೆಲೆಯೂರಿರುವುದು ಕುಣಿಗಲ್ ಪಟ್ಟಣದಲ್ಲಿ ದೊರೆತಿರುವ ಶಾಸನಗಳು ಸ್ಪಷ್ಟಪಡಿಸುತ್ತವೆ. ಪ್ರಾಚೀನ ಕರ್ನಾಟಕದಲ್ಲಿ ಜೈನ ಧರ್ಮವು ಒಂದು ಪ್ರಬಲವಾದ ಧರ್ಮವಾಗಿತ್ತು. ದಕ್ಷಿಣ ಭಾರತದ ಜೈನ ಧರ್ಮ ಕರ್ನಾಟಕದ ಇತಿಹಾಸದೊಂದಿಗೆ ಬೆಳೆಯುತ್ತಾ, ತನ್ನದೇ ಆದ ಇತಿಹಾಸವನ್ನು ನಿರ್ಮಿಸಿದೆ. ಸಾಹಿತ್ಯ ಗ್ರಂಥಗಳು ಮತ್ತು ಪುರಾತತ್ವ ಆಕರಗಳು ಜೈನಧರ್ಮವು ಸಾಂಸ್ಕೃತಿಕ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಗಳನ್ನು ತಿಳಿಸುತ್ತದೆ. ಕರ್ನಾಟಕದಲ್ಲಿ ಜೈನಧರ್ಮವು ಉತ್ತರ ಭಾರತದಿಂದ ಬಂದ ಜೈನ ಗುರು ಭದ್ರಬಾಹು ಆಗೂ ಚಂದ್ರಗುಪ್ತ ಮಾರ್ಯನಿಂದ ಆರಂಭವಾಗುತ್ತದೆ. ಜೈನ ಧರ್ಮಕ್ಕೆ ಗಂಗರು ಮತ್ತು ಹೊಯ್ಸಳರು ಹೆಚ್ಚಿನ ಮಹತ್ವ ನೀಡುತ್ತಾರೆ. ಕಾರಣ ಜೈನಧರ್ಮದಲ್ಲಿ ಉತ್ತಮ ಗುಣಗಳಾದ ಶಾಂತಿ, ಅಹಿಂಸೆ ಮತ್ತು ಪ್ರಾಣಿ ಹಿಂಸೆಗೆ ವಿರೋಧವಾಗಿರುವುದು ಬೆಳವಣಿಗೆಗೆ ಕಾರಣವಾಗಿದೆ. ಕರ್ನಾಟಕದಲ್ಲಿ ಪ್ರಮುಖ ಜೈನಧರ್ಮದ ಕೇಂದ್ರಗಳೆಂದರೆ ಶ್ರವಣಬೆಳಗೊಳ, ಕಂಬದಹಳ್ಳಿ, ಕಾರ್ಕಳ, ಮೂಡಿಬಿದಿರೆ, ತುಮಕೂರು, ಹಾಸನದಲ್ಲಿ ಕಾಣಬಹುದಾಗಿದೆ. ಪ್ರಸ್ತುತ ಕುಣಿಗಲ್ ಪಟ್ಟಣದಲ್ಲಿಯೂ ಜೈನರ ಸ್ಮಾರಕ ಕಾಣಬಹುದಾಗಿದ್ದು, ಜೈನರ ಸಂತತಿ ಇದ್ದು, ಕುಣಿಗಲ್ ತಾಲೂಕಿನಲ್ಲಿ ಕೊತ್ತಗೆರೆ ಮತ್ತು ಬಿಸ್ಕೂರಿನಲ್ಲಿ ಜೈನ ಸ್ಮಾರಕಗಳಿವೆ. ಇತ್ತೀಚೆಗೆ ಪಟ್ಟಣದಲ್ಲಿ ದ್ವಿಗಂಬರ ಜೈನ ಬಸದಿ ಸ್ಥಾಪನೆಯಾಗಿದೆ. ಜೈನರು ಶಾಖಾಹಾರಿಗಳಾಗಿದ್ದು, ೧೦೦-೧೫೦ ಜನರಿದ್ದಾರೆ. ಪ್ರಮುಖ ಉದ್ಯೋಗ ವ್ಯಾಪಾರ (Jewelry Shop) ವಾಗಿದ್ದು, ಸಮಾಜದ ಎಲ್ಲರೊಂದಿಗೂ ಹೊಂದಿಕೊಂಡು ಜೀವನ ನಡೆಸುತ್ತಿದ್ದಾರೆ.

೧. ಕೊತ್ತಗೆರೆ ಗ್ರಾಮದ ವಾಯುವ್ಯ ದಿಕ್ಕಿನಲ್ಲಿ ಜೈನ ಬಸದಿಗಳ ಶಾಸನ ಉಲ್ಲೇಖಿಸಿರುವ ಶಾಂತಿನಾಥನ ಪಾಳು ಬಸದಿ ಉಲ್ಲೇಖವಿದೆ..

೨. ಕುಣಿಗಲ್ ಪಟ್ಟಣದ ನೀಲತ್ತಹಳ್ಳಿಯಲ್ಲಿರುವ ಶಾಸನದಲ್ಲಿ ಅನಂಥನಾಥ ಚೈತ್ಯಾಲಯಕ್ಕೆ ಮಾಚರಸಂಖ್ಯಾಶೆಟ್ಟಿ ಪಡುವಣಶೆಟ್ಟಿ ಮತ್ತು ಮದವಣಶೆಟ್ಟಿ ದಾನ ನೀಡಿರುವುದು ಉಲ್ಲೇಖವಿದೆ.[೧೫]

ಮುನಿರಾಜಪ್ಪನವರ ಅನಿಸಿಕೆ ಪ್ರಕಾರ ಕಲ್ಯ, ಸಾತನೂರು, ಶೆಟ್ಟಿಕೆರೆ, ಕೊತ್ತಗೆರೆ, ಬಿಸ್ಕೂರುನಲ್ಲಿ ಜೈನರ ಬಸದಿಗಳಿದ್ದು, ರಾಮಾನುಜಾಚಾರ್ಯರ ಪ್ರಭಾವದಿಂದ ಕುಣಿಗಲ್ ಮತ್ತು ಮಾಗಡಿ ಪ್ರದೇಶಗಳಲ್ಲಿ ಜೈನ ಧರ್ಮ ಅವನತಿ ಹೊಂದಿ ಆ ಸ್ಥಾನವನ್ನು ಶ್ರೀವೈಷ್ಣವ ಧರ್ಮ ಬೆಳವಣಿಗೆ ಕಂಡಿತೆಂದು ಅಭಿಪ್ರಾಯಪಟ್ಟಿದ್ದಾರೆ.[೧೬]

ವೀರಶೈವ ಧರ್ಮ

ಶೈವಧರ್ಮದ ಪರಿಷ್ಕರಣೆಗಾಗಿ ಶ್ರಮಿಸಿದ ಶಂಕರಾಚಾರ್ಯರು, ಕುಣಿಗಲ್ ತಾಲ್ಲೂಕಿನ ಮೋದೂರು ಕಿತ್ತಾಮಂಗಲ, ಹುತ್ರಿದುರ್ಗ, ಮಾನಾವತಿ-ಪಟ್ನ ಮತ್ತು ಹಾಗಲು ಕೋಟೆಗಳಲ್ಲಿ ಪಂಚಲಿಂಗ ಪ್ರತಿಷ್ಠಾಪಿಸಿದ್ದಾರೆ. ಬೌದ್ಧಸಿದ್ಧರು ನಾಥಪಂಥದ ಮೂಲಕ ಶೈವೀಕರಣಗೊಂಡು ಕಾಳಾಮುಖರಾಗಿ

ನಂತರ ವೀರಶೈವರಾಗಿರುವುದಕ್ಕೆ ಕಲ್ಯಾ, ಸಂಕೀಘಟ್ಟದ ಕಲ್ಲೇಶ್ವರ ಗುಡಿಗಳು, ಕಲ್ಲಿನಾಥ ದೇವರು, ಶಿವಗಂಗಿನಾಥ ಮಲ್ಲಿನಾಥ ಮುಂತಾದ ಶಾಸನ ಉಲ್ಲೇಖಗಳಿವೆ.[೧೭]

ಮೂರು ಸಾವಿರ ಮಂದಿ ವಿರಕ್ತ ಮಹೇಶ್ವರರಿಗೆ ಜಗದ್ಗುರುಗಳಾಗಿದ್ದ ತೋಂಟದ ಸಿದ್ದಲಿಂಗೇಶ್ವರರು ಕುಣಿಗಲ್ ಸಮೀಪದ ಕಗ್ಗೆರೆಯಲ್ಲಿ ಕೈಗೊಂಡ ಕಠೋರ ಧಾನ್ಯದಿಂದ ಪವಾಡಗಳನ್ನು ಮೆರೆದು ಲಿಂಗೈಕ್ಯರಾಗಿರುವ ಯಡಿಯೂರು ಪ್ರಸಿದ್ಧ ವೀರಶೈವನೆಲೆ, ಸಿದ್ದೇದೇವರು, ನಂಜೇದೇವರು, ಚೋಳಬಸವರಾಜದೇವರು, ಶೀಲವಂತದೇವರು ಗುಮ್ಮಳಾಪುರದ ಸಿದ್ದಲಿಂಗದೇವರು ಇವರ ಶಿಷ್ಯರಾಗಿದ್ದಾರೆ.[೧೮] ಹೀಗೆ ವೀರಶೈವ ಧರ್ಮವು ಕುಣಿಗಲ್ ಪಟ್ಟಣದ ಸುತ್ತಾ ಮುತ್ತಾ ಪ್ರಸಿದ್ಧಿ ಪಡೆದುಕೊಂಡಿದ್ದು, ಅನೇಕ ಗದ್ದಿಗೆಗಳು, ಮಠಗಳನ್ನು ಸ್ಥಾಪಿಸುವುದರ ಮೂಲಕ ವೀರಶೈವ ಧರ್ಮದ ಪ್ರಚಾರ ಹೆಚ್ಚಾಗುತ್ತಿದೆ ಎನ್ನಬಹುದು.

ಇಸ್ಲಾಂ ಧರ್ಮ

ಕುಣಿಗಲ್ ಪಟ್ಟಣದಲ್ಲಿ ಇಸ್ಲಾಂ ಧರ್ಮವು ವ್ಯಾಪಕವಾಗಿ ಬೆಳೆದಿದ್ದು, ಹಿಂದುಗಳನ್ನು ಬಿಟ್ಟರೆ ಮುಸಲ್ಮಾನ ಬಾಂದವರೆ ಹೆಚ್ಚಾಗಿದ್ದಾರೆ. ತಮ್ಮ ಧಾರ್ಮಿಕ ವಿಧಿವಿಧಾನಗಳನ್ನು ಆಚರಣೆ ಮಾಡಲು ಮಸೀದಿಗಳು, ದರ್ಗಾಗಳನ್ನು ಕಟ್ಟಿಕೊಂಡು ಅಲವಾರು ನಂಬಿಕೆ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಕುಣಿಗಲ್ ಪಟ್ಟಣದಲ್ಲಿ ಹಿಂದೂ ಮತ್ತು ಮುಸಲ್ಮಾನ ಬಾಂಧವರು ಯಾವುದೇ ಕೋಮುಗಲಬೆ ಇಲ್ಲದೆ ಅನ್ಯೋನ್ಯವಾಗಿದ್ದು, ಯಾವುದೇ ಭೇದಬಾವ ಇಲ್ಲದೆ ಮೊಹರಂ ಆಚರಣೆ, ಉರುಸ್ ಆಚರಣೆಯಲ್ಲಿ ಭಾಗವಹಿಸುತ್ತಾ, ಧಾರ್ಮಿಕ ಸೌಹಾರ್ದತೆ ಕಾಪಾಡಿಕೊಂಡಿದ್ದಾರೆ.

ಕ್ರಿಶ್ಚಿಯನ್ ಧರ್ಮ

ಬ್ರಿಟಿಷರು ಕ್ರೈಸ್ತ ಮಿಷನರಿಗಳಿಗೆ ನೀಡಿದ ಪ್ರೋತ್ಸಾಹ ಮತ್ತು ಸಹಕಾರದಿಂದ ಭಾರತದ ನಾನಾ ಕಡೆಗಳಲ್ಲಿ ಚರ್ಚ್ ಮತ್ತು ಕ್ರೈಸ್ತ ಮಿಷನ್‌ಗಳನ್ನು ಆರಂಭಿಸುವಲ್ಲಿ ಯಶಸ್ವಿಯಾದರು. ಮುಖ್ಯವಾಗಿ ಕರ್ನಾಟಕದಲ್ಲಿ ಕ್ರೈಸ್ತ ಮಿಷನರಿಗಳು ಶಾಲಾ ಕಾಲೇಜುಗಳನ್ನು ತೆರೆದು ಇಂಗ್ಲೀಷ್ ಶಿಕ್ಷಣವನ್ನು ಜನಪ್ರಿಯಗೊಳಸಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ವಲಯದಲ್ಲಿ ಸಂಚಲನ ಮೂಡಿಸುತ್ತದೆ. ಪ್ರಸ್ತುತ ಕುಣಿಗಲ್ ಪಟ್ಟಣದಲ್ಲಿಯ ಕ್ರೈಸ್ತ ಧರ್ಮ ಏಳಿಗೆಯಲ್ಲಿದ್ದು, ಶಿಕ್ಷಣ ಕೇಂದ್ರಗಳನ್ನು ಆಸ್ಪತ್ರೆಗಳನ್ನು ತೆರೆದು ಜನಯುತ ಕಾರ್ಯಗಳಲ್ಲಿ ತೊಡಗಿದ್ದು, ಕ್ರಿಶ್ಚಿಯನ್ ಧರ್ಮವನ್ನು ವ್ಯಾಪಕವಾಗಿ ಬೆಳೆಸುತ್ತಿದೆ.

ಆರ್ಥಿಕ ವ್ಯವಸ್ಥೆ

ಕುಣಿಗಲ್ ಪಟ್ಟಣದಲ್ಲಿನ ಶಾಸನಗಳಲ್ಲಿ ಆರ್ಥಿಕ ಅಂಶಗಳ ಬಗ್ಗೆ ಉಲ್ಲೇಖವಿದ್ದು, ಅಂದಿನ ಕಾಲದ ಆರ್ಥಿಕ ಸ್ಥಿತಿಗತಿಯ ಮೇಲೆ ಬೆಳಕು ಚೆಲ್ಲುತ್ತವೆ. ಇಲ್ಲಿನ ಬಹುತೇಕ ಶಾಸನಗಳೆಲ್ಲವೂ ಭೂ ದಾನಕ್ಕೆ ಸಂಬಂಧಿಸಿವೆ. ಇದರಿಂದ ದಾನವಾಗಿ ಕೊಡುವ ವಸ್ತುಗಳಲ್ಲಿ ಭೂಮಿ ಶ್ರೇಷ್ಠವಾದ ವಸ್ತುವಾಗಿತ್ತೆಂಬುದು ಮನದಟ್ಟಾಗುತ್ತದೆ. ಅಲ್ಲದೇ ಅಂದು ವ್ಯವಸಾಯವೇ ಜೀವನೋಪಾಯದ ಪ್ರಮುಖ ಉದ್ಯೋಗವಾಗಿತ್ತೆಂಬ ವಿಚಾರ ಸ್ಪಷ್ಟವಾಗುತ್ತದೆ. ವ್ಯವಸಾಯ ಮಾಡುತ್ತಿದ್ದ ರೈತನನ್ನು ಒಕ್ಕಲು ಮಕ್ಕಳು ಎಂದು ಕರೆಯಲಾಗುತ್ತಿತ್ತು. ಮಳೆಯಾಶ್ರಯದಲ್ಲಿ ಬೆಳೆಯುತ್ತಿದ್ದ ಖುಷ್ಕಿ ಭೂಮಿಯನ್ನು ಹೊಲ, ಬೆದಲು,

ದೇವಮಾತೃಕೆ ಎಂತಲೂ, ನದಿ, ಕೆರೆ, ಕಟ್ಟೆ, ಕಾಲುವೆ ನೀರಿನಿಂದ ಬೆಳೆಯುತ್ತಿದ್ದ ಬೆಳೆಯನ್ನು ನೀರಾವರಿ ಅಥವಾ ನಿರಾರಂಭ ಎಂತಲೂ: ತರಿ ಭೂಮಿಯನ್ನು ಗದ್ದೆ ಎಂದು ಕರೆಯಲಾಗಿದೆ. ಏತ ಗೊಡೆಗೊಯ್ಯಲು ಕಪಿಲೆ ಸಹಾಯದ ನೀರಿನಿಂದ ಬೆಳೆಯುತ್ತಿದ್ದ ಭಾಗಾಯ್ತು ಭೂಮಿಯನ್ನು ತೋಟ ತುಡಿಕೆಯ ಭೂಮಿ ಎಂದು ಕರೆಯಲಾಗಿದೆ.

ಅಳತೆ ಮತ್ತು ತೂಕ

ಪ್ರಾಚೀನ ಕಾಲದಿಂದಲೂ ಶಾಸನಗಳಲ್ಲಿ ಅಳತೆ ಮತ್ತು ತೂಕದ ಬಗ್ಗೆ ಉಲ್ಲೇಖ ಸಿಗುತ್ತದೆ. ಕುಣಿಗಲ್ ಪಟ್ಟಣವು ಪ್ರಾಚೀನ ಕಾಲದಿಂದಲೂ ವ್ಯಾಪಾರ ಕೇಂದ್ರವಾಗಿತ್ತು. ಯಾವುದೇ ವಸ್ತುವನ್ನು ಮಾರಾಟ ಮಾಡಲು ಮತ್ತು ಕೊಂಡುಕೊಳ್ಳಲು ಒಂದು ನಿರ್ದಿಷ್ಟ ಸ್ಥಳದಲ್ಲಿ ಸಂತೆಗಳು ನಡೆಯುತ್ತಿದ್ದವು. ಇಂತಹ ಸಂತೆಗಳಲ್ಲಿ ವಸ್ತುಗಳನ್ನು ಮಾರಾಟ ಮಾಡಲು ಕೊಂಡು ಕೊಳ್ಳಲು ವಿವಿಧ ಅಳತೆ ಮಾಪನಗಳಿದ್ದವು ಇಬ್ಬಳ, ಕೊಳಗ, ಬಳ್ಳ, ಖಂಡುಗ,ಮಣ, ಅದ್ದನ ಮುಂತಾದ ಮಾಪನಗಳಿದ್ದವು. ವಿವಿಧ ಶಾಸನಗಳು ತಿಳಿಸುತ್ತವೆ.

ದಾನ್ಯದ ಅಳತೆ

೪ ಸೇರು– ೧ ಬಳ್ಳ, ೨ ಬಳ್ಳ – ೧ ಹಿಬ್ಬಳಿಕೆ, ೨ ಹಿಬ್ಬ – ೧ ಕೊಳಗ, ೧೬ ಕೊಳಗ– ೧ ಖಂಡುಗ, ೧ ಖಂಡುಗ – ೩೨೦ ಸೇರು.

ವೀಳ್ಯದೆಲೆ ಎಣಿಕೆ

೫೦ ವೀಳ್ಯೆದೆಲೆ – ೧ ಕವಳಿಗೆ, ೨ ಕವಳಿಗೆ – ಕಟ್ಟು, ೫೦ ರಿಂದ ೧೦೦ ಕಟ್ಟು – ೧ ಪಿಂಡಿ, ೪ ತಬ್ಬು – ೧ ಹೊರೆ.[೧೯]

ಭೂಮಿಯನ್ನು ಅಳತೆಮಾಡಲು ಗದ್ದೆ ಕಂಬ ೧ಕ್ಕೆ ೩೩ ಕೋಲು ಮತ್ತು ಹೊಲ ಕಂಬ ೧ ಕ್ಕೆ ೪೬ ಕೋಲು ಎಂಬುದಾಗಿ ಭೂಮಿಯನ್ನು ಅಳತೆ ಮಾಡಲಾಗುತ್ತಿತ್ತೆಂದು ಕುಣಿಗಲ್ ಶಾಸನ ಉಲ್ಲೇಖಿಸುತ್ತದೆ.[೨೦]

ನಾಣ್ಯ ಪದ್ದತಿ

ಪ್ರಾಚೀನ ಕಾಲದಿಂದಲೂ ಎಲ್ಲಾ ಪ್ರದೇಶದಲ್ಲಿಯೂ ವಸ್ತು ವಿನಿಯಮ ಪದ್ದತಿ ಕಂಡು ಬರುತ್ತಿತ್ತು ತಮ್ಮಲ್ಲಿ ಇರುವ ವಸ್ತುಗಳನ್ನು ತಮಗೆ ಬೇಕಾದ ವಸ್ತುಗಳು ಇದುವವರಿಗೆ ನೀಡಿ ಅವರಲ್ಲಿ ಇದ್ದಂತಹ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ನಂತರ ಕಾಲಮಾನದಲ್ಲಿ ನಾಣ್ಯಪದ್ದತಿ ಕಾಣಿಸಿಕೊಂಡಿತು. ಒಂದು ಪ್ರದೇಶದಲ್ಲಿ ಬಳಕೆಯಾಗುತ್ತಿದ್ದ ನಾಣ್ಯಗಳಿಂದ ಆ ಪ್ರದೇಶದ ಆರ್ಥಿಕ ಪ್ರಗತಿಯ ಪ್ರತಿಬಿಂಬವನ್ನು ತಿಳಿಯಬಹುದಾಗಿದೆ.

ಪ್ರಾಚೀನ ಕಾಲದಿಂದ ಚಿನ್ನ,ಬೆಳ್ಳಿ, ತಾಮ್ರದ ಲೋಹದಿಂದ ಅಚ್ಚು ಹಾಕಿಸುತ್ತಿದ್ದರು. ಅಂದಿನ ಕಾಲದ ಚಲಾವಣೆಯ ನಾಣ್ಯಗಳೆಂದರೆ ಕಾಸು, ಆಣೆ, ಗದ್ಯಾಣ, ವರಹಾ, ನಿಷ್ಕ, ಪಣಗಳು ಚಲಾವಣೆಯಲ್ಲಿದ್ದು, ನಾಣ್ಯಗಳೂ ಅಂದಿನ ಕಾಲದ ಆರ್ಥಿಕ ಸ್ಥಿತಿಗತಿಯ ಬಗ್ಗೆ ಸ್ಪಷ್ಟ ಮಾಹಿತಿಯನ್ನು ನೀಡುತ್ತದೆ.

ಸಾರಿಗೆ ಮತ್ತು ಸಂಪರ್ಕ

ಕುಣಿಗಲ್ ಪ್ರದೇಶವು ಬಯಲು ಸೀಮೆಯಾಗಿದ್ದರಿಂದ ಸಾರಿಗೆ ಸಂಪರ್ಕ ಸುಗಮವಾಗಿತ್ತು. ವಸ್ತುಗಳನ್ನು ಸಾಗಿಸಲು ಎತ್ತಿನಗಾಡಿಗಳನ್ನು ಮತ್ತು ಪ್ರಾಣಿಗಳನ್ನು ಬಳಸುತ್ತಿದ್ದರು. ಆಗೂ ಇಲ್ಲಿನ ಜನರು ಹೆಚ್ಚು ಕಾಲುನಡಿಗೆಯ ಮೂಲಕವೇ ಸಂಚರಿಸುವ ಜನರಾಗಿದ್ದರು. ಬಂಡಿ ಅಥವಾ ಎತ್ತಿನಗಾಡಿಗಳು ಉತ್ತಮ ಸಂಚಾರಿ ವಾಹನವಾಗಿದ್ದಂತೆ ಸರಕು ಸಾಕಾಣಿಕೆಯ ಸಾಧನವಾಗಿ ಪ್ರಾಚೀನ ಕಾಲದಿಂದಲೂ ಕಂಡು ಬರುತ್ತದೆ. ಕುಣಿಗಲ್ ಪಟ್ಟಣವು ವ್ಯಾಪಾರ ಕೇಂದ್ರವಾಗಿದ್ದರಿಂದ ಸಂಪರ್ಕ ಕಲ್ಪಿಸುವ ಅನೇಕ ರಸ್ತೆಗಳು ಕಂಡು ಬರುತ್ತವೆ.

೫.೨. ನಂಬಿಕೆ ಮತ್ತು ಆಚರಣೆಗಳು

ಪ್ರಾಚೀನ ಕಾಲದಿಂದಲೂ ಮಾನವ ತನ್ನ ಬದುಕಿನ ಉನ್ನತ ಶ್ರೇಯಸ್ಸಿಗಾಗಿ ಅಥವಾ ರೋಗ ನಿವಾರಣೆಗಾಗಿ ಇಲ್ಲವೆ ತನ್ನ ದಿನನಿತ್ಯದ ಕಾರ್ಯಚಟುವಟಿಕೆಗಳು ಸುಗಮವಾಗಿ ನಡೆಯುವಂತೆ ತನಗೆ ಸಂಬಂಧಿಸಿದ ಅಗೋಚರ ಶಕ್ತಿ ಆರಾಧನೆಯಲ್ಲಿ ಪೂಜಾ ವಿಧಿವಿಧಾನಗಳು ಜಾತ್ರೆ-ಉತ್ಸವಗಳು, ನಂಬಿಕೆ ಮತ್ತು ಆಚರಣೆಗಳನ್ನು ಮಾಡುತ್ತಾ ಬಂದಿದ್ದಾನೆ.

ನಂಬಿಕೆ ಮತ್ತು ಆಚರಣೆಗಳು ಮಾನವನ ಆರೋಗ್ಯವನ್ನು ಕಾಪಾಡುವುದಲ್ಲದೇ ಪ್ರತಿಯೊಂದು ಗುಂಪು ತನ್ನ ಹತೋಟಿಯಲ್ಲಿ ಇಟ್ಟುಕೊಂಡು ಕೊಂಡೊಯುತ್ತದೆ. ಅದೇ ರೀತಿ ಮಾನವನ ನಿತ್ಯ ಜೀವನಕ್ಕೆ ಪ್ರಕೃತಿ ನೀಡುವ ಬೆಳಕು, ಗಾಳಿ, ನೀರು, ಆಹಾರ ಬಟ್ಟೆ ಬರೆಗಳು ಎಷ್ಟು ಅವಶ್ಯವೋ ನಂಬಿಕೆಗಳು ಕೂಡ ಅಷ್ಟೆ ಪ್ರಮುಖ ಪಾತ್ರವಹಿಸುತ್ತವೆ. ಕುಣಿಗಲ್ ಪಟ್ಟಣದ ಜನರಲ್ಲಿ ಅನೇಕ ನಂಬಿಕೆಗಳಿರುವುದನ್ನು ಈ ಕೆಳಗಿನಂತೆ ಕಾಣಬಹುದಾಗಿದೆ.

ಗ್ರಹಣದ ಕಾಲದಲ್ಲಿ ಅಡುಗೆ ಮಾಡಿಟ್ಟಿದ್ದನ್ನು ಊಟ ಮಾಡಬಾರದು ಮಾಡಿದರೆ ಹುಟ್ಟುವ ಮಗುವು ಸಹ ಅಂಗವಿಕಲರಾಗುತ್ತಾರೆಂಬ ನಂಬಿಕೆ ಇದೆ. ಶುಕ್ರವಾದ ದಿನ ಯಾರಿಗೂ ಹಣವನ್ನು ಸಾಲವಾಗಿ ನೀಡಬೇಡ ನೀಡಿದರೆ ಲಕ್ಷ್ಮಿಮನೆಯಿಂದ ಹೊರಗೆ ಹೋಗಿಬಿಡುತ್ತಾಳೆಂಬ ನಂಬಿಕೆ ಇದೆ. ಅದೇ ರೀತಿ ಮುಸ್ಸಂಜೆಯಾದ ಮೇಲೆ ಮನೆಯ ಕಸವನ್ನು ಗುಡಿಸಿ ಹೊರಗೆ ಚೆಲ್ಲಬೇಡ ಚೆಲ್ಲಿದರೆ ಲಕ್ಷ್ಮೀ ನಮ್ಮ ಮೇಲೆ ಮುನಿಸಿಕೊಂಡು ಬೇರೆಯವರ ಮನೆಗೆ ಹೋಗಿಬಿಡುತ್ತಾಳೆ ಎಂಬ ನಂಬಿಕೆ ಇಟ್ಟುಕೊಂಡಿದ್ದಾರೆ. ಮನೆಯ ಮುಂದೆ ಕಾಗೆಗಳು ಬಂದು ಕೂಗೂತ್ತಿದ್ದರೆ ಯಾರೋ ನಂಟರು ಬರುತ್ತಾರೆಂಬ ನಂಬಿಕೆ, ಅದೇ ಕಾಗೇ ಮನೆಯನ್ನು ಪ್ರವೇಶಿಸಿದರೆ ಏನೋ ಕಾಟ ವಿದೆ ಎಂದು 3 ತಿಂಗಳ ಕಾಲ ಮನೆ ಬಿಡುತ್ತಾರೆ ಅದರಲ್ಲಿ ಯಾರು ವಾಸ ಮಾಡುವುದಿಲ್ಲ. ರಾತ್ರಿ ವೇಳೆಯಲ್ಲಿ ಗೂಬೆ ಮತ್ತು ನಾಯಿಗಳು ಒಂದೇ ಸಮನೆ ಅಳುತ್ತಿದ್ದರೆ ಗ್ರಾಮದಲ್ಲಿ ಯಾರೋ ಸಾಯುತ್ತಾರೆಂಬ ಖಚಿತವಾದ ನಂಬಿಕೆ ಇದೆ.

ಪ್ರಯಾಣಿಸುವಾಗ ಬೆಕ್ಕು ಅಥವಾ ಹಾವು ಅಡ್ಡ ಬಂದರೆ ಇವತ್ತಿನ ದಿನ ಸರಿಯಿಲ್ಲಾ ಏನು ಕೆಲಸಗಳು ಆಗುವುದಿಲ್ಲವೆಂಬ ನಂಬಿಕೆ ಇದೆ. ದೇವರಿಗೆ ಒಡೆದ ಕಾಯಿ ತೊಟ್ಟಿಲಂತೆ ಉದ್ದುದ್ದ ಒಡೆದರೆ ಮನೆಯಲ್ಲಿ ಹೆಣ್ಣು ಮಗು ಹುಟ್ಟುತ್ತದೆ ಅಥವಾ ಸಂತಾನಭಾಗ್ಯ ದೊರೆಯುತ್ತದೆ ಎಂಬ ನಂಬಿಕೆ ಇದೆ. ಎಕ್ಕದ ಗಿಡದಲ್ಲಿ ಚೌಡಮ್ಮ ಇರುತ್ತಾಳೆ, ಲಕ್ಕಿಗಿಡದಲ್ಲಿ ಲಕ್ಕಮ್ಮ ಇರುತ್ತಾಳೆ, ಬ್ಯಾಪೆ ಗಿಡವಲ್ಲಿ ಭೂತಪ್ಪನಿರುತ್ತಾನೆ ಎಂಬ ನಂಬಿಕೆಗಳಿವೆ. ಬಿಲ್ವ ಪತ್ರೆ ಮರ, ಜಂಬಿಮರ, ಧೂಪದಮರ, ಅರಳೀಮರ ಮತ್ತು ತುಳಸಿ

ಗಿಡಗಳು ದೇವರ ಪುಷ್ಪವಾಗಿ ಬಳಸಲ್ಪಡುತ್ತವೆ ಮತ್ತು ಅವುಗಳಲ್ಲಿ ದೇವಾನುದೇವತೆಗಳು ನೆಲೆಸಿರುತ್ತಾರೆ ಎಂಬ ನಂಬಿಕೆಗಳು ಗಿಡ ಮರಗಳ ಸಂರಕ್ಷಣೆಗೆ ಕಾರಣವಾಗಿದೆ. ಅದೇ ರೀತಿ ಪ್ರತಿದಿನ ಮಲಗುವಾಗ ದೇವತೆಯನ್ನು ಧ್ಯಾನಿಸಿ ಮಲಗಿದರೆ ದುಃಸ್ವಪ್ನ ಬೀಳುವುದಿಲ್ಲ. ಬೆಳಿಗ್ಗೆ ಎದ್ದೇಳುವಾಗ ಬಲಗಡೆ ಎದ್ದು ದೇವರ ಪೋಟೋ ನೋಡುವುದು, ದೇವಿಯು ಬಲಭಾಗದ ಪ್ರಸಾದ ಕೊಟ್ಟರೆ ಶುಭದ ಸಂಕೇತ, ಎಡಭಾಗದ ಪ್ರಸಾದ ಕೊಟ್ಟರೆ ಅಶುಭ ಸಂಕೇತವೆಂಬ ನಂಬಿಕೆ ಗ್ರಾಮೀಣ ಜನರಲ್ಲಿರುವುದನ್ನು ಕಾಣಬಹುದಾಗಿದೆ.

ಮಳೆರಾಯನನ್ನು ಮಾಡಿದೆ ಮಳೆ ಬರುತ್ತದೆ. ದೇವಸ್ಥಾನದಿಂದ ಬರುವಾಗ ಸ್ವಲ್ಪ ಹೊತ್ತು ಕುಳಿತ್ತಿದ್ದು ಬರಬೇಕು. ಕಾಲನ್ನು ತೊಳೆದು ಕೊಂಡು ದೇವಾಲಯ ಅಥವಾ ಮನೆಗೆ ಬರಬೇಕು. ಹುಣಸೆಮರದ ಕೆಳಗೆ ಮಲಗಬಾರದು ಅಲ್ಲಿ ಪಿಶಾಚಿಗಳಿರುತ್ತವೆ ಎಂಬ ನಂಬಿಕೆ ಕುಣಿಗಲ್ ಪಟ್ಟಣದಲ್ಲಿ ಕಾಣಬಹುದಾಗಿದೆ.

ಆಚರಣೆಗಳು

ಜನರ ದೈನಂದಿನ ಹಾಗೂ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದಂತೆ ವಿಧಿಗಳು ಆಚರಣೆಗಳು, ಸಮಾರಂಭಗಳು ನಡೆಯುತ್ತವೆ ಅವುಗಳನ್ನು ಈ ಕೆಳಗೆ ನಮೂದಿಸಲಾಗಿದೆ.

ಗರ್ಭಾವಸ್ಥೆ ಮತ್ತು ಜೀವನ

ಗರ್ಭಾವಸ್ಥೆಯಲಿರುವಾಗ ಹಾಗೂ ಮಗು ಜನನವಾದಾಗ ಅನೇಕ ಧಾರ್ಮಿಕ ಸಂಪ್ರದಾಯ ರೂಡಿಯಲ್ಲಿವೆ. ಹಿಂದೂಗಳಲ್ಲಿ ಗರ್ಭಿಣಿಯರಿಗೆ ತಿಂಡಿ ತಿನಿಸುಗಳ ಬಯಕೆಯನ್ನು ಪೂರೈಸುವುದು, ಗಭೀಣಿಯಾದವರಿಗೆ ಏಳು, ಎಂಟನೇ ತಿಂಗಳಲ್ಲಿ ಸೀಮಂತ ಮಾಡುವುದು ವಿಶೇಷ ಆಚರಣೆ ಆಗಿದೆ. ಸಾಮಾನ್ಯವಾಗಿ ಮೊದಲ ಹೆರಿಗೆಗೆ ಹೆಣ್ಣು ತವರು ಮನೆಗೆ ಹೋಗುತ್ತಾಳೆ. ಮಗು ಜನಿಸಿದಾಗ ೧೦ ದಿನಗಳವರೆಗೂ ಮೈಲಿಗೆ ಆಚರಿಸುವುದು ೧೧ನೇ ದಿನ ಸ್ನಾನ ಮಾಡಿ ಶುದ್ಧಿ ಮಾಡಿ ಸೂತಕ ಕಳೆದು ಕೊಳ್ಳುತ್ತಾರೆ. ಅದೇ ದಿನ ಮಗುವನ್ನು ತೊಟ್ಟಿಲಿಗೆ ಹಾಕಿ ನಾಮಕರಣ ಮಾಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಇದನ್ನು ೦೩ ತಿಂಗಳೊಳಗಾಗಿ ಆಚರಿಸುತ್ತಾರೆ.

ಬ್ರಾಹ್ಮಣರು, ಜೈನರ ಹಾಗೂ ವಿಶ್ವಕರ್ಮರು ಮಕ್ಕಳಿಗೆ ಉಪನಯನ ಮಾಡುತ್ತಾರೆ. ಲಿಂಗಾಯತರಲ್ಲಿ ಲಿಂಗದೀಕ್ಷೆ ಕೊಡಿಸುತ್ತಾರೆ. ಮುಸಲ್ಮಾನರು ಮಗು ಹುಟ್ಟಿದ ಕೂಡಲೇ ಕಿವಿಯಲ್ಲಿ ಬಾಂಗ್ ನಮಾಜ್ ಮಾಡುತ್ತಾ ತಕ್ಷಣವೇ ಹೆಸರನ್ನು ಇಡುತ್ತಾರೆ ಅದೇ ರೀತಿ ಗಂಡು ಮಕ್ಕಳಿಗೆ ಮುಂಜಿ ಮಾಡಿಸುತ್ತಾರೆ.

ವಿವಾಹ ಆಚರಣೆ

ವಿವಾಹ ಹಿಂದೂಗಳಲ್ಲಿ ವಯಸ್ಸಿಗೆ ಬಂದ ಮದುಮಗಳನ್ನು ಮಧು ಮಗನಿಗೆ ಕನ್ಯಾದಾನವೆಂದು ಕೊಡೆಗೆಯ ರೂಪದಲ್ಲಿ ಮದುವೆ ಮಾಡಿ ಕೊಡುವ ಸಂಪ್ರದಾಯವಿದೆ, ಹಿಂದಿನ ಕಾಲದಲ್ಲಿ ೭ ದಿನಗಳ ಕಾಲ ವಿವಾಹ ನಡೆಯುತ್ತಿದ್ದು, ಆದರೆ ಇಂದು ೨ ದಿನಕ್ಕೆ ಸೀಮಿತವಾಗಿದೆ. (ಪ್ರಥಮಶಾಸ್ತ್ರ ಮತ್ತು ಧಾರೆಮುಹೂರ್ತ) ಇತ್ತೀಚೆಗೆ ಗಂಡಿನ ಅಥವಾ ಹೆಣ್ಣಿನ ಮನೆಗಳಲ್ಲಿ ಮದುವೆ ಆಗುವುದು ಕಡಿಮೆ ಬದಲಾಗಿ ದೇವಸ್ಥಾನ. ಮಠ ಮತ್ತು ಕಲ್ಯಾಣ ಮಂಟಪದಲ್ಲಿ ಅದ್ದೂರಿಯಾಗಿ ವೈಭವ ಪೂರಿತವಾಗಿ

ನಡೆಸಿಕೊಡುತ್ತಾರೆ. ಒಂದೇ ಗೋತ್ರ ಅಥವಾ ಬೆಡಗುಗಳಲ್ಲಿ ವಿವಾಹ ನಿಷಿದ್ದ ವಿಳ್ಯದಶಾಸ್ತ್ರ, ವರಪೂಜೆ, ಕಂಕಣ, ಮಾಂಗಲ್ಯದಾರಣೆ, ವಧುವವರ ಕೈಗೆ ಹಾಲೆರದು ತಲೆಮೇಲೆ ಅಕ್ಷತೆ ಹಾಕುತ್ತಾರೆ. ಹೋಮ, ಸಪ್ತಪಡಿ ಇವೆಲ್ಲ ಧಾರ್ಮಿಕ ವಿಧಿಗಳಲ್ಲಿ ಮುಖ್ಯವಾದವು, ಇತ್ತೀಚೆಗೆ ಕೆಲವರಿಗೆ ದುಬಾರಿವೆಚ್ಚದಿಂದ, ಪ್ರೇಮ ವಿವಾಹ, ಅಂತರ್ ಜಾತಿ ವಿವಾಹದಿಂದ ಶಾಸ್ತ್ರ ಸಂಪ್ರದಾಯಗಳು ಕಣ್ಮರೆಯಾಗುತ್ತಿವೆ.

ಅದೇ ರೀತಿ ಮುಸಲ್ಮಾನರಲ್ಲಿ ವಿವಾಹ ಕಾಯ್ದೆಯಂತೆ ವಿಧಿವತ್ತಾಗಿ ನಡೆಯುತ್ತದೆ. ಖಾಜಿಯು ಗಂಡು ಮತ್ತು ಹೆಣ್ಣಿನ ಒಪ್ಪಿಗೆ (ಕಬೂಲ್) ಪಡೆದು ಸಾಕ್ಷಿಗಳ ಸಮ್ಮುಖದಲ್ಲಿ ದಪ್ತರದಲ್ಲಿ ದಾಖಲು ಆಗುತ್ತದೆ. ಇವರಿಗೆ ಶವಾಯ್ ಎಂದು ಕರೆಯುತ್ತಾರೆ. ಖಾಜಿಯು ನಿಖಾ ಒದುತ್ತಾರೆ. ಮಾಂಗಲ್ಯದಾರಣೆ ಇರುವುದಿಲ್ಲ ಹಿಂದೂಗಳ ಸಂಪ್ರದಾಯದಂತೆ ಲಚ್ಚ (ಕರಿಮಣಿ) ಧರಿಸುತ್ತಾರೆ.

ಕೃಷಿಗೆ ಸಂಬಂಧಿಸಿದ ಆಚರಣೆಗಳು

ಕುಣಿಗಲ್ ಪಟ್ಟಣದ ವ್ಯಾಪ್ತಿಯಲ್ಲಿನ ಜನರು ಒಕ್ಕಲುತನ, ಕೃಷಿ ವ್ಯವಸಾಯ ರೈತಾಪಿವರ್ಗ ಎಂಬ ಹೆಸರಿನಿಂದ ಕರೆಯಲ್ಪಡುವ ಕೃಷಿ ಬದುಕನ್ನು ತಮ್ಮ ಜೀವಂತವನ್ನಾಗಿಸಿ ಕೊಂಡಿದ್ದಾರೆ. ಇದು ಸಕಲ ಜೀವರಾಶಿಗೆ ಅನ್ನ ನೀಡುವ ಪವಿತ್ರ ಕಾಯಕವಾಗಿದೆ. ರಾಗಿ, ಭತ್ತ, ಜೋಳ ಮುಂತಾದವನ್ನು ಬೆಳೆಯುವ ಜನರು ನೀರಾವರಿ ಸೌಲಭ್ಯ ಮತ್ತು ಮಳೆಯ ನೀರನ್ನೇ ಅವಲಂಬಿಸಿರುವ ರೈತರು ಭೂಮಿ ತಾಯಿಯನ್ನು ನಂಬಿ ಬದುಕುವ ಅನುವಂಶಿಯತೆ ಈ ಪ್ರದೇಶದಲ್ಲಿ ಕಂಡು ಬಂದಿದ್ದು, ಈ ಕೆಳಗಿನ ಆಚರಣೆಗಳು ಕಂಡು ಬರುತ್ತವೆ.

ಹೊನ್ನಾರು

ಸಾಮಾನ್ಯವಾಗಿ ಬೇಸಿಗೆ ಕಾಲ ಕಳೆದು ಮಳೆಗಾಲ ಪ್ರಾರಂಭವಾಗಿ ಮೊದಲ ಹನಿ ನೆಲಕ್ಕೆ ಬಿದ್ದು, ಮಳೆಯು ಚೆನ್ನಾಗಿ ಬಂದರೆ ಉಳುಮೆ ಮಾಡಲು ಪ್ರಾರಂಭಿಸುವ ಮುನ್ನ ರೈತರು ಹಲವು ಆಚರಣೆಗಳನ್ನು ಮಾಡುತ್ತಾರೆ. ರೈತನು ಮಡಿಯಿಂದ ಮಡಿಬಟ್ಟೆ ಉಟ್ಟು ನೇಗಿಲು, ನೊಗ ಕುಂಟೆ ಮುಂತಾದ ಕೃಷಿ ಉಪಕರಣಗಳನ್ನು ತೊಳೆದು ಎತ್ತು ಹಾಗೂ ಹಸುಗಳ ಮೈತೊಳೆದು ಶೃಂಗಾರ ಮಾಡಿ ಪೂಜೆ ಮಾಡುತ್ತಾರೆ. ಸಗಣಿ ಉಂಡೆಗೆ ಗರಿಕೆ ಹುಲ್ಲನ್ನು ಸಿಗಿಸಿ ವಿಘ್ನೇಶ್ವರನನ್ನು ಮಾಡಿ ಆನಂತರ ಜಮೀನುಗಳಿಗೆ ಹೋಗಿ ಅಲ್ಲಿ ಮತ್ತೊಮ್ಮೆ ಪೂಜೆ ಮಾಡಿ ಮೊಸರನ್ನವನ್ನು ನೈವೇದ್ಯಕ್ಕೆ ಇಟ್ಟು ನಂತರ ನೇಗಿಲನ್ನು ಹೂಡಿ ವರ್ಷದ ಮೊದಲ ಬೇಸಾಯವನ್ನು ಪ್ರಾರಂಭಿಸುತ್ತಾರೆ. ಇದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಆಚರಣೆಯಾಗಿದೆ.

ಬಿತ್ತನೆ ಪೂಜೆ

ಭೂಮಿಯನ್ನು ಉಳುಮೆ ಮಾಡಿ ಬೀಜವನ್ನು ಬಿತ್ತುವ ಮೊದಲು ಬಿದಿರಿನಿಂದ ತಯಾರಿಸಿದ ಗೂಡೆಗಳಲ್ಲಿ (ಬಿದಿರಿನ ಬುಟ್ಟಿ) ಬಿತ್ತುವ ಬೀಜಗಳನ್ನು ತುಂಬಿ ವಿಭೂತಿ, ಅರಿಶಿನ-ಕುಂಕುಮ ಇಟ್ಟು, ಸಗಣಿಯಲ್ಲಿ ವಿಘ್ನೇಶ್ವರನನ್ನು ಮಾಡಿ ಹೊಲದ ಮೂಲೆಯಲ್ಲಿಟ್ಟು ಪೂಜೆ ಮಾಡಿ ಒಂದು ನೂರಾಗಲಿ. ನೂರು ಸಾವಿರವಾಗಲಿ, ಸಾವಿರ ಲಕ್ಷವಾಗಲಿ ಹೀಗೆ ಮುಂದುವರಿಯಲಿ ಹೆಚ್ಚಲಿ ಎಂದು ಹೇಳಿ ಬಿತ್ತನೆ ಕಾರ್ಯ ಪ್ರಾರಂಭಿಸುತ್ತಾರೆ.

ಕೊಯ್ಯುವ ಪೂಜೆ

ಭೂಮಿಯನ್ನು ಉತ್ತಿ,ಬಿತ್ತಿ ಸಮೃದ್ಧಿಯಾಗಿ ಬೆಳೆದ ಬೆಳೆಯನ್ನು ಕಟಾವಿನ ಹಂತಕ್ಕೆ ಬಂದಾಗ ಕೊಯ್ಲು ಮಾಡುವ ಮೊದಲು ಒಳ್ಳೆಯ ದಿನವನ್ನು ನೋಡಿ ಕಟಾವು ಮಾಡುವ ಕುಡುಗೋಲನ್ನು ಹೊಲದ ಬದುವಿನಲ್ಲಿಟ್ಟು ಪೂಜೆ ಮಾಡಿ ಬೆಳೆಯನ್ನು ಕಟಾವು ಮಾಡುತ್ತಾರೆ. ನಂತರ ಒಂದು ಕಡೆ ಸಂಗ್ರಹಿಸಿ ಬಣವೆ ಮಾಡುತ್ತಾರೆ.

ವಕ್ಕಣೆ ಮಾಡುವುದು

ರೈತ ಸಮೃದ್ಧಿಯಾಗಿ ಬೆಳೆದಿರುವ ಆಹಾರ ಧಾನ್ಯಗಳನ್ನು ಹುಲ್ಲಿನಿಂದ ಬೇರ್ಪಡಿಸಿ ಕಾಳುಗಳನ್ನು ಪ್ರತ್ಯೇಕ ಮಾಡುವುದು ಅತ್ಯಾವಶ್ಯಕ, ಕೊಯ್ಲು ಮಾಡಿರುವ ರಾಗಿ, ಭತ್ತದ ಹುಲ್ಲನ್ನು ವಕ್ಕಣೆ ಮಾಡಲು ವೃತ್ತಾಕಾರಣದ ಆವರಣ ಮಾಡಿ ಹುಲ್ಲನ್ನು ಸಮತಟ್ಟಾದ ಭೂಮಿಯ ಮೇಲೆ (ಕಣ) ತೆಳ್ಳಗೆ ಹರಡಿ ಹುಲ್ಲಿನ ಮೇಲೆ ವೃತ್ತಾಕಾರದ ಕಲ್ಲನ್ನು ಎತ್ತು ಅಥವಾ ದನಗಳಿಗೆ ಕಟ್ಟಿ ಎಳೆಸುತ್ತಾರೆ. ವಕ್ಕಣೆ ಮಾಡುವ ಮುನ್ನ ಸಗಣಿ ಬಗುಡದಿಂದ ಸಾರಿಸಿ ರಂಗೋಲಿ ಬಿಟ್ಟು ಪೂಜೆ ಮಾಡಿದ ನಂತರ ವಕ್ಕಣೆ ಕಾರ್ಯ ಪ್ರಾರಂಭಿಸುತ್ತಾರೆ.

ರಾಶಿ ಪೂಜೆ

ಹುಲ್ಲಿನಿಂದ ಬೇರ್ಪಟ್ಟ ಧಾನ್ಯಗಳಲ್ಲಿ ಜೊಳ್ಳನ್ನು ತೆಗೆದು ಗಟ್ಟಿಯಾದ ಧಾನ್ಯಗಳನ್ನು ಒಂದು ಕಡೆ ರಾಶಿ ಹಾಕುತ್ತಾರೆ. ರಾಶಿಯ ಸುತ್ತಲೂ ಧಾನ್ಯ ಶುದ್ಧಿಕರಣ ಮಾಡಲು ಬಳಸಿದ ಕೋಲು,ಮರಗೋಲು, ಇಬ್ಬಳ, ಮರ ಮುಂತಾದವುಗಳನ್ನು ರಾಶಿಗೆ ಇಟ್ಟು ಮಾವಿನ ಎಲೆ, ಹೂಗಳನ್ನು ರಾಶಿಗೆ ಮತ್ತು ರೋಣಕಲ್ಲಿಗೆ ಮುಡಿಸಿ ಪೂಜೆ ಮಾಡುತ್ತಾರೆ. ಪೂಜೆ ಸಂದರ್ಭದಲ್ಲಿ ಕಾಳುಗಳ ಪಲಾರ ಅಥವಾ ಮಂಡಕ್ಕಿ ಮತ್ತು ಬೆಲ್ಲವನ್ನು ಒಟ್ಟಿಗೆ ಸೇರಿಸಿ ರಾಶಿಯ ಮುಂದೆ ಇಟ್ಟು ನೈವೇದ್ಯ ಮಾಡುತ್ತಾರೆ. ನಂತರ ಎಲ್ಲರಿಗೂ ಪ್ರಸಾದ ನೀಡಿ ಧಾನ್ಯಗಳನ್ನು ಚೀಲಗಳಿಗೆ ತುಂಬಿಸಿ ಮರದ ಗಾಡಿಯಲ್ಲಿ ಮನೆಗಳಿಗೆ ಒಯ್ಯುತ್ತಾರೆ. ಹೀಗೆ ಕುಣಿಗಲ್ ಪಟ್ಟಣದ ಪರಿಸರದಲ್ಲಿ ಕೃಷಿಗೆ ಸಂಬಂಧಿಸಿದ ಆಚಾರಣೆಗಳನ್ನು ಮಾಡುತ್ತಾರೆ. ಮತತು ಈ ಆಚರಣೆಗಳನ್ನು ಮಾಡುವುದರ ಮೂಲಕ ಕೃಷಿ ಚಟುವಟಿಕೆಗಳು ಸುಗಮವಾಗಿ ನಡೆಯುತ್ತವೆಂದು ನಂಬಿದ್ದಾರೆ.

೫.೩. ಜಾತ್ರೆ ಮತ್ತು ಉತ್ಸವಗಳು

ಜಾತ್ರೆಗಳು ಜಾನಪದ ಜೀವನದ ಅವಿಭಾಜ್ಯ ಅಂಗವಾಗಿರುವಂತೆಯೇ ಜಾನಪದ ಸಂಸ್ಕೃತಿಯ ವಿಕಾಸಕ್ಕೆ ಚೈತನ್ಯದಾಯಿಗಳಾಗಿವೆ. ಅವುಗಳ ತಾಯಿ ಬೇರು ಭೂತ ಕಾಲದ ಗರ್ಭದಲ್ಲಿ ಹೂತುಕೊಂಡಿದ್ದರು. ಅವು ಆದಿಮಾನವನ ಕಾಲದಿಂದಲೇ ಧಾರ್ಮಿಕಾಚರಣೆಗಳ ಒಂದು ಪ್ರಮುಖ ಭಾಗವಾಗಿ ರೂಢಿಯಲ್ಲಿದ್ದರಬೇಕೆಂದು ತೋರುತ್ತದೆ. ಮೊದಮೊದಲು ಕುಣಿತ, ಹಾಡು, ಬಲಿ, ಮಾಟ – ಮಂತ್ರಗಳೇ ಪೂಜಾವಿಧಿಗಳಾಗಿದ್ದಿರಬೇಕು. ಕಾಲ ಕ್ರಮೇಣ ಸಮಾಜದ ರೀತಿ–ನೀತಿಗಳು ಬದಲಾವಣೆಗೊಂಡಂತೆ, ದೇವರ ಕಲ್ಪನೆ ವ್ಯತ್ಯಾಸಗೊಂಡಂತೆ ಮತೀಯ ತತ್ವಗಳು ವಿಕಾಸಗೊಂಡಂತೆ ಧಾರ್ಮಿಕ ಆಚರಣೆಗಳು ಸಂಕೀರ್ಣವಾಗುತ್ತದೆ. ಜನ ಜೀವನ ಮಾರ್ಪಾಟಾದಂತೆ ಜಾತ್ರೆಗಳು ಪ್ರಾಚೀನರ ಕಲ್ಪನೆಗೂ ನಿಲುಕದ

ಹೊಸ ಹೊಸ ಸಂಗತಿಗಳನ್ನು ಆರ್ಥೈಸಿಕೊಂಡು ಅಳತೆಯಿಲ್ಲದೆ ಬೆಳೆಯುತ್ತಿವೆ.[೨೧] ಒಟ್ಟಾರೆ ಜಾತ್ರೆಗಳೆಂದರೆ ಜಾತಿ–ವರ್ಗಗಳ, ಮೇಲು–ಕೀಲು ಮಡಿ–ಮೈಲಿಗೆಯನ್ನು ಮೀರಿ ಜನ ಸಮುದಾಯ ಮತೀಯ ವಿಧಿಯಾಚರಣೆಯ ನೆಪದಲ್ಲಿ ದೈವವೊಂದರ ಸುತ್ತಿ ನಿರ್ದಿಷ್ಟ ದಿನಗಳೆಂದು ನಡೆಯುವ ಕಾರ್ಯಕ್ರಮಕ್ಕೆ ಜಾತ್ರೆ ಎನ್ನಬಹುದು.

ಕುಣಿಗಲ್ ಪಟ್ಟಣಕ್ಕೆ ಸಂಬಂಧಿಸಿದ ಜಾತ್ರೆ ಉತ್ಸವಗಳು

ಕುಣಿಗಲ್ ಪಟ್ಟಣದಲ್ಲಿ ಅನೇಕ ದೇವರುಗಳು ನೆಲೆಯೂರಿದ್ದು, ಪ್ರತಿನಿತ್ಯ ವಿಶೇಷ ಪೂಜೆ ಪುನಸ್ಕಾರಗಳು ನಡೆಯುತ್ತದೆ. ಅಲ್ಲದೆ ವಿಶೇಷ ದಿನಗಳಂದು, ವಾರ್ಷಿಕ ಉತ್ಸವದ ದಿನಗಳಂದು ವಿಶೇಷ ಆಚರಣೆಯ ಮೂಲಕ ದೇವರ ಕೃಪೆಗೆ ಪಾತ್ರರಾಗಲು ಅನೇಕ ವಿಧಿ ವಿಧಾನಗಳನ್ನು ತಪ್ಪದೇ ಹಿರಿಯರು ರೂಡಿಸಿಕೊಂಡು ಬಂದಿರುವ ಆಚರಣೆಯನ್ನು ಇಂದಿಗೂ ಸಹ ಕಾಣಬಹುದು.

೧. ಕುಣಿಗಲ್ ಗ್ರಾಮ ದೇವತೆ

ಕುಣಿಗಲ್ ಪಟ್ಟಣದ ಜನರ ಒಳತಿಗಾಗಿ ನೆಲೆಗೊಂಡಿರುವ ಗ್ರಾಮದೇವತೆಯಾಗಿದ್ದು, ಪ್ರತಿ ಎರಡು ವರ್ಷಗಳಿಗೊಮ್ಮೆ ಜಾತ್ರೆ ನಡೆಯುತ್ತದೆ. ಈ ಜಾತ್ರೆಯನ್ನು ಜುಲೈ ತಿಂಗಳ ಮೊದಲ ವಾರದಲ್ಲಿ ನಿಶ್ಚಿಯಿಸಿ ಪ್ರಾರಂಭಿಸುತ್ತಾರೆ. ಗ್ರಾಮ ದೇವತೆಯನ್ನು ಹೊಳೆಗೆ (ಕೆರೆಗೆ) ಹೊಯ್ದು ಗಂಗಾ ಸ್ನಾನ ಮಾಡಿಸಿ, ರಾತ್ರಿ ಎಲ್ಲಾ ಮೆರವಣಿಗೆ ಮಾಡಿ ರಾತ್ರಿ ೧ ಗಂಟೆ ಸಮಯಕ್ಕೆ ಗ್ರಾಮದೇವತೆಗೆ ಕೋಣವನ್ನು ಬಲಿ ಕೊಡುತ್ತಾರೆ. ಪ್ರತಿ ಶುಕ್ರವಾರ ಮತ್ತು ಮಂಗಳವಾರ ವಿಶೇಷ ಪೂಜೆ ನಡೆಯುತ್ತದೆ. ಅರ್ಚಕರು – ಗಂಗಾ ಮಾತೆ ಬೆಸ್ತರು.

೨. ಹೊನ್ನಾದೇವಿ ಮತ್ತು ಚೌಡೇಶ್ವರಿ

ಈ ದೇವಿಗೆ ಪ್ರತಿ ವರ್ಷ ಯುಗಾದಿಯಾದ ೨ನೇ ವಾರದಲ್ಲಿ ಉತ್ಸವ ಮಾಡಲಾಗುತ್ತದೆ. ಹೊನ್ನದೇವಿ ಮತ್ತು ಚೌಡೇಶ್ವರಿಯರು ಅಕ್ಕತಂಗಿಯರಾಗಿದ್ದು, ಉಗ್ಗಿ ಮತ್ತು ಹುಳ್‌ಸೊಪ್ಪು(ಕೆಸರು ದಂಟಿನ ಪಲ್ಯ) ಅವರ ಪ್ರಿಯವಾದ ಆಹಾರವಾಗಿದೆ. ಇಲ್ಲಿ ಪ್ರಾಣಿ ಬಲಿ ಇಲ್ಲದಿರುವುದೇ ವಿಶೇಷ ಜಾತ್ರೆ ೫ ದಿನಗಳ ಕಾಲ ನಡೆಯುತ್ತದೆ. ಸೋಮವಾರ– ಕಳಶಪೂಜೆ, ಮಂಗಳವಾರ– ಮಡೆ ಆರತಿ, ಬುಧವಾರ– ಚಕ್ರಮಂಗಳ ಉತ್ಸವ, ಗುರುವಾರ– ಬ್ರಹ್ಮ ರಥೋತ್ಸವ ಮತ್ತು ಶುಕ್ರವಾರ – ಪಾಲ್ಕಿ ಉತ್ಸವ ಮತ್ತು ಕುಂಭ ವಿಸರ್ಜನೆ ಮಾಡಲಾಗುತ್ತದೆ.

ಅರ್ಚಕರು – ಬ್ರಾಹ್ಮಣರು, ಪ್ರತಿವಾರ ಮಂಗಳವಾರ ಮತ್ತು ಶುಕ್ರವಾರದಂದು ವಿಶೇಷ ಪೂಜೆ ನಡೆಯುತ್ತದೆ. ವಿಶೇಷವಾಗಿ ಜಾತ್ರೆಯ ದಿವಸ ಮಜ್ಜಿಗೆ ಪಾನಕ, ಕೊಸಂಬರಿ ಮತ್ತು ಅನ್ನ ಸಂತರ್ಪಣೆ ಮಾಡಲಾಗುತ್ತದೆ.

೩. ಕೊಲ್ಲಾಪುರದಮ್ಮ

ಕುಣಿಗಲ್ ಪಟ್ಟಣದ ಪ್ರಮುಖ ಶಿಷ್ಟ ದೇವತೆಯಾಗಿದ್ದು, ಅಪಾರವಾದ ಭಕ್ತರನ್ನು ಒಳಗೊಂಡಿದ್ದಾಳೆ. ಪ್ರತಿ ವರ್ಷ ಮಾರ್ಚ್ ತಿಂಗಳಲ್ಲಿ ಅಂದರೆ ಶಿವರಾತ್ರಿಯಾದ ೧೫ ದಿನಗಳಲ್ಲಿ ಜಾತ್ರೆಯನ್ನು ಗೊತ್ತುಪಡಿಸುತ್ತಾರೆ. ಈ ಜಾತ್ರೆಯು ೨ ದಿನಗಳು ಕಾಲ ನಡೆಯುತ್ತದೆ. ಗಂಗ ಸ್ನಾನ, ಕೊಂಡ ಹಾಯುವುದು. ಗಾವು

ಸಿಗಿಯುವುದು ಮತ್ತು ಪಲ್ಲಕ್ಕಿ ಉತ್ಸವಗಳು ನಡೆಯುತ್ತವೆ. ಮಂಗಳವಾರ-ಬುಧವಾರ ಹಬ್ಬದ ಜಾತ್ರೆ ನಡೆಯುತ್ತದೆ. ಅರ್ಚಕರು – ಉಪ್ಪಾರ ಜನಾಂಗದವರು.

೪. ರೇಣುಕ ಎಲ್ಲಮ್ಮ

ಇದು ಸಹ ಕುಣಿಗಲ್ ಪಟ್ಟಣದ ಶಿಷ್ಟದೇವತೆಯಾಗಿದ್ದು, ಪ್ರತಿ ವರ್ಷ ಪೆಬ್ರವರಿ ತಿಂಗಳಲ್ಲಿ ಶಿವರಾತ್ರಿ ಹಬ್ಬದ ಹಿಂದಿನ ವಾರದಲ್ಲಿ ಶುಕ್ರವಾರ ಮತ್ತು ಶನಿವಾರ ಎರಡು ದಿನಗಳ ಕಾಲ ಜಾತ್ರೆ ನಡೆಯುತ್ತದೆ. ಕೆರೆಯಲ್ಲಿ ಗಂಗಾ ಸ್ನಾನ ಮಾಡಿಸಿ ವಿಶೇಷ ಪೂಜೆಯೊಂದಿಗೆ ಪಟ್ಟಣವೆಲ್ಲಾ ಮೆರವಣಿಗೆ ಮಾಡಿ ಬೆಳಗ್ಗಿನ ಜಾವ ಕೊಂಡಹಾಯಿಸಲಾಗುತ್ತದೆ. ಅಂದಿನ ಬೆಳಿಗ್ಗೆ ಅನ್ನ ಸಂತರ್ಪಣೆ ಏರ್ಪಡಿಸಿ ಸಾಯಂಕಾಲ ಉತ್ಸವಕ್ಕೆ ಹೊರಡುತ್ತದೆ. (ಪ್ರಾಣಿ ಬಲಿ, ಗಾವು ಇರುವುದಿಲ್ಲ). ಅರ್ಚಕರು – ಬ್ರಾಹ್ಮಣರು.

೫. ಮುಳ್ಳಟ್ಟಮ್ಮ

ಈ ದೇವತೆಯು ಕುಣಿಗಲ್ ಪಟ್ಟಣದಿಂದ ಹೊರಗಡೆ ನೆಲೆಸಿದ್ದು, ಮಾಂಸವನ್ನು ಎಡೆಯಾಗಿ ಇಡಲಾಗುತ್ತದೆ. ಪ್ರತಿ ವರ್ಷ ಮಾರ್ಚ್ ತಿಂಗಳಲ್ಲಿ ಜಾತ್ರೆ ನಡೆಯುತ್ತದೆ. ಜಾತ್ರೆಯ ಎರಡು ದಿನಗಳ ಕಾಲ ನಡೆಯುತ್ತದೆ. ಗಂಗಾ ಸ್ನಾನ, ಕೊಂಡ, ರಥೋತ್ಸವ ಮತ್ತು ಗಾವು ಸಿಗಿಯುವುದು ವಿಶೇಷವಾಗಿದ್ದು, ಅರ್ಚಕರು – ದಲಿತ ಸಮುದಾಯಕ್ಕೆ ಸೇರಿದವರಾಗಿದ್ದಾರೆ.

ಪ್ರತಿ ಮಂಗಳವಾರ ಅರಕೆ ಹೊತ್ತ ಭಕ್ತರು ಕುರಿ, ಮೇಕೆ ಅಥವಾ ಕೋಳಿಯನ್ನು ತಾಯಿಗೆ ಅರ್ಪಿಸಿ ಅಲ್ಲಿಯೇ ಅಡುಗೆ ಮಾಡಿ ಬಂದ ಜನರಿಗೆಲ್ಲಾ ಊಟ ಬಡಿಸಲಾಗುತ್ತದೆ.

ಜಾತ್ರೆ ಮತ್ತು ಉತ್ಸವದಲ್ಲಿ ನಡೆಯುವ (ಆರಾಧನೆಯ) ಕಾರ್ಯಕ್ರಮದ ಹಂತಗಳು

ಮಾನವ ಬದುಕಿದುದ್ದಕ್ಕೂ ಹಲವಾರು ಸಂಪ್ರದಾಯಗಳಿಗೆ ಬದ್ಧನಾಗಿ ಬದುಕುತ್ತಾನೆ. ಅನೇಕ ಸಂಪ್ರದಾಯದ ಕೊಂಡಿಗಳು ಅವನ ಜೀವಿತಾವಧಿಯಲ್ಲಿ ಆತನನ್ನು ಬೆಳೆಸುತ್ತವೆ. ಹಗೂ ಉಳಿಸುತ್ತವೆ. ಇಂತಹ ದೇವರ ಸೇವೆಗಳು. ಹರಕೆಗಳು ಹಾಗೂ ನಂಬಿಕೆಯ ಫಲವೇ ಆಚರಣೆ ಅಂತಹವು ಈ ಕೆಳಗಿನಂತಿವೆ.

೧. ಸಾಟಿ ಇಡುವುದು (ಸಾರುವುದು)

ಸಾಟಿ ಎಂದರೆ ಊರೆಲ್ಲಾ ಸಾರಿಕೊಂಡು ಬರುವುದು ಎಂದರ್ಥ. ಗ್ರಾಮದ ಮುಖ್ಯಸ್ಥರು ಹಾಗೂ ಸದಸ್ಯರ ತೀರ್ಮಾನದಂತೆ ಜಾತ್ರೆ ಪ್ರಾರಂಭವಗುವ ೮ ದಿನಗಳ ಮುಂಚೆಯೇ ಒಬ್ಬ ದಲಿತ ಯುವಕನನ್ನು ಕಳುಹಿಸಿ ಜಾತ್ರೆಯ ಬಗ್ಗೆ ಸಾರುತ್ತಾನೆ. ಜಾತ್ರೆಯ ವೇಳೆಯಲ್ಲಿ ಅನುಸರಿಸಬೇಕಾದ ವಿಧಿ-ನಿಷೇಧಗಳು, ಮಡಿ-ಮೈಲಿಗೆ ಆಚಾರ- ವಿಚಾರಗಳನ್ನು ತಮಟೆ ಹಿಡಿದು ದಲಿತ ಯುವಕ ಗ್ರಾಮದಲ್ಲೆಲ್ಲಾ ಪ್ರಚಾರ ಮಾಡಿ ಬರುತ್ತಾನೆ.

೨. ಕಂಬ ನಡೆಸುವುದು

ಹಬ್ಬದ ಪ್ರಾರಂಭ ಸೂಚಕವೇ ಈ ಕಂಬ ನೆಡುವ ಪ್ರಕ್ರಿಯೆಯಾಗಿದ್ದು, ಬೇವಿನ, ಮಾವಿನ, ಅತ್ತಿಯ ಇಲ್ಲವೆ ಆಲದ ಮೂರು ಕವಲುಗಳುಳ್ಳ ಕೊಂಬೆಯನ್ನು ತಂದು ದೇವಸ್ಥಾನದ ಮುಂದೆ ಪೂಜೆ

ಮಾಡಿ ನೆಡಲಾಗುತ್ತದೆ. ಈ ಕಂಬದ ರಾಯ ಗ್ರಾಮ ದೇವತೆಯ ಪತಿ ಎಂದು ನಂಬಿ ಪೂಜಿಸುತ್ತಾರೆ. ನೆಡುವ ಸ್ಥಳದಲ್ಲಿ ಸಾರಿಸಿ, ಗುಡಿಸಿ, ರಂಗೋಲಿ ಇಟ್ಟು ಅರಿಶಿಣ–ಕುಂಕುಮ ಹೂಗಳಿಂದ ಪೂಜೆ ಸಲ್ಲಿಸುತ್ತಾರೆ.

೩. ಹೊಳೆ ಆಡಿ ಬರುವುದು

ಗ್ರಾಮ ದೇವತೆಯ ಜಾತ್ರೆ ಸಾಮಾನ್ಯವಾಗಿ ಪ್ರಾರಂಭವಾಗುವುದು ಮಂಗಳವಾರ ಅಥವಾ ಶುಕ್ರವಾರ ಅದರಲ್ಲೂ ಹುಣ್ಣಿಮೆ ರಾತ್ರಿಯ ದಿನಗಳ ಹಬ್ಬಕ್ಕೆ ಶ್ರೇಷ್ಠವೆಂಬ ನಂಬಿಕೆ ಜನಪದರಲ್ಲಿದೆ. ರಾತ್ರಿ ೮ ಗಂಟೆ ಸುಮಾರಿಗೆ ಊರಿನ ಪ್ರಮುಖರನ್ನು ಒಳಗೊಂಡಂತೆ ಸ್ತ್ರೀ–ಪುರುಷರು, ಮಕ್ಕಳ ಸಹಿತ, ಉತ್ಸವ ಮೂರ್ತಿಯೊಡನೆ ನಡೆ ಮುಡಿಯಲ್ಲಿ ವಾದ್ಯವೃಂದದೊಡನೆ ನೀರಿರುವ ಕೆರೆಯ ದಂಡೆಗೆ ಬಂದು ದೇವರನ್ನು ಒಂದೆಡೆ ಪ್ರತಿಷ್ಠಾಪಿಸಿ, ಪುರೋಹಿತ ನೀರಿನಲ್ಲಿ ಮಿಂದು ಮಡಿಯುಟ್ಟು ಸ್ನಾನ ಮಾಡಿ ಬರುವಾಗ ಒಂದು ಕೊಡದಲ್ಲಿ ಶುದ್ಧ ಜಲವನ್ನು ತಂದು ಮಂಗಳ ದ್ರವ್ಯಗಳಲ್ಲಿ ಪೂಜಿಸಿ ಕಡ್ಡಿ ಕರ್ಪೂರ ಹಚ್ಚಿಡುತ್ತಾರೆ. ಇದನ್ನೆ ಪುಣಿಯೋಜನೆ (ಜಲ ಅಭಿಷೇಕ) ಹೊಸ ಮಡಿಕೆ–ಕುಡಿಕೆ, ಕಳಸದೊಂದಿಗೆ ಪೂಜಿಸಿ ನಡೆಮುಡಿ (ಬಿಳಿ ಬಟ್ಟೆಯನ್ನು ಒದ್ದೆ ಮಾಡಿ ನೆಲಕ್ಕೆ ಹಾಸಿ ಅದರ ಮೇಲೆ ಪುರೋಹಿತರು ಮತ್ತು ದೇವರ ಕಳಶಹೊತ್ತವರು ನಡೆದುಕೊಂಡು ಹೋಗುವುದು) ಈ ನಡೆಮುಡಿಯೊಂದಿಗೆ ವಾದ್ಯವೃಂದ, ದೇವರ ಪದ ಹೇಳುವವರೊಡನೆ ನಿಧಾನವಾಗಿ ಸಾಗುತ್ತಾರೆ. ದೇವಾಲಯಕ್ಕೆ ತಲುಪುವುದರೊಳಗೆ ಬೆಳಕಾಗಿರುತ್ತದೆ.

೪. ಅಗ್ನಿಕೊಂಡ

ಅಗ್ನಿಕೊಂಡ ಗ್ರಾಮ ದೇವತೆಯ ಆಚರಣೆಯಲ್ಲಿ ಪ್ರಮುಖವಾದ ಆಚರಣೆ, ಜಾತ್ರೆ ಪ್ರಾರಂಭವಾಗುವ ೮ ಇಲ್ಲವೆ ೧೦ ದಿನಗಳಿಗೂ ಮೊದಲೇ ಅಗ್ನಿಕೊಂಡಕ್ಕೆ ಬೇಕಾದ ವಸ್ತುಗಳ ಸಂಗ್ರಹ ನಡೆಯುತ್ತದೆ.

ಕೊಂಡಹಾಯುವ ಹಿಂದಿನ ದಿನ ಕೊಂಡಕ್ಕೆ ಅರಳೀ ರೆಂಬೆಗಳು, ಗಂಧದ ಚಕ್ಕೆ ಬಳಿ ಎಕ್ಕದ ಚೆಕ್ಕೆ, ಬೇವಿನ ರೆಂಬೆಗಳು, ಹೀಗೆ ಶೇಖರಿಸಿದ ಸೌದೆಗಳಿಂದ ಹೊಂಡ ಸಿದ್ಧವಾಗುತ್ತದೆ. ಹಿಂದಿನ ರಾತ್ರಿಯೇ ಕೊಂಡಕ್ಕೆ ಉರಿ ಹಚ್ಚಲಾಗಿದ್ದು, ಸುಮಾರು ೧೦ ಇಲ್ಲವೆ ೧೨ ಗಂಟೆಗಳ ಕಾಲ ಉರಿದು ಕೊಂಡದಲ್ಲಿ ಕೆಂಡ ರೂಪುಗೊಳ್ಳುತ್ತದೆ. ಸುಮಾರು ೧೨ ಅಡಿ ಉದ್ದ ೪ ಅಡಿ ಅಗಲ, ೨ ಅಡಿ ಆಳವಿರುತ್ತದೆ. ಸಾಮಾನ್ಯವಾಗಿ ರಾತ್ರಿ ೯ ಗಂಟೆ ಇಲ್ಲವೆ ೧೦ ಗಂಟೆ ಅಥವಾ ಮುಂಜಾನೆ ೪ ರಿಂದ ೫ ಗಂಟೆ ಸುಮಾರಿಗೆ ಕೊಂಡ ಹಾಯುವುದು ನೆರವೇರುತ್ತದೆ.

ಕೊಂಡ ಹಾಯುವುದು ಉಪವಾಸವಿದ್ದು, ಮಡಿ–ಮೈಲಿಗೆಯಿಂದ ಶುಚಿತ್ವದಿಂದಿದ್ದು, ದೇವರಲ್ಲಿ ಆರಕೆ ಇಟ್ಟು ಭಕ್ತಿಯಿಂದ ದೇವರನ್ನು ಜಪಿಸುತ್ತಾ ಕೊಂಡ ಹಾಯುವ ಪದ್ಧತಿ ರೂಢಿಯಲ್ಲಿದೆ.[೨]

೫. ಬಲಿಯಾಚರಣೆ

ಬಲಿಯಾಚರಣೆಯ ಗ್ರಾಮ ದೇವತೆ ಹಾಗೂ ಶಿಷ್ಟ ದೇವತೆಯ ಆಚರಣೆಗಳನ್ನು ಪ್ರತ್ಯೇಕಿಸುವ ಪ್ರಮುಖ ಅಂಶಗಳಲ್ಲಿ ಒಂದಾಗಿದೆ. ರೋಗ ರುಜಿನಿಗಳಿಂದ, ಮಳೆಬೆಳೆ ಇಲ್ಲದೆ ನೊಂದ ಜನರ ಕಷ್ಟ ನಿವಾರಣೆಗೆ, ದೇವತೆಗೆ ಹರಕೆ ಹೊತ್ತು ಬಲಿ ನೀಡುವುದರಿಂದ ದೇವಿಯನ್ನು ಸಂತೃಪ್ತಳನ್ನಾಗಿ ಮಾಡಲು

ಕುರಿ, ಕೋಳಿ, ಮೇಕೆ ಮತ್ತು ಕೋಣವನ್ನು ಬಲಿ ನೀಡುವ ಪದ್ಧತಿ ಹಿಂದಿನಿಂದಲೂ ಬೆಳೆದು ಬಂದಿದೆ. ಗ್ರಾಮ ದೇವತೆಗೆ ಕೋಣದ ಬಲಿ ಬಹಳ ಇಷ್ಟವಾದುದಾಗಿದ್ದು, ಬಹುತೇಕ ಕೋಣವನ್ನು ದೇವತೆಗೆ ಅರ್ಪಿಸುತ್ತಾರೆ. ದಷ್ಟ-ಪುಷ್ಟವಾಗಿ ಬೆಳೆದಿರುವ ಕೋಣವನ್ನು ಮೈತೊಳೆದು ಶೃಂಗರಿಸಿ, ಗ್ರಾಮದಲ್ಲೆಲ್ಲ ಮೆರವಣಿಗೆ ಮಾಡಿ ಚೆನ್ನಾಗಿ ದಂಡಿಸಿ ಉಪವಾಸ ಕೆಡವಿ ಗ್ರಾಮದೇವತೆಯ ಮುಂಬಾಗಿಲಿಗೆ ಮುಖ ಮಾಡಿ ಬಲಿಯ ಕಂಬಕ್ಕೆ ಕಟ್ಟಿ ನಿಲ್ಲಿಸುತ್ತಾರೆ. ಪೂಜೆ ಎಲ್ಲಾ ಮುಗಿದ ಮೇಲೆ ಕೋಣಕ್ಕೆ ಅರಿಶಿನ-ಕುಂಕುಮ ಇಟ್ಟಿ ಪೂಜಿಸಿ ತಲೆಯ ಮೇಲೆ ನೀರನ್ನು ಚುಮುಕಿಸುತ್ತಾರೆ. ಕೋಣವು ತಲೆಯನ್ನು ಆಡಿಸಿ ಸಮ್ಮತಿ ಸೂಚಿಸಿದಾಗ ಹರಿತವಾದ ಮಚ್ಚಿನಿಂದ ಒಂದೇ ಏಟಿಗೆ ಕತ್ತರಿಸಿ ಬಾಯಿಗೆ ನೀರನ್ನು ಬಿಟ್ಟು ಕೋಣದ ಬಲಗಾಲನ್ನು ಕಡಿದು ಬಾಯಿಗಿಟ್ಟು ಆನಂತರ ಅದರ ಜಿಡ್ಡಿನ ಅಂಶದಿಂದ (ಕೊಬ್ಬು) ದೇವತೆಗೆ ದೀಪ ಉರಿಸುತ್ತಾರೆ. ಕೋಣದ ತಲೆಯನ್ನು ಬಲಿಪೀಠದ ಮೇಲೆ ಇಟ್ಟಿರುತ್ತಾರೆ. ಕೋಣದ ದೇಹವನ್ನು ದಲಿತರು(ವಾದ್ಯಗಾರರು) ಮನೆಗೆ ಕೊಂಡೊಯ್ಯುತ್ತಾರೆ.

೬. ಪಲ್ಲಕ್ಕಿ- ಉತ್ಸವ ಅಥವಾ ಪಾಲ್ಕಿ

ಜಾತ್ರೆಗಳಲ್ಲಿ ದೇವರ ಉತ್ಸವ ಮೂರ್ತಿ ಹೊರಡುವುದು ಪಲ್ಲಕ್ಕಿಗಳಲ್ಲಿಯೇ, ಇದನ್ನು ಪಲ್ಲಕ್ಕಿ ಸೇವೆ, ಪಾಲ್ಕಿ ಅಥವಾ ಹೂವಿನ ಪಲ್ಲಕ್ಕಿ ಎಂದು ಜನಪದರು ಕರೆಯುತ್ತಾರೆ. ಹೂವಿನಲ್ಲಿ ಅಲಂಕೃತಗೊಂಡಿದ್ದಾರೆ. ಹೂವಿನ ಪಲ್ಲಕ್ಕಿ ಹೂಗಳನ್ನು ಹೊರತುಪಡಿಸಿ ಕೇವಲ ಮುತ್ತುಗಳಿಂದಲೇ ಅಲಂಕೃತಗೊಂಡ ಪಲ್ಲಕ್ಕಿಯಾದರೆ ಮುತ್ತಿನ ಪಲ್ಲಕ್ಕಿ ಎಂದೂ ಜನಪದರು ಗುರುತ್ತಿಸುತ್ತಾರೆ. ಮೊದಲು ದೇವಸ್ಥಾನದಲ್ಲಿ ಪೂಜಿಸಿ ಉತ್ಸವಮೂರ್ತಿಯನ್ನು ಈ ಪಲ್ಲಕ್ಕಿಗಳಲ್ಲಿ ತಂದು ಪ್ರತಿಷ್ಠಾಪಿಸಿ, ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಕರೆದೊಯುತ್ತಾರೆ. ವಾದ್ಯಗೋಷ್ಠಿ, ಕರಡಿ ಮೇಳ, ನಂದಿಕೋಲು, ಹುಲಿವೇಶ, ಡೊಳ್ಳು ಕುಣಿತ, ಪಟಕುಣಿತ, ವೀರಗಾಸೆ ತಂಡದೊಡನೆ ಸಾಗುತ್ತಿದ್ದಾರೆ ಅದನ್ನು ನೋಡಿ ಆನಂದಿಸುವುದೇ ಅದೃಷ್ಠ. ಈ ರೀತಿ ಪಲ್ಲಕ್ಕಿಗಳಲ್ಲಿ ಮೆರವಣಿಗೆ ಹೊರಟಾಗ ವಿದ್ಯುತ್ ಅಲಂಕಾರ, ಪಟಾಕಿ, ಮದ್ದುಗುಂಡು ಸಿಡಿಸಿದಾಗ ದೇವಲೋಕವೇ ಭೂಮಿಗೆ ಇಳಿದು ಬಂದ ರೀತಿ ಕಾಣುತ್ತದೆ. ಮೆರವಣಿಗೆ ಸಂದರ್ಭದಲ್ಲಿ ಉತ್ಸವಮೂರ್ತಿ ಹಣ್ಣುಕಾಯಿ ಕೊಟ್ಟು ಪೂಜೆ ಮಾಡಿಸುತ್ತಾರೆ.[೨೩]

೭. ಗಾವು ಸಿಗಿಯುವುದು

ಕೆಲವು ಜನಪದ ವಿದ್ವಾಂಸರು ಈ ಗಾವನ್ನು ಬೇಟೆಯ ಸಂಸ್ಕೃತಿಯ ಅವಶೇಷವಾಗಿ ಆಚರಣೆಯ ರೂಪದಲ್ಲಿ ಉಳಿದುಕೊಂಡು ಬಂದಿದೆ ಎನ್ನುತ್ತಾರೆ. ಇದು ಮನುಷ್ಯನು ಮೃಗ ಸದೃಶ್ಯವಾದ ಅವಸ್ಥೆಯಲ್ಲಿದ್ದಾಗಿನ ಸ್ಥಿತಿಯ ಒಂದು ಪುನರಾವರ್ತನೆ ಅಥವಾ ಪುನರಭಿನಯವಾಗಿದೆ.

ಧೂಳ್ಮರಿ, ಹಲ್ಮರಿ, ಬ್ಯಾಟೆ ಜಗಿಯೋದು ಎಂಬ ಹೆಸರಿನಲ್ಲಿರುವ ಗಾವು ಸಿಗಿಯುವ ಕ್ರಿಯೆಯನ್ನು ಗಂಗಾ ಮತಸ್ಥರು ಅಥವಾ ನಾಯಕರು ಹೆಚ್ಚಾಗಿ ಕೈಗೊಳ್ಳುತ್ತಾರೆ. ಗಾವು ಸಿಗಿಯುವುದು ಎಂದರೆ ಉಪವಾಸದಿಂದಿರುವ ವ್ಯಕ್ತಿಗೆ ಜಾತ್ರೆಯ ದಿವಸ ಅರೆವಾದ್ಯಗಳ ಶಬ್ದದಿಂದ ಅವನಿಗೆ ರೋಷ ಆವೇಶ ಹೆಚ್ಚಾಗುತ್ತದೆ. ಕಂಬಕ್ಕೆ ಕಪ್ಪು ಬಣ್ಣದ ಗಾವು ಮರಿಗಳನ್ನು ಕಟ್ಟಿರುತ್ತಾರೆ. ಆತನು ರೋಷದಿಂದ ತಪ್ಪಿಸಿಕೊಳ್ಳಲು ಯತ್ನಿಸುವ ಮೇಕೆ ಮರಿ (ಕುರಿ) ಯನ್ನು ಹಿಡಿದು ತಂದು ಅದರ ಕತ್ತನ್ನು ಒಂದು ಕೈಯಲ್ಲಿ ಎರಡು ಕೈಕಾಲುಗಳನ್ನು ಇನ್ನೊಂದು ಕೈಯಲ್ಲಿ ಹಿಡಿದು ಕತ್ತಿಗೆ ಬಾಯಿಗೆ ಹಾಕಿ ಕಚ್ಚಿ ರಕ್ತ ಹೀರುತ್ತಾನೆ. ನಂತರ

ಅದರ ಹೊಟ್ಟೆಗೆ ಬಾಯಾಕಿ ದೇಹವನ್ನು ಚಿಂದಿ ಮಾಡಿ ಬಿಸಾಡುತ್ತಾನೆ. ನಂತರ ಆತನಿಗೆ ತಿನ್ನಲು ಮೊಸರು ಅನ್ನದ ಉಂಡೆಗಳನ್ನು ತಿನ್ನಲು ಕೊಡುತ್ತಾರೆ. ಇದೊಂದು ಅಮಾನುಷ ಆಚರಣೆಯಾಗಿದೆ.

೮. ಬ್ರಹ್ಮ ರಥೋತ್ಸವ

ಸಾಮಾನ್ಯವಾಗಿ ಧ್ವಜಾರೋಹಣದ ದಿನ ದೇವಾಲಯದ ಮುಂದೆ ರಥವನ್ನು ನಿಲ್ಲಿಸಿ ಶುದ್ಧಗೊಳಿಸಿ ರಥದ ತುತ್ತ ತುದಿಯಲ್ಲಿ ಕಳಶವನ್ನು ಮತ್ತು ನಾಲ್ಕು ಛತ್ರಿಗಳನ್ನು ಸ್ಥಾಪಿಸುವ ಮೂಲಕ ಬ್ರಹ್ಮ ರಥೋತ್ಸವಕ್ಕೆ ಚಾಲನೆ ನೀಡಲಾಗುತ್ತದೆ. ಆನಂತರ ರಥದ ಅಲಂಕಾರ ಕಾರ್ಯ ಭರದಿಂದ ಸಾಗುತ್ತದೆ. ದೊಡ್ಡದಾದ ನಾಲ್ಕು ಮರದ ಗಾಲಿಗಳ ಮೇಲೆ ನಿಂತ ಮರದಿಂದಲೇ ಮಾಡಿದ ನಾಲ್ಕು ದಿಕ್ಕಿಗೂ ನಿಂತ ರಕ್ಕಸ ಸಿಂಹಗಳನ್ನು, ಮಿಥುನ ಶಿಲ್ಪಗಳನ್ನು ಕೆತ್ತಲಾಗಿರುತ್ತದೆ. ರಥದ ಪೀಠದ ಅಂಕಣದಿಂದ ಮೇಲ್ಭಾಗಕ್ಕೆ ರಂಗು ರಂಗಿನ ಏಳು ಅಂಕಣಗಳ ಬಟ್ಟೆಯಾದ ಸಿಂಗರಿಸಲಾಗಿದ್ದು, ಅದಕ್ಕೂ ಮೇಲ್ಭಾಗದಲ್ಲಿ ಬಿದಿರಿನ ಪಟ್ಟಿಗಳನ್ನು ತಯಾರಿಸಿ ದುಂಡಾಕಾರದಲ್ಲಿ ಬಿಗಿದು ಕಟ್ಟಿ, ರಂಗು ಚೆಲ್ಲಿದ ಹಳದಿ ಬಟ್ಟೆಯಿಂದ ಸಿಂಗರಿಸಿರುತ್ತಾರೆ. ಅದರ ಮುಂಭಾಗದಲ್ಲಿ ಆಂಜನೇಯನ ಚಿತ್ರಪಠವನ್ನು ಕಟ್ಟಲಾಗಿರುತ್ತದೆ. ರಥದ ಎತ್ತರವು ಸುಮಾರು ೩೦-೪೫ ಅಡಿಗಳ ಎತ್ತರವಾಗಿರುತ್ತದೆ. ಹೀಗೆ ಸಿಂಗರಿಸಿದ ರಥದೊಳಗೆ ಉತ್ಸವಮೂರ್ತಿಯನ್ನು ಕರೆತಂದು ಪ್ರತಿಷ್ಠಾಪಿಸಲಾಗುತ್ತದೆ.

ರಥದ ಪುಣ್ಯಾರ್ಚನೆಗೆ ಹಾಲು, ತುಪ್ಪ, ಮೊಸರು, ಗೋಮೂತ್ರ, ಸಗಣಿಯನ್ನು ಸಿಂಪಡಿಸಿ ರಥವನ್ನು ಶುದ್ಧಿಗೊಳಿಸಿ ಕಳಶಗಳನಿಟ್ಟು ಮಹಾಮಂಗಳಾರತಿಯಾದ ನಂತರ ಮೊದಲು ಪೂರ್ವಕ್ಕೆ ನಡೆಸಲಾಗಿರುತ್ತದೆ. ಭಕ್ತರು ದೇವರಲ್ಲಿ ಇಷ್ಟಾರ್ಥಗಳನ್ನು ಬೇಡಿಕೊಂಡು ಬಾಳೆಹಣ್ಣು ಮತ್ತು ದವಣಿ ಎಂಬ ಪತ್ರೆಯನ್ನು ರಥದ ಮೇಲೆ ಎಸೆಯುತ್ತಾರೆ ಉತ್ಸವವೆಲ್ಲಾ ಮುಗಿದ ನಂತರ ದೇವರ ಉತ್ಸವಮೂರ್ತಿಯನ್ನು ಗ್ರಾಮದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಮಾಡಿಸಿ ಗುಡಿಗೆ ಮರಳಿಸುತ್ತಾರೆ. ಒಟ್ಟಿನಲ್ಲಿ ಒಂದು ದೇವಾಲಯವಿದ್ದಂತೆ ಇರುವ ರಥವು ಭಾರತೀಯ ಶಿಲ್ಪ ಪರಂಪರೆಯಲ್ಲಿ ವಿಶಿಷ್ಟ ಸ್ಥಾನವಿದೆ.

೯. ಅನ್ನ ಸಂತರ್ಪಣೆ

ಜಾತ್ರೆಯಲ್ಲಿ ಸಾಮಾನ್ಯವಾಗಿ ತೇರು ಎಳೆದ ದಿನ ದೇವರ ಹೆಸರಿನಲ್ಲಿ ಅನ್ನಸಂತರ್ಪಣೆಯನ್ನು ನೆರವೇರಿಸಲಾಗುತ್ತದೆ. ಇದನ್ನು ಸೇವಾಕರ್ತರ ಸಹಾಯದಿಂದ ನಡೆಸಲಾಗುತ್ತದೆ. ಯಾರು ಏನನ್ನು ನೀಡಲು ಸಾಧ್ಯವೋ ಹಾಗೆ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ದೇವರ ಸೇವೆಗೆ ಇಚ್ಛೆಯಿಂದ ಹಣ, ಅಕ್ಕಿ, ತರಕಾರಿ, ಎಣ್ಣೆ, ಬೇಳೆ, ಊಟದ ಎಲೆ, ಉರುವಲು, ಪಾತ್ರೆ ಸಾಮಾನು, ಶಾಮಿಯಾನವನ್ನು ಇಚ್ಛಾನುಸಾರದಂತೆ ದೇವರ ಸೇವೆಗೆ ದಾನಿಗಳು ನೀಡುವ ಎಲ್ಲಾ ಪದಾರ್ಥಗಳನ್ನು ಒಟ್ಟಾಗಿಸಿ ಜಾತ್ರೆಯಲ್ಲಿ ಅನ್ನಸಂತರ್ಪಣೆ ನಡೆಸುತ್ತಾರೆ. ಜಾತಿ ಬೇಧವನ್ನು ತೊರೆದು ಎಲ್ಲರು ಭಾಗವಹಿಸುತ್ತಾರೆ.

ಜನತೆಯನ್ನು ಅನ್ನದಿಂದ ಸಂತೃಪ್ತಿಪಡಿಸಿದರೆ ದೇವರು ಸಂತೃಪ್ತನಾಗುತ್ತಾನೆಂಬ ನಂಬಿಕೆ ಇಂದಿಗೂ ಪ್ರಬಲವಾಗಿದೆ. ಅನ್ನ ಪರಬ್ರಹ್ಮ ಸ್ವರೂಪ ಎಂದು ನಂಬುವ ಭಕ್ತಸ್ತೋಮ ಅನ್ನದಾನವನ್ನು ಶ್ರೇಷ್ಠ ದಾನವೆಂದು ಬಗೆದು ಈ ಆಚರಣೆಯನ್ನು ಜೀವಂತವಾಗಿರಿಸಿದೆ.[೨೪]

ಪ್ರಮುಖ ಉತ್ಸವಗಳು

ಕುಣಿಗಲ್ ಪಟ್ಟಣದ ಪ್ರಮುಖ ದೇವಾಲಯಗಳಲ್ಲಿ ಹಾಗೂ ಸಂಘ ಸಂಸ್ಥೆಗಳಲ್ಲಿ ಕೆಲವು ಉತ್ಸವಗಳನ್ನು ನೆರವೇರಿಸಲಾಗುತ್ತದೆ. ಅವುಗಳೆಂದರೆ

೧. ಕಲ್ಯಾಣೋತ್ಸವ

ಪಟ್ಟಣದ ಪ್ರಮುಖ ದೇವಾಲಯಗಳಾದ ವೆಂಕಟರಮಣ, ರಂಗನಾಥ ದೇವಾಲಯಗಳಲ್ಲಿ ವಿಶೇಷವಾಗಿ ಕಲ್ಯಾಣ್ಯೋತ್ಸವ ಮಾಡಲಾಗುತ್ತದೆ. ಸಪ್ತಋುಷಿಗಳು ವಿಷ್ಣುವಿನ ದಶಾವತಾರದ ಗುಣಗಳನ್ನು ಹೇಳಿ ಜಗತ್ತಿನ ಪಾಲನೆಗಾಗಿ ಲಕ್ಷ್ಮಿಯನ್ನು ಧಾರೆ ಎರೆದು ಕೊಟ್ಟ ಕಥೆಯನ್ನು ಹೇಳಿ ವಿಷ್ಣು, ಲಕ್ಷ್ಮಿಯ ಕಲ್ಯಾಣ ನೆರವೇರಿಸುತ್ತಾರೆ. ದೇವರನ್ನು ಹಾಡಿ, ಹೊಗಳಿ, ಉಯ್ಯಾಲೆಯಲ್ಲಿ ತೂಗಿಸಿ ಸೇವೆಗೈಯುತ್ತಾರೆ. ಮದುವೆಯಂತೆ ಶಾಸ್ತ್ರೋಕ್ತವಾಗಿ ಸೇವೆ ನೆರವೇರುತ್ತದೆ. ಉದಾ: ಗಿರಿಜಾ ಕಲ್ಯಾಣ, ಶ್ರೀನಿವಾಸ ಕಲ್ಯಾಣ.

೨. ಹನುಮವಾಹನೋತ್ಸವ

ವಿಷ್ಣು ನಾನಾ ಅವತಾರಗಳಲ್ಲಿ ಅನೇಕ ಅಸುರರನ್ನು ಸಂಹರಿಸಿದ ಕಾರಣಕ್ಕಾಗಿ ಹನುಮ, ಆದಿಶೇಷ, ಗರುಡ, ಕುದುರೆ ದೇವರನ್ನು ತಮ್ಮ ಹೆಗಲ ಮೇಲೆ ಹೊತ್ತು ಮೆರಸಿ ದೇವರ ದಣಿವನ್ನು ಆರಿಸುವ ಸಲುವಾಗಿ ವರವನ್ನು ಕೇಳಿದರು. ಆಗ ಮಹಾವಿಷ್ಣು ಒಪ್ಪಿಗೆಯನ್ನು ಸೂಚಿಸಿದ ಕಾರಣಕ್ಕಾಗಿ ಈ ಉತ್ಸವಗಳು ನಡೆಯುತ್ತವೆ. ಹರಕೆ ಹೊತ್ತ ಭಕ್ತರು ಇಲ್ಲವೇ ಸೇವೆಗೆಂದೇ ನೇಮಕವಾದ ಧರ್ಮದರ್ಶಿಗಳು ಸಂಕಲ್ಪವನ್ನು ಹೊತ್ತು ಈ ಆಚರಣೆಯನ್ನು ನೆರವೇರಿಸಿ ಕೊಡುತ್ತಾರೆ.

ಹನುಮವಾಹನೋತ್ಸವದಲ್ಲಿ ರಾಮನ ಭಕ್ತ ಹನುಮಂತನ ವಿಗ್ರಹದ ಮೇಲೆ ದೇವರ ಉತ್ಸವಮೂರ್ತಿಯನ್ನು ಕೂರಿಸಿ ಊರಲ್ಲೆಲ್ಲಾ ಉತ್ಸವ ಮೂರ್ತಿಯನ್ನು ಮೆರವಣಿಗೆ ಮಾಡುತ್ತಾರೆ.

೩. ಗರುಡವಾಹನೋತ್ಸವ

ಗರುಡವಾಹನದ ಮೇಲೆ ಶಿಷ್ಟ ದೇವರ ಉತ್ಸವಮೂರ್ತಿಯನ್ನು ಕೂರಿಸಿ ಮೆರವಣಿಗೆ ಮಾಡುವುದನ್ನು ಗರುಡೋತ್ಸವ ಎಂದು ಕರೆಯುತ್ತಾರೆ. ಇದರ ಹಿನ್ನೆಲೆಯಲ್ಲಿ ಒಂದು ಐತಿಹ್ಯವಿದೆ. ಈ ಹಿಂದೆ ದೇವರ ಮೇಲೆ ಸೇವಾರ್ಥವಾಗಿ ಹಾಕಲಾಗಿದ್ದ ಒಡವೆಯನ್ನು ಕೊಳ್ಳೆ ಹೊಡೆದು ಹೋದ ಕಳ್ಳರನ್ನು ಬೇಟೆಯಾಡಲು ದೇವರು ಗರುಡ ವಾಹನವನ್ನು ಏರಿ ಹೋರಟನೆಂಬ ನಂಬಿಕೆ ಭಕ್ತಾದಿಗಳಲ್ಲಿದೆ.

ದೇವರು ದುಷ್ಟ ಶಿಕ್ಷಕ ಶಿಷ್ಟ ರಕ್ಷಣದ ಹೊಣೆ ಹೊತ್ತ ಕಾರಣಕ್ಕಾಗಿ ದೇವರಿಗೆ ಈ ಸೇವೆ ಸಲ್ಲಿಸುತ್ತಾರೆ. ಅದೇ ರೀತಿ ಶೈವ ದೇವಾಲಯದ ಉತ್ಸವ ಮೂರ್ತಿಗಳನ್ನು ನಂದಿ ಮತ್ತು ಕುದುರೆ ವಾಹನ ಮಾಡಿ ಮೆರವಣಿಗೆ ಮಾಡುತ್ತಾರೆ.[೨೫]

೪. ತೆಪ್ಪೋತ್ಸವ

ಕುಣಿಗಲ್ ಪಟ್ಟಣದಲ್ಲಿ ಕೆರೆಗಳು ತುಂಬಿದ ಸಂದರ್ಭದಲ್ಲಿ ವಿಶೇಷ ಆಚರಣೆಯಾಗಿ ತೆಪ್ಪೋತ್ಸವ ಮಾಡಲಾಗುತ್ತದೆ. ಕೆರೆಯ ಅಂಗಳವನ್ನು ವಿಶೇಷವಾಗಿ ಶುಚಿಗೊಳಿಸಿ, ವಿದ್ಯುತ್ ದೀಪಾಲಂಕಾರ ಮಾಡಿ ವಾದ್ಯವೃಂದ, ಹಾಡುಗಾರರ ವೃಂದದೊಡನೆ ಪಟ್ಟಣದ ಎಲ್ಲಾ ವರ್ಗದವರು ಕೆರೆಯ ಬಳಿ ಸೇರಿಕೊಳ್ಳುತ್ತಾರೆ. ಪಟ್ಟಣದಲ್ಲಿರುವ ಉತ್ಸವಮೂರ್ತಿಗಳನ್ನು ಅಲಂಕರಿಸಿ ತೆಪ್ಪದ ಮೇಲೆ ಪಲ್ಲಕ್ಕಿಯ ಸಮೇತ ಇಡಲಾಗುತ್ತದೆ.

ನಂತರ ತೆಪ್ಪ ತೇಲುತ್ತಾ, ಅದಕ್ಕೆ ಹುಟ್ಟು ಹಾಕಿ ಒಂದು ಕಡೆಯ ದಿಬ್ಬದಿಂದ ಮತ್ತೊಂದು ದಿಬ್ಬಕ್ಕೆ ಸಾಗಿಸಲಾಗುತ್ತದೆ. ತೆಪ್ಪವನ್ನು ಬಿದಿರಿನ ಬೊಂಬುಗಳನ್ನು ಜೋಡಿಸಿ ಹಗ್ಗಗಳಿಂದ ಕಟ್ಟಿರುತ್ತಾರೆ. ತೆಪ್ಪಕ್ಕೆ ಬಾಳೆಕಂದು ಮತ್ತು ಹೂವು, ಕಬ್ಬಿನ ಗರಿಗಳನ್ನು ಕಟ್ಟಿ ವಿಶೇಷವಾಗಿ ಅಲಂಕರಿಸಿರುತ್ತಾರೆ. ಇದನ್ನು ನೋಡಲು ಜನತೆ ಕೆರೆಯ ಏರಿಯ ಮೇಲೆ ಗುಂಪು ಗುಂಪಾಗಿ ಸೇರಿರುತ್ತಾರೆ. ಪಟಾಕಿ, ಹೂಬಾಣ, ಸಿಡಿಮದ್ದನ್ನು ಸಿಡಿಸುವ ಮೂಲಕ ಪಟ್ಟಣದಲ್ಲಿ ಹಬ್ಬದ ಸಡಗರ ಏರ್ಪಡುತ್ತದೆ.

೫. ದೀಪೋತ್ಸವ

ವಿಶೇಷವಾಗಿ ಕಾರ್ತಿಕ ಮಾಸದಲ್ಲಿ (ದೀಪಾವಳಿ) ಪಟ್ಟಣದ ಎಲ್ಲಾ ದೇವಾಲಯದಲ್ಲಿ ಮಣ್ಣಿನ ದೀಪಗಳನ್ನು ಜೋಡಿಸಿ ಸಗಣಿ ಇಟ್ಟು, ದೀಪಕ್ಕೆ ಎಣ್ಣೆ ಬಿಟ್ಟು ದೀಪ ಹಚ್ಚಲಾಗುತ್ತದೆ. ಭಕ್ತರ ಹಿಚ್ಚೆಗೆ ಬಿಟ್ಟಂತೆ ೧೦೧, ೫೦೧, ೧೦೦೧, ೧ ಲಕ್ಷ ದೀಪವನ್ನು ಹಚ್ಚುವುದು ವಿಶೇಷ, ಎಡಿಯೂರಿನ ಸಿದ್ದಲಿಂಗೇಶ್ವರ ದೇವಾಲಯದಲ್ಲಿ ಪ್ರತಿ ವರ್ಷ ಕಾರ್ತಿಕ ಮಾಸದಲ್ಲಿ ಲಕ್ಷ ದೀಪೋತ್ಸವ ಆಚರಣೆ ಮಾಡಲಾಗುತ್ತದೆ.

ದೀಪೋತ್ಸವದಲ್ಲಿ ಭಕ್ತರ ಆಪೇಕ್ಷೆಗೆ ಅನುಸಾರವಾಗಿ ತುಪ್ಪದ ದೀಪ, ಹೊಂಗೆ ಎಣ್ಣೆ ಹಾಗೂ ಸಾಧಾರಣ ಎಣ್ಣೆ ಬಳಸಿ ದೀಪವನ್ನು ನಂದಿಸುತ್ತಾರೆ.

ಅದೇ ರೀತಿ ಕುಣಿಗಲ್ ಪಟ್ಟಣದಲ್ಲಿ ಸ್ವಾತಂತ್ರೋತ್ಸವ, ಗಣರಾಜ್ಯೋತ್ಸವ, ಕನ್ನಡ ರಾಜ್ಯೋತ್ಸವ, ಗಾಂಧಿಜಯಂತಿ, ಬಸವ ಜಯಂತಿ, ಕನಕ ಜಯಂತಿ ಆಚರಣೆಗಳನ್ನು ಶಾಲಾ-ಕಾಲೇಜುಗಳು, ಸರ್ಕಾರಿ ಕಛೇರಿಗಳಲ್ಲಿ ಮತ್ತು ಸಂಘ ಸಂಸ್ಥೆಗಳಲ್ಲಿ ಸಡಗರ ಸಂಭ್ರಮದಿಂದ ಆಚರಿಸುವುದನ್ನು ಕಾಣಬಹುದಾಗಿದೆ.

೫.೪. ಹಬ್ಬ-ಹರಿದಿನಗಳು

ನಾವು ವಾಸಿಸುವ ಈ ಪ್ರಪಂಚ ಧರ್ಮ ಕ್ಷೇತ್ರವೂ ಹೌದು, ಕರ್ಮಕ್ಷೇತ್ರವೂ ಹೌದು ಇಲ್ಲಿ ವಾಸಿಸುವ ನಾವು ನಮ್ಮ ಒಳತಿಗಾಗಿ ಸುಖ ಸಂತೋಷಕ್ಕಾಗಿ, ಬಾಳಿನಲ್ಲಿ ಹೊಂದಾಣಿಕೆಗಾಗಿ, ಸಾಧನೆಯಿಂದ ಸಿದ್ದಿಯತ್ತ ಸಾಗುವುದಕ್ಕಾಗಿ, ಸಮಾಜ ಸಂಘಟನೆಗಾಗಿ, ಆತ್ಮೀಯರೊಂದಿಗೆ ಬೆರೆಯಲಿಕ್ಕಾಗಿ ಹಲವು ಹಬ್ಬ-ಹರಿದಿನಗಳನ್ನು ಆಚರಿಸುತ್ತಾ ಬಂದಿದ್ದೇವೆ. ವ್ರತ ನಿಯಮಗಳನ್ನು ಎಲ್ಲಾ ದಿನಗಳಂದು ಆಚರಿಸಲು ಸಾಧ್ಯವಿಲ್ಲ. ಕೊನೇಪಕ್ಷ ಇಂಥ ದಿನಗಳಲ್ಲಾದರೂ ಸ್ವಲ್ಪ ದೇಹದಂಡನೆ, ಆತ್ಮ ಚಿಂತನೆ ಮಾಡಿದಾಗ ಅಲ್ಲೂ ಇಲ್ಲೂ ಸಲ್ಲುವವರಾಗಿ ಮಾನವ ಮಾಧವನಾದಾನು.[೨೬] ಎಲ್ಲಾ ಹಬ್ಬಗಳಲ್ಲಿ ಕಂಡು ಬರುವ ಸಮಾನ ಅಂಶವೆಂದರೆ ಪ್ರಾತಃ ಕಾಲದ ತೈಲಾಭ್ಯಂಜನ ಸ್ಥಾನ, ಹೊಸ ವಸ್ತ್ರಧಾರಣೆ, ಶುಚಿ-ರುಚಿ ಬೋಜನ, ಬಂಧು-ಬಾಂಧವರ ಸುಮಧುರ ಮಿಲನ, ಜಪ-ತಪ. ಪೂಜೆ ಪುನಸ್ಕಾರ, ದಾನ-ಧರ್ಮ, ಹೋಮ-ನೇಮ, ನೃತ್ಯ-ಸಂಗೀತ, ಭಜನೆ ಮುಂತಾದ ಮನರಂಜನೆಗಳು ಇವೆಲ್ಲಾ ಮನಸ್ಸಿಗೆ ಸಂತೋಷವನ್ನುಂಟು ಮಾಡುತ್ತವೆ ಎಂಬ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ಪೂರ್ವಿಕರು ಹಬ್ಬ-ಹರಿದಿನಗಳ ವಿಶೇಷ ಆಚರಣೆಯನ್ನು ಅನುಸರಿಸುತ್ತಾ ಬಂದಿದ್ದಾರೆ.[೨೭] ಕುಣಿಗಲ್ ಪಟ್ಟಣದಲ್ಲಿ ಈ ಕೆಳಕಂಡಂತೆ ಹಬ್ಬ-ಹರಿದಿನಗಳನ್ನು ಆಚರಿಸುತ್ತಾ ಬಂದಿದ್ದಾರೆ.

೧. ಯುಗಾದಿ

"ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ ಹೊಸ ವರುಷಕ್ಕೆ ಹೊಸ ಹರುಷವ ಹೊಸತು ಹೊಸತು ತರುತಿದೆ" ಎಂಬ ಕವಿ ಬೇಂದ್ರೆಯವರ ವಾಣಿಯಂತೆ ಹೊಸ ವರ್ಷ

ಹರ್ಷದಾಯಕವಾಗಲೆಂಬ ಒಳ್ಳೆ ಇಚ್ಛೆಯಿಂದ ಆಚರಿಸುವ ಹಬ್ಬವೇ ಯುಗಾದಿ. ಯುಗ ಎಂದರೆ 'ನೂತನ ವರ್ಷ, ಆದಿ ಎಂದರೆ ಆರಂಭ ಎಂದರ್ಥ. ಹಿಂದೂ ಪಂಚಾಗದ ಪ್ರಕಾರ ಯುಗಾದಿಯು ವರ್ಷದ ಆರಂಭದ ದಿನವಾಗಿದ್ದು, ಹೊಸ ವರ್ಷ ಎಂಬುದಾಗಿ ಆಚರಣೆ ಮಾಡುತ್ತಾರೆ. ಆಸುರೀ ಶಕ್ತಿಯ ವಿರುದ್ಧ ಸಾತ್ವಿಕ ಶಕ್ತಿಯ ವಿಜಯವೇ ಯುಗಾದಿಯ ವೈಶಿಷ್ಟ, ಈ ದಿನ ಶ್ರೀರಾಮ ರಾವಣನನ್ನು ಕೊಂದು ಅಯೋಧ್ಯೆಗೆ ಬಂದು ರಾಮ ರಾಜ್ಯವಾಳಲು ಪ್ರಾರಂಭಿಸಿದ ಪ್ರಯುಕ್ತ ಯುಗಾದಿ ಆಚರಿಸುತ್ತಾರೆ. ಬೇವು-ಬೆಲ್ಲವನ್ನು ತಿನ್ನುವ ಉದ್ದೇಸ ಸುಖ-ದುಃಖ, ಹಗಲು-ರಾತ್ರಿ, ನೋವು-ನಲಿವು, ಪ್ರೀತಿ-ದ್ವೇಷಗಳ ಸಂಕೇತವಾಗಿದ್ದು, ಜೀವನದಲ್ಲಿ ಕಹಿ ಮತ್ತು ಸಿಹಿಯನ್ನು ಸಮಾನವಾಗಿ ತೆಗೆದು ಕೊಳ್ಳಬೇಕೆಂಬ ಸಂಕೇತವಾಗಿದೆ.[೨೮]

೨. ಮಕರ ಸಂಕ್ರಾಂತಿ

ಬಂದಿತು ಬಂದಿತು ಸಂಕ್ರಾಂತಿ ತಂದಿತು ತಂದಿತು ಸುಖಶಾಂತಿ ಎಂಬ ಕವಿವಾಣಿಯಂತೆ ಸಂಕ್ರಾತಿ ಜನರಲ್ಲಿ ನವೋತ್ಸಾಹ ಚಿಮ್ಮುತ್ತದೆ. ಅಂದರೆ ಈವರೆಗೆ ದಕ್ಷಿಣದತ್ತ ವಾಲಿ ಚಲಿಸುವ ಸೂರ್ಯ. ಮಕರ ಸಂಕ್ರಮಣದಿಂದ ತನ್ನ ಮಾರ್ಗವನ್ನು ಬದಲಾಯಿಸಿ (ಪಥ) ಉತ್ತರದ ಕಡೆ ವಾಲುತ್ತನೆ. ಆದ್ದರಿಂದ ಸಂಕ್ರಾತಿಯನ್ನು ಉತ್ತರಾಯಣ ಪುಣ್ಯಕಾಲ ಎಂದು ಕರೆಯುತ್ತಾರೆ.

ಗ್ರಾಮೀಣ ಪ್ರದೇಶದಲ್ಲಿ ಸಂಕ್ರಾಂತಿಯು ಸುಗ್ಗಿಯ ಕಾಲವಾಗಿದ್ದು, ತಮ್ಮ ಹೊಲದಲ್ಲಿ ಬೆಳೆದ ದಾನ್ಯಗಳಿಗೆ ರಾಶಿಪೂಜೆ ಮಾಡಿ ಮನೆಗೆ ಹೊಯ್ದು ಸುಗ್ಗಿಯನ್ನು ಆಚರಿಸುತ್ತಾರೆ. ಕೃಷಿಯಲ್ಲಿ ಸಹಕರಿಸಿದ ಜಾನುವಾರುಗಳನ್ನು ಮೈತೊಳೆದು ಶುಚಿಗೊಳಿಸಿ, ಬಣ್ಣಹಚ್ಚಿ ಅಲಂಕರಿಸಿ ಸಾಯಂಕಾಲ ಬೆಂಕಿಯ ಕಿಚ್ಚನ್ನು ಹಾರಿಸುತ್ತಾರೆ. ರೈತರು ಮತ್ತು ಜಾನುವಾರಗಳಿಗೆ ವಿಶೇಷ ಆಚರಣೆಯಾಗಿರುತ್ತದೆ.

ಜಾನುವಾರುಗಳನ್ನು ಪೂಜೆ ಮಾಡುತ್ತಾರೆ. ಅದೇ ರೀತಿ ಮನೆಗಳಲ್ಲಿ ಎಲ್ಲಾ ಸದಸ್ಯರು ಎಳ್ಳೆಣ್ಣೆ ಸ್ನಾನ ಮಾಡಿ, ಹೊಸಬಟ್ಟೆ ದರಿಸಿ ಮನೆಯಲ್ಲಿ ಸಿಹಿ ಮಾಡುತ್ತಾರೆ. ವಿಶೇಷವಾಗಿ ಹೆಣ್ಣುಮಕ್ಕಳು ದೇವರ ದರ್ಶನ ಮಾಡಿಕೊಂಡು ಎಳ್ಳು ಸಕ್ಕರೆ, ಕೊಬ್ಬರಿ, ನೆಲಗಡಲೆ ಕಬ್ಬು, ಬಾಳೆಹಣ್ಣು, ಸಕ್ಕರೆ ಅಚ್ಚು ಇತ್ಯಾದಿಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಾರೆ. ಎಳ್ಳು-ಬೆಲ್ಲ ಸಮಿಯೋಣ, ಒಳ್ಳೇ ಮಾನಾಡೋಣ ಎಂದು ಶುಭಾಶಯ ಕೋರುತ್ತಾರೆ. ಪೊಂಗಲ್ ಮತ್ತು ಸಾವಿಗೆ ವಿಶೇಷ ವಾದ ಖಾದ್ಯವಾಗಿರುತ್ತದೆ.

೩. ಮಹಾಶಿವರಾತ್ರಿ

ಪ್ರಪಂಚಕ್ಕೆ ತಂದೆಯೆನಿಸಿದ ಶಿವನ ಆರಾದನೆಗೆ ಪ್ರಶಸ್ತ ಮುಹೂರ್ತ ಈ ಮಹಾಶಿವರಾತ್ರಿ, ಅರುಣೋದಯಕ್ಕೆ ಎದ್ದು ಸ್ನಾನ ಮಾಡಿ ಶುಭವಸ್ತ್ರವನ್ನುಟ್ಟು ಸಮಸ್ತ ಪಾಪ ನಿವಾರಣೆಗಾಗಿಯೂ, ಜ್ಞಾನ ಮೋಕ್ಷ ಪ್ರಾಪ್ತಿಗಾಗಿಯೂ ಭಕ್ತಿಯಿಂದ ಧ್ಯಾನಿಸಿ ಜಾಗರಣೆ, ಉಪವಾಸ ಅರ್ಚನೆ, ಅಭಿಷೇಕ ಶಿವಸಂಕೀರ್ತನ ಭಜನೆ ಮತ್ತು ಶಿವರಾತ್ರಿಯ ಕಥೆ ಹೇಳುವ ಮೂಲಕ ಶಿವರಾತ್ರಿಯನ್ನು ಕಳೆಯಬೇಕು ಎಂಬುದು ವಾಡಿಕೆ.

ಶಿವಪೂಜೆಗೆ ಬಿಲ್ವಪತ್ರೆ ವಿಶೇಷವಾಗಿದ್ದು, ಜಾತಿ-ಮತ, ಸ್ತ್ರೀ-ಪುರುಷ ಭೇದವಿಲ್ಲದೆ, ಮಹಾಶಿವರಾತ್ರಿಯಂದು ದೇಶದ ನಾನಾ ಮೂಲೆಯಲ್ಲಿರುವ ಶಿವಾಲಯಗಳಲ್ಲಿ ವಿಶೇಷ ಪೂಜೆ ನಡೆಯುತ್ತದೆ.

೪. ದೀಪಾವಳಿ

ಬೆಳಕಿನ ಹಬ್ಬ ದೀಪಾವಳಿ ನಮ್ಮನ್ನು ಕತ್ತಲೆಯಿಂದ ಬೆಳಕಿನಡೆ, ಮೃತ್ಯುವಿನಿಂದ ಅಮೃತದೆಡೆ ಒಯ್ಯುವ ಬೆಳಕಿನ ಹಬ್ಬ ದೀಪಾವಳಿ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಪ್ರಾಂತ ಭೇದವಿಲ್ಲದೆ ಎಲ್ಲಾ ಹಿಂದೂಗಳು, ಬಂಧು-ಬಾಂಧವರೊಂದಿಗೆ ಉತ್ಸಾಹದಿಂದ ಆಚರಿಸುವ ದೊಡ್ಡ ಹಬ್ಬ ದೀಪಾವಳಿ.

ಶರದೃತುವಿನ ಮಧ್ಯಭಾಗದಲ್ಲಿ ಬರುವ ಈ ಹಬ್ಬದ ಸುಸಮಯ ಅನ್ನದೇವರ ಅವತಾರ ಕಾಲ. ಈ ಹಬ್ಬದ ವೇಳೆಗೆ ಮುಂಗಾರು ಬೆಳೆ ಧಾನ್ಯಲಕ್ಷ್ಮಿಯ ರೂಪದಲ್ಲಿ ರೈತನ ಕೈ ಸೇರಿರುತ್ತದೆ. ಮನೆ-ಮನೆಯ ಮನ-ಮನದ ಕತ್ತಲೆಯನ್ನು ಹೋಗಲಾಡಿಸುವ ಈ ಹಬ್ಬದಲ್ಲಿ ಬಂದು-ಬಾಂಧವರ ಸುಮಧುರ ಮಿಲನ ನವ ವಸ್ತದಾರಣ, ಸುಗ್ರಾಸ ಬೋಜನ ಮಾಡಿ, ಮನೆಯಲ್ಲಿ ದೀಪ ಹಚ್ಚಿ, ಪಟಾಕಿ ಸಿಡಿಸುವ ಸಡಗರದ ಹಬ್ಬವಾಗಿರುತ್ತದೆ.

ಒಟ್ಟಾರೆ ಪ್ರಾಚೀನ ಕಾಲದ ಭಾಗ್ಯದ ಸ್ಮಾರಕವಾಗಿ ಭವಿಷ್ಯತ್ ಕಾಲದ ಸುಖದ ಸಂಕೇತವಾಗಿ, ವರ್ತಮಾನ ಕಾಲದ ಸಂಪತ್ತಿನ ಸ್ಮರಣೆಯಾಗಿ ಆತ್ಮೋನ್ನತಿಯ ಮಾರ್ಗವಾಗಿ ಅಜ್ಞಾನವನ್ನು ಹೊಡೆದೋಡಿಸಿ ಸುಜ್ಞಾನವನ್ನು ಪಡೆಯುವ ಕುರುಹಾಗಿ, ಬಲೀಂದ್ರನಂಥ ತ್ಯಾಗಜೀವಿಯ ಸವಿನೆನಪಿಗಾಗಿ ಆಚರಿಸುವ ಬೆಳಕಿನ ಹಬ್ಬವೇ ದೀಪಾವಳಿಯಾಗಿದೆ.

೫. ಗಣೇಶ ಚತುರ್ಥಿ

ಭಾದ್ರಪದ ಶುದ್ಧ ಚತುರ್ಥಿ ಹಿಂದುಗಳಿಗೆ ಗಣಪತಿಯ ಹಬ್ಬದ ದಿನ, ಅಂದು ಈ ದೇವರಿಗೆ ವರ್ಷದಲ್ಲೇ ವಿಶೇಷವಾದ ವಾರ್ಷಿಕ ಪೂಜೆ ಈ ದಿನ ಗ್ರಾಮದೇವರೆಲ್ಲಾ ಒಟ್ಟಿಗೆ ಸೇರಿಕೊಂಡು ಗಣಪತಿಯ ಮಣ್ಣಿನ ಮೂರ್ತಿಯನ್ನಿಟ್ಟು ಪೂಜಿಸುತ್ತಾರೆ. ಮಣ್ಣಿನ ಮೂರ್ತಿ ಮಾಡಿ, ಬಣ್ಣ ಬಣ್ಣಗಳಿಂದ ಅಲಂಕರಿಸಿ ಸುಂದರವಾದ ಮಂಟಪ ಕಟ್ಟಿ ಪೂಜೆ ಸಲ್ಲಿಸಿ ಫಲಪುಷ್ಪಗಳು ಕಡುಬು ಪಂಚ ಕಜ್ಜಾಯ ನೈವೇದ್ಯ ಮಾಡಿ ವಿನಿಯೋಗಿಸುವುದು ಭಾರತೀಯ ಕುಟುಂಬಗಳಲ್ಲೆಲ್ಲಾ ನಡೆದುಬಂದ ಪದ್ಧತಿ. ನಮ್ಮ ದೇಶದಲ್ಲಿ ಬಹುಶ: ಗಣಪತಿಯ ಗುಡಿ ಇಲ್ಲದ ಗ್ರಾಮವಿಲ್ಲ. ಗಣೇಶನ ವಿಗ್ರಹವಿಲ್ಲದ ಗೃಹವಿಲ್ಲ. ಯಾವುದೇ ಶುಭಕಾರ್ಯ ಕೈಗೊಂಡರು ಗಣಪತಿಗೆ ಪ್ರಥಮ ಪೂಜೆ ಸಲ್ಲುತ್ತದೆ. ಅಲ್ಲದೆ ವಿಘ್ನನಿವಾರಕ ಆಗಿದ್ದಾನೆ.

೬. ಪಿತೃಪಕ್ಷ

ಹಿರಿಯರ ಹಬ್ಬವಾದ ಪಿತೃಪಕ್ಷವು ಕರ್ನಾಟಕದಾದ್ಯಂತ ಆಚರಣೆಗೊಳ್ಳುತ್ತದೆ. ಕಡು ಬಡತನವಿದ್ದಾರೂ ಈ ಹಬ್ಬವನ್ನು ಅದ್ದೂರಿಯಾಗಿ ಮಾಡಬೇಕ "ಮನೆಯ ಮಗನನ್ನಾದರು ಮಾರಿ ಹಬ್ಬ ಮಾಡು ಎನ್ನುವ ನಾಣ್ಣುಡಿ ಇದೆ. ಭಯ-ಭಕ್ತಿಯಿಂದ ಸಾಂಪ್ರದಾಯಕವಾಗಿ ಆಚರಿಸುತ್ತಾರೆ. ಮಹಾಲಯ ಅಮಾವಾಸ್ಯೆಯನ್ನು ಆಯ್ಕೆ ಮಾಡಿ ಹಬ್ಬವನ್ನು ನಿಶ್ಚಯ ಮಾಡಲಾಗುತ್ತದೆ. ಇಹ ಲೋಕವನ್ನು ತ್ಯಜಿಸಿರುವ ಹಿರಿಯರಿಗೆ ಗೌರವ ಸಲ್ಲಿಸುವುದೇ ಪಿತೃಪಕ್ಷ ಹಬ್ಬದ ಉದ್ದೇಶ. ಹಬ್ಬದ ದಿನ ಸಮಾದಿಯ ಹತ್ತಿರ ಪೂಜೆ ಸಲ್ಲಿಸಿ, ಆ ದಿನ ರಾತ್ರಿ ಕೋಣೆಯೊಂದರಲ್ಲಿ ಕಳಶ, ಹೊಸ ಬಟ್ಟೆ, ಹಿರಿಯವರು ಇಷ್ಟಪಡುತ್ತಿದ್ದ ಬಗೆ ಬಗೆಯ ಭಕ್ಷ್ಯ, ಬೋಜನಗಳು, ಫಲಪುಷ್ಪಗಳು, ತಿಂಡಿ ತಿನಿಸುಗಳು ಬಳಸುತ್ತಿದ್ದ ವಸ್ತುಗಳು, ಬೀಡಿ, ಸಿಗರೇಟು ಮದ್ಯವನ್ನು ಇಟ್ಟು ಸಾಮ್ರಾಣಿ, ಗಂಧದ ಚೆಕ್ಕೆಯ ದೂಪಹಾಕಿ ಪೂಜೆ ಮಾಡಿ ೫

ನಿಮಿಷಗಳ ಕಾಲ ಹೊರಗೆ ಹೋಗುತ್ತಾರೆ. ನಂತರ ಆ ಎಡೆಯನ್ನು ಸ್ವಲ್ಪ ಬಿಟ್ಟು ಉಳಿದ್ದನು ಎಲ್ಲರು ಊಟ ಮಾಡುತ್ತಾರೆ.[೨೯]

೭. ನಾಗರ ಪಂಚಮಿ

ನಮ್ಮ ಪ್ರಾಚೀನ ಸಂಸ್ಕೃತಿಯಲ್ಲಿ ಅನೇಕ ವೃಕ್ಷ ವಿಶೇಷಗಳು, ಪ್ರಾಣಿ ವಿಶೇಷಗಳು ಪಕ್ಷಿ ವಿಶೇಷಗಳು, ಸರ್ಪ ವಿಶೇಷಗಳು ದಿವ್ಯ ಶಕ್ತಿಗಳ ಸಂಕೇತವಾಗಿ ಪೂಜಾರ್ಹವೆನಿಸಿವೆ. ಗಣಪತಿಯ ಹೊಟ್ಟೆಯ ಪಟ್ಟಿಯಾಗಿ, ಶಿವನ ಆಭರಣವಾಗಿ, ವಿಷ್ಣುವಿನ ಹಾಸಿಗೆಯಾಗಿ, ತ್ರಿಪುರ ಸಂಹಾರ ಕಾಲದಲ್ಲಿ ಮೇರುವೆಂಬ ಬಿಲ್ಲಿನ ಹೆಡೆಯಾಗಿ ಸಮುದ್ರ ಮಂಥನ ಕಾಲದಲ್ಲಿ ಮಂಧಾರ ಪರ್ವತವೆಂಬ ಕಡಗೋಲಿಗೆ ಹಗ್ಗವಾಗಿ ದುರ್ಯೋಧನನನ ಧ್ವಜ ಚಿನ್ಹೆಯಾಗಿ, ಭೂಮಿಯನ್ನು ಹೊತ್ತ ಆದಿಶೇಷನಾಗಿ, ಪಾರ್ಶ್ವನಾಥ ತೀರ್ಥಂಕರ ಶಿರೋಲಾಂಛನವಾಗಿ ಪೂಜಾರ್ಹವಾಗಿದೆ. ನಾಗಪಂಚಮಿ ಹೆಚ್ಚಾಗಿ ಹೆಣ್ಣುಮಕ್ಕಳ ಹಬ್ಬ ಅವರಿಗೆ ಮಾಂಗಲ್ಯ ಪ್ರದ ಸಂತಾನ ಪ್ರದ ಎಮದು ನಂಬಿಕೆ ಇದ್ದು, ಹುತ್ತಗಳಿಗೆ ನಾಗರ ಕಲ್ಲುಗಳಿಗೆ ತುಪ್ಪ ಮತ್ತು ಹಾಲೆರೆದು ಪೂಜಿಸುತ್ತಾರೆ. ಅದೇ ರೀತಿ ಕುಣಿಗಲ್ ಪಟ್ಟಣದಲ್ಲಿ ವಿಜಯದಶಮಿ, ನವರಾತ್ರಿ, ಶ್ರೀರಾಮನಮಿ, ವರಮಹಾಲಕ್ಷ್ಮಿ, ಹನುಮಜಯಂತಿ, ಹೋಳಿ ಹಬ್ಬಗಳನ್ನು ಸಡಗರ ಮತ್ತು ಸಂಭ್ರಮದಿಂದ ಆಚರಿಸುತ್ತಾರೆ.

೮. ಕ್ರಿಸ್‌ಮಸ್

ಕ್ರಿಸ್‌ಮಸ್ ಹಬ್ಬವನ್ನು ಕ್ರೈಸ್ತಬಾಂಧವರು ವಿಶ್ವದಾದ್ಯಂತ ಆಚರಿಸುತ್ತಾರೆ. ಭಾರತ ದೇಶದ ವಿವಿಧ ಕಡೆಗಳಲ್ಲಿ ಕ್ರಿಸ್‌ಮಸ್ ಆಚರಣೆ ವಿವಿಧ ರೀತಿಯಲ್ಲಿ ಇದ್ದರೂ ಹಲವಾರು ಆಚರಣೆಗಳು ವಿಧಿ-ವಿಧಾನಗಳು ಒಂದೇ ಪ್ರಕಾರದಲ್ಲಿರುತ್ತವೆ. ಏಸು ಜನಿಸಿದ ಕೊಟ್ಟಿಗೆಯ ಪ್ರತಿಕೃತಿ, ಕ್ರಿಸ್‌ಮಸ್ ವೃಕ್ಷ, ನಕ್ಷತ್ರ, ರುಚಿಕರವಾದ ತಿಂಡಿ-ತಿನುಸುಗಳು ಈ ಹಬ್ಬಕ್ಕೆ ಮೆರಗು ನೀಡುತ್ತದೆ. ಚರ್ಚ್‌ನಲ್ಲಿ ಧರ್ಮಗುರುಗಳು ವಿಶೇಷ ಶಾಂತಿ ಸಂದೇಶ ಸಾರುತ್ತಾರೆ. ಕ್ರಿಶ್ಚಿಯನ್ನರು ಪ್ರಾರ್ಥನೆ ಸಲ್ಲಿಸಿ ಮನೆಯಲ್ಲಿ ಬಂದು-ಬಾಂದವರನ್ನೂ ಹಬ್ಬಕ್ಕೆ ಆಹ್ವಾನಿಸಿ ಬಾಂಧವ್ಯವನ್ನು ಬೆಸೆಯುತ್ತಾರೆ. ದಯೆ, ಪ್ರಿತಿ, ಕರಣೆ, ಕ್ಷಮೆ, ಪೂಜೆ-ಪ್ರಾರ್ಥನೆಗಳು ಏಸು ಕ್ರಿಸ್ತನ ಸಂದೇಶಗಳು, ಕ್ರಿಶ್ಚಿಯನ್ನರು ಕ್ರಿಸ್‌ಮಸ್ ಅಲ್ಲದೆ ಗುಡ್‌ಫ್ರೈಡೆ ಮತ್ತು ಈಸ್ಟರ್ ಹಬ್ಬವನ್ನು ಆಚರಿಸುತ್ತಾರೆ.[೩೦]

೯. ಮುಸಲ್ಮಾನರ ಹಬ್ಬಗಳು

ರಂಜಾನ್ ಎಂಬುದು ಇಸ್ಲಾಮಿಯರ ಧಾರ್ಮಿಕ ಹಬ್ಬವಾಗಿದ್ದು ಉಪವಾಸ ವಿಶೇಷವಾಗಿದ್ದು, ಜುಲೈ ತಿಂಗಳಲ್ಲಿ ಆಚರಿಸುತ್ತಾರೆ. ಸ್ತ್ರೀ-ಪುರುಷರು, ಮಕ್ಕಳು, ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಉಪವಾಸ ಮಾಡಿ, ಆಹಾರ, ನೀರು ಮದ್ಯವ್ಯಸನ ತ್ಯಜಿಸುತ್ತಾರೆ. ಸುಳ್ಳು, ನಿಂದನೆ, ಮೋಸ, ವಂಚನೆ, ನಿಷಿದ್ದ, ಮಸೀದಿಯಲ್ಲಿ ಕುರಾನ್ ಪಠನೆ ದಿನಕ್ಕೆ ೫ ಬಾರಿ ಪ್ರಾರ್ಥನೆ ಮಾಡುತ್ತಾರೆ. ರಾತ್ರಿ ಸಾದಾ ಊಟ ಮಾಡುತ್ತಾರೆ. ೩೦ನೇ ದಿನದ ಅಂತ್ಯದಲ್ಲಿ ಚಂದ್ರ ಕಾಣಿಸಿದಾಗ ಈದ್ ಹಬ್ಬ ಆಚರಿಸಿ ಪರಸ್ಪರ ಹೊಸ ಬಟ್ಟೆ ಧರಿಸಿ ಶುಭಾಷಯ ಕೋರುತ್ತಾರೆ. ಮಹಮದ್ದೀಯರು ಮೆಕ್ಕಾಯಾತ್ರೆ ಕೈಗೊಳ್ಳುತ್ತಾರೆ. ದರ್ಗಾಗಳಲ್ಲಿ ಉರುಸ್ ಆಚರಿಸುತ್ತಾರೆ. ಮೊಹರಂ ಕೊನೆದಿನದಲ್ಲಿ ಹಿಂದೂ-ಮುಸಲ್ಮಾನರು ಸೇರಿ ಧಾರ್ಮಿಕ ಬಾಂಧವ್ಯದಿಂದ ಅನೇಕ ಆಚರಣೆ ಕೈಗೊಳ್ಳುತ್ತಾರೆ.

ಹೀಗೆ ಮಹಮ್ಮದೀಯರ ಹಬ್ಬಗಳು ತ್ಯಾಗ, ಸೇವೆ, ಸಹಾಯ, ಭಾವ್ಯಕ್ಯತೆ ಪ್ರೀತಿ, ಪ್ರೇಮ ಸಹಕಾರ ಮುಂತಾದ ಮಾನವೀಯ ಮೌಲ್ಯಗಳನ್ನು ಬಿತ್ತರಿಸುವುದನ್ನು ಕಾಣಬಹುದು.[೩೧]

ಕುಣಿಗಲ್ ಪಟ್ಟಣದ ಬೆಳವಣಿಗೆ

ಕುಣಿಗಲ್ ಪಟ್ಟಣವು ತಲಕಾಡಿನ ಗಂಗರ ಕಾಲದಲ್ಲಿ ಕುಣಿಗಲ್‌ನಾಡು ಎಂದು ಗುರುತಿಸಿಕೊಂಡು, ಗಂಗವಾಡಿ ೯೬೦೦೦ದಲ್ಲಿ ಕುಣಿಗಲ್‌ನಾಡು ಎಂಬುದು ೫೦೦ ವರಹಗಳ ನಾಡಾಗಿತ್ತು. ಗಂಗರ ೨ನೇ ಶಿವಮಾರನ ಆಳ್ವಿಕೆಗೊಳಪಟ್ಟ ಕುಣಿಗಲ್ ಪಟ್ಟಣಕ್ಕೆ ಕ್ರಿ.ಶ. ೭೮೮ರಲ್ಲಿ ಕೋಟೆಯನ್ನು ಕಟ್ಟಿ ಅಭಿವೃದ್ಧಿಪಡಿಸಿದನು. ನಂತರ ಆಡಳಿತದ ಭಾಗವಾಗಿ ಮುಂದುವರೆಯಿತು.

ಚೋಳರ ಕಾಲದಲ್ಲಿ ಕುಣಿಗಲ್ ಪಟ್ಟಣವು ರಾಜೇಂದ್ರ ಚೋಳಪುರಂ ಎಂದು ಮರುನಾಮಕರಣ ಗೊಂಡು ಪಟ್ಟಣವನ್ನು ಅಭಿವೃದ್ಧಿಪಡಿಸುತ್ತಾರೆ. ಚೋಳರ ಆಡಳಿತದ ಅವಧಿಯಲ್ಲಿ ಪ್ರಸಿದ್ಧ ವ್ಯಪಾರ ಕೇಂದ್ರವಾಗಿದ್ದು, ಸುತ್ತಮುತ್ತಲಿನ ೧೫೦೦ ಜನ ವ್ಯಾಪಾರಿಗಳು ರಾಜೇಂದ್ರ ಚೋಳಪುರಕ್ಕೆ ಬಂದು ವ್ಯಾಪಾರ ವಹಿವಾಟು ನಡೆಸುತ್ತಿದ್ದರೆಂದು ಚೋಳರ ಶಾಸನದಿಂದ ತಿಳಿದುಬರುತ್ತದೆ.

ಹೊಯ್ಸಳರ ಕಾಲದಲ್ಲಿ ಕುಣಿಗಲ್ ಪಟ್ಟಣವು ಕುಣಿಗಲ್‌ನಾಟ್ಟು ಎಂದು ಗುರುತಿಸಿಕೊಂಡು ಈಗಿನ ಕುಣಿಗಲ್ ತಾಲೂಕಿನ ವಿಸ್ತೀರ್ಣದಷ್ಟಿತ್ತೆಂದು ಹೊಯ್ಸಳರ ಶಾಸನಗಳಿಂದ ತಿಳಿದುಬರುತ್ತದೆ.

ವಿಜಯನಗರ ಕಾಲದಲ್ಲಿ ಕುಣಿಗಲ್ ಸೀಮೆಯಾಗಿ ಮಾರ್ಪಾಡುಗೊಂಡು ಸ್ಥಳೀಯ ನಾಯಕರ ಅಳ್ವಿಕೆಗೆ ಒಳಪಡುತ್ತದೆ. ನಂತರ ಮೈಸೂರು ಒಡೆಯರ ಕಾಲದಲ್ಲಿ ಇದೇ ಹೆಸರು ಮಾರ್ಪಾಡುಗೊಂಡು ಕುಣಿಗಲ್ ತಾಲೂಕು ಆಗುತ್ತದೆ. ಬ್ರಿಟೀಷರ ಆಧುನಿಕ ಸ್ಪರ್ಶದಿಂದ ಹೋಬಳಿಗಳು, ಕಂದಾಯ ಗ್ರಾಮಗಳು, ಹಳ್ಳಿಗಳಾಗಿ ರೂಪುಗೊಂಡು ಹೋಬಳಿಗಳು ಆಡಳಿತ ಕೇಂದ್ರಗಳಂತೆ ಕಾರ್ಯನಿರ್ವಹಿಸುತ್ತವೆ. ಈ ಅವಧಿಯಲ್ಲಿ ಸಾಕಷ್ಟು ಬದಲಾವಣೆಗೊಂಡು ಸ್ವಾತಂತ್ರ್ಯ ನಂತರ ಕುಣಿಗಲ್ ಪಟ್ಟಣವು ಪಟ್ಟಣ ಪಂಚಾಯ್ತಿಯ ವ್ಯಾಪ್ತಿಗೆ ಒಳಪಟ್ಟು ೧೯೫೭ರಲ್ಲಿ ಪುರಸಭೆಯು ಸ್ಥಾಪನೆಗೊಳ್ಳುತ್ತದೆ.

ಪ್ರಾರಂಭದ ಕಾಲಘಟ್ಟದಲ್ಲಿ ಕೆಲವೇ ಸಾವಿರ ಜನಸಂಖ್ಯೆಯನ್ನು ಒಳಗೊಂಡು ಪುರಸಭೆಯು ಕಾರ್ಯನಿರ್ವಹಿಸುತ್ತಿತ್ತು. ಈ ರೀತಿ ಹಂತ ಹಂತವಾಗಿ ಬೆಳೆದುಕೊಂಡು ಬಂದ ಕುಣಿಗಲ್ ಪಟ್ಟಣವು ಇಂದು ಬೃಹತ್ ಪಟ್ಟಣವಾಗಿ ಬೆಳೆದು ಆಧುನಿಕತೆಗೆ ಒಳಪಟ್ಟಿದೆ. ಪ್ರಸ್ತುತ ಕುಣಿಗಲ್ ಪಟ್ಟಣವು ೮ ಚ.ಕಿ.ಮೀ. ವ್ಯಾಪ್ತಿ ಹೊಂದಿದ್ದು, ೩೫ ಸಾವಿರ ಜನಸಂಖ್ಯೆ ಹೊಂದಿದೆ. ೨೩ ವಾರ್ಡ್‌ಗಳನ್ನು ಒಳಗೊಂಡಿದುದ, ಶ್ರೀಯುತ ಎಲ್. ಹರೀಶ್‌ರವರು ಪುರಸಭೆಯ ಅಧ್ಯಕ್ಷರಾಗಿದ್ದಾರೆ.

ಪ್ರತಿ ವರ್ಷವು ಕುಣಿಗಲ್ ಪಟ್ಟಣದ ವ್ಯಾಪ್ತಿಯು ವಿಸ್ತಾರಗೊಳ್ಳುತ್ತಿದ್ದು, ಪೂರ್ವಕ್ಕೆ ಜಿದನಿಗೆರೆ, ಪಶ್ಚಿಮಕ್ಕೆ ಬಿಳಿದೇವಾಲಯ, ಉತ್ತರಕ್ಕೆ ಕೊತ್ತಗೆರೆ ಮತ್ತು ದಕ್ಷಿಣಕ್ಕೆ ಕೊತ್ತಿಪುರದವರೆಗೂ ವಿಸ್ತಾರಗೊಳ್ಳುತ್ತ ಬೆಳೆಯುತ್ತಿದೆ. ಶಿಕ್ಷಣ ಸಂಸ್ಥೆಗಳು, ಬ್ಯಾಂಕಿಂಗ್ ಸೇವೆ, ಬಸ್ಸು ನಿಲ್ದಾಣ, ಉದ್ಯಾನವನ, ಸಮುದಾಯಭವನ, ನ್ಯಾಯಾಲಯ, ತಾಲೂಕು ಪಂಚಾಯ್ತಿ ಕಛೇರಿ, ಅರಕ್ಷರ ಠಾಣೆ, ಕುಡಿಯುವ ನೀರು, ರಸ್ತೆ ಸೌಕರ್ಯ, ಅಂಚೆ ಮತ್ತು ತಂತಿ ವ್ಯವಸ್ಥೆ, ಮಾರುಕಟ್ಟೆ, ಕೈಗಾರಿಕೆಗಳು, ಅಂಗಡಿ-ಮುಂಗಟ್ಟು, ಸಾರಿಗೆ ಸೌಲಭ್ಯ ಮತ್ತು ಆರೋಗ್ಯ ಸೌಲಭ್ಯ ಇನ್ನೂ ಹಲವಾರು ಕಾರ್ಯಚಟುವಟಿಕೆಗಳಿಂದ ಕುಣಿಗಲ್ ಪಟ್ಟಣವು ಅಭಿವೃದ್ಧಿ ಹೊಂದಲು ಸಹಕಾರಿಯಾಗಿದೆ.

ಕುಣಿಗಲ್ ಪಟ್ಟಣದ ಪ್ರಮುಖ ವ್ಯಕ್ತಿಗಳು

ಕುಣಿಗಲ್ ಪಟ್ಟಣವು ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಪ್ರಸಿದ್ಧಿ ಹೊಂದಿದ್ದು, ವಿವಿಧ ಕ್ಷೇತ್ರಗಳಲ್ಲಿ ಇಲ್ಲಿನ ವ್ಯಕ್ತಿಗಳು ಗುರುತಿಸಿಕೊಂಡಿದ್ದಾರೆ.

* ಕುಣಿಗಲ್ ಪಟ್ಟಣದಲ್ಲಿ ಸ್ವಾತಂತ್ರ್ಯ ಹೋರಾಟಗಾರರಾಗಿ ದಿ॥ ಕೆ.ವಿ. ಕೃಷ್ಣಮೂರ್ತಿ, ದಿ॥ ಹುಚ್ಚಮಾಸ್ತಿಗೌಡರು, ದಿ॥ ಅಂದಾನಯ್ಯನವರು, ದಿ॥ ವಿ.ವಿ. ಗಂಗಣ್ಣಗೌಡರು ಮತ್ತು ದಿ॥ ವೈ.ಕೆ. ರಾಮಯ್ಯನವರು ಗುರುತಿಸಿಕೊಂಡಿದ್ದು, ಬ್ರಿಟಿಷ್ ಆಡಳಿತದ ವಿರುದ್ಧ ಕುಣಿಗಲ್ ಪಟ್ಟಣದಲ್ಲಿನ ಸಾಹಿತಿಗಳು, ರೈತಾಪಿವರ್ಗ, ವಿದ್ಯಾರ್ಥಿಸಮುದಾಯ ಹಾಗೂ ಮಹಿಳೆಯರಲ್ಲಿ ಸ್ವಾತಂತ್ರ್ಯದ ಬಗ್ಗೆ ಜಾಗೃತಿ ಮೂಡಿಸಿ ಹಲವಾರು ಸತ್ಯಾಗ್ರಹ, ರಸ್ತೆ ತಡೆ ಮಾಡಿ ಹಲವಾರು ಬಾರಿ ಜೈಲು ಸೇರಿದ್ದಾರೆ. ಇನ್ನು ಕೆಲವರು ತಮ್ಮ ಆಸ್ತಿ–ಪಾಸ್ತಿ ಕಳೆದುಕೊಂಡು ಬ್ರಿಟಿಷರ ದಾಸ್ಯದ ವಿರುದ್ಧ ಹೋರಾಟ ಮಾಡಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

* ದಿ॥ ಶಾಮಶಾಸ್ತ್ರಿಯವರು, ಕೃಷ್ಣಮೂರ್ತಿಯವರು, ಬೀಚನಹಳ್ಳಿ ಕರೀಗೌಡರು ಹಾಗೂ ಹಿ.ಚಿ. ಬೋರಲಿಂಗಯ್ಯನವರು ಸಾಹಿತ್ಯ ಕ್ಷೇತ್ರದಲ್ಲಿ ಕೃಷಿಮಾಡಿದ್ದು, ಕನ್ನಡ ಸಾಹಿತ್ಯ, ಜನಪದ, ಸಣ್ಣ ಕಥೆಗಳು ಮತ್ತು ಕಾದಂಬರಿಗಳನ್ನು ಬರೆದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದಾರೆ.

* ರಾಜಕೀಯ ಕ್ಷೇತ್ರದಲ್ಲಿ ದಿ॥ ವೈ.ಕೆ. ರಾಮಯ್ಯನವರು, ದಿ॥ ಹುಚ್ಚಮಾಸ್ತಿಗೌಡರು, ದಿ॥ ಅಂದಾನಯ್ಯ, ಡಿ. ನಾಗರಾಜಯ್ಯ ಮತ್ತು ಬಿ. ಬಿ. ರಾಮಸ್ವಾಮಿಗೌಡರು, ಮುದ್ದಹನುಮಗೌಡರು ಗುರುತಿಸಿಕೊಂಡು ನೀರಾವರಿ ಮತ್ತು ರೈತ ಹೋರಾಟಗಳಲ್ಲಿ ಭಾಗವಹಿಸಿ ಹಲವಾರು ಜನಪ್ರಿಯ ಕಾರ್ಯಗಳನ್ನು ಕೈಗೊಂಡು ಕುಣಿಗಲ್ ಪಟ್ಟಣವನ್ನು ಅಭಿವೃದ್ಧಿಪಡಿಸಿರುತ್ತಾರೆ.

* ಅದೇ ರೀತಿ ಸಿನಿಮಾರಂಗದಲ್ಲಿ ದಿ॥ ಕುಣಿಗಲ್ ನಾಗಭೂಷಣ್, ಹುಲಿವಾನ್ ಗಂಗಾಧರಯ್ಯ, ಕೆ. ರಾಮು ಮತ್ತು ದುರ್ಗಾ ಭವಾನ್ ಸಾಹುಕಾರರು ಸಿನಿಮಾ ಕ್ಷೇತ್ರದಲ್ಲಿ ಗುರುತಿಸಿಕೊಂಡು ಕುಣಿಗಲ್ ಪಟ್ಟಣಕ್ಕೆ ಕೀರ್ತಿಯನ್ನು ತಂದುಕೊಟ್ಟಿದ್ದಾರೆ.

* ಪತ್ರಿಕೋದ್ಯಮ ಕ್ಷೇತ್ರದಲ್ಲಿ ಜಾಣಗೆರೆ ವೆಂಕಟರಮಣಯ್ಯ, ಕೃಷ್ಣಪ್ಪ, ಆನಂದ್ ಹುಲಿಕಟ್ಟೆ ಮತ್ತು ವೆಂಕಟಗೌಡರು ಸಂಪಾದಕರಾಗಿ ಮತ್ತು ವರದಿಗಾರರಾಗಿ ಗುರುತಿಸಿಕೊಂಡಿದ್ದಾರೆ.

ಕುಣಿಗಲ್ ಪಟ್ಟಣದ ವಿಶೇಷತೆ

ಕುಣಿಗಲ್ ಪಟ್ಟಣವು ಚಾರಿತ್ರಿಕವಾಗಿಯು ಮತ್ತು ಸಾಂಸ್ಕೃತಿಕವಾಗಿಯು ಪ್ರಸಿದ್ಧಿ ಪಡೆದು ಹಲವಾರು ವೈಶಿಷ್ಟ್ಯಗಳಿಂದ ಕೂಡಿದ್ದು, ಜನಮನ್ನಣೆ ಪಡೆದುಕೊಂಡಿದೆ.

* ಕುಣಿಗಲ್ ಸ್ಟಡ್ ಫಾರಂನಲ್ಲಿರುವ ಕುದುರೆಗಳು ವಿಶ್ವದಾದ್ಯಂತ ಹೆಸರು ಗಳಿಸಿದ್ದು, 'ಕುಣಿಗಲ್ ಕುದುರೆ' ಎಂದು ಪಟ್ಟಣಕ್ಕೆ ಕೀರ್ತಿ ತಂದುಕೊಟ್ಟಿದೆ. ಅಲ್ಲದೇ ಈ ಸ್ಟಡ್ ಫಾರಂ ಇಂದು ಪ್ರಮುಖ ಪ್ರವಾಸಿ ತಾಣವಾಗಿದೆ.

* ಕುಣಿಗಲ್ ಪಟ್ಟಣವು ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದು, ವಿಶೇಷವಾಗಿ ರೇಷ್ಮೆ ಸಾಕಾಣಿಕೆ ಮತ್ತು ರೇಷ್ಮೆ ಗೂಡಿನ ಖರೀದಿಗೆ ಮಾರುಕಟ್ಟೆ ಸೌಲಭ್ಯವನ್ನು ಒದಗಿಸಿ ರಾಜ್ಯದಲ್ಲಿಯೇ ಪ್ರಸಿದ್ಧವಾದ ಮಾರುಕಟ್ಟೆ ಕೇಂದ್ರವೆಂದು ಪ್ರಸಿದ್ಧಿ ಹೊಂದಿದೆ.

* ಕುಣಿಗಲ್ ಪಟ್ಟಣದಲ್ಲಿ ಪ್ರತಿ ಬುಧವಾರದಂದು ಸಂತೆ ನಡೆಯುತ್ತಿದ್ದು, ಕೃಷಿ ಉತ್ಪನ್ನಗಳ ಮಾರಾಟದ ಜೊತೆಗೆ ವಿಶೇಷವಾಗಿ ತೆಂಗಿನ ಕಾಯಿಗಳ ಮಾರಾಟಕ್ಕೆ ವಿಶಾಲವಾದ ಮಾರುಕಟ್ಟೆ ಸೌಲಭ್ಯ ಒದಗಿಸಿದ್ದು ಪ್ರಸಿದ್ಧಿ ಪಡೆದುಕೊಂಡಿದೆ.

* ಕುಣಿಗಲ್ ಪಟ್ಟಣವು ಜಾನುವಾರುಗಳ ಮಾರಾಟಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದು, ಶ್ರೀಕ್ಷೇತ್ರ ಯಡಿಯೂರಿನಲ್ಲಿ ಪ್ರತಿವರ್ಷ ಬೇಸಿಗೆ ಕಾಲದಲ್ಲಿ ಬಾರಿ ದನಗಳ ಜಾತ್ರೆ ನಡೆಯುತ್ತಿದ್ದು, ಪ್ರಸಿದ್ಧಿ ಪಡೆದುಕೊಂಡಿದೆ.

* ಕುಣಿಗಲ್ ಪಟ್ಟಣದಲ್ಲಿ ಬ್ರಿಟೀಷರ ಆಡಳಿತದ ಕುರುಹುಗಳಾಗಿ ಕುದುರೆ ಫಾರಂನಲ್ಲಿರುವ ಬ್ರಿಟಿಷ್ ಅಧಿಕಾರಿಗಳ ವಾಸದ ಬಂಗ್ಲೆ, ಕುದುರೆ ಲಾಯ, ಕೋರ್ಟ್ ಆವರಣದಲ್ಲಿರುವ ಕಟ್ಟಡಗಳು, ಕ್ಷೇತ್ರ ಶಿಕ್ಷಣಾಧಿಕಾರಿಯ ಆಡಳಿತ ಕಛೇರಿಯ ಕಟ್ಟಡಗಳು ಇನ್ನೂ ಸುಸ್ತಿಯಲ್ಲಿದ್ದು, ಪ್ರಸಿದ್ಧಿ ಪಡೆದುಕೊಂಡಿವೆ.

* ಕುಣಿಗಲ್ ಪಟ್ಟಣದಲ್ಲಿ ೩ ಸಿನಿಮಾ ಚಿತ್ರಮಂದಿರಗಳಿದ್ದು, (ಚನ್ನಬಸವೇಶ್ವರ, ಶಿವಾಜಿ, ನಾಗರಾಜ) ಅವುಗಳಲ್ಲಿ ಚನ್ನಬಸವೇಶ್ವರ ಚಿತ್ರಮಂದಿರ ನವೀಕರಣಗೊಂಡು ಆಕಾಶ್ ಚಿತ್ರ ಮಂದಿರವಾಗಿ ಕಾರ್ಯನಿರ್ವಹಿಸುತ್ತಿದೆ.

* ಕುಣಿಗಲ್ ಪಟ್ಟಣದ ವ್ಯಾಪ್ತಿಯಲ್ಲಿ ಕುಣಿಗಲ್ ದೊಡ್ಡಕೆರೆ, ಚಿಕ್ಕಕೆರೆ, ದೇವಾಲಯಗಳು, ಉದ್ಯಾನವನಗಳು ಮತ್ತು ಆಟದ ಮೈದಾನಗಳು ಕಂಡುಬರುತ್ತದೆ. ಕುಣಿಗಲ್ ದೊಡ್ಡಕೆರೆಯು ಇತಿಹಾಸ ಪ್ರಸಿದ್ಧವಾಗಿದ್ದು, 'ಮೂಡಲ್ ಕುಣಿಗಲ್ ಕೆರೆ' ಎಂದು ಪ್ರಸಿದ್ಧಿ ಪಡೆದು ಜನಪದ ಗೀತಿಯಾಗಿ ಪ್ರಚಾರ ಪಡೆದುಕೊಂಡಿದೆ.

ಕುಣಿಗಲ್ ಪಟ್ಟಣದ ವ್ಯಾಪ್ತಿಯಲ್ಲಿ ಮಂಗಳೂರು ಹಂಚಿನ ಕಾರ್ಖಾನೆ ಅಸ್ತಿತ್ವದಲ್ಲಿದ್ದು, ಪ್ರಾಚೀನತೆ ಪಡೆದುಕೊಂಡಿದೆ. ಅದೇ ರೀತಿಯಲ್ಲಿ ಕುಣಿಗಲ್ ಪಟ್ಟಣದಲ್ಲಿನ ಪರಿಮಳ ಹೋಟೆಲ್, ಪಾರಿಜಾತ ಮತ್ತು ರಮ್ಯಶ್ರೀ ಹೋಟೆಲ್‌ಗಳು ಊಟ, ತಿಂಡಿಗೆ ಪ್ರಸಿದ್ಧಿ ಪಡೆದುಕೊಂಡಿದ್ದು, ಕುಣಿಗಲ್ ಪಟ್ಟಣದ ಹೆಸರನ್ನು ಹಿಮ್ಮಡಿಗೊಳಿಸಿವೆ ಎಂದು ಹೇಳಬಹುದು.

ಅಡಿಟಿಪ್ಪಣಿಗಳು

೦೧. ಮುನಿರಾಜಪ್ಪ., ಮಾಗಡಿ ಸೀಮೆ ಇತಿಹಾಸ ಮತ್ತು ಸಂಸ್ಕೃತಿ, ೨೦೦೫, ಪು.೯೫

೦೨. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೧೯೬೬, ಪು.೪೩೦ ಮತ್ತು ೪೩೧

೦೩. ರೈಸ್. ಬಿ.ಎಲ್., ತುಮಕೂರು ಜಿಲ್ಲಾ ಶಾಸನ ಸಂಪುಟ-೨೪, ಕುಣಿಗಲ್-೨೫, ಪು.೧೯೯

೦೪. ಸುಶ್ಮಾ ಹೆಚ್., 'ತುಮಕೂರು ಜಿಲ್ಲೆಯ ಎರಡು ಚೋಳ ಶಾಸನಗಳು', ಗೋಪಾಲ್ ಆರ್. (ಸಂ.)., ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ೨೦೦೯, ಪು.೧೧೪

೦೫. ರೈಸ್. ಬಿ.ಎಲ್., ಪೂರ್ವೋಕ್ತ, ಕು-೯, ಪು.೧೯೩

೦೭. ಅದೇ., ಕು-೪೨, ಪು.೨೧೭

೦೮. ಮುನಿರಾಜಪ್ಪ., ಪೂರ್ವೋಕ್ತ, ಪು.೨೨

೦೯. ರೈಸ್ ಬಿ.ಎಲ್. ಪೂರ್ವೋಕ್ತ, ಕು-೨೫, ಪು.೧೯೯

೧೦. ಅದೇ., ಕು-೮೧ ಮತ್ತು ೮೨, ಪು.೨೩೪

೧೧. ಅದೇ., ಕು-೧೧, ಪು.೧೯೪

೧೨. ಅದೇ., ಕು-೮೫, ಪು.೨೩೫

೧೩. ಅದೇ., ಕು-೨೬, ಪು.೨೦೦ ಮತ್ತು ೨೦೩

೧೪. ಅದೇ., ಕು-೪೩, ಪು.೨೧೭ ಮತ್ತು ೨೧೮

೧೫. ಅದೇ., ಕು-೪೩, ಪು.೨೧೮

೧೬. ಮುನಿರಾಜಪ್ಪ., ಪೂರ್ವೋಕ್ತ, ಪು.೧೬೦

೧೭. ಅದೇ., ಪು.೧೬೧

೧೮. ಅದೇ., ಪು.೧೬೯

೧೯. ಅದೇ., ಪು.೧೪೦

೨೦. ರೈಸ್. ಬಿ.ಎಲ್., ಪೂರ್ವೋಕ್ತ, ಕು-೨೦, ಪು.೧೯೭

೨೧. ಲಕ್ಷ್ಮೀದೇವಿ., ಗ್ರಾಮ ಮತ್ತು ಶಿಷ್ಟ ದೇವತೆಗಳು, ೨೦೦೭, ಪು.೨೧೭ ಮತ್ತು ೨೧೮

೨೨. ಅದೇ., ಪು.೧೨೭ ಮತ್ತು ೧೨೮

೨೩. ಅದೇ., ಪು.೧೪೭

೨೪. ಅದೇ., ಪು.೧೭೨

೨೫. ಅದೇ., ಪು.೧೯೫

೨೬. ಭಟ್ ವಿ.ಎನ್., ಭಾರತೀಯ ಹಬ್ಬಗಳ ವೈಶಿಷ್ಟ್ಯ, ೨೦೦೨, ಪು.೧

೨೭. ಅದೇ., ಪು.೨

೨೮. ಅದೇ., ಪು.೩ ಮತ್ತು ೬

೨೯. ರಮೇಶ ಸ.ಚಿ., ಕರ್ನಾಟಕ ಜಾನಪದ ಆಚರಣೆಗಳು, ೨೦೧೦, ಪು.೧೩೦

೩೦. ಭಟ್ ವಿ.ಎನ್., ಪೂರ್ವೋಕ್ತ., ಪು.೧೬೬ ಮತ್ತು ೧೬೭

೩೧. ಅದೇ., ಪು.೧೬೮ ಮತ್ತು ೧೬೯

□□□

ಅಧ್ಯಾಯ : ಆರು

ಸಮಾರೋಪ

ಪುರಾತತ್ವ ಆಕರಗಳಲ್ಲಿ ಶಾಸನಗಳು, ದೇವಾಲಯಗಳು ಮತ್ತು ಕೆರೆ-ಕಟ್ಟೆಗಳು ಸಮಕಾಲೀನ ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಮಾಜಿಕ, ಸಾಹಿತ್ಯಿಕ ಮುಂತಾದ ವಿಷಯಗಳನ್ನು ಸಮಗ್ರವಾಗಿ ಅಧ್ಯಯನ ಮಾಡಲು ತುಂಬಾ ಸಹಾಯಕವಾಗುತ್ತದೆ. ಈ ಹಿನ್ನೆಲೆಯಲ್ಲಿ ಕುಣಿಗಲ್ ಪಟ್ಟಣದಲ್ಲಿ ಕ್ಷೇತ್ರಕಾರ್ಯ ಕೈಗೊಂಡಿದ್ದು, ಶಾಸನಗಳು, ದೇವಾಲಯಗಳು, ಮೂರ್ತಿಶಿಲ್ಪಗಳು, ಕೆರೆ-ಕಟ್ಟೆಗಳು ಹಾಗೂ ಸಮಾಜ ಮತ್ತು ಸಂಸ್ಕೃತಿಯನ್ನು ಅವಲೋಕಿಸಿ ಸಾಂಸ್ಕೃತಿಕ ಇತಿಹಾಸವನ್ನು ವಸ್ತುನಿಷ್ಠವಾಗಿ ಪುನಃರಚಿಸುವ ಉದ್ದೇಶದೊಂದಿಗೆ ಪ್ರಾರಂಭವಾದ ಈ ಅಧ್ಯಯನದಲ್ಲಿ ಅನೇಕ ಮಹತ್ವದ ವಿಚಾರಗಳು ವ್ಯಕ್ತವಾಗಿವೆ.

ಕುಣಿಗಲ್ ಪಟ್ಟಣವು ಭೌಗೋಳಿಕವಾಗಿ ಸಮೃದ್ಧಿಯಿಂದ ಕೂಡಿದ್ದು, ಇತಿಹಾಸ ಪೂರ್ವಕಾಲದ (ಕ್ರಿ.ಪೂ. ೨೦೦೦) ಜನವಸತಿ ಪ್ರದೇಶಗಳಾದ ಗಂಗ್ಡಾನಹಳ್ಳಿ ಮತ್ತು ಹೇರೂರು ಸ್ಥಳಗಳು ಕಂಡುಬಂದಿದ್ದು, ಈ ಪ್ರದೇಶದ ಪ್ರಾಚೀನತೆಗೆ ನಿದರ್ಶನವಾಗಿದೆ. ಈ ಪ್ರದೇಶದ ರಾಜಕೀಯ ಇತಿಹಾಸವನ್ನು ಗಮನಿಸಿದಾಗ ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರಿನ ಒಡೆಯರು ಹಾಗೂ ಸ್ಥಳೀಯ ಪಾಳೆಯಗಾರರು ಆಳ್ವಿಕೆ ಮಾಡಿರುವುದು ಸ್ಪಷ್ಟವಾಗುತ್ತದೆ.

ಭೌಗೋಳಿಕವಾಗಿ ವಿಸ್ತಾರವಾಗಿದ್ದ ಕುಣಿಗಲ್ ಪ್ರದೇಶವನ್ನು ವ್ಯವಸ್ಥಿತವಾದ ಆಡಳಿತ ದೃಷ್ಟಿಯಿಂದ ಅನೇಕ ವಿಭಾಗಗಳಾಗಿ ವಿಂಗಡಿಸಿದ್ದರಿಂದ ಕುಣಿಗಲ್ ಪಟ್ಟಣವು ಪ್ರಾಚೀನ ಕಾಲದಿಂದಲೂ ಆಡಳಿತ ಕೇಂದ್ರವಾಗಿತ್ತೆಂದು ತಿಳಿದುಬಂದಿದೆ. ಅಂದರೆ ಗಂಗರ ಕಾಲದಲ್ಲಿ ಕುಣಿಗಲ್ ನಾಡಾಗಿದ್ದು (೩೦೦ ವರಹಗಳ ಪ್ರಾಂತ್ಯ). ಚೋಳರ ಕಾಲದಲ್ಲಿ ರಾಜೇಂದ್ರ ಚೋಳಪುರಂ, ಹೊಯ್ಸಳರ ಕಾಲದಲ್ಲಿ ಕುಣಿಗಲ್ ನಾಡು. ವಿಜಯನಗರದ ಕಾಲದಲ್ಲಿ ಕುಣಿಗಲ್ ಸೀಮೆ ಹಾಗೂ ಕುಣಿಗಲ್ ಹೋಬಳಿಯಾಗಿ ಆಳ್ವಿಕೆಗೆ ಒಳಪಟ್ಟಿದ್ದು ಪ್ರಸಿದ್ಧ ಆಡಳಿತ ಕೇಂದ್ರವಾಗಿತ್ತೆಂದು ಇಲ್ಲಿನ ಶಾಸನಗಳು ಮತ್ತು ಸ್ಮಾರಕಗಳಿಂದ ತಿಳಿದುಬಂದಿದೆ.

ಅದೇ ರೀತಿ ಕುಣಿಗಲ್ ಪಟ್ಟಣದಲ್ಲಿ ಅನೇಕ ದೇವಾಲಯಗಳು ನಿರ್ಮಾಣಗೊಂಡಿದ್ದು, ಧಾರ್ಮಿಕ ಸಹಿಷ್ಣುತೆಗೆ ಕಾರಣವಾಗಿದೆ. ಶೈವ ದೇವಾಲಯಗಳು, ವೈಷ್ಣವ ದೇವಾಲಯಗಳು, ಜೈನ ಬಸದಿಗಳು ಮತ್ತು ಶಾಕ್ತ ದೇವಾಲಯಗಳು ನಿರ್ಮಾಣಗೊಂಡಿದ್ದು, ಧಾರ್ಮಿಕ ಕೇಂದ್ರವಾಗಿ ಹೊರಹೊಮ್ಮಿದ್ದು, ಹಲವು ರಾಜಮನೆತನಗಳು ದೇವಾಲಯಗಳಿಗೆ ಹಲವಾರು ದಾನದತ್ತಿಗಳನ್ನು ನೀಡಿರುವುದು ಇಲ್ಲಿನ ಶಾಸನಗಳಿಂದ ತಿಳಿದುಬಂದಿದೆ.

ಕುಣಿಗಲ್ ಪಟ್ಟಣದಲ್ಲಿ ಶೈವ ಮತ್ತು ವೈಷ್ಣವ ಧರ್ಮದ ಪ್ರಾಬಲ್ಯವಿದ್ದು, ಜೈನ ಬಸದಿಗಳು ಇದ್ದರೂ ನಶಿಸಿ ಹೋಗುತ್ತಿವೆ. ಇಲ್ಲಿನ ಕೆಲವು ದೇವಾಲಯಗಳು ಜೀರ್ಣೋದ್ಧಾರಗೊಂಡಿದ್ದು, ಉತ್ತಮ ಸ್ಥಿತಿಯಲ್ಲಿವೆ. ಇನ್ನೂ ಕೆಲವು ದೇವಾಲಯಗಳಾದ ಚನ್ನಿಗರಾಯ, ಉರಿತಿರುಮಲ, ಶಿವರಾಮೇಶ್ವರ, ಪದ್ಮೇಶ್ವರ ದೇವಾಲಯಗಳು ನಶಿಸುತ್ತಿದ್ದು ರಕ್ಷಣೆ ಮಾಡಬೇಕಾಗಿದೆ.

ಕುಣಿಗಲ್ ಪಟ್ಟಣದಲ್ಲಿ ಈ ವರೆಗೂ ೧೨ ಶಾಸನಗಳು ಕಂಡುಬಂದಿದ್ದು, ತುಮಕೂರು ಜಿಲ್ಲಾ ಶಾಸನ ಸಂಪುಟ ೧೨ ಮತ್ತು ೨೪ರಲ್ಲಿ ಪ್ರಕಟಗೊಂಡಿದೆ. ಇನ್ನೂ ಕೆಲವು ಶಾಸನಗಳು ಹೊಸದಾಗಿ ಬೆಳಕಿಗೆ ಬರುತ್ತಿವೆ. ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ೨ ಶಾಸನಗಳನ್ನು ಪತ್ತೆ ಹಚ್ಚಿದ್ದು, ಅವುಗಳನ್ನು ಪ್ರಕಟಿಸಬೇಕಾಗಿದೆ. ಅದೇ ರೀತಿ ದುರ್ಗಾ ಭವಾನಿ ದೇವಾಲಯ ಮತ್ತು ಸೋಮೇಶ್ವರ ದೇವಾಲಯದಲ್ಲಿನ ನವರಂಗದ ಮೇಲ್ಛಾವಣಿಯ ಕಂಬಂಗಳಲ್ಲಿನ ಶಾಸನಗಳು ಜೀರ್ಣೋದ್ಧಾರದ ಸಂದರ್ಭದಲ್ಲಿ ಹಾಳಾಗಿರುವುದು ಕಂಡುಬಂದಿದ್ದು, ಅವುಗಳನ್ನು ಸಂರಕ್ಷಿಸಬೇಕಾಗಿದೆ.

ಮೈಸೂರು ಸಂಸ್ಥಾನದಲ್ಲಿ ಮೈಸೂರಿನ ಹುಲಿ ಎಂದೇ ಪ್ರಸಿದ್ಧವಾಗಿರುವ ಟಿಪ್ಪುಸುಲ್ತಾನನು ಕುಣಿಗಲ್ ಪಟ್ಟಣದಲ್ಲಿ ಅಶ್ವಥಳಿ ಸಂವರ್ಧನ ಕೇಂದ್ರ (ಕುರುರೆ ಫಾರಂ)ವನ್ನು ಸ್ಥಾಪನೆ ಮಾಡಿ ದೇಶೀಯತೆಗೆ ಹೆಚ್ಚು ಒತ್ತುಕೊಟ್ಟಿರುವುದು ಗಮನಾರ್ಹವಾಗಿದೆ. ಕುಣಿಗಲ್ ಕುದುರೆಗಳು ದೇಶ-ವಿದೇಶಗಳಲ್ಲಿ ಜನಮನ್ನಣೆ ಗಳಿಸಿದ್ದು, ಹಲವಾರು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿವೆ. ಅಲ್ಲದೇ ಈ ಫಾರಂನಲ್ಲಿ ನೂರಾರು ಸಸ್ಯ ಮತ್ತು ಪ್ರಾಣಿ ಪ್ರಭೇದಗಳಿದ್ದು, ಉತ್ತಮ ಪರಿಸರ ರೂಪುಗೊಂಡಿರುತ್ತದೆ. ಆದರೆ ಇತ್ತೀಚೆಗೆ ಕುಣಿಗಲ್ ತಾಲೂಕಿಗೆ ರೈಲು ಸಂಪರ್ಕ ಕಲ್ಪಿಸುವ ಸಲುವಾಗಿ ಈ ಕುದುರೆ ಫಾರಂನ್ನ ಬೇರೆಡೆಗೆ ಸ್ಥಳಾಂತರಿಸಲು ಭಾರತ ರೈಲ್ವೆ ಮಂಡಳಿಯವರು ಯೋಜನೆ ಕೈಗೊಂಡಿದ್ದಾರೆ. ಈ ಯೋಜನೆಯನ್ನು ಕೈಗೊಂಡರೆ ಪ್ರವಾಸಿ ಕೇಂದ್ರವಾಗಿರುವ ಕುಣಿಗಲ್ ಕುದುರೆ ಫಾರಂ ಮುಂದಿನ ದಿನಗಳಲ್ಲಿ ಕಣ್ಮರೆಯಾಗುವ ಸಂಭವವಿದೆ. ಆದ್ದರಿಂದ ಸ್ಥಳೀಯರ ಗಮನಕ್ಕೆ ತಂದು ಸಂರಕ್ಷಿಸಿ ಉಳಿಸಬೇಕಾಗಿದೆ.

ಕುಣಿಗಲ್ ಪಟ್ಟಣದಲ್ಲಿ ವೀರಗಲ್ಲುಗಳು ಮತ್ತು ಮಹಾಸತಿ ಕಲ್ಲುಗಳು ಕಂಡುಬರುತ್ತವೆ. ಪ್ರಾಚೀನ ಕಾಲದಿಂದಲೂ ಇಲ್ಲಿಯೂ ಸಹ ಸತಿ ಪದ್ಧತಿ ಆಚರಣೆಯಲ್ಲಿತ್ತೆಂದು ತಿಳಿದುಬರುತ್ತದೆ. ಪ್ರಸ್ತುತ ಸಂದರ್ಭದಲ್ಲಿ ವೀರಗಲ್ಲು ಮತ್ತು ಮಹಾಸತಿಯ ಮೂರ್ತಿಶಿಲ್ಪಗಳು ಪೂಜನೀಯ ಸ್ಥಾನದಲ್ಲಿದ್ದು, ಪೂಜಿಸಲ್ಪಟ್ಟಿವೆ. ಕುಣಿಗಲ್ ಪಟ್ಟಣದಲ್ಲಿ ಕೋಟೆಯ ಅವಶೇಷವಿದ್ದು, ಸ್ಥಳೀಯವಾಗಿ ದೊರೆಯುತ್ತಿದ್ದ ಕಲ್ಲು ಮತ್ತು ಮಣ್ಣನ್ನು ಬಳಸಿಕೊಂಡು ಕೋಟೆ ನಿರ್ಮಾಣ ಮಾಡಿರುವುದು ಕಂಡುಬರುತ್ತದೆ. ಬಹುಶಃ ಗಂಗರ ಕಾಲದಲ್ಲಿ ಕೋಟೆ ನಿರ್ಮಾಣಗೊಂಡಿದ್ದು, ಹಂತ ಹಂತವಾಗಿ ವಿಕಾಸಗೊಳ್ಳುತ್ತಾ ಆಡಳಿತಕ್ಕೆ ಒಳಪಟ್ಟಿರುತ್ತದೆ. ಆದರೆ ಇಂದು ನಗರೀಕರಣದ ಪ್ರಭಾವದಿಂದ ಕೋಟೆಯು ನಶಿಸಿ ಹೋಗುತ್ತಿದ್ದು ಕೇವಲ ನಾಮಾವಶೇಷವಾಗಿ ರಕ್ಷಣೆ ಇಲ್ಲದಂತಾಗಿದೆ.

ಕುಣಿಗಲ್ ಪಟ್ಟಣದ ಸುತ್ತಮುತ್ತ ಕೆರೆ ಮತ್ತು ಭಾವಿಗಳು ನಿರ್ಮಾಣಗೊಂಡಿದ್ದು, ಪಟ್ಟಣದ ಬೆಳವಣಿಗೆಗೆ ಕಾರಣವಾಗಿವೆ. ಕೆರೆಗಳ ನಿರ್ಮಾಣದಲ್ಲಿ ಉನ್ನತ ತಂತ್ರಜ್ಞಾನ ಬಳಸಿ ಸ್ಥಳೀಯವಾಗಿ ದೊರೆಯುತ್ತಿದ್ದ ಕಲ್ಲುಗಳನ್ನು ಬಳಸಿಕೊಂಡು ವ್ಯವಸ್ಥಿತವಾಗಿ ಕೆರೆ ಮತ್ತು ಬಾವಿಗಳನ್ನು ನಿರ್ಮಿಸಿದ್ದಾರೆ. ಕೆರೆ ನೀರಾವರಿ ಆಧಾರಿತ ಬೆಳೆಗಳನ್ನು ಬೆಳೆದು ಜೀವನ ನಿರ್ವಹಣೆಗೆ ಸಹಕಾರಿಯಾಗಿವೆ. ಅಲ್ಲದೇ ಪಶುಸಂಗೋಪಣೆಗಾಗಿ, ಕುಡಿಯುವ ನೀರಿಗಾಗಿ, ಇಟ್ಟಿಗೆ ಉಧ್ಯಮಕ್ಕಾಗಿ ಮತ್ತು ಮೀನುಗಾರಿಕೆಗೆ ಕೆರೆಗಳಲ್ಲಿನ ನೀರು ಉಪಯೋಗವಾಗುತ್ತಿದ್ದು, ಹಲವು ನಂಬಿಕೆ, ಆಚರಣೆಗಳಿಗೆ ಒಳಪಟ್ಟಿರುತ್ತವೆ. ಇಷ್ಟೆಲ್ಲಾ ಅನುಕೂಲವಿರುವ ಕೆರೆಗಳು ಪ್ರಸ್ತುತ ಸಂದರ್ಭದಲ್ಲಿ ನಗರೀಕರಣದಿಂದ ಅವಸಾನದತ್ತ ಸಾಗಿವೆ. ಪ್ರಾಚೀನತೆಯಿಂದ ಕೂಡಿರುವ ಕೆರೆ ಮತ್ತು ಬಾವಿಗಳನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಬಳಕೆಗೆ ಬರುವಂತೆ ಮಾಡಬೇಕಾಗಿದೆ.

ಕುಣಿಗಲ್ ಪಟ್ಟಣದಲ್ಲಿನ ಸಮಾಜ ಮತ್ತು ಸಂಸ್ಕೃತಿಯ ಬಗ್ಗೆ ಹೇಳುವುದಾದರೆ, ಹಲವು ಧರ್ಮಗಳು, ಜಾತಿ–ಜನಾಂಗಗಳು, ಆಚಾರ–ವಿಚಾರಗಳು, ನಂಬಿಕೆ–ಆಚರಣೆಗಳು, ಜಾತ್ರೆ–ಉತ್ಸವಗಳು, ರೂಢಿ–ಸಂಪ್ರದಾಯಗಳು ಮತ್ತು ಹಬ್ಬ–ಹರಿದಿನಗಳು ಆಚರಣೆಯಲ್ಲಿವೆ. ಕುಣಿಗಲ್ ಪಟ್ಟಣದಲ್ಲಿ ಹಿಂದೂ, ಮುಸಲ್ಮಾನರು, ಜೈನರು ಹಾಗೂ ಕ್ರಿಶ್ಚಿಯನ್ ಸಮುದಾಯದವರು ಯಾವುದೇ ಧಾರ್ಮಿಕ ಕೆಡುಕು ಬಯಸದೇ ಅನ್ಯೂನ್ಯರಾಗಿದ್ದಾರೆ. ಇಲ್ಲಿನ ಜಾತಿ–ಜನಾಂಗದವರು ಬೇರ್ಪಡೆಗೊಳ್ಳದೇ, ಸಹಭಾಳ್ವೆ ಜೀವನ ನಡೆಸುತ್ತಿದ್ದಾರೆ. ವೃತ್ತಿಯಾಧಾರಿತ ಜಾತಿಗಳು ಕಣ್ಮರೆಯಾಗುತ್ತಿದ್ದು, ತಮ್ಮ ಆಯ್ಕೆ ಮತ್ತು ಅಭಿರುಚಿಗೆ ತಕ್ಕಂತೆ ವೃತ್ತಿಗಳನ್ನು ಆಯ್ಕೆ ಮಾಡಿಕೊಂಡು ಜೀವನ ಮಟ್ಟವನ್ನು ಸುಧಾರಿಸಿಕೊಳ್ಳುತ್ತಿದ್ದಾರೆ.

ಹೀಗೆ ಕುಣಿಗಲ್ ಪಟ್ಟಣವು ಪ್ರಾಚೀನತೆಯನ್ನು ಹೊಂದಿದ್ದು, ಧಾರ್ಮಿಕ, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಅಂಶಗಳನ್ನು ಒಳಗೊಂಡಿದ್ದು, ಸಾಂಸ್ಕೃತಿಕ ಕೇಂದ್ರವಾಗಿ ರೂಪುಗೊಂಡಿದೆ ಎಂದು ಹೇಳಬಹುದು.

❑❑❑

-☸-

ಅನುಬಂಧಗಳು

* ಗ್ರಂಥಋಣ
* ರೇಖಾಚಿತ್ರಗಳು
* ಛಾಯಾಚಿತ್ರಗಳು

ಅನುಬಂಧ – ೧

ಗ್ರಂಥಋಣ

ಅಪರ್ಣ. ಕೂ. ಸ., ದೇವಾಲಯ ವಾಸ್ತು ಶಿಲ್ಪ ಪರಿಚಯ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೯

ಅನಂತರಂಗಾಚಾರ್. ಎನ್., ಕರ್ನಾಟಕ ಶಾಸನಗಳು, ಡಿ. ವಿ. ಕೆ. ಮೂರ್ತಿ ಪ್ರಕಾಶನ, ಮೈಸೂರು. ೧೯೯೬

ಬಾಸ್ಕರಪ್ಪ. ಸಿ. ಎನ್., ತುಮಕೂರು ಜಿಲ್ಲಾ ದರ್ಶನ, ತುಮಕೂರು ಟೈಮ್ಸ್ ಪ್ರಕಾಶನ, ತುಮಕೂರು. ೧೯೮೭

ಬೋರಲಿಂಗಯ್ಯ. ಹಿ. ಚಿ., ಉಜ್ಜಿನಿ ಚೌಡಮ್ಮ, ದಿನಕರ ಪ್ರಕಾಶನ, ಬೆಂಗಳೂರು. ೧೯೭೭

ಭಟ್. ವಿ. ಎನ್., ಭಾರತಿಯ ಹಬ್ಬಗಳ ವೈಶಿಷ್ಟ್ಯ, ಪ್ರಾಚೀ ಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು. ೨೦೦೨

ಚಿದಾನಂದಮೂರ್ತಿ. ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. ೧೯೬೬

ಚನ್ನಬಸಪ್ಪ ಎಸ್. ಪಾಟಲ್., ಕರ್ನಾಟಕದ ಕೋಟೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ. ೧೯೯೯

ಚಿಕ್ಕಣ್ಣಯಣ್ಣೆಕಟ್ಟೆ., ತುಮಕೂರು ಜಿಲ್ಲಾ ಜಾತ್ರೆಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ೨೦೦೩

ದೀಕ್ಷಿತ್. ಜಿ. ಎಸ್., ಕುಪ್ಪಸ್ವಾಮಿ. ಜಿ. ಆರ್. ಮತ್ತು ಮೊಹನ್. ಎಸ್. ಕೆ (ಮೂಲ)., ನೀಲತ್ತಹಳ್ಳಿ ಕಸ್ತೂರಿ (ಕನ್ನಡ ಅನುವಾದ), ಕರ್ನಾಟಕದಲ್ಲಿ ಕೆರೆ ನೀರಾವರಿ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦

ಗೋಪಾಲ್ ಆರ್ (ಸಂ)., ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು. ೨೦೦೯

ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ ಮೈಸೂರು. ೨೦೦೯

ಕವಿತ ಕೃಷ್ಣ (ಸಂ)., ಜಯಮಂಗಲಿ, ೬೯ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ತುಮಕೂರು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು. ೨೦೦೨

ಕೊಟ್ರಯ್ಯ ಸಿ. ಟಿ. ಎಂ. (ಆಂಗ್ಲ ಮೂಲ), ಧ್ರುವನಾರಾಯಣ (ಕನ್ನಡ ಅನುವಾದ)., ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೧

ಕಲಬುರ್ಗಿ ಎಂ. ಎಂ., ಪ್ರಾಚೀನ ಕರ್ನಾಟಕ ಆಡಳಿತ ವಿಭಾಗಗಳು, ಭಾಗ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೯

ಲಕ್ಷ್ಮೀದೇವಿ. ಎಸ್., ಗ್ರಾಮ ಮತ್ತು ಶಿಷ್ಟದೇವತೆಗಳು, ಚಿತ್ಕಲಾ ಪ್ರಸಾರಾಂಗ, ಕುಪ್ಪಂ. ೨೦೦೭

ಮುನಿರಾಜಪ್ಪ., 'ಮಾಗಡಿ ಸೀಮೆ ಇತಿಹಾಸ ಮತ್ತು ಸಂಸ್ಕೃತಿ, ಸ್ಫೂರ್ತಿ ಪ್ರಕಾಶನ, ಹೊಸಪಾಳ್ಯ, ಮಾಗಡಿ ತಾಲ್ಲೂಕು. ೨೦೦೫,

ಮೂರ್ತಿ ಕೆ.ಎಲ್.ಎನ್., ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ, ರಂಜಿತಾ ಪ್ರಕಾಶನ, ತುಮಕೂರು. ೧೯೯೮

ನಂಜುಂಡಸ್ವಾಮಿ. ಬಿ (ಸಂ.)., 'ಕಲ್ಪಸಿರಿ', ಸ್ಮರಣ ಸಂಚಿಕೆ, ಅಖಿಲ ಭಾರತ ೬೯ನೇ ಕನ್ನಡ ಸಾಹಿತ್ಯ ಸಮ್ಮೇಳನ, ತುಮಕೂರು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು. ೨೦೦೨

ನರಸಿಂಹಮೂರ್ತಿ ಎ. ವಿ., ಕರ್ನಾಟಕ ಶಾಸನ ಸಂಪತ್ತು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು. ೧೯೮೫

ಪರಮಶಿವಮೂರ್ತಿ ಡಿ. ವಿ., ಕನ್ನಡ ಶಾಸನಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೯

ರಮೇಶ್ ಸ. ಚಿ., ಕರ್ನಾಟಕದ ಜಾನಪದ ಆಚರಣೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೦

ರಹಮತ್ ತರೀಕೆರೆ., ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೨೦೦೪

ರಾಮಚಂದ್ರರಾವ್ ಎಸ್. ಕೆ., ಭಾರತೀಯ ದೇವಾಲಯಗಳ ನೆಲೆ ಹಿನ್ನೆಲೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೧೯೭೫

ರಾಜಾರಾಮ ಹೆಗಡೆ (ಸಂ.), ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ. ೨೦೦೨

ರೈಸ್ ಬಿ. ಎಲ್., ಎಫಿಗ್ರಾಫಿಯ ಕರ್ನಾಟಿಕ, ಸಂಪುಟ-೨೪, ತುಮಕೂರು ಜಿಲ್ಲಾ ಶಾಸನಗಳು, ಮೈಸೂರು ಸರ್ಕಾರ ಕೇಂದ್ರ ಮುದ್ರಣಾಲಯ, ಬೆಂಗಳೂರು.

ಶೇಷಶಾಸ್ತ್ರಿ ಆರ್., ಕರ್ನಾಟಕದ ವೀರಗಲ್ಲುಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ೨೦೦೪

ಶಿವತಾರಕ್ ಕೆ. ಬಿ., ಕರ್ನಾಟಕ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ. ೨೦೦೧

ಶಿರೂರ ಬಿ.ವ್ಹಿ., ಸಂಶೋಧನಾ ಸ್ವರೂಪ, ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ. ೨೦೦೮

ಶಿವರಾಮಕಾರಂತ., ಭಾರತೀಯ ಶಿಲ್ಪ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು. ೧೯೭೫

ಸಿದ್ದಲಿಂಗಯ್ಯ., ಗ್ರಾಮದೇವತೆಗಳು, ಮೂಲ ಭಾರತಿ ಪ್ರಕಾಶನ, ಬೆಂಗಳೂರು. ೧೯೯೭


ವಾಸುದೇವನ್ ಸಿ. ಎಸ್., ಹಂಪಿ ಪರಿಸರದ ಕೆರೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೧

ಅಪ್ರಕಟಿತ ಸಂಶೋಧನಾ ಪ್ರಬಂಧಗಳು


- ಮಹಂತೇಶ್ ಎನ್. ಎಸ್., ಹೊಸದುರ್ಗ ತಾಲ್ಲೂಕು ಪರಿಸರದ ಸಾಂಸ್ಕೃತಿಕ ಅಧ್ಯಯನ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೨
- ದತ್ತಾತ್ರೇಯ ಜಿ. ಕುಲಕರ್ಣಿ., ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ. ೨೦೦೬
- ಹೇಮಾವತಿ ಎಸ್. ಮೆಣಸಗಿ., ರೋಣ ತಾಲೂಕಿನ ಶೈವ ದೇವಾಲಯಗಳು, ಎಂ.ಫಿಲ್. ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೯
- ಧನುಂಜಯ್ಯ ಸಿ., ಪಾವಗಡ ತಾಲೂಕು ಕೆರೆಗಳ ಅಧ್ಯಯನ, ಎಂ.ಫಿಲ್. ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೧

ಅನುಬಂಧ – ೨
ರೇಖಾಚಿತ್ರಗಳು





೧. ಪದ್ಮೇಶ್ವರ ದೇವಾಲಯದ ತಲನಕ್ಷೆ



೨. ಸೋಮೇಶ್ವರ ದೇವಾಲಯದ ತಲನಕ್ಷೆ

ತುಮಕೂರು ಜಿಲ್ಲೆ



ಕುಣಿಗಲ್ ತಾಲೂಕು





ಛಾಯಾಚಿತ್ರಗಳು



ಕೋಟೆ ನರಸಿಂಹಸ್ವಾಮಿ ದೇವಾಲಯ



ನೀರು ಬಾಗಿಲು ಆಂಜನೇಯ ಸ್ವಾಮಿ ದೇವಾಲಯ



ಪದ್ಮೇಶ್ವರ ದೇವಾಲಯ



ಚೆನ್ನಿಗರಾಯ ದೇವಾಲಯ, ಬೇಗೂರು



ಸೋಮೇಶ್ವರ ದೇವಾಲಯ



ಕುಣಿಗಲ್ ದೊಡ್ಡಕೆರೆ ಮೇಲಿನ ದೇವಾಲಯಗಳು



ಜಯವಿಜಯ ದ್ವಾರಪಾಲಕರು, ಕೋಟೆ ನರಸಿಂಹ ಸ್ವಾಮಿ ದೇವಾಲಯ



ಪದ್ಮೇಶ್ವರ ದೇವಾಲಯದ ನವರಂಗದ ಕಂಬಗಳು



ಸೋಮೇಶ್ವರ ದೇವಾಲಯದ ದ್ವಾರಬಾಗಿಲು



ಪದ್ಮೇಶ್ವರ ದೇವಾಲಯದ ಶಿವಲಿಂಗ



ಕೋಟೆ ನರಸಿಂಹ ಸ್ವಾಮಿ ದೇವಾಲಯ
ಕೇಶವಮೂರ್ತಿ



ಸೋಮೇಶ್ವರ ದೇವಾಲಯದಲ್ಲಿನ ಸೂರ್ಯ



ಚನ್ನಿಗರಾಯ ದೇವಾಲಯದ ಸೌಮ್ಯಕೇಶವ ಮೂತಿ



ಸೋಮೇಶ್ವರ ದೇವಾಲಯದ ಗಣಪತಿ ವಿಗ್ರಹ




ದುರ್ಗಾ ಭವಾನಿ ದೇವಾಲಯದ
ವೀರಭದ್ರ ಶಿಲ್ಪ



ದುರ್ಗಾ ಭವಾನಿ ದೇವಾಲಯದ ಭೈರವ ಶಿಲ್ಪ




ಸೋಮೇಶ್ವರ ದೇವಾಲಯದ ನಂದಿ ಶಿಲ್ಪ



ಕೋಟೆ ಆಂಜನೇಯನ ವಿಗ್ರಹ



ಕೋಟೆ ನರಸಿಂಹ ಸ್ವಾಮಿ ದೇವಾಲಯದ ರಾಮ, ಲಕ್ಷ್ಮಣ, ಸೀತೆ ವಿಗ್ರಹಗಳು



ಸರಸ್ವತಿ ಶಿಲ್ಪ



ಕೊಲ್ಲಾಪುರದಮ್ಮ ದೇವಿ ಮೂರ್ತಿ



ಮಹಿಷಾಸುರಮರ್ದಿನಿ ಮೂರ್ತಿ



ವೀರಗಲ್ಲು



ಕುಣಿಗಲ್ ಕೆರೆಯ ತೂಬಿನ ಕಲ್ಲು



ಕುಣಿಗಲ್ ದೊಡ್ಡಕೆರೆ



ಕುದುರೆ ಲಾಯ (ಫಾರಂ)



ಕುಣಿಗಲ್ ಕುದುರೆ ಫಾರಂನ ಪರಿಸರ

